ಶ್ರೀ ವಿಕಾರಿ ಸಂವತ್ಸರ
ಕಾರ್ತಿಕ-ಮಾರ್ಗಶಿರ

ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

ನವೆಂಬರ್ 2019
₹ 12.00

# ಮಲ್ಹಾರ



ವಿಶೇಷ ಲೇಖನ

## ಮಹಾನಾರಾಯಣೋಪನಿಷತ್ತು



RAMAIAH
Indic Specialty Ayurveda
RESTORATION HOSPITAL

ರಾಮಯ್ಯ ಆಯುರ್ವೇದ

# ಅಭ್ಯಂಗ ಪ್ಯಾಕೇಜ್

## ಶರೀರದ ಪುನಃಚೇತನಕ್ಕಾಗಿ

**ಸೋಲೋ**

**ಸರ್ವಾಂಗ ಅಭ್ಯಂಗ ಪ್ಯಾಕೇಜ್**
**(ಒಬ್ಬ ಪರಿಚಾರಕರಿಂದ)**

ಅವಧಿ 60 ನಿಮಿಷ
4 ಅಭ್ಯಂಗ + ಸ್ವೇದ
₹ 2600 (ಔಷದೀಯ ತೈಲದೊಂದಿಗೆ)

**ಸಿಂಕ್ರೋನೈಜ್ಡ್ (ಸಮನ್ವಯ)**

**ಸರ್ವಾಂಗ ಅಭ್ಯಂಗ ಪ್ಯಾಕೇಜ್**
**(ಇಬ್ಬರು ಪರಿಚಾರಕರು)**

ಅವಧಿ 60 ನಿಮಿಷ
4 ಅಭ್ಯಂಗ + ಸ್ವೇದ
₹ 3600 (ಔಷದೀಯ ತೈಲದೊಂದಿಗೆ)

**ಭಾರತದಾದ್ಯಂತ ಮತ್ತು ವಿದೇಶಗಳಲ್ಲಿ ಉಪಸಂಸ್ಥೆ ಸ್ಥಾಪಿಸಲು ಆಹ್ವಾನಿಸಲಾಗಿದೆ**

ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ
ರೆಸ್ಟೋರೇಷನ್ ಆಸ್ಪತ್ರೆ

ನ್ಯೂ ಬಿ ಇ ಎಲ್ ರೋಡ್, ಎಂ ಎಸ್ ರಾಮಯ್ಯ ನಗರ,
ಎಮ್ ಎಸ್ ಆರ್ ಐ ಟಿ ಪೋಸ್ಟ್, ಮತ್ತಿಕೆರೆ,
ಬೆಂಗಳೂರು – 560 054

080 22183456, 8099959595, 9972313129

ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ
ರೆಸ್ಟೋರೇಷನ್ ಕ್ಲಿನಿಕ್

ಯಲಹಂಕ ಉಪನಗರ, ಯಲಹಂಕ,
ಬೆಂಗಳೂರು – 560 064


80999 59595 / 7090533000

E-mail - msricaim@gmail.com | URL: www.ramaiahayurveda.com

ಷರತ್ತುಗಳು ಅನ್ವಯ*


# ಒಳ ಪುಟಗಳಲ್ಲಿ...


**ಮಹಾನಾರಾಯಣೋಪನಿಷತ್ತು**
● ಶ್ರೀಮತಿ ರಾಜೇಶ್ವರಿ ಕೃಷ್ಣ



6

**ಜೈನ ಪಂಡಿತರೊಡನೆ ಮುಂದುವರಿದ ವಾಗ್ವಾದ**
● ಡಾ. ಬಾಬು ಕೃಷ್ಣಮೂರ್ತಿ




10

**ವಿಪಶ್ಚಿತ ರಾಜನ ಕಥೆ**
● ನಂ. ನಾಗಲಕ್ಷ್ಮೀ




18

**ಸಮನ್ವಯದ ಸಂತ ಗುರುನಾನಕರು**
● ಡಾ. ಅನಸೂಯಾದೇವಿ



28



ನವೆಂಬರ್–೨೦೧೯
ಶ್ರೀ ವಿಕಾರಿ ಸಂವತ್ಸರ
ಕಾರ್ತಿಕ–ಮಾರ್ಗಶಿರ

ಸಂಪುಟ ೧೯ ● ಸಂಚಿಕೆ ೧೧




**ಮಾರ್ಕಂಡೇಯ**
● ಡಾ. ಎಸ್. ಹೇಮಲತಾ




24

**ಚಿತ್ತ ವೃತ್ತಿ ನಿರೋಧ**
● ಸಿದ್ದವನಹಳ್ಳಿ ಕೃಷ್ಣಶರ್ಮಾ



32

**ಯೋಗ್ಯಾಗ್ಗೆಲ್ಲ ಐತೆ**
● ಡಾ. ಎಸ್.ಆರ್. ಲೀಲಾ



60



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
**ಡಾ. ಎಂ.ಆರ್. ಜಯರಾಮ್**

ನಿರ್ವಾಹಕ ಸಂಪಾದಕರು
**ಡಾ. ಬಾಬು ಕೃಷ್ಣಮೂರ್ತಿ**

ಸಂಪಾದಕೀಯ ವಿಳಾಸ:
**ಶ್ರೀ ಯೋಗಿ ನಾರೇಯಣ ಅಧ್ಯಯನ ಕೇಂದ್ರ**
ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ,
ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560 054. ☎: 080–40502965 /7204095848
E-mail: mallaramagazine@hotmail.com

ಮುದ್ರಕರು:
**ಲಾವಣ್ಯ ಮುದ್ರಣ,**
ವಿದ್ಯಾಪೀಠ,
ಬೆಂಗಳೂರು–560 050.

ವಿನ್ಯಾಸ: ಕಿಶೋರ್ ಕೆ.ಟಿ., ಮಂಡ್ಯ


# ನಿಮ್ಮೊಡನೆ...

**ಆತ್ಮೀಯ ಮಲ್ಲಾರ ಓದುಗರೇ ನಮಸ್ಕಾರ.**

**ನಿಮಗೆ, ನಿಮ್ಮ ಮನೆ ಮಂದಿಗೆ, ಬಂಧುಮಿತ್ರರಿಗೆ ಮಲ್ಲಾರ ಹಾರೈಸುವ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.**

ಈ ತಿಂಗಳು ದಾಸವರೇಣ್ಯರಲ್ಲಿ ಶ್ರೇಷ್ಠರಾದ ಕನಕದಾಸರ ಜಯಂತಿ. ಅಂತೆಯೆ ವಿಜಯದಾಸರ ಜಯಂತಿಯೂ ಸಹ. ಸಿಖ್ಖರ ಗುರುಗಳಾದ ಗುರುನಾನಕರ ಜಯಂತಿಯೂ ಇದೇ ತಿಂಗಳಲ್ಲಿ (12–11–2019). ಭಾರತದ ಭಕ್ತಿಪಂಥದ ಅಧ್ವರ್ಯುಗಳಲ್ಲಿ ಒಬ್ಬರಾದ ಅವರನ್ನು ಕುರಿತು ಒಂದು ವಿಶೇಷ ಲೇಖನವನ್ನು ಪ್ರಕಟಿಸಿದ್ದೇವೆ (ಪುಟ 28).

ಈ ಸಂಚಿಕೆಯಲ್ಲಿ ಹುಬ್ಬಳ್ಳಿ ಮೂರು ಸಾವಿರ ಮಠದ ಪೀಠಾಧಿಪತಿಗಳಾದ ಶ್ರೀ ಮನ್ಮಹಾರಾಜ ನಿರಂಜನ



ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ, ಕೈವಾರ ಶ್ರೀ ಯೋಗಿನಾರೇಯಣ ಮಠದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್‌ರವರ ನೇತೃತ್ವದಲ್ಲಿ ಜೆ.ಪಿ. ನಗರದ ಆರ್.ವಿ. ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ನಡೆದ ಧರ್ಮಚಿಂತನೆ ಕಾರ್ಯಕ್ರಮದ ವರದಿಯನ್ನು ಪ್ರಕಟಿಸಿದ್ದೇವೆ. ಧರ್ಮಾಧಿಕಾರಿಗಳ ಪರಿಕಲ್ಪನೆ, ಯೋಜನೆ ಹಾಗೂ ಸಾರಥ್ಯದಲ್ಲಿ ನಡೆಯುತ್ತಿರುವ ಧರ್ಮಚಿಂತನೆ ಕಾರ್ಯಕ್ರಮಗಳು ಒಂದನ್ನು ಮೀರಿಸಿ ಒಂದರಂತೆ ನಡೆದು ಜನರಲ್ಲಿ ಹೊಸ ಧರ್ಮ ಜಾಗೃತಿ ಮೂಡಿಸುತ್ತಿರುವುದು ಅವುಗಳಲ್ಲಿ ಭಾಗವಹಿಸಿದ ಎಲ್ಲರ ಅನುಭವ.

ಕಳೆದ ಮೂರು ಬಾರಿಯಿಂದ ಬೆಂಗಳೂರು ಮಹಾನಗರದ ವಿವಿಧ ಪ್ರದೇಶಗಳಲ್ಲಿ ಜರುಗುತ್ತಿರುವ ಈ ಕಾರ್ಯಕ್ರಮಗಳಲ್ಲಿ ಸಭಾಂಗಣ ತುಂಬಿ ಹರಿಯುವಂತೆ ಶ್ರದ್ಧಾಳುಗಳು ಬಂದು ಸೇರುತ್ತಿದ್ದಾರೆ. ಈ ಮುಂಚೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಜರುಗಿದ ಧರ್ಮಚಿಂತನೆ ಕಾರ್ಯಕ್ರಮ ಗ್ರಾಮೀಣ ಪ್ರದೇಶದ ಶ್ರದ್ಧಾಳುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಿತ್ತು. ಬೆಂಗಳೂರು ಮಹಾನಗರದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ನಗರವಾಸಿಗಳೂ ಅಪಾರ ಸಂಖ್ಯೆಯಲ್ಲಿ ಬಂದು ಸೇರುತ್ತಿರುವುದು ಧರ್ಮಚಿಂತನೆ ಕಾರ್ಯಕ್ರಮದ ಪರಿಕಲ್ಪನೆಗೆ ದೊರೆತಿರುವ ಅದ್ಭುತ ಪ್ರತಿಸ್ಪಂದನವಾಗಿದೆ.

ಈ ಬಾರಿ ಮುಖಪುಟದಲ್ಲಿ ಲಕ್ಷ್ಮೀ–ನಾರಾಯಣರ ಚಿತ್ರವನ್ನು ಪ್ರಕಟಿಸಿದ್ದೇವೆ. ಈ ಸಂಚಿಕೆಯಲ್ಲಿ **‘ಮಹಾನಾರಾಯಣೋಪನಿಷತ್ತು’** ಕುರಿತು ಲೇಖನವಿದೆ. ಆ ಸಂಬಂಧ ಈ ಮುಖಪುಟ ಚಿತ್ರ.

**ನವೆಂಬರ್ 9ರ ಶನಿವಾರದಂದು ಬೆಂಗಳೂರಿನ ಜಯನಗರ 9ನೇ ಬ್ಲಾಕ್‌ನಲ್ಲಿರುವ ರಾಗಿಗುಡ್ಡ ಶ್ರೀ ಪ್ರಸನ್ನ ಆಂಜನೇಯ ದೇವಸ್ಥಾನದಲ್ಲಿ ನಡೆಯಲಿದೆ. ಸಂಜೆ 5:30ಕ್ಕೆ ಆರಂಭಗೊಳ್ಳುವ ಈ ಕಾರ್ಯಕ್ರಮದಲ್ಲಿ ನೀವೂ ನಿಮ್ಮ ಬಂಧುಮಿತ್ರರೂ ಭಾಗವಹಿಸಬೇಕೆಂದು ಮಲ್ಲಾರ ಆಹ್ವಾನಿಸುತ್ತದೆ.**

ನಿಮ್ಮ ವಿಶ್ವಾಸಿ
**ನಿರ್ವಾಹಕ ಸಂಪಾದಕ**

# ಪ್ರತಿಸ್ಪಂದನ

● **ಶಾ**ರದಾ ಮಾತೆಯ ಕುರಿತಂತೆ ಪೂಜ್ಯ ಕಂಚಿ ಪರಮಾಚಾರ್ಯರಾದ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳ ಲೇಖನಿಯಿಂದ ಪರಿಪೂರ್ಣ ವಿವರಣೆ ಅನಾವರಣಗೊಂಡಿದೆ. ಅಕ್ಟೋಬರ್ ತಿಂಗಳಿನ 5ರಿಂದ ಸರಸ್ವತಿ ಪ್ರತೀಕವಾದ ಪುಸ್ತಕ ಸ್ಥಾಪನೆಯೊಂದಿಗೆ ವಿಜಯದಶಮಿಯ ತನಕ ಭಾರತಾದ್ಯಂತ ಸರಸ್ವತಿ ಪೂಜೆಯು ಆಚರಿಸಲ್ಪಡುವ ಮಹತ್ತ್ವವನ್ನು ಈ ಲೇಖನದಲ್ಲಿ ತಿಳಿಸಲಾಗಿದೆ. ಪೂಜ್ಯ ಆದಿ ಶಂಕರಾಚಾರ್ಯರು ಕಾಶ್ಮೀರದ ಅತ್ಯುನ್ನತ ಪ್ರದೇಶದಲ್ಲಿ ಶಾರದಾ ಪೀಠವನ್ನು ಸ್ಥಾಪಿಸುವುದರ ಮೂಲಕ ಪಂಡಿತ ಪಾಮರರೆನ್ನದೆ ಎಲ್ಲರೂ ಶಾರದಾ ಮಾತೆಯ ಕೃಪೆಗೆ ಪಾತ್ರರಾಗುವಂತೆ ಮಾಡಿದುದು ಪರಮಾದ್ಭುತ.

■ **ಕೋಟೇಶ್ವರ ಸೂರ್ಯನಾರಾಯಣರಾವ್,**
ಸಾಹಿತಿಗಳು, ಬೆಂಗಳೂರು–560 054.

● **ಮ**ಲ್ಲಾರದಲ್ಲಿ ಪ್ರತಿ ತಿಂಗಳೂ ಇನ್ನೂ ಓದಬೇಕು ಎನ್ನುವ ಲೇಖನಗಳು ಅರ್ಥಪೂರ್ಣ ವಿವರಗಳೊಂದಿಗೆ ಮನಮುಟ್ಟುವಂತೆ ಬಂದಿರುತ್ತವೆ. ಈಗಿರುವ ಮಲ್ಲಾರದ ಪುಟಗಳ ಜೊತೆಗೆ ಇನ್ನೂ 20 ಪುಟಗಳು ಹೆಚ್ಚಾಗಿ ಮುದ್ರಣಗೊಂಡರೆ ಓದಲು ಬಹಳ ಚೆನ್ನಾಗಿರುತ್ತದೆ.

■ **ಶ್ರೀ ಚಂದ್ರಶೇಖರಯ್ಯ,**
ಬೆಂಗಳೂರು–560 083.




● **‘ಶ್ರೀ** ರಾಮಾನುಜ ವೈಭವ’ ಧಾರಾವಾಹಿಯನ್ನು ನಾನು ಮೊದಲ ಕಂತಿನಿಂದಲೂ ಓದುತ್ತಿದ್ದೇನೆ. ಶ್ರೀ ರಾಮಾನುಜರ ಕುರಿತು ವಿಷಯ ಸಂಗ್ರಹ ಯಾವ ಗ್ರಂಥದಲ್ಲಿ ಸವಿಸ್ತಾರವಾಗಿ ಓದಿರುವುದಿಲ್ಲ. ಇದೊಂದು ಉತ್ತಮ ಕಾದಂಬರಿ.

■ **ಶೇಷಾದ್ರಿ ಅಯ್ಯಂಗಾರ್,** ಮೈಸೂರು–570 010.

● **ಸ್ವಾ**ಮಿ ನಿಮಿಷಾನಂದಜೀಯವರು ಬರೆಯುತ್ತಿರುವ ಕಶ್ಯಪ ಸೂತ್ರಗಳು ಒಂದು ಅದ್ಭುತ ಲೇಖನ ಮಾಲೆ. ವೇದಾಂತದ ರಹಸ್ಯಗಳನ್ನು ಬಿಚ್ಚಿಡುತ್ತಿರುವ ಈ ಲೇಖನಗಳು ಇಲ್ಲಿಯವರೆಗೆ ಎಲ್ಲಿ ಅಡಗಿ ಕುಳಿತಿದ್ದವು ಎಂದು ಆಶ್ಚರ್ಯ ಉಂಟಾಗುತ್ತದೆ. ಸ್ವಾಮೀಜಿಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು.

■ **ಕ್ಷೇತ್ರಪಾಲಯ್ಯ,**
ಆನೇಕಲ್–562 106.

● **ಐ**ನೂರು ವರ್ಷಗಳ ಹಿಂದೆ ಉತ್ತರ ಭಾರತದಲ್ಲಿ ಜನ್ಮ ತಳೆದ ಸಂತ ಮೀರಾಬಾಯಿ ಶ್ರೀಕೃಷ್ಣನನ್ನೇ ಉಸಿರಾಗಿಸಿಕೊಂಡು ಕವಿ ಹೃದಯಿಯಾಗಿ ಭಾರತದ ಆಧ್ಯಾತ್ಮಿಕ ಪರಂಪರೆಯು ಇರುವವರೆಗೂ ಚಿರಸ್ಮರಣೀಯ. ಮೀರಾಳ ಶ್ರೀಕೃಷ್ಣನ ಮೇಲಿನ ಭಕ್ತಿ ಅನನ್ಯವಾದದ್ದು. ಶ್ರೀಕೃಷ್ಣನನ್ನು ಬಿಟ್ಟು ಯಾವ ಮನುಷ್ಯನನ್ನು ಪತಿಯೆಂದುಕೊಳ್ಳದ ಧೀರ ಮಹಿಳೆ ಮೀರಾ. ಮೀರಾಬಾಯಿ ಕುರಿತು ಉತ್ತಮ ಲೇಖನವನ್ನು ನೀಡಿದ ಡಾ. ಅನಸೂಯಾದೇವಿಯವರಿಗೂ ಮಲ್ಲಾರ ಮಾಸಪತ್ರಿಕೆಗೂ ಅನಂತ ದನ್ಯವಾದಗಳು.

■ **ಶ್ರೀಮತಿ ಲೀಲಾವತಿ. ಎನ್. ಮೂರ್ತಿ.**
ಕೋಟಂಬಳ್ಳಿ–571 117.

**ಮ**ಲ್ಲಾರದ ಸಮಕ್ಕೆ ಬರುವ ಇನ್ನೊಂದು ಆಧ್ಯಾತ್ಮಿಕ–ವ್ಯಕ್ತಿತ್ವ ವಿಕಸನ ಮಾಸಪತ್ರಿಕೆ ಇನ್ನೊಂದು ಇರಲಾರದು. ಮಲ್ಲಾರ ಓದುವ ಓದುಗರೆಲ್ಲರಿಗೂ ನಮ್ಮ ಸನಾತನ ಧರ್ಮದ ಪರಿಚಯ ಮಾತ್ರವಲ್ಲದೆ ಅದರ ಬಗ್ಗೆ ಅಪಾರ ಶ್ರದ್ಧೆ ಭಕ್ತಿಗಳೂ ಉಂಟಾಗುವುದರಲ್ಲಿ ಅನುಮಾನವಿಲ್ಲ.

■ **ವಿರೂಪಾಕ್ಷಪ್ಪ,**
ನಾಗಮಂಗಲ–571 432.

● **ಎ**ಷ್ಟೋ ಮಹರ್ಷಿಗಳ ಹೆಸರುಗಳನ್ನು ಕೇಳಿಯೇ ಇಲ್ಲ. ಮಲ್ಲಾರದಲ್ಲಿ ಪ್ರಕಟವಾಗುತ್ತಿರುವ ಪ್ರಾಚೀನ ಭಾರತದ ಮಹರ್ಷಿಗಳು ಲೇಖನ ಮಾಲೆ ನಮಗೆಲ್ಲರಿಗೂ ಆ ಶ್ರೇಷ್ಠ ಗುರುಗಳ ಪರಿಚಯವನ್ನು ನೀಡಿ ನಮ್ಮ ಕಣ್ತೆರೆಸುತ್ತಿವೆ. ಅಕ್ಟೋಬರ್ ತಿಂಗಳ ಪುಲಸ್ತ್ಯ ಒಂದು ಅಪರೂಪದ ಲೇಖನ.

■ **ರಾಮಸ್ವಾಮಿ ಕೆ.ಟಿ.**
ಬೆಂಗಳೂರು–560 086.

● **ಮ**ಲೆಯಾಳಂನ ಸಂಸ್ಕೃತ ಕವಿ ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿ ರಚಿಸಿರುವ ನಾರಾಯಣೀಯಮ್ ಕಾವ್ಯದ ಕನ್ನಡ ಗದ್ಯಾನುವಾದ ಬಹು ಚೆನ್ನಾಗಿದೆ. ಎಲ್ಲೆಲ್ಲಿಂದಲೋ ಧಾರ್ಮಿಕ ಸಾಹಿತ್ಯ ಕೃತಿಗಳನ್ನು ತಂದು ನಮಗೆ ಪರಿಚಯಿಸುತ್ತಿರುವ ಮಲ್ಲಾರಕ್ಕೆ ಹಾರ್ದಿಕ ವಂದನೆಗಳು.

■ **ಪರಿಮಳಾದೇವಿ,**
ಮೈಸೂರು–570 012.

● **ಅ**ಕ್ಟೋಬರ್ 2019ರ ಮಲ್ಲಾರ ನವರಾತ್ರಿ ಹಬ್ಬಕ್ಕೆ ಸರ್ವವಿಧದಲ್ಲೂ ಒಪ್ಪುವಂತೆ ಮುಖಪುಟದಲ್ಲಿ ವೀಣಾಪಾಣಿ ಶಾರದೆಯ ಬಣ್ಣದ ಚಿತ್ರದೊಂದಿಗೆ ವಾಚಕರನ್ನು ಮಹದಾನ್ನಂದಪಡಿಸಿದೆ. ಯತಿರಾಜ್ ವೀರಾಂಬುಧಿಯವರ ವಿಷ್ಣು ಸಹಸ್ರನಾಮದ ಪದಗಳು ವಿಷ್ಣು ಸಹಸ್ರನಾಮದ ಮಹತ್ತ್ವವನ್ನು ಹೆಚ್ಚಿಸುತ್ತಿದೆ.

■ **ಎ.ಕೆ. ಅನಂತಮೂರ್ತಿ,**
ಬೆಂಗಳೂರು–560 050.




# ಹೀಗೊಂದು ಅನಿಸಿಕೆ...

● ಡಾ। ಬಾಬು ಕೃಷ್ಣಮೂರ್ತಿ

ಕನ್ನಡದ ಅತ್ಯಂತ ಶ್ರೇಷ್ಠ ಅನುಭಾವಿ ಕವಿಗಳಲ್ಲಿ ಒಬ್ಬರಾದ ನಿಜಗುಣ ಶಿವಯೋಗಿ ಮೈಸೂರಿನ ಸನಿಹದ ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ್ದ ಒಂದು ಸಣ್ಣ ಸಂಸ್ಥಾನದ ಚಿಲಕವಾಡಿಗೆ ದೊರೆಯಾಗಿದ್ದವರು. ಆತನ ಬೌದ್ಧಿಕ ಪ್ರತಿಭೆ ಅಸಾಧಾರಣವಾದದ್ದು. ಬಹುದೊಡ್ಡ ಅಧ್ಯಯನಶೀಲ. ನಾಡನ್ನಾಳುವ ದೊರೆಯಾಗಿದ್ದರೂ ಆತನ ಮನಸ್ಸು ಆತನನ್ನು ಅಧ್ಯಾತ್ಮದತ್ತ ಎಳೆಯುತ್ತಿತ್ತು. ಆತ ವೀರಶೈವ ಪಂಥಾನುಯಾಯಿಯಾಗಿ, ಉಪನಿಷತ್ತುಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಅದ್ವೈತ ಸಿದ್ಧಾಂತವನ್ನು ಅರೆದು ಕುಡಿದಿದ್ದರು.

ರಾಜರಾಗಿ ಪ್ರಜಾನುರಾಗಿಯಾಗಿದ್ದರು. ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದ ನಿಜಗುಣರು ಪಾರಮಾರ್ಥಿಕದಲ್ಲೂ ಅಷ್ಟೇ ಆಸ್ಥೆ ಹೊಂದಿದ್ದರು. ಚಿಲಕವಾಡಿ ಪ್ರದೇಶದಲ್ಲಿರುವ ಒಂದು ಬೆಟ್ಟ ಅವರನ್ನು ಆಧ್ಯಾತ್ಮಿಕ ಸಾಧನೆಗೆ ಸೆಳೆಯುತ್ತಿದ್ದ ತಾಣವಾಗಿತ್ತು. ಆ ಬೆಟ್ಟಕ್ಕೆ ಹೆಸರು ಶಂಭುಲಿಂಗನ ಬೆಟ್ಟ.

**ನಿಜಗುಣ ಶಿವಯೋಗಿ**



ಉಪನಿಷತ್ತುಗಳಲ್ಲಿ ಹೇಳಲಾಗಿದ್ದು ಆದಿ ಶಂಕರಾಚಾರ್ಯರಿಂದ ಕ್ರಿ.ಶ. ಎಂಟನೆಯ ಶತಮಾನದಲ್ಲಿ ಹೆಚ್ಚು ಪ್ರಭಾವಿಯಾದ ಅದ್ವೈತ ತತ್ತ್ವಗಳಿಗೆ ಮನಸೋತ ನಿಜಗುಣರು ಆ ತತ್ತ್ವಶಾಸ್ತ್ರವನ್ನು ಆಮೂಲಾಗ್ರವಾಗಿ ಅರಿಯಲು ಅಪಾರ ಗ್ರಂಥ ಸಂಗ್ರಹ ಮಾಡಿದರು. ಅದರ ಅಧ್ಯಯನ ಹಾಗೂ ತಾತ್ತ್ವಿಕ ಚಿಂತನೆಗಾಗಿ ಪದೇ ಪದೇ ಅವರು ಶಂಭುಲಿಂಗನ ಬೆಟ್ಟವನ್ನು ಸೇರುತ್ತಿದ್ದರು. ಅಧ್ಯಾತ್ಮ ಪಥದಲ್ಲಿ ಯಶಸ್ವಿಯಾಗಿ ಮುಂದುವರಿಯಬೇಕಾದರೆ ಯೋಗ ಸಾಧನೆ ಅತಿ ಆವಶ್ಯಕ. ಪತಂಜಲಿಗಳ ಯೋಗ ಸೂತ್ರಗಳನ್ನು ಅಭ್ಯಸಿಸಿ ಮೂಲಾಧಾರದಿಂದ ಸಹಸ್ರಾರದವರೆಗೆ ಜೀವಾತ್ಮನ ಪಯಣದ ಪರಿಯನ್ನು ಕಂಡುಕೊಂಡು ಸಾಧಿಸಿ ಅಪೂರ್ವ ಯೋಗಿ ಅನ್ನಿಸಿಕೊಂಡಿದ್ದರು. ಶಿವಾರಾಧಕರಾಗಿದ್ದೂ ಯೋಗಿಯೂ ಆಗಿದ್ದುದರಿಂದ ಜನರಿಂದ ಅವರಿಗೆ ಶಿವಯೋಗಿ ಎಂಬ ಹೆಸರೂ ಬಂತು. ಆದರೆ ನಿಜಗುಣರು ಎಲ್ಲೂ ತಮ್ಮನ್ನು ಶಿವಯೋಗಿ ಎಂದು ಕರೆದುಕೊಂಡಿದ್ದು ಕಂಡುಬರುವುದಿಲ್ಲ.

ನಿಜಗುಣರು ಒಂದು ಪದ್ಯದಲ್ಲಿ ತಮ್ಮ ಗುಣ ಸ್ವಭಾವಗಳ ಬಗ್ಗೆ ಮತ್ತು ಹೆಸರಿನ ಬಗ್ಗೆ ಉಲ್ಲೇಖಿಸಿರುವುದುಂಟು. ಸಾಮಾನ್ಯವಾಗಿ ಪ್ರಾಚೀನರಲ್ಲಿ ತಮ್ಮ ಕೃತಿಗಳಲ್ಲಿ ತಮ್ಮನ್ನು ಕುರಿತು ಪ್ರಸ್ತಾವಿಸುವುದು ವಿರಳ. ಇದು ಭಾರತೀಯ ಪ್ರಾಚೀನ ಸಂಪ್ರದಾಯ. ಆ ನಿಟ್ಟಿನಲ್ಲಿ ನಿಜಗುಣರೇ ಸ್ವತಃ ತಮ್ಮನ್ನು ಕುರಿತು ಹೇಳಿಕೊಂಡಿರುವುದು ವಿಶೇಷವೇ ಎನ್ನಬಹುದು. 'ತಾನು ಯಾವದೇ ನಿಮಿತ್ತವಿಲ್ಲದೇ ಎಲ್ಲರಿಗೂ ಬಾಂಧವನಾಗಿರುತ್ತಾನೆ. ಅನುಪಮವಾದ ಆನಂದ ಸಾಗರ ತಾನು. ಅಧಿಕ ವಿದ್ಯೆಯನ್ನು ಸಂಪಾದಿಸಿರುವವನು ಎಂದು ಕೀರ್ತಿಶಾಲಿಯಾದ ತಾನು ನಿಜಗುಣ ಯೋಗಿ' ಎಂದು ಪರಿಚಯಿಸಿಕೊಂಡಿದ್ದಾರೆ.

ನಿಜಗುಣರು ಒಬ್ಬ ಮಹಾನ್ ಅದ್ಭುತ ವ್ಯಕ್ತಿತ್ವದ ಯೋಗಿ. ಕನ್ನಡದ ಚಿಂತಕರು ಹಲವರು ನಿಜಗುಣರ ಬಗ್ಗೆ ವ್ಯಕ್ತಪಡಿಸಿರುವ ಕೆಲ ಅಭಿಪ್ರಾಯಗಳು ಅವರ ಮೇರು ವ್ಯಕ್ತಿತ್ವದ ಅಧ್ಯಾತ್ಮ ದಿವ್ಯತೇಜದ ಪರಿಚಯ ನೀಡುತ್ತವೆ.

ಕಾದಂಬರಿ ಸಾರ್ವಭೌಮ ಅ.ನ.ಕೃರವರ ನುಡಿಮುತ್ತುಗಳು ಹೀಗಿವೆ: "ನಿಜಗುಣ ಶಿವಯೋಗಿಯು ಒಬ್ಬ ಕವಿ ಎನ್ನುವುದಕ್ಕಿಂತ ಒಬ್ಬ ಸೀಮಾಪುರುಷನೆಂದು ಹೇಳಬೇಕಾಗುತ್ತದೆ. ಅವನ ಸಾಹಿತ್ಯ ಸೃಷ್ಟಿ ವಿಪುಲವಾದದ್ದೂ ಕನ್ನಡ ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ತ್ವದ್ದೂ ಆಗಿದೆ. ನಿಜಗುಣ ಶಿವಯೋಗಿ ಕಾವ್ಯದ ತೆರೆಯ ಮೇಲೆ ನಿಂತು ಅಧ್ಯಾತ್ಮದ ಮುಗಿಲನ್ನು ಮುಟ್ಟುತ್ತಾನೆ. ಭಾರತೀಯ ತತ್ತ್ವಶಾಸ್ತ್ರವನ್ನಿವನು ಕನ್ನಡಿಸಿರುವ ರೀತಿ ಇವನ ಪ್ರಗಲ್ಭ ಪಾಂಡಿತ್ಯ, ಆಳವಾದ ಅನುಭವ, ವಿಶಾಲ ದೃಷ್ಟಿಗಳ ಪ್ರತೀಕವಾಗಿದೆ."

ವಚನಶಾಸ್ತ್ರ ಪಿತಾಮಹರೆಂದು ಪ್ರಸಿದ್ಧರಾಗಿರುವ ಮಹಾನ್ ವಿದ್ವಾಂಸ ಫ.ಗು. ಹಳಕಟ್ಟಿಯವರು ನಿಜಗುಣರನ್ನು ಹೀಗೆ ಅರ್ಥೈಸಿದ್ದಾರೆ:

"ಶ್ರೀ ನಿಜಗುಣ ಶಿವಯೋಗಿಯು ಹಿಂದೂ ಧರ್ಮದ ವಿಶ್ವಕೋಶಕಾರನಾಗಿದ್ದಾನೆ. ಕರ್ನಾಟಕದಲ್ಲಿ ಯಾವನಾದರೂ ಗ್ರಂಥಕಾರನು ಧಾರ್ಮಿಕ ತೇಜಸ್ಸನ್ನು ಸ್ಥಿರಗೊಳಿಸಲು ಕಾರಣನಾಗಿದ್ದರೆ ಅವನು ನಿಶ್ಚಯವಾಗಿಯೂ ನಿಜಗುಣ ಶಿವಯೋಗಿಯೇ ಇರುತ್ತಾನೆ."

ಕನ್ನಡ ಸಾಹಿತ್ಯ ಚರಿತ್ರೆಕಾರರಾದ ವಿಮರ್ಶಕ ಡಾ. ರಂ. ಶ್ರೀ. ಮುಗಳಿಯವರ ಅಭಿಪ್ರಾಯ ಹೀಗಿದೆ!

"ನಿಜಗುಣ ಶಿವಯೋಗಿ ಕನ್ನಡನಾಡಿನ ಅತ್ಯದ್ಭುತ ವ್ಯಕ್ತಿಗಳಲ್ಲಿ ಒಬ್ಬರು. ಅಗಾಧ ವಿದ್ವತ್ತಿನಿಂದಲೂ ದೀರ್ಘ ತಪಶ್ಚರ್ಯದಿಂದಲೂ ಜ್ಞಾನದ ಪವಿತ್ರ ತುದಿಯನ್ನೇರಿ ಕೆಳಗಿಳಿದು ಬಂದು ತರ ತರದ ಗದ್ಯಪದ್ಯಗಳಲ್ಲಿ ಕನ್ನಡ ಜನಕ್ಕೆ ತನ್ನ ಅರಿವನ್ನು ಹಂಚಿಕೊಟ್ಟನು."

ನಿಜಗುಣರು ತಮ್ಮ ಅನುಭವಾಮೃತವನ್ನು ಏಳು ಪುಸ್ತಕಗಳಲ್ಲಿ ಶೇಖರಿಸಿದ್ದಾರೆ. ಕೈವಲ್ಯ ಪದ್ಧತಿ, ಪರಮಾನುಭವ ಬೋಧೆ, ಅನುಭವಸಾರ. ಪರಮಾರ್ಥಗೀತೆ, ಪಾರಮಾರ್ಥಿಕ ಪ್ರಕಾಶಿಕೆ, ವಿವೇಕ ಚಿಂತಾಮಣಿ. ಅರವತ್ತೂರು ಪುರಾತನ ತ್ರಿವಿಧಿ–ಇವೇ ಆ ಏಳು ಕೃತಿರತ್ನಗಳು.

ನಿಜಗುಣರ ಪರಮಾನುಭವ ಬೋಧೆ ಒಂದು ಆಧ್ಯಾತ್ಮಿಕ ಅದ್ಭುತ ಸಾಹಿತ್ಯ. ಬೃಹದಾರಣ್ಯಕೋಪನಿಷತ್ತಿನಲ್ಲಿ ಕಂಡುಬರುವ ಯಾಜ್ಞವಲ್ಕ್ಯ–ಮೈತ್ರೇಯಿ ಅಧ್ಯಾತ್ಮ ಸಂವಾದ ಭಾರತೀಯ ತತ್ತ್ವಶಾಸ್ತ್ರದ ಒಂದು ಅಪೂರ್ವ ಜ್ಞಾನ ಪ್ರಬೋಧ.

ಯಾಜ್ಞವಲ್ಕ್ಯ ಮಹರ್ಷಿಗಳಿಗೆ ಇಬ್ಬರು ಪತ್ನಿಯರು. ಕಾತ್ಯಾಯಿನಿ ಮತ್ತು ಮೈತ್ರೇಯಿ. ಯಾಜ್ಞವಲ್ಕ್ಯರು



▶▶ 53ನೇ ಪುಟಕ್ಕೆ



ನಮ್ಮ ಸನಾತನ ಧರ್ಮದಲ್ಲಿ, ಸಾಂಪ್ರದಾಯಿಕ ಆಚರಣೆಗಳಲ್ಲಿ, ವೇದ ವಾಙ್ಮಯದಲ್ಲಿ **"ಮಹಾನಾರಾಯಣೋಪನಿಷತ್ತು"** ವಿಶಿಷ್ಟ ಸ್ಥಾನ ಪಡೆದಿದೆ. ಇದು ಯಜುರ್ವೇದದ ತೈತ್ತಿರೀಯ ಶಾಖೆಗೆ ಸೇರಿದ್ದು, ಆ ಶಾಖೆಯ ಆರಣ್ಯಕ ಭಾಗದ ಕೊನೆಯಲ್ಲಿ ಬರುತ್ತದೆ (ವೇದಗಳಲ್ಲಿ ಸಂಹಿತೆ–ಬ್ರಾಹ್ಮಣ–ಆರಣ್ಯಕ–ಉಪನಿಷತ್ತು ಎಂಬ ಭಾಗಗಳಿವೆ). ಈ ಉಪನಿಷತ್ತಿನ ಮಂತ್ರಗಳನ್ನು ದೇವಸ್ಥಾನದ ವಿಶೇಷ ಪೂಜೆ–ಉತ್ಸವಗಳಲ್ಲಿ, ಹಬ್ಬ–ಹರಿದಿನ ಹಾಗೂ ಇತರ ವೈದಿಕ ಆಚರಣೆಗಳಲ್ಲಿ ಪ್ರಮುಖವಾಗಿ ಪಠಿಸಲಾಗುತ್ತದೆ. ಇದಕ್ಕೆ "ಯಾಜ್ಞಿಕೀ ಉಪನಿಷತ್" ಎಂಬ ಹೆಸರೂ ಇದ್ದು, ಸಂಧ್ಯಾವಂದನೆ–ಗಾಯತ್ರೀ ಜಪ, ಹೋಮ–ಹವನ, ತೀರ್ಥಸ್ನಾನ, ಶ್ರಾದ್ಧ ಸೇರಿದಂತೆ ಕರ್ಮಾನುಷ್ಠಾನಕ್ಕೆ ಉಪಯುಕ್ತವಾದ ಅನೇಕ ಮಂತ್ರಗಳನ್ನೊಳಗೊಂಡಿದೆ. ಇದಕ್ಕೆ ಕ್ರಮಬದ್ಧವಾದ ಸ್ವರಪಾಠವೂ ಇದ್ದು ಪಾರಾಯಣಕ್ಕೆ ಯೋಗ್ಯವಾಗಿದೆ. ಹೀಗಾಗಿ ಈ ಉಪನಿಷತ್ತು ಬಹಳ ಜನಮನ್ನಣೆ ಗಳಿಸಿದ್ದು, ಉಳಿದ ವೇದ ಭಾಗಗಳಿಗಿಂತ ಹೆಚ್ಚು ಪ್ರಚಲಿತವಾಗಿದೆ ಎನ್ನಬಹುದು. ಸಾಮಾನ್ಯವಾಗಿ 'ನಾರಾಯಣ'

# ಮಹಾನಾರಾಯಣೋಪನಿಷತ್ತು



ಯಜುರ್ವೇದಕ್ಕೆ ಸೇರಿರುವ "ಮಹಾನಾರಾಯಣೋಪನಿಷತ್ತು" ಲೇಖನದಲ್ಲಿ ದೇವಸ್ಥಾನಗಳಲ್ಲಿನ ವಿಶೇಷ ಪೂಜೆ–ಉತ್ಸವ, ಹಬ್ಬ–ಹರಿದಿನ ಹಾಗೂ ಇತರ ವೈದಿಕ ಆಚರಣೆಗಳ ಕುರಿತು ಪ್ರಮುಖವಾಗಿ ತಿಳಿಸಲಾಗಿದೆ. ಈ ಕುರಿತು ವಿದ್ವತ್‌ಪೂರ್ಣ ಮಾಹಿತಿ ನೀಡಿದ್ದಾರೆ

ಶ್ರೀಮತಿ ರಾಜೇಶ್ವರಿ ಕೃಷ್ಣ.



ಎಂಬ ಶಬ್ದವನ್ನು ವಿಷ್ಣುವಿಗೆ ಬಳಸಲಾಗುತ್ತದೆ. ಇಡೀ ವರ್ಷ ನಡೆಯುವ ನಮ್ಮ ಪೂಜೆ–ಪುನಸ್ಕಾರಗಳಲ್ಲಿ, ವೈದಿಕ ಆಚರಣೆಗಳಲ್ಲಿ ವಿಷ್ಣುವಿಗೆ ಪ್ರಮುಖ ಸ್ಥಾನವಿದೆ. ತಿರುಪತಿ, ಶ್ರೀರಂಗ, ತಿರುವನಂತಪುರ ಮುಂತಾದ ದೇವಾಲಯಗಳಲ್ಲಿ ಮಹಾವಿಷ್ಣು ವಿಶೇಷವಾಗಿ ವಿಜೃಂಭಿಸಿದ್ದಾನೆ. ಕಾರ್ತಿಕ–ಮಾರ್ಗಶಿರ, "ವಿಷ್ಣು" ಮಾಸಗಳು; ಅದರಲ್ಲೂ ಮಾರ್ಗಶಿರ ಮಾಸದ ಶುಕ್ಲಪಕ್ಷದ ಏಕಾದಶಿ ವಿಷ್ಣುವಿಗೆ ಸಮರ್ಪಿತವಾದ ದಿನ. ವೈಕುಂಠ ಏಕಾದಶಿ, ಮೋಕ್ಷದಾ ಏಕಾದಶಿ ಎಂದೂ ಕರೆಯಲ್ಪಡುವ ಈ ದಿನದಂದು ವಿಷ್ಣು ದೇವಾಲಯಕ್ಕೆ ಹೋಗಿ, ದರ್ಶನ ಪಡೆದು, ಅಲ್ಲಿ ಆ ದಿನ ಮಾತ್ರ ತೆರೆಯುವ ವಿಶೇಷ ದ್ವಾರವನ್ನು ಪ್ರವೇಶಿಸಿದವರಿಗೆ ಪುಣ್ಯಪ್ರಾಪ್ತಿ–ಪುನರ್ಜನ್ಮದಿಂದ ಮುಕ್ತಿ ಎಂಬ ದೃಢವಾದ ನಂಬಿಕೆ ಇದೆ. ಅಂತೆಯೇ ವಿಷ್ಣುವಿಗೆ ಸಂಬಂಧಿಸಿದ ಎಲ್ಲವೂ–ಕಾರ್ತಿಕದಲ್ಲಿ ವಿಷ್ಣು ದೀಪ, ವಿಷ್ಣು ಪಾದ, ವಿಷ್ಣು ಪಾರಾಯಣ, ಗರುಡ ವಾಹನ–ಬಹಳ ಪವಿತ್ರ ಸ್ಥಾನ ಪಡೆದಿವೆ. ಇವೆಲ್ಲವೂ ನಮ್ಮ ಬದುಕಿಗೆ



ಪ್ರೇರಕ ಶಕ್ತಿಯಾಗಿದ್ದರೂ ಸ್ವಲ್ಪ ಮುಂದುವರಿದು ಈ ಆಚರಣೆಗಳ ಆಧ್ಯಾತ್ಮಿಕ ಆಯಾಮವನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿದರೆ ನಮಗೆ ವಿಶೇಷ ಪ್ರಯೋಜನವಾಗುತ್ತದೆ. "ಸರ್ವಜನಸ್ವಾದ್ಯ" ಗುಣವನ್ನು ಹೊಂದಿರುವ **ಮಹಾನಾರಾಯಣೋಪನಿಷತ್ತು** ಇಂಥ ಸಮನ್ವಯದೊಂದಿಗೆ ಹಂತ-ಹಂತವಾಗಿ ಮುಂದುವರಿದು, ಪರಮಾತ್ಮ ಸ್ವರೂಪವನ್ನು ಅರಿತುಕೊಂಡು ಉದ್ಧಾರವಾಗಲು ದಾರಿದೀಪದಂತಿದೆ.

## ವ್ಯಾಪಕ ತತ್ತ್ವ

ಸಂಸ್ಕೃತದಲ್ಲಿ 'ನಾರಾಯಣ' ಎಂಬ ಶಬ್ದಕ್ಕೆ ವಿಶಾಲವಾದ ಅರ್ಥವ್ಯಾಪ್ತಿ ಇದೆ. **ನಾರಃ** ಎಂದರೆ 'ನೀರು' ಮತ್ತು 'ನರಸಮೂಹ' ಎಂಬ ಅರ್ಥಗಳಿವೆ. ನೀರಿನಿಂದಲೇ ಮನುಷ್ಯ ಜನ್ಮ – ಈ ನರನಿಗೆ 'ಅಯಣ' ಅಥವಾ ಆಶ್ರಯವಾಗಿರುವವನು **ನಾರಾಯಣ**. ವ್ಯಷ್ಟಿಯಲ್ಲಿ ಅಥವಾ ಜೀವಿಗಳಲ್ಲಿ ಇರುವ 'ಅಹಂ' ತತ್ತ್ವವೇ ('ನಾನು' ಎಂಬ ಸ್ಫುರಣೆ.) ನಾರಾಯಣ-ನಮ್ಮೊಳಗಿರುವ ವಿಷ್ಣು ಅಥವಾ ಅಂತರ್ಯಾಮಿ. ಈ ಜೀವಾತ್ಮರಿಗೆ ಆಸ್ಪದವಾಗಿರುವ ಸಮಷ್ಟಿ ಪರಮಾತ್ಮನೇ 'ಮಹಾ ನಾರಾಯಣ' (ಮಹಾವಿಷ್ಣು). ಈ ಮಹಾ ನಾರಾಯಣನ ಬಗ್ಗೆ ತಿಳಿಸಿಕೊಡುವುದೇ **ಮಹಾನಾರಾಯಣೋಪನಿಷತ್ತು**.

ಮಹಾಭಾರತದಲ್ಲಿ ಅರ್ಜುನನೆಂಬ 'ನರ'ನಿಗೆ ಆಶ್ರಯವಾಗಿ ನಿಂತವನು 'ನಾರಾಯಣ' ಅಥವಾ ಶ್ರೀಕೃಷ್ಣ ಎಂಬ ಹೋಲಿಕೆಯೂ ಇದೆ. ಈ ಉಪನಿಷತ್ತಿಗೆ ಸಾಯಣಾಚಾರ್ಯರಿಂದ ವಿರಚಿತವಾಗಿರುವ ಭಾಷ್ಯವಿದೆ. ಶ್ರೀ ಶಂಕರಾಚಾರ್ಯರಿಂದ ವಿರಚಿತವಾಗಿರುವ ಭಾಷ್ಯವಿದೆ. ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಈ ಉಪನಿಷತ್ತಿನ ಮಂತ್ರಗಳನ್ನು ಪ್ರಮಾಣ ವಚನಗಳ ರೂಪದಲ್ಲಿ ಉದಾಹರಿಸಿದ್ದಾರೆ. ಈ ವಿಚಾರ ಸರಣಿಯನ್ನು ಅನುಸರಿಸಿ, ಹೇಗೆ ಈ ಉಪನಿಷತ್ತು ಕರ್ಮ-ಉಪಾಸನೆ-ಜ್ಞಾನ ಎಂಬ ಸಾಧನತ್ರಯವನ್ನು ಮೋಕ್ಷಪ್ರದವಾಗಿ ಒಳಗೊಂಡಿದೆ ಎಂದು ಸಮನ್ವಯ ಮಾಡಿಕೊಂಡು, ಆ ಪರಮ ತಾತ್ಪರ್ಯವನ್ನು ಗ್ರಹಿಸಬಹುದು. ಹೀಗೆ ವೇದಾಧ್ಯಯನ ಸಂಪನ್ನರಿಗೂ, ಬ್ರಹ್ಮವಿದ್ಯಾ ಸಾಧಕರಿಗೂ ಈ ಮಂತ್ರಗಳ ಅರ್ಥಾನುಸಂಧಾನದಿಂದ ಸೂಕ್ತ ಮಾರ್ಗದರ್ಶನ ಲಭಿಸುತ್ತದೆ.

ಯಜುರ್ವೇದದ ಈ ಉಪನಿಷತ್ತಿಗೆ 'ಸಹ ನಾವವತು । ಸಹ ನೌ ಭುನಕ್ತು......' ಎಂಬ ಶಾಂತಿ ಪಾಠವಿದೆ. "ಬ್ರಹ್ಮವು ನಮ್ಮಿಬ್ಬರನ್ನೂ (ಆಚಾರ್ಯ-ಶಿಷ್ಯ) ಕಾಪಾಡಲಿ. ನಾವು ಜೊತೆಯಲ್ಲಿಯೇ ಬ್ರಹ್ಮವಿದ್ಯಾ ಫಲವನ್ನು ಅನುಭವಿಸುವಂತಾಗಲಿ...." ಎಂಬುದು ಪ್ರಾರ್ಥನೆ. ಈ ಉಪನಿಷತ್ತಿನಲ್ಲಿ ಬರುವ ಮಂತ್ರಗಳು (ಒಟ್ಟು ಸುಮಾರು ೨೪೦ ಮಂತ್ರಗಳಿವೆ) ಒಂದು ನಿರ್ದಿಷ್ಟ ಕ್ರಮದಲ್ಲಿ ನಮಗೆ ಕಂಡುಬರುವುದಿಲ್ಲ. ಈ ದೃಷ್ಟಿಯಿಂದ ಪ್ರತಿಯೊಂದು ಅನುವಾಕವೂ (ವಿಭಾಗ) ಸ್ವತಂತ್ರವಾಗಿರುವಂತೆ ತೋರಿದರೂ, ನಮ್ಮ ಪ್ರಾಚೀನ ಪರಂಪರೆಯ ಅಧ್ಯಯನ-ಅನುಷ್ಠಾನಗಳಿಗೆ ಸೂಕ್ತವಾಗಿಯೇ ಇದೆ. ಇಲ್ಲಿ ಬರುವ ಹಲವಾರು ಮಂತ್ರಗಳು, ಅಲ್ಪ ಪಾಠಭೇದದೊಂದಿಗೆ ಬೇರೆ ಬೇರೆ ಉಪನಿಷತ್ತುಗಳಲ್ಲಿ ನಮಗೆ ದೊರಕುತ್ತವೆ (ಕಠ, ಮುಂಡಕ, ಶ್ವೇತಾಶ್ವತರ ಇತ್ಯಾದಿ). ಈ ಉಪನಿಷತ್ತಿನ ಪ್ರಾರಂಭದಲ್ಲಿ **ಪರಬ್ರಹ್ಮ ಪ್ರತಿಪಾದಕ ಮಂತ್ರಗಳಿವೆ.** ಇಲ್ಲಿನ ಕೆಲವು ಮಂತ್ರಗಳು ಪುರುಷ ಸೂಕ್ತದಲ್ಲೂ, ಹಿರಣ್ಯಗರ್ಭ ಸೂಕ್ತದಲ್ಲೂ ಅನುರಣಿಸಿವೆ. ಮೊದಲನೆಯ ಮಂತ್ರ ಹೀಗಿದೆ-

**ಅಂಭಸ್ಯ ಪಾರೇ ಭುವನಸ್ಯ ಮಧ್ಯೇ ನಾಕಸ್ಯ ಪೃಷ್ಠೇ**
**ಮಹತೋ ಮಹೀಯಾನ್ । ಶುಕ್ರೇಣ ಜ್ಯೋತೀಗ್ಂಷಿ**
**ಸಮನುಪ್ರವಿಷ್ಟಃ ಪ್ರಜಾಪತಿಶ್ಚರತಿ ಗರ್ಭೇ ಅಂತಃ ॥**

[ಬಹಳವಾದ ನೀರಿನಿಂದ ತುಂಬಿಕೊಂಡು ಅಗಾಧವಾಗಿರುವ ಸಮುದ್ರಕ್ಕಿಂತ, ಪೃಥಿವಿಯೇ ಮುಂತಾದ ಮಹಾಲೋಕಗಳ ನಡುವೆ ಇರುವ ಪರ್ವತಗಳಿಗಿಂತ, ದೊಡ್ಡದು ಬ್ರಹ್ಮವು. ಸ್ವರ್ಗದ



ಮೇಲ್ಭಾಗದ ಬ್ರಹ್ಮಾದಿ ಲೋಕಗಳಿಗಿಂತ ಮಹತ್ತರವಾದವನು ಪರಮಾತ್ಮ (ಎಂದು ಹೊಗಳಲಾಗಿದೆ). ಈ ಪರಮಾತ್ಮನೇ ಚೈತನ್ಯರೂಪದಿಂದ ನಿರ್ಮಲವಾದ ಅಂತಃಕರಣಗಳನ್ನು ಪ್ರವೇಶಿಸಿ ಬೆಳಗುತ್ತಿದ್ದಾನೆ; ಪ್ರಜಾಪತಿಯಾಗಿ, ವಿರಾಡ್‌ರೂಪದಿಂದ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿಕೊಂಡಿದ್ದಾನೆ. 'ಗರ್ಭೇ ಅಂತಃ'– ಎಲ್ಲದರ ಒಳಗೆ ಸಾರಭೂತವಾಗಿದ್ದಾನೆ].

## ವಿಭೂತಿಗಳು

ಮುಂದಿನ ಮಂತ್ರಗಳಲ್ಲಿ, ಸ್ಥಾವರ–ಜಂಗಮಾದಿಗಳಿಗೆಲ್ಲ (ಚರಾಚರ ವಸ್ತುಗಳು) ಒಡೆಯನಾಗಿ ಎಲ್ಲೆಲ್ಲೂ ವಿರಾಜಮಾನನಾಗಿರುವ ಪರಮಾತ್ಮನನ್ನು ಕೊಂಡಾಡಲಾಗಿದೆ. ಆತನ ಮಹಿಮೆ ಅಪಾರ–ಅನಂತ. ಈ ಭೂಮಂಡಲದಲ್ಲಿರುವ ಪರ್ವತಾರಣ್ಯಗಳೆಲ್ಲ ಅವನ ವಿಭೂತಿಗಳು, ಗಂಗಾದಿ ತೀರ್ಥಗಳೆಲ್ಲ ಅವನ ಮಹಿಮೆ, ಪೂರ್ವಾದಿ ದಿಕ್ಕುಗಳು, ಆಗ್ನೇಯಾದಿ ವಿದಿಕ್ಕುಗಳು ಅವನ ಬಾಹುಗಳು (ಭಗವದ್ಗೀತೆಯ ೧೦ನೆಯ ಅಧ್ಯಾಯ–'ವಿಭೂತಿ ಯೋಗ'ವನ್ನು ಸ್ಮರಿಸಬಹುದು).



ಅಗ್ನಿ–ವಾಯು, ಸೂರ್ಯ–ಚಂದ್ರ, ಪೃಥ್ವಿ–ಜಲ ದೇವತೆಗಳ ರೂಪದಿಂದಲೂ ಅವನೇ ತೋರಿಕೊಳ್ಳುತ್ತಿದ್ದಾನೆ. ಎಲ್ಲಕ್ಕಿಂತ ಮಿಗಿಲಾಗಿ, ಸಕಲ ಜೀವಿಗಳ ದೇಹೇಂದ್ರಿಯಾಧ್ಯಕ್ಷನಾಗಿ, ಏಕಾತ್ಮ ಪ್ರತ್ಯಯಸಾರನಾಗಿ ಜ್ಞಾನಿಗಳಿಗೆ ಅನುಭವಗಮ್ಯವಾಗಿದ್ದಾನೆ. ಪ್ರಜೆಗಳ ಪಾಲಕನಾಗಿ "ಪ್ರಜಾಪತಿ" ಎನಿಸಿದ್ದಾನೆ. ಇದೇ ಪರಮಾತ್ಮ ನಮ್ಮನ್ನು ಅನುಗ್ರಹಿಸಲು ಸೂರ್ಯನೊಳಗೆ ತೇಜಸ್ಸಿನ ರೂಪದಿಂದ ಎಲ್ಲವನ್ನೂ ಬೆಳಗುತ್ತಿದ್ದಾನೆ. ಈ ಭಾಗದಲ್ಲಿ ಸೂರ್ಯನಾರಾಯಣನ ಸುಂದರ ಸ್ತುತಿ ಇದೆ– 'ಯೋ ದೇವೇಭ್ಯ ಆತಪತಿ । ಯೋ ದೇವಾನಾಂ ಪುರೋಹಿತಃ......' 'ಸೂರ್ಯಾತ್ಮಕವಾದ ಆ ಬ್ರಹ್ಮ ತೇಜಸ್ಸಿಗೆ ವಂದನೆಗಳು'. ಇಂಥ ಸೂರ್ಯನಾರಾಯಣನ ಉಪಾಸನೆಯೇ ಸಂಧ್ಯಾವಂದನೆಯ ಸಾರ. ಈ ಸೂರ್ಯನೇ ಹಗಲು–ರಾತ್ರಿಗಳನ್ನುಂಟುಮಾಡುತ್ತ, ಕಾಲರೂಪದಿಂದಲೂ ಅನುಗ್ರಹಿಸುತ್ತಿದ್ದಾನೆ. ಈ ಮಂತ್ರಗಳಲ್ಲಿ ಕಾಲ ವಿಭಾಗ, ಕಾಲಗಣನೆಯ ಪ್ರಕ್ರಿಯೆಗಳು ಮುಂತಾದ, ವ್ಯಾವಹಾರಿಕವಾಗಿ ಆಸಕ್ತಿ ಮೂಡಿಸುವ, ಕೆಲವು ಮಾಹಿತಿಗಳು ದೊರಕುತ್ತವೆ. ಒಟ್ಟಿನಲ್ಲಿ ಈ ಸಮಸ್ತ ಸೃಷ್ಟಿ ಆ ವಿಶ್ವಕರ್ಮನ ಕೃತಿಯೇ! ನಾರಾಯಣನಾಗಿ ವಿಶ್ವವನ್ನೆಲ್ಲ ವ್ಯಾಪಿಸಿಕೊಂಡಿರುವ ಇಂಥ ಪರಮಾತ್ಮನಿಗಲ್ಲದೆ ಬೇರೆ ಯಾರಿಗೆ ತಾನೆ ನಾವು ಹವಿಸ್ಸನ್ನು ಅರ್ಪಣೆ ಮಾಡಿ ಪೂಜಿಸೋಣ:– 'ಕಸ್ಮೈ ದೇವಾಯ ಹವಿಷಾ ವಿಧೇಮ' ಎಂಬ ಈ ಭಾವುಕ ಉದ್ಗಾರ ಸುಮಾರು ಎಂಟು ಮಂತ್ರಗಳ ಕೊನೆಯ ಪಾದವಾಗಿ ಮತ್ತೆ ಮತ್ತೆ ಅನುರಣಿಸಿದೆ. ಇಲ್ಲಿ ನಮ್ಮ ಮನಸ್ಸಿನ ವೃತ್ತಿಗಳೇ ಹವಿಸ್ಸು– ಅವನ್ನು ಶುದ್ಧವಾಗಿಟ್ಟುಕೊಂಡು ಪರಮಾತ್ಮನಿಗೆ ಒಪ್ಪಿಸುವುದೇ ನಾವು ಅವನಿಗೆ ನೀಡುವ ಹವಿಸ್ಸು ಎಂಬುದು ಅಂತರಾರ್ಥ. ಉಪನಿಷತ್ತಿನ ಮುಂದಿನ ಭಾಗದಲ್ಲಿ **ಗಾಯತ್ರೀ** ಛಂದಸ್ಸಿನ ಹನ್ನೆರಡು ಮಂತ್ರಗಳಿಂದ ಆಯಾ ದೇವತೆಗಳ ಪರವಾದ ಸ್ತುತಿ ಮಾಡಲಾಗಿದೆ. ದೇವತೆಗಳಿಗೆ ವಿಶಿಷ್ಟವಾದ ರೂಪ–ಗುಣ, ಆಕಾರ–ಭೂಷಣಗಳ ವರ್ಣನೆ ಇದ್ದು, ಉಪಾಸಕರಿಗೆ ಸಾಧನೆಯ ಮಾರ್ಗದಲ್ಲಿ ಮುಂದುವರಿಯಲು ಅನುಕೂಲವಾಗುತ್ತದೆ. 'ಇಂಥ ದೇವನನ್ನು ತಿಳಿಯೋಣ, ಧ್ಯಾನಿಸೋಣ–ಅವನು ನಮ್ಮ ಬುದ್ಧಿ ವೃತ್ತಿಗಳನ್ನು ಪ್ರೇರಿಸಲಿ' ಎಂಬುದು ಪ್ರಾರ್ಥನೆ. ಇದರ ಅನಂತರ 'ದೂರ್ವಾಸೂಕ್ತ' ಬರುತ್ತದೆ. 'ದೂರ್ವಾ' ಎಂದರೆ ಗರಿಕೆ. ಗಣಪತಿಯ ಪೂಜೆಯಲ್ಲಿ "ದೂರ್ವಾಯುಗ್ಮ ಪೂಜೆ"ಗೆ ಬಹಳ ಪ್ರಾಶಸ್ತ್ಯವಿದೆ. ಈ ದೂರ್ವೆಯೇ ಎತ್ತರವಾಗಿ ಬೆಳೆದಾಗ "ದರ್ಭೆ" ಎನಿಸುತ್ತದೆ. ಅದು ಪವಿತ್ರವಾಗಿದ್ದು, ವೈದಿಕರು ಬೇರೆ ಬೇರೆ ಸಂದರ್ಭಗಳಲ್ಲಿ ಅದರಿಂದ ನಮಗೆ 'ಪವಿತ್ರಧಾರಣೆ'ಯನ್ನೂ ಮಾಡಿಸುತ್ತಾರೆ. 'ದೂರ್ವಾಸೂಕ್ತ'ವು ಮುಂದಿನ ಸ್ನಾನ ಮಂತ್ರಗಳಿಗೆ ಒಂದು ಪೀಠಿಕೆಯೂ ಆಗಿದೆ. 'ದೂರ್ವತಿ ಇತಿ ದೂರ್ವಾ'–ಹಿಂಸೆ ಅಥವಾ ಪಾತಕವನ್ನು ಕಳೆದು ನಮ್ಮನ್ನು ಪವಿತ್ರಗೊಳಿಸುವುದೇ ದೂರ್ವೆ. ಇಂಥ ದೂರ್ವಾದೇವಿಯನ್ನು ಕುರಿತು ಇಲ್ಲಿ ಪ್ರಾರ್ಥಿಸಲಾಗಿದೆ. (ಇದಕ್ಕೆ ರೋಗ ಪರಿಹಾರಕ ಶಕ್ತಿಯೂ ಇದೆ). ಮುಂದಿನದು 'ಮೃತ್ತಿಕಾ ಸೂಕ್ತ'–ಭೂದೇವಿ ಅಥವಾ ವಸುಂಧರೆಯನ್ನು ಕುರಿತ ಸುಂದರ ಪ್ರಾರ್ಥನೆ. ನಾವು 'ಶಂಕು ಸ್ಥಾಪನೆ', 'ಗುದ್ದಲಿ ಪೂಜೆ' ಮಾಡುತ್ತಿದ್ದರೂ ನಿಜವಾಗಿ ಭೂಮಿಯನ್ನು ದೇವತೆಯೆಂದು ಪರಿಭಾವಿಸಿ ಆರಾಧಿಸುವುದು ವಿರಳ. ಆಕೆ ಸಮಸ್ತ ಪ್ರಾಣಿವರ್ಗಕ್ಕೆ, ಸಸ್ಯಗಳಿಗೆ ಆಶ್ರಯದಾತೆ, ಕ್ಷಮಾಗುಣ ಪರಿಪೂರ್ಣಳಾದ ವಿಷ್ಣುಪತ್ನಿಯೂ ಹೌದು, ವಸುಂಧರೆಯೂ ಹೌದು (ವಸು–ಭೂಮಿಯಲ್ಲಿ ದೊರೆಯುವ ಚಿನ್ನ ಮುಂತಾದ ಸಂಪತ್ತು). ಭೂದೇವಿಯ ಸ್ಥೂಲರೂಪವಾದ ಮೃತ್ತಿಕೆಯನ್ನು ಎಲ್ಲ ಪಾಪಗಳ ನಾಶಕ್ಕಾಗಿ, ಆರೋಗ್ಯಕ್ಕಾಗಿ ಪ್ರಾರ್ಥಿಸಲಾಗಿದೆ.

## ಶತ್ರು ಜಯ ಮಂತ್ರಗಳು

ಉಪನಿಷತ್ತಿನ ಮುಂದಿನ ಮಂತ್ರ ಸಮೂಹಗಳಲ್ಲಿ "ಶತ್ರು ಜಯ ಮಂತ್ರಗಳು" ಬರುತ್ತವೆ. ಇವೆಲ್ಲ ಹೆಚ್ಚಾಗಿ ದೇವತೆಗಳ ಒಡೆಯನೂ ತ್ರಿಲೋಕಾಧಿಪತಿಯೂ ಆದ ದೇವೇಂದ್ರನನ್ನು ಕುರಿತ ಪ್ರಾರ್ಥನೆಗಳಾಗಿವೆ. ಆಧ್ಯಾತ್ಮಿಕವಾಗಿ ಕೋಪ–ತಾಪ, ಕಾಮ–ಅಸೂಯೆ, ರೋಗ ಮುಂತಾದವುಗಳೇ ನಮ್ಮ ಶತ್ರುಗಳು. ಹಾಗೆಯೇ ಆಧಿಭೌತಿಕವಾಗಿ, ಆಧಿದೈವಿಕವಾಗಿ ಶತ್ರುಗಳಿರಬಹುದು – ಪ್ರವಾಹ, ಬರಗಾಲ, ಅತಿಯಾದ ತಾಪಮಾನ, ಅತಿವೃಷ್ಟಿ, ಸಿಡಿಲು, ಇತ್ಯಾದಿ. ಇವುಗಳಿಂದ ರಕ್ಷಿಸಲು ಭಯನಾಶಕನಾದ ಇಂದ್ರನು ಮಂಗಳಕರವಾಗಿ ಎದುರಿಗೆ ಬರಲಿ, ಸ್ವಸ್ತಿಯನ್ನುಂಟು ಮಾಡಲಿ ಎಂದು ಕೇಳಿಕೊಳ್ಳಲಾಗಿದೆ. ಇಂದ್ರನ ಜೊತೆಗೆ ದೇವಗುರುವಾದ ಬೃಹಸ್ಪತಿ, ವಿಷ್ಣು ಸಾರಥಿಯಾದ ಗರುಡನನ್ನು



(ಗರುಡ/ವೇದಗಳಿಗೆ ಪ್ರತೀಕ) ಕುರಿತ 'ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ...' ಎಂಬ ಪ್ರಸಿದ್ಧ ಶಾಂತಿ ಮಂತ್ರವಿದೆ. ದೇವರ ಪೂಜೆಯ ಸಮಯದಲ್ಲಿ ಹೇಳುವ, ಶ್ರೀಸೂಕ್ತದಲ್ಲಿಯೂ ಬರುವ, ಭೂದೇವಿಯ ಸ್ತುತಿಯೂ ಇದೆ-'ಗಂಧದ್ವಾರಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್....' ಮತ್ತೊಂದು ಮಂತ್ರದಲ್ಲಿ 'ಸರಿಯಾದ ಸ್ವರ ಪ್ರಯೋಗದೊಂದಿಗೆ ಭಾಷಾಜ್ಞಾನವನ್ನು ದಯಪಾಲಿಸು' ಎಂದು ಭಗವಂತನನ್ನು ಪ್ರಾರ್ಥಿಸಲಾಗಿದೆ. ಅನಂತರ ಮಹಾವಿಷ್ಣುವಿನ ಪಾದಗಳನ್ನು ಸ್ತೋತ್ರ ಮಾಡುವ, ಸುಪ್ರಸಿದ್ಧ "ಪಾದಪೂಜಾ ಮಂತ್ರ" ಅಥವಾ ಪಾದುಕಾ ಮಂತ್ರ ಬರುತ್ತದೆ-"ಚರಣಂ ಪವಿತ್ರಂ ವಿತತಂ ಪುರಾಣಂ....." ಮಹಾವಿಷ್ಣುವೇ ಪಾದಗಳಿಗೆ ಅಧಿದೇವತೆ. ಇಂಥ ಪವಿತ್ರ ಪಾದಗಳು ಯಾವಾಗಲೂ ಶ್ರೇಯಸ್ಕರ-ನಮ್ಮನ್ನು ನಮ್ಮ ಪರಮಲಕ್ಷ್ಯದ ಕಡೆಗೆ ಕರೆದೊಯ್ಯುವ ಸಾಧನವೂ ಹೌದು - 'ಪದ್ಯತೇ ಅನೇನ ಇತಿ ಪಾದಃ' ಸದ್ಗುರುಗಳಿಗೆ, ಸಂನ್ಯಾಸಿಗಳಿಗೆ, ಪೀಠಾಧಿಪತಿಗಳಿಗೆ ನಮಸ್ಕರಿಸುವಾಗ ಈ ಮಂತ್ರವನ್ನು ಹೇಳುತ್ತಾರೆ. ಹಿರಿಯ ಸಂನ್ಯಾಸಿಗಳನ್ನು 'ಶ್ರೀಪಾದಂಗಳವರು' ಎಂದು ಗೌರವಪೂರ್ವಕವಾಗಿ ಸಂಬೋಧಿಸುತ್ತಾರೆ. ಇದಾದ ಮೇಲೆ ಜಲದೇವತೆಗಳನ್ನು ಕುರಿತ ಮಂತ್ರಗಳಿವೆ. ಮುಂದೆ "ಅಘಮರ್ಷಣ ಸೂಕ್ತ"ದಲ್ಲಿ ಜಲದೇವತೆಯಾದ ವರುಣನ ಪ್ರಾರ್ಥನೆ ಇದೆ (ಅಘ-ಪಾಪ. ಮರ್ಷಣ-ಅದನ್ನು ಹೋಗಲಾಡಿಸುವುದು). ನಮ್ಮ ಜೀವನಕ್ಕೆ ಮೂಲಾಧಾರವಾಗಿರುವ ರಸಭರಿತವಾದ, ಸಾರಭೂತವಾದ ನೀರನ್ನು ಋಷಿಗಳು ಜಲದೇವತೆಗಳ ರೂಪದಲ್ಲಿ ಕಂಡುಕೊಂಡಿದ್ದರು (ನದಿ-ಕೆರೆ-ಬಾವಿ-ಪರ್ಜನ್ಯ). ನಾವು ಶರೀರದ ಕೊಳೆಯನ್ನು ತೆಗೆಯಲು, ಸುತ್ತಲಿನ ಪರಿಸರವನ್ನು ಶುದ್ಧಿಗೊಳಿಸಲು ನೀರನ್ನು ಬಳಸುತ್ತೇವೆ. ಆದರೆ ನಮ್ಮೊಳಗಿನ ಕಶ್ಮಲಗಳನ್ನು ತೊಳೆಯಲು ನೀರನ್ನು ದೇವತೆಯ ರೂಪದಲ್ಲಿ ಕಂಡುಕೊಳ್ಳಬೇಕು. ವರುಣ ದೇವತೆಗೆ ಅಪರಿಮಿತವಾದ ಪಾಪನಿವಾರಕ ಶಕ್ತಿ ಇದೆ-ಆದ್ದರಿಂದಲೇ ಬೆಳಗ್ಗೆ ಬೇಗ ಸ್ನಾನ ಮಾಡಬೇಕು. ಇಲ್ಲಿ ನೀರಿಗೆ "ತೀರ್ಥ" ಎಂಬ ಶಬ್ದವನ್ನೂ ಬಳಸಲಾಗಿದೆ. ಗಂಗೆ, ಯಮುನೆ, ಸರಸ್ವತಿ ಮೊದಲಾದ "ತೀರ್ಥ ದೇವತೆ"ಗಳನ್ನು ಆಹ್ವಾನಿಸುವ ಮಂತ್ರಗಳಿವೆ. ಪೃಥ್ವಿಯಲ್ಲಿರುವ ಜಲವೆಲ್ಲ ತೀರ್ಥವೇ-ಅಂದರೆ ಪವಿತ್ರವಾಗಿದೆ. ಜಲವನ್ನು ತೀರ್ಥವಾಗಿ ಮಾರ್ಪಡಿಸುವವನು ವರುಣ. ಹೀಗಾಗಿ ವರುಣ, ಇಂದ್ರ, ಬೃಹಸ್ಪತಿ ಮತ್ತು ಸವಿತಾ-ಈ ದೇವತೆಗಳನ್ನು ಪಾಪ ನಿವಾರಣೆಗಾಗಿ ಪ್ರಾರ್ಥಿಸಲಾಗಿದೆ. ಇಲ್ಲಿ 'ನಮೋಽಗ್ನಯೇಽಪ್ಸುಮ ತೇ....' ಎಂಬ ಮಂತ್ರ ಬರುತ್ತದೆ-'ಜಲ ಮಧ್ಯದಲ್ಲಿ ಅಡಗಿರುವ ಅಗ್ನಿಗೆ ನಮಸ್ಕಾರ'. ಅಗ್ನಿಯು ಜಲಾಂತರ್ಗತವಾಗಿದೆ ಎಂದು ನಮ್ಮ ಮಂತ್ರದ್ರಷ್ಟಾರರು ಬಹಳ ಹಿಂದೆಯೇ ಕಂಡುಕೊಂಡಿದ್ದರು. (ನೀರು ಯಾವಾಗಲೂ ಒದ್ದೆಯಾಗಿದ್ದರೂ ಅದರ ಒಳಗಿರುವ ಪರಮಾತ್ಮ ಚೈತನ್ಯ ಆ ತತ್ತ್ವವನ್ನು ತೇಜೋಮಯವನ್ನಾಗಿಸಿದೆ). ಈ ತತ್ತ್ವವನ್ನು ಆಧರಿಸಿಯೇ ನಾವು ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತೇವೆ. ನೀರು ಶ್ರದ್ಧೆಗೆ ಪ್ರತೀಕ-ಪ್ರಾಣಕ್ಕೆ ಆಧಾರವೂ ಹೌದು. ಶುದ್ಧವಾದ ನೀರನ್ನು 'ಪುಣ್ಯಾಹ', 'ಉದಕ ಶಾಂತಿ', ಕಳಸ ಸ್ಥಾಪನೆ'-ಪೂಜೆ, ಆಚಮನ ಮುಂತಾದ ಎಲ್ಲ ಶಾಸ್ತ್ರೀಯ ಕರ್ಮಗಳಿಗೂ ಬಳಸುತ್ತೇವೆ-ಇವೆಲ್ಲಕ್ಕೂ ಮಂತ್ರಗಳಿವೆ.

## ದುರ್ಗೆ-ಅಗ್ನಿಯ ಪ್ರಾರ್ಥನೆ

ಉಪನಿಷತ್ತಿನ ಮುಂದಿನ, ಅನುವಾಕಿನಲ್ಲಿ ದುರ್ಗಾದೇವಿ ಮತ್ತು ಅಗ್ನಿದೇವನ ಸ್ತುತಿ-ಪ್ರಾರ್ಥನೆಗಳಿವೆ. ಇವರಿಬ್ಬರೂ ನಮ್ಮನ್ನು ಒಳಗಿನ ಹಾಗೂ ಹೊರಗಿನ ಶತ್ರುಗಳಿಂದ ರಕ್ಷಿಸಬಲ್ಲ ಸಾಮರ್ಥ್ಯ ಪಡೆದಿದ್ದಾರೆ. ಜನರ ದುರ್ಗಮವಾದ ಕಷ್ಟಗಳನ್ನು ಪರಿಹರಿಸುವ ಶಕ್ತಿ ದೇವತೆ ದುರ್ಗಾ - ಆಕೆಯನ್ನು ಶರಣು ಹೋಗಬೇಕು- 'ದುರ್ಗಾಂದೇವೀ ಶರಣಮಹಂ ಪ್ರಪದ್ಯೇ....' ಪರಮಾತ್ಮನ ಕ್ರಿಯಾಶಕ್ತಿಯೇ ದುರ್ಗೆ ಎಂದು ಪುರಾಣಗಳಲ್ಲಿ ವರ್ಣಿಸಲಾಗಿದೆ. ಇನ್ನು ಅಗ್ನಿದೇವನ ಪ್ರಾರ್ಥನೆ ಹೀಗಿದೆ-'ಜಾತವೇದಸೇ ಸುನವಾಮ ಸೋಮಮರಾತೀಯತೋ ನಿದಹಾತಿ ವೇದಃ....' - ಜೀವಿಗಳು ಮಾಡುವ ಸಮಸ್ತ ಕರ್ಮಗಳನ್ನೂ ಅರಿಯುವವನು **ಜಾತವೇದ**. ನಾವು ಮಾಡುವ ಎಲ್ಲ ಯಜ್ಞಗಳು, ಹೋಮ-ಆಹುತಿಗಳೂ ಈ ಅಗ್ನಿಯ ಅಧೀನವಾಗಿರುತ್ತವೆ ಮತ್ತು ಅವನೇ ಯಜ್ಞಫಲದಾತಾ. ಜಠರಾಗ್ನಿ ರೂಪದಿಂದ, ದೇಹದ ಶಾಖರೂಪದಿಂದ ಇವನೇ ಎಲ್ಲ ಪ್ರಾಣಿಗಳ ಒಳಗೆ ಸ್ಥಿತನಾಗಿದ್ದು, ನಾವು ಇವನಿಗೆ ನಿತ್ಯವೂ ಊಟ ಮಾಡುತ್ತ ಹವಿಸ್ಸನ್ನು ಅರ್ಪಿಸುತ್ತೇವೆ. 'ಎಲೈ ಯಜ್ಞೇಶ್ವರನೇ, ತತ್ತ್ವಜ್ಞಾನಕ್ಕಾಗಿ ನಾವು ಕೈಗೊಂಡಿರುವ ಸಾಧನಗಳೆಂಬ ಯಜ್ಞವನ್ನು ಕಾಪಾಡು-ಯುಕ್ತಫಲವನ್ನು ನೀಡು' ಎಂಬುದು ಪ್ರಾರ್ಥನೆ. ಅನಂತರ ಕೆಲವು ಹೋಮ ಮಂತ್ರಗಳು, ಆಹುತಿ ವಿಧಿಗಳು ಮತ್ತು ಪ್ರಣವ ಮಂತ್ರ ಬರುತ್ತದೆ. ಛಂದೋಬದ್ಧವಾದ ಈ ಮಂತ್ರಗಳನ್ನೆಲ್ಲ ಓಂಕಾರದೊಂದಿಗೆ ಶ್ರದ್ಧೆಯಿಂದ ಪಠಿಸಿದರೆ ದೇವತೆಗಳು ಪ್ರಸನ್ನರಾಗುತ್ತಾರೆ. ಬ್ರಹ್ಮವಿದ್ಯೆಗೆ ಬರಬಹುದಾದ ಅಡ್ಡಿಗಳ ನಿವಾರಣೆಗಾಗಿ ಮೊದಲು ದೇವತೆಗಳಿಗೆ (ನಮೋ

▶▶ 53ನೇ ಪುಟಕ್ಕೆ




# ಜೈನ ಪಂಡಿತರೊಡನೆ ಮುಂದುವರಿದ ವಾಗ್ವಾದ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

"ಪ್ರಥಮ ತೀರ್ಥಂಕರರೇ ಕ್ಷತ್ರಿಯರ ರಾಜ್ಯಾಡಳಿತ ನಡೆಸಬೇಕೆಂದೂ ದುರವಸ್ಥೆಯಲ್ಲಿರುವವರನ್ನು ರಕ್ಷಿಸಬೇಕೆಂದೂ ಆವಶ್ಯಕತೆ ಬಿದ್ದರೆ ಯುದ್ಧವನ್ನೂ ಮಾಡಬಹುದೆಂದೂ ಅಪ್ಪಣೆ ಕೊಡಿಸಿದ್ದಾರೆ."

"ಹಾಗೆಂದ ಮೇಲೆ ಅಹಿಂಸಾ ವ್ರತ ಪಾಲನೆ ಹೇಗೆ ಮಾಡಿದಂತಾಯಿತು."

ರಾಮಾನುಜರು ಮುಂದುವರಿದು, "ನನ್ನ ಮೇಲೆ ವಾಗ್ಯುದ್ಧ ಮಾಡಲು ಬಂದಿರುವಿರಲ್ಲ. ವಾಕ್ಪ್ರಹಾರ ನಡೆಸಿ ಒಬ್ಬ ಸಂನ್ಯಾಸಿಯ ಮನಸ್ಸನ್ನು ಹಿಂಸಿಸುತ್ತಿರುವಿರಲ್ಲ. ವಿನಾಕಾರಣ ಸುಳ್ಳು ಆರೋಪಗಳನ್ನು ಹೊರಿಸಿ ಮನಸ್ಸನ್ನು ಘಾಸಿಗೊಳಿಸುತ್ತಿರುವಿರಲ್ಲ. ಇದು ಸಾಧುವೇ? ನ್ಯಾಯವೇ? ಜೈನ ಮತ ಇದನ್ನು ಒಪ್ಪುತ್ತಿದೆಯೇ?"

"ನಾವು ನಿಮ್ಮನ್ನು ಹಿಂಸಿಸುತ್ತಿಲ್ಲ...."

"ಮತ್ತೇನು ಮಾಡುತ್ತಿದ್ದೀರಿ?"

"ನೀವು ಹೊಯ್ಸಳ ರಾಜ್ಯವನ್ನು ಬಿಟ್ಟು ಹೋಗಬೇಕೆಂದು ತಿಳಿಸಲು ಬಂದಿದ್ದೇವೆ."

"ಅದನ್ನು ತಿಳಿಸಲು ಇಷ್ಟು ಸಾವಿರ ಜನರು ಬರಬೇಕಾಗಿತ್ತೆ? ನನ್ನನ್ನು ಹೆದರಿಸಿ ಇಲ್ಲಿಂದ ಹೊರಗಟ್ಟಲು ತಾನೆ ನೀವು ಬಂದಿರುವುದು."

"ನೀವು ಈ ರಾಜ್ಯ ತೊರೆದರೆ ನಿಮಗೇ ಕ್ಷೇಮ" ಒಬ್ಬ ಕೋಪಿಷ್ಠ ಪಂಡಿತ ಎಚ್ಚರಿಕೆಯನ್ನು ನೀಡುವವನಂತೆ ಗಟ್ಟಿಯಾಗಿ ಹೇಳಿದ.

"ನಾನು ಇಲ್ಲಿರುವುದೂ ಅಲ್ಲಿ ಹೋಗುವುದೂ ನನ್ನ ಕೈಯಲ್ಲಿ ಇಲ್ಲ. ನೀವು ಮಹಾರಾಜ ವಿಷ್ಣುವರ್ಧನರ ಬಳಿಗೆ ಹೋಗಿ ದೂರು ಕೊಡಿ. ಅವರು ರಾಜ್ಯವನ್ನು ತೊರೆಯಬೇಕೆಂದರೆ ತತ್‌ಕ್ಷಣವೇ ಹೊರಟುಹೋಗುವೆನು. ಸಂನ್ಯಾಸಿಗೆ ಒಂದು ರಾಜ್ಯವೇ ಒಂದು ಊರೇ?"

ಹೊರಗೆ ನೆರೆದಿದ್ದ ಜೈನ ಪಂಡಿತರ ಗದ್ದಲ ಹೆಚ್ಚುತ್ತಿತ್ತು. ತಮ್ಮ ಪ್ರತಿನಿಧಿ ಪಂಡಿತರು ಹೊರಗೆ ಬರುವುದನ್ನೇ ಕಾಯುತ್ತಿದ್ದರು.

"ಸರಿ. ನಾವು ಮಹಾರಾಜ ಬಿಟ್ಟಿದೇವರ ಬಳಿಗೆ ಹೋಗುತ್ತೇವೆ."

"ಹಾಗೆಯೇ ಮಾಡಿ."

ಪಂಡಿತ ಮಂಡಲಿ ಹೊರಕ್ಕೆ ನಡೆಯಿತು. ಅವರನ್ನು ಕಂಡಕೂಡಲೇ ಜೈನ ಪಂಡಿತ ಸಮೂಹ "ಏನಾಯಿತು ಏನಾಯಿತು? ಆ ವೈಷ್ಣವ ಸ್ವಾಮಿ ಏನೆಂದ?" ಎಂದು ಕೇಳಲಾರಂಭಿಸಿತು.

ಪ್ರತಿನಿಧಿ ಮಂಡಲಿ ನಾಯಕ,


"ನಮಗೂ ಅವರಿಗೂ ಸುದೀರ್ಘ ಚರ್ಚೆಯಾಯಿತು. ಅವರು ನಮ್ಮ ಮಾತನ್ನು ಒಪ್ಪುತ್ತಿಲ್ಲ. ಮಹಾರಾಜರ ಬಳಿಗೆ ಹೋಗಿ ದೂರು ಕೊಡಿ. ಅವರು ಹೋಗೆಂದರೆ ರಾಜ್ಯವನ್ನು ಬಿಟ್ಟು ಹೊರಟು ಹೋಗುವೆನು ಎಂದರು."

"ನಮ್ಮ ಮುಂದಿನ ನಡೆ?" ಜೈನ ಪಂಡಿತನೊಬ್ಬ ಪ್ರಶ್ನಿಸಿದ.

"ಮಹಾರಾಜರನ್ನು ಕಂಡು ಅವರಿಗೆ ದೂರು ನೀಡುವುದು."

ಎಲ್ಲರಿಗೂ ಅಸಮಾಧಾನ ಆಗಿತ್ತು. ಜೈನರು ಉಗ್ರ ಸ್ವಭಾವದವರಲ್ಲ. ಮಹಾರಾಜರನ್ನು ಕಾಣಲು ಅವರ ಮನಸ್ಸುಗಳೂ ಒಪ್ಪಿದವು.

ಸಹಸ್ರಾರು ಜೈನ ಪಂಡಿತರ ಪರವಾಗಿ ರಾಮಾನುಜರ ಬಳಿ ಶಾಸ್ತ್ರಾರ್ಥವೆಂಬ ಚರ್ಚೆ ನಡೆಸಿದ ಪಂಡಿತ ಮಂಡಲಿಯೇ ಮಹಾರಾಜ



ವಿಷ್ಣುವರ್ಧನರ ಬಳಿಗೆ ಹೋಯಿತು. ಒಳಗೊಳಗೇ ಕುದಿಯುತ್ತಿದ್ದ ಆ ಪಂಡಿತರು ಮಹಾರಾಜರನ್ನು ವಿನೀತಭಾವದಿಂದಲೇ ಪ್ರಶ್ನಿಸಿದರು.

"ಮಹಾಪ್ರಭು. ತಾವು ಮಾಡಿರುವುದು ಸರಿಯೇ? ತಾವು ಏತಕ್ಕಾಗಿ ವೈಷ್ಣವ ಮತವನ್ನು ಸ್ವೀಕರಿಸಿದಿರಿ? ಇಷ್ಟು ದಿವಸ ಜೈನರಾಗಿದ್ದು ನಮ್ಮ ಮತಕ್ಕೆ ಪ್ರಬಲ ಆಸರೆಯಾಗಿದ್ದಿರಿ? ಜೈನಮತವನ್ನು ತಾವು ತಿರಸ್ಕರಿಸಿದ್ದು ನಮಗೆ ಬಹಳ ನೋವು ಉಂಟುಮಾಡಿದೆ."

"ನಾವೇನು ತಪ್ಪು ಮಾಡಿದ್ದೇವೆ? ಇಂದಿಗೂ ರಾಜ ಧರ್ಮದಂತೆ ಜೈನ ಮತಕ್ಕೆ ಎಲ್ಲ ಬಗೆಯ ಬೆಂಬಲವನ್ನೂ ನೀಡುತ್ತೇವೆ. ನಾವು ಜೈನಮತವನ್ನು ತಿರಸ್ಕರಿಸಿಲ್ಲ. ಹಾಗೆ ನೋಡಿದರೆ ನಾವು ಜನ್ಮಜಾತ ಅಥವಾ ದೀಕ್ಷಾಬದ್ಧ ಜೈನರಲ್ಲ. ಪಟ್ಟ ಮಹಿಷಿ ಶಾಂತಲಾ ದೇವಿಯವರು ಜೈನ ಮತೀಯರು. ಅವರೊಂದಿಗೆ ನನ್ನನ್ನು ಸದಾ ನೋಡುವುದರಿಂದ ನಿಮಗೆ ನಾನು ಜೈನ ಮತೀಯನೆಂದು ಭಾವನೆ ಉಂಟಾಗಿರಬಹುದು."

"ಹಾಗಾದರೆ ತಾವು ವೈಷ್ಣವ ಮತ ಸ್ವೀಕರಿಸಲು ಕಾರಣಗಳೇನು? ಜೈನ ಮತವನ್ನು ಕುರಿತ ನಿಮ್ಮ ಅಸಮಾಧಾನವಲ್ಲವೆ?"

"ಖಂಡಿತ ಯಾವ ಅಸಮಾಧಾನವೂ ಜೈನ ಮತದ ಬಗ್ಗೆ ಇಲ್ಲ. ಒಮ್ಮೆ ಜೈನರನ್ನು ಕುರಿತು ಬೇಸರ ಉಂಟಾಗಿದ್ದುದು ನಿಜ. ಈಗ ಅದೂ ಸಹ ಇಲ್ಲ. ಮನಸ್ಸು ತಿಳಿಯಾಗಿದೆ."

"ಅಂತಹುದೇನಾಯಿತು ಮಹಾಪ್ರಭು?"

"ಹಿಂದೆ ನೀವು ಸಹಪಂಕ್ತಿ ಭೋಜನವನ್ನು ನಮಗೆ ನಿರಾಕರಿಸಿದ್ದು ನೆನಪಿಲ್ಲವೇ?" ಪಂಡಿತರು ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿದ್ದರು. ಮಹಾರಾಜ ವಿಷ್ಣುವರ್ಧನ ಹೇಳುತ್ತಿದ್ದುದು ನಿಜವಾಗಿತ್ತು.

"ಅದು ಬಹು ಹಿಂದಿನ ಮಾತು."

"ನಿಜ. ಆದರೆ ಇಂದಿಗೂ ನೀವು ನಮಗೆ ಸಹಪಂಕ್ತಿ ಭೋಜನ ನಿರಾಕರಿಸಿ ಅಪಮಾನಪಡಿಸುತ್ತಿಲ್ಲವೇ?"

"ನಮ್ಮ ಶಾಸ್ತ್ರಗಳಿಗನುಗುಣವಾಗಿ ಆ ಪ್ರಾಯಶ್ಚಿತ್ತವನ್ನು ನಮ್ಮ ಧರ್ಮ ಧುರೀಣರು ನೀಡಿದರು."

"ಯುದ್ಧದಲ್ಲಿ ಹೋರಾಡುವಾಗ ನಮ್ಮ ಬೆರಳೊಂದು ಕತ್ತರಿಸಿ ಹೋದದ್ದು ನಮ್ಮ ತಪ್ಪೇ? ಅದಕ್ಕಾಗಿ ನಿಮ್ಮ ಭಟ್ಟಾರಕರಿಂದ ಪ್ರಾಯಶ್ಚಿತ್ತವೆಂದರೆ ಸಹಪಂಕ್ತಿ ಭೋಜನಕ್ಕೆ ನಮಗೆ ಬಹಿಷ್ಕಾರ! ಇದೆಂಥ ನ್ಯಾಯ?"

"ಇದು ಶಾಸ್ತ್ರಾನುಸಾರ ನಮ್ಮ ಭಟ್ಟಾರಕರ ನಿರ್ಣಯ!"

"ಅದನ್ನು ನಾವು ವಿರೋಧಿಸಲಿಲ್ಲವಲ್ಲ. ಭಟ್ಟಾರಕರ ಮಾತಿನಂತೆ ನಡೆಯುತ್ತಿದ್ದೇವಲ್ಲ...."

ಜೈನ ಪಂಡಿತರ ಮಾತು ಕಟ್ಟಿ ಹೋಯಿತು. ವಿಷ್ಣುವರ್ಧನ ಮುಂದುವರಿದರು,

"ಆದರೆ ಮಹಾರಾಜರಾಗಿ, ಸರ್ವ ಧರ್ಮ ಸಮ ಭಾವವುಳ್ಳವರಾಗಿ, ಇಂಥ ಸಣ್ಣ ತಪ್ಪುಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವಷ್ಟು ವ್ಯವಧಾನ ನಮಗಿಲ್ಲ. ನಮಗೆ ಇವುಗಳಿಗಿಂತಲೂ ಮಹತ್ತ್ವದ ಕೆಲಸಗಳು, ಹೊಣೆಗಾರಿಕೆಗಳೂ ಇವೆ. ಆದ್ದರಿಂದ ಅದನ್ನು ಮರೆತೇ ಬಿಟ್ಟೆವು. ನಮ್ಮ ಕೆಲಸಗಳಲ್ಲಿ ನಾವು ನಿಮಗ್ನರಾದೆವು."

"ಅಂದಮೇಲೆ ನೀವು ಉದಾರ ಹೃದಯರಾಗಿ ಮತ್ತೆ ಜೈನ ಮತಕ್ಕೆ ಮರಳಬೇಕು."

"ಪಂಡಿತರೇ, ನಾನು ಜನ್ಮಜಾತ ವೈಷ್ಣವನೇ. ನಮ್ಮ ವಂಶ ವೈಷ್ಣವ ವಂಶವೇ. ನಮ್ಮದು ಯಾದವ ಕುಲ. ಅಂದರೆ ಕೃಷ್ಣನ ಕುಲ. ಕೃಷ್ಣ ಎಂದರೆ ವಿಷ್ಣು. ನನ್ನ ಹೆಸರು ಬಿಟ್ಟಿಗ. ಬಿಟ್ಟಿಗ ಎಂಬುದು ವಿಟ್ಠಲ ಎಂಬ ಹೆಸರಿನ ತದ್ಭವರೂಪ. ನಾನು ವಿಟ್ಠಲದೇವರಾಯ. ವಿಟ್ಠಲ ಅಂದರೆ ವಿಷ್ಣು ಅಲ್ಲವೇ? ನಾನು ಹಿಂದೆಯೂ ಜೈನನಲ್ಲ. ಈಗ ವಿಧಿವತ್ತಾಗಿ ರಾಮಾನುಜಾಚಾರ್ಯರು ಪಂಚ ಸಂಸ್ಕಾರಗಳ ಸಮಾಶ್ರಯಣವನ್ನು ಮಾಡಿ ಮುದ್ರಾಧಾರಣ ಮಾಡಿ ಅಧಿಕೃತವಾಗಿ ವೈಷ್ಣವನನ್ನಾಗಿ ಮಾಡಿದ್ದಾರೆ. ನನಗೆ ವಿಷ್ಣು ಇಷ್ಟನಾಗಿದ್ದಾನೆ. ಅವನನ್ನು ಕುರಿತ ಭಾಗವತ, ಅವನು ಬೋಧಿಸಿರುವ ಭಗವದ್ಗೀತೆ ನಮಗೆ ಶಿರೋಮಾನ್ಯವಾಗಿದೆ. ಕ್ಷತ್ರಿಯರಾದ ನಮಗೆ ಜೈನ ಮತದ ಅಹಿಂಸಾ ತತ್ತ್ವ ಸರಿಹೊಂದುವುದಿಲ್ಲ. ಭಗವದ್ಗೀತೆಯ ಬೋಧನೆಯೇ ಸೂಕ್ತವಾದುದು, ಮಾರ್ಗದರ್ಶಕವಾದುದು. ಆದ್ದರಿಂದ ಇನ್ನು ಮುಂದೆ ಈ ಬಗೆಯ ಮತೀಯ ಚರ್ಚೆಗಳಿಗಾಗಿ ನಮ್ಮ ಬಳಿ ಬರಬೇಡಿ" ಎಂದು ಮೃದುವಾಗಿ ಆದರೆ ದೃಢವಾಗಿಯೇ ಹೇಳಿದರು.

ಇದರಿಂದ ವಿಚಲಿತರಾದ ಪಂಡಿತರು, "ಹೀಗೆಂದರೆ ಜೈನರ ಗತಿ ಏನಾಗಬೇಕು?"

"ಏನೂ ವ್ಯತ್ಯಾಸವಾಗುವುದಿಲ್ಲ. ಎಂದಿನಂತೆ ಜೈನ ಮತಕ್ಕೆ ನಮ್ಮೆಲ್ಲ ಸಹಾಯ, ಸಹಕಾರ ಇದ್ದೇ ಇರುತ್ತದೆ. ಜೈನ ಗುರುಗಳಿಗೆ, ಬಸದಿಗಳಿಗೆ, ಸಮಸ್ತ ಜೈನ ಪ್ರಜೆಗಳಿಗೆ ನಾವು ಅಭಯವೀಯುತ್ತೇವೆ ಅವರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲವೆಂದು. ಜೈನ ಮತದ ರಕ್ಷಣೆ, ಪೋಷಣೆ, ಸಂವರ್ಧನೆ ನಮ್ಮ ಹೊಣೆ. ಇಷ್ಟಕ್ಕೂ...." ವಿಷ್ಣುವರ್ಧನ ನಗುತ್ತಾ ಮುಂದುವರಿಸಿದ "ಪಟ್ಟಮಹಿಷಿ ಶಾಂತಲಾ ದೇವಿಯವರೇ ನಿಷ್ಠಾವಂತ ಜೈನರಾಗಿರುವಾಗ ನಿಮಗೆಂಥ ಭಯ!"

ವಿಷ್ಣುವರ್ಧನ ಅಭಯದಿಂದ ಹೊರನೋಟಕ್ಕೆ ತುಸು ಸಮಾಧಾನಗೊಂಡ ಜೈನ ಮಂಡಲಿ, ಒಳಗೊಳಗೆ ಅಸಮಾಧಾನಗೊಂಡಿದ್ದರೂ ರಾಜನಿಗೆ ತಲೆಬಾಗಿ ವಂದಿಸಿ ಅಲ್ಲಿಂದ ಹೊರಕ್ಕೆ ನಡೆಯಿತು.

ಇಷ್ಟು ಮಾತ್ರಕ್ಕೆ ಜೈನ-ವೈಷ್ಣವ ತಿಕ್ಕಾಟ ಕಡಮೆಯಾಯಿತೆನ್ನಲಾಗದು. ರಾಮಾನುಜರು ನಿತ್ಯ ಕೈಂಕರ್ಯದಂತೆ ಸಮಾಜದ ಅನ್ಯಾನ್ಯ ಸ್ತರಗಳ, ಜಾತಿಕುಲಗಳ, ಮತಗಳ ಜನರನ್ನು ಒಂದುಗೂಡಿಸುತ್ತಾ ಅವರಿಗೆ ವೈಷ್ಣವ ಮತದ ಪಾರಮ್ಯವನ್ನೂ, ವಿಶಿಷ್ಟಾದ್ವೈತ ಸಿದ್ಧಾಂತದ ವಿಚಾರಗಳನ್ನೂ ಭಕ್ತಿ, ಪ್ರಪತ್ತಿಗಳ ಮೂಲಕ ಸುಲಭ ಮೋಕ್ಷ ಪಡೆಯುವ ಹಾದಿಯನ್ನೂ ವಿವರಿಸುತ್ತಾ ಹೋದರು. ತೊಣ್ಣೂರಿನಲ್ಲಿ ಯೋಗಾ ನರಸಿಂಹಸ್ವಾಮಿ


# ಶ್ರೀ ರಾಮಾನುಜ
## ಜನ್ಮ ಸಹಸ್ರಮಾನೋತ್ಸವ ವಿಶೇಷ

ದೇವಸ್ಥಾನವನ್ನು ತಮ್ಮ ಕೇಂದ್ರವನ್ನಾಗಿರಿಸಿಕೊಂಡು ರಾಮಾನುಜರು ಹೊಯ್ಸಳ ಸಾಮ್ರಾಜ್ಯದ ಎಲ್ಲ ಸ್ಥಳಗಳಿಗೂ ಹೋಗಲಾರಂಭಿಸಿದರು. ಚಿಕ್ಕ ಚಿಕ್ಕ ಹಳ್ಳಿಗಳನ್ನೂ ಅವರು ಬಿಡಲಿಲ್ಲ.

ರಾಮಾನುಜರು ವಿಷ್ಣುವರ್ಧನ ಮಹಾರಾಜನಿಗೆ ಪಂಚ ಸಂಸ್ಕಾರ, ಸಮಾಶ್ರಯಣಗಳನ್ನು ಮಾಡಿದ ಸುದ್ದಿ ಅಲೆ ಅಲೆಯಾಗಿ ರಾಜ್ಯಾದ್ಯಂತ ಹರಡಿ ವಿವಿಧ ಪರಿಣಾಮಗಳನ್ನು ಬೀರಲಾರಂಭಿಸಿತು. ಬಹು ಮಂದಿ ಪ್ರಜೆಗಳು 'ರಾಜಾನುಮತಂ ಧರ್ಮಂ' ಎಂದು ವೈಷ್ಣವ ಮತದ ಕಡೆ ವಾಲಲಾರಂಭಿಸಿದರು. ರಾಮಾನುಜರ ಶಿಷ್ಯಗಣ ದಿನೇ ದಿನೇ ಬೆಳೆಯುತ್ತಿತ್ತು. ಪರಸ್ಥಳದಿಂದಲೂ ಭಕ್ತರು ರಾಮಾನುಜರನ್ನು ಅರಸಿ ಬರಲಾರಂಭಿಸಿದರು. ಅವರ ಸುತ್ತ ಒಂದು ದೊಡ್ಡ ಪರಿವಾರವೇ ಬೆಳೆಯಿತು. ರಾಮಾನುಜರು ತಮ್ಮಲ್ಲಿಗೆ ಬರುವ ಭಕ್ತಾದಿಗಳಿಗೆ, ಅತಿಥಿ ಅಭ್ಯಾಗತರಿಗೆ ಉತ್ತಮ ಗುಣಮಟ್ಟದ ಪ್ರಸಾದ ವಿನಿಯೋಗ ಆಗಬೇಕೆಂದು ಕಟ್ಟುನಿಟ್ಟಾಗಿ ತಮ್ಮ ಪ್ರಮುಖ ಶಿಷ್ಯರಿಗೆ ಆದೇಶಿಸಿದ್ದರು. ಆ ಕಾರಣ ದೊಡ್ಡ ಪಾಕಶಾಲೆಯೂ ನಿರ್ಮಾಣವಾಯಿತು. ಅಲ್ಲಿಗೆ ಎಲ್ಲೆಡೆಗಳಿಂದ ದವಸ ಧಾನ್ಯ, ಕಾಯಿಪಲ್ಲೆಗಳು ಬಂದು ಮಠದ ಉಗ್ರಾಣ ತುಂಬಿತುಳುಕಲಾರಂಭಿಸಿತು.

ರಾಮಾನುಜರನ್ನು ಅರಸಿ ಬಂದ ಶ್ರೀ ವೈಷ್ಣವ ಪಂಡಿತರು ತಮ್ಮ ಆಚಾರ್ಯರ ಆದೇಶ ಪಾಲನೆಗಾಗಿ ಸೊಂಟಕಟ್ಟಿ ನಿಂತರು. ವೈಷ್ಣವ ಮತ ಪಸರಿಸಲು, ಸಮಾಜದ ಎಲ್ಲ ವರ್ಗಗಳ ಜನಗಳನ್ನು ಭಕ್ತಿ, ಪ್ರಪತ್ತಿಗಳ ವಿಶಿಷ್ಟಾದ್ವೈತ ಮಾರ್ಗಕ್ಕೆ ಕರೆತರಲು ಅವಿರತ ಪ್ರಯತ್ನ ಮಾಡಿದರು. ತಮ್ಮ ಮನೆ, ಮಡದಿ ಮಕ್ಕಳನ್ನು ಮರೆತು ಹೊಯ್ಸಳ ರಾಜ್ಯದ ಮೂಲೆ ಮೂಲೆಯನ್ನು ತಲಪಿದರು.

ವಿಷ್ಣುವರ್ಧನನು ರಾಮಾನುಜರ ಶಿಷ್ಯತ್ವವನ್ನು ಸ್ವೀಕರಿಸಿದ ಅನಂತರ ರಾಮಾನುಜರ ಸ್ಥಿತಿಗತಿಗಳಲ್ಲಿ ನ ಭೂತೋ ನ ಭವಿಷ್ಯತಿ ಎಂಬಂತೆ ಅದ್ಭುತ ಪರಿವರ್ತನೆಯಾಯಿತು. ಅವರ ಕಾಡುಮೇಡುಗಳಲ್ಲಿನ ಸಂಚಾರದ ಕಷ್ಟ ಕೊನೆಗೊಂಡು ಒಂದು ಹೊಸ ಉಜ್ಜ್ವಲ ಅಧ್ಯಾಯಕ್ಕೆ ನಾಂದಿಯಾಯಿತು. ಶ್ರೀರಂಗಂ ಮಠದಲ್ಲಿ ಕುಳಿತು ಅವರು ನಡೆಸುತ್ತಿದ್ದ ಧರ್ಮ ಪ್ರಸಾರದ ಕಾರ್ಯಕ್ಕಿಂತಲೂ ಹತ್ತಾರು ಪಟ್ಟು ಹೆಚ್ಚು ಕಾರ್ಯ ವಿಸ್ತಾರ ತೊಂಡನೂರು ಯೋಗಾ ನರಸಿಂಹ ಸ್ವಾಮಿ ದೇವಾಲಯದಿಂದ ಮಾಡಿದರು. ಈ ಯತಿರಾಜರ ಜಾತಕದಲ್ಲಿ ಶುಕ್ರ ದಶೆ ಮೂಡಿರಬೇಕು. ಅನಿರೀಕ್ಷಿತ ಸ್ಥಳಗಳಿಂದಲೂ ಉತ್ಸಾಹದಿಂದ ಶ್ರೀ ವೈಷ್ಣವ ಬ್ರಾಹ್ಮಣರು ತೊಣ್ಣೂರಿಗೆ ವಲಸೆ ಬಂದು ತಮ್ಮ ಆಚಾರ್ಯರಿಗೆ ಬೆಂಬಲವಾಗಿ ನಿಂತರು. ಹೀಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬಂದ ಈ ಶ್ರೀ ವೈಷ್ಣವ ವಿಪ್ರ ವೃಂದ ರಾಮಾನುಜರ ಮತ ವಿಸ್ತಾರ ಕಾರ್ಯದಲ್ಲಿ ಪಾತ್ರ ವಹಿಸಿ ಬಿರುಗಾಳಿಯಂತೆ ಆ ಕೆಲಸವನ್ನು ಮಾಡಿದರು. ದಿನೇ ದಿನೇ ಹೊಯ್ಸಳ ರಾಜ್ಯದ ಮೂಲೆ



ಮೂಲೆಗಳಿಂದ–ಜನನಿಬಿಡ ಊರುಗಳಿಂದ ಹಿಡಿದು ಕುಗ್ರಾಮಗಳವರೆಗೆ– ರಾಮಾನುಜರಿಗೆ ಅವರ ಶಿಷ್ಯ ವೃಂದ ಮಾಡುತ್ತಿದ್ದ ಕೆಲಸಗಳ ವರದಿಗಳು ಬಂದು ತಮ್ಮ ಮೇಲೆ ಶ್ರೀಮನ್ನಾರಾಯಣನ ವಿಶೇಷ ಕೃಪಾದೃಷ್ಟಿ ಬಿದ್ದಿದೆ ಎಂದು ಅನ್ನಿಸಿ ಸಚ್ಚಿದಾನಂದದಿಂದ ಕೂಡಿದ ಆತ್ಮ ಸಂತೃಪ್ತಿಯನ್ನು ಅನುಭವಿಸಲಾರಂಭಿಸಿದರು. ಅಧಿಕಸ್ಯ ಅಧಿಕಂ ಫಲಂ ಎಂಬಂತೆ ರಾಮಾನುಜರ ವೈಷ್ಣವ ಮತ ಪ್ರಸಾರಕರ ಸಂಖ್ಯೆಯೂ ದಿನಂಪ್ರತಿ ಅಭಿವೃದ್ಧಿಗೊಂಡು ಅತ್ಯಂತ ಹೆಚ್ಚಿನ ಫಲವನ್ನು ನೀಡಲಾರಂಭಿಸಿತು.

ತೊಂಡ ಎಂದರೆ ತಮಿಳು ಭಾಷೆಯಲ್ಲಿ ಭಕ್ತ ಎಂದರ್ಥ. ತೊಂಡನೂರು ಎಂದರೆ ಭಕ್ತನ ಊರು. ರಾಮಾನುಜರಂಥ ಮಹಾಭಕ್ತರು ಅಲ್ಲಿಗೆ ಬಂದ ಮೇಲೆ, ಯಾದವಪುರ, ಯಾದವನಾರಾಯಣಪುರ, ಯಾದವ ನಾರಾಯಣ ಚತುರ್ವೇದಿ ಮಂಗಳಂ ಎಂದು ಕರೆಯಲ್ಪಡುತ್ತಿದ್ದ ಮಾಂಡಲಿಕ ಬಿಟ್ಟಿದೇವನ ರಾಜಧಾನಿ, ಭಕ್ತರ ಊರು ಅರ್ಥಾತ್ ತೊಂಡನೂರು ಆಯಿತು. ಸಾರ್ಥಕತೆ ಪಡೆಯಿತು.

ವಿಷ್ಣುವರ್ಧನನಿಗೆ ರಾಮಾನುಜರಲ್ಲಿ ಮೊದಲ ಭೇಟಿಯಿಂದಲೇ ವಿಶೇಷ ಆಕರ್ಷಣೆ. ಅವರ ವೇಷಭೂಷಣ, ದೇಹದ ಮೇಲೆ ರಾರಾಜಿಸುತ್ತಿದ್ದ ಕೆಂಪು, ಬಿಳಿ ತ್ರಿಪುಂಡ್ರಗಳು, ತ್ರಿದಂಡ, ಮುಖದಲ್ಲಿನ ಮಂದಹಾಸ, ಮಧುರ ಮಾತು, ಅವರ ವೈದಿಕ ಜ್ಞಾನ ಸಂಪತ್ತು ವಿಷ್ಣುವರ್ಧನನಿಗೆ ಮೋಡಿ ಮಾಡಿದ್ದವು. ಅವರ ಜೊತೆ ಸಂಭಾಷಣೆ ನಡೆಸಿ ತನ್ನ ಅರಿವನ್ನು ವೃದ್ಧಿಪಡಿಸಿಕೊಳ್ಳುವ ಸಲುವಾಗಿ ಅವನು ಪದೇ ಪದೇ ಅವರ ಬಳಿ ಬರುತ್ತಿದ್ದ.

ರಾಜ್ಯಾಡಳಿತದಲ್ಲಾಗಲಿ, ಕೌಟುಂಬಿಕ ವಿಷಯದಲ್ಲಾಗಲೀ ಅಥವಾ ಧಾರ್ಮಿಕ ವಿಷಯದಲ್ಲಾಗಲಿ ಯಾವುದೇ ಜಿಜ್ಞಾಸೆ ಮೂಡಿದರೆ ಅವನು ಕೂಡಲೇ ಓಡಿ ಬರುತ್ತಿದ್ದುದೇ ರಾಮಾನುಜರ ದಿಶೆಗೆ. ಬರಬರುತ್ತಾ ಅವರ ಮಾತೆಂದರೆ ಅವನಿಗೆ ವೇದವಾಕ್ಯ! ಶಿರೋಧಾರ್ಯ!!

ಹೀಗಿರಲು ಒಂದು ಸಲ ಹೊಯ್ಸಳ ರಾಜ್ಯದಲ್ಲಿ ಭೀಕರ ಬರಗಾಲ ತಲೆಹಾಕಿತು. ಕೆರೆ, ಬಾವಿಗಳು ಬತ್ತಿ ಹೋದವು. ಮರಗಿಡಗಳು ಬಾಗಿ ಹೋದವು. ಪಕ್ಷಿಗಳು ಬಿಸಿಲಿನ ಬೇಗೆ ತಡೆಯಲಾರದೆ ಸತ್ತುಬೀಳಲಾರಂಭಿಸಿದವು. ಜಾನುವಾರುಗಳಿಗೆ ಹುಲ್ಲು ದೊರೆಯದೆ ಕೊನೆಯುಸಿರೆಳೆಯಲಾರಂಭಿಸಿದವು.

ವಿಷ್ಣುವರ್ಧನ ಚಿಂತಾಕ್ರಾಂತನಾದ. ಈ ಪರಿಸ್ಥಿತಿಯಿಂದ ಹೊರಬರುವುದು ಹೇಗೆ ಎಂಬ ಬಾಧೆ ಅವನನ್ನು ಕಾಡಲಾರಂಭಿಸಿತು. ಬೇರೇ ದಿಕ್ಕುಗಾಣದೆ ಮಹಾರಾಜ ರಾಮಾನುಜರ ಮಾರ್ಗದರ್ಶನ ಪಡೆಯಲು ಯೋಗಾ ನರಸಿಂಹ ದೇವಸ್ಥಾನಕ್ಕೆ ಬಂದ.

"ಮಹಾಸ್ವಾಮಿಗಳೇ ನಮ್ಮ ಪ್ರಜೆಗಳ ಹಾಹಾಕಾರ ಮುಗಿಲು ಮುಟ್ಟಿದೆ. ಪ್ರಕೃತಿ ದೇವಿ ಮುನಿಸಿಕೊಂಡಿದ್ದಾಳೆ. ಏನು ಮಾಡುವುದೋ ನನಗೆ ದಾರಿಯೇ ಕಾಣುತ್ತಿಲ್ಲ" ಎಂದು ವಿಷ್ಣುವರ್ಧನ ರಾಮಾನುಜರ ಬಳಿ ತನ್ನ ಅಳಲನ್ನು ತೋಡಿಕೊಂಡ.

"ನೀವು ಹೇಳುತ್ತಿರುವುದು ಅಕ್ಷರಶಃ ಸತ್ಯ ಮಹಾರಾಜ. ನಮಗೂ ರಾಜ್ಯದ ವಿವಿಧ ಮೂಲೆಗಳಿಂದ ನಮ್ಮ ಶಿಷ್ಯರು ಸಮಾಚಾರ ತಲಪಿಸುತ್ತಿದ್ದಾರೆ. ಪ್ರಕೃತಿಯ ಮೇಲೆ ಮನುಷ್ಯ ನಡೆಸುವ ದೌರ್ಜನ್ಯದ ಫಲವಾಗಿ ಪ್ರಕೃತಿ ಮುನಿಸಿಕೊಂಡಿದ್ದಾಳೆ."

"ಇದಕ್ಕೆ ಪರಿಹಾರವೇ ಇಲ್ಲವೇ ಗುರುಗಳೇ?"

"ಇದೆ. ಬರಗಾಲವನ್ನು ಹೋಗಲಾಡಿಸಲು ರಾಜ್ಯದ ಎಲ್ಲ ದೇವಾಲಯಗಳಲ್ಲೂ ಪರ್ಜನ್ಯ ಹೋಮ ನಡೆಸುವಂತೆ ತಿಳಿಸಿ. ಮಳೆ ಸುರಿಯುವವರೆಗೆ ಏಕನಿಷ್ಠೆಯಿಂದ ಅದು ನಡೆಯಲಿ. ವರುಣ ದೇವನಿಗೆ ನಮ್ಮ ಮೊರೆ ಮುಟ್ಟುವಂತಾಗಲಿ."

ಕೂಡಲೇ ಆದೇಶ ಹೊರಟಿತು. ದೇವಾಲಯಗಳಲ್ಲಿ ಘಂಟಾನಾದ ಮೊಳಗಲಾರಂಭಿಸಿತು. ವಿಶೇಷ ಪೂಜೆಗಳು, ಪರ್ಜನ್ಯ ಜಪ, ಪರ್ಜನ್ಯ ಹೋಮ ಹವನಗಳು ನಡೆದವು. ಬರಗಾಲದಲ್ಲಿ ತೊಂದರೆಗಳಿಗೆ ಸಿಲುಕಿ ತೊಳಲಾಡುತ್ತಿದ್ದ ಜನ ದೇವಾಲಯಗಳಿಗೆ ಹೋಗಿ ಅಲ್ಲಿ ನೀಡುತ್ತಿದ್ದ ತೀರ್ಥ ಪ್ರಸಾದಗಳನ್ನು ಸ್ವೀಕರಿಸುತ್ತಿದ್ದರು.

ಇವುಗಳ ಪರಿಣಾಮವೋ ಏನೋ ಭೋರೆಂದು ಮಳೆ ಸುರಿಯಲಾರಂಭಿಸಿತು. ಕೆಲ ಸಮಯದಲ್ಲೇ ತೊಣ್ಣೂರಿನ ಸುತ್ತಮುತ್ತಲೂ ಪ್ರಕೃತಿ ನಗೆ ಬೀರಲಾರಂಭಿಸಿತು. ಗಿಡಮರ ಬಳ್ಳಿಗಳು ಚಿಗುರಿದವು. ಹೂಬಿಡಲಾರಂಭಿಸಿದವು.

ರಾಮಾನುಜರು ಶಿಷ್ಯರೊಂದಿಗೆ ಆಗಾಗ ವಾಯುವಿಹಾರಕ್ಕೆ ಹೋಗುತ್ತಿದ್ದುಂಟು. ತಂಗಾಳಿಗೆ ಮೈಯೊಡ್ಡಿ ಹಾಯಾಗಿ ಮೈ ಮರೆಯುತ್ತಿದ್ದರು. ಒಮ್ಮೆ ಹೀಗೆ ವಾಯುವಿಹಾರಕ್ಕೆ ಹೋದಾಗ ರಾಮಾನುಜರು ತಮ್ಮ ಸುತ್ತಮುತ್ತಲ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಾ ಆನಂದಭರಿತರಾಗಿದ್ದಾಗ ಇದ್ದಕ್ಕಿದ್ದಂತೆ ಮೌನಿಗಳಾದರು. ಅನಂತರ ಮೌನ ಮುರಿದು ಜೊತೆಯಲ್ಲಿದ್ದ ದಾಶರಥಿಗೆ,

"ದಾಶರಥಿ, ಮೊನ್ನೆಯಷ್ಟೆ ಬರಗಾಲ! ಈಗ ಸುಭಿಕ್ಷ. ಶ್ರೀಮನ್ನಾರಾಯಣನ ಮಹಿಮೆ ಎಂಥದು ನೋಡು. ಸ್ವಲ್ಪ ದಿನಗಳಲ್ಲೇ ಎಂಥ ಪ್ರಕೃತಿ ಸೌಂದರ್ಯವನ್ನು ಸೃಷ್ಟಿಸಿದ್ದಾನೆ. ಇಂಥ ಅದೆಷ್ಟು ಕೋಟಿ ಸುಂದರ ದೃಶ್ಯಗಳು ಪ್ರಕೃತಿ ದೇವಿಯ ಮಡಿಲಲ್ಲಿವೆಯೋ?"

"ಹೌದು ಮಹಾಸ್ವಾಮಿ. ಇಲ್ಲಿ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ನಿಂತರೆ ಇಲ್ಲೇ ಇದ್ದು ಬಿಡೋಣವೆನ್ನಿಸುತ್ತದೆ."

"ನಿಜ ದಾಶರಥಿ. ಇನ್ನೊಂದು ವಿಷಯ ಗಮನಿಸಿದ್ದೀಯಾ?"

"ಏನದು ಮಹಾಸ್ವಾಮಿ?"

"ನಾವು ನಿಂತಿರುವ ಸ್ಥಳದಿಂದ ನೋಡಿದರೆ ಅತ್ಯಂತ ವಿಶಾಲವಾದ ಮೈದಾನ ಕಾಣುತ್ತಿದೆ. ಬದಿಯಲ್ಲೇ ಗುಡ್ಡಗಳಿವೆ. ಮೈದಾನ ತಗ್ಗು ಪ್ರದೇಶದಲ್ಲಿದೆ. ಅಲ್ಲಲ್ಲಿ ಕಲ್ಲು ಬಂಡೆಗಳೂ ಮೈದಾನದಲ್ಲಿವೆ..."

"ಹೌದು ನೋಡುತ್ತಿದ್ದೀನಿ."

"ಗುಡ್ಡದ ಮೇಲಿನಿಂದ ಹರಿಯುತ್ತಿರುವ ನೀರಿನ ಝರಿಗಳು ದೂರದಲ್ಲಿ ಕಾಣುತ್ತಿವೆ."

"ಹೌದು ಮಹಾಸ್ವಾಮಿ."

"ನನಗೊಂದು ವಿಚಾರ ಹೊಳೆಯುತ್ತಿದೆ. ಈ ತಗ್ಗು ಮೈದಾನ ಪ್ರದೇಶದಲ್ಲಿ ಒಂದು ಕೆರೆ ನಿರ್ಮಿಸಿದರೆ ಹೇಗೆ? ಹಾಗೊಮ್ಮೆ ಆದರೆ ಈ ಪ್ರದೇಶದ ಪ್ರಜೆಗಳ ನೀರಿನ ಸಮಸ್ಯೆ ಬಗೆಹರಿಯುತ್ತದೆ."

ಈ ವಿಚಾರ ಕೇಳಿ ದಾಶರಥಿ ಒಂದು ಕ್ಷಣ ಆಶ್ಚರ್ಯಚಕಿತನಾದ. ತನ್ನ ಗುರುಗಳ ಮನಸ್ಸಿನಲ್ಲಿ ಎಂತೆಂಥ ವಿಚಾರಗಳು ಬರುತ್ತವೆ ಎಂದು ನಿಬ್ಬೆರಗಾದ.

"ಅದು ಸಾಧ್ಯವೇ ಸ್ವಾಮಿ? ಇದೇನು ಚಿಕ್ಕ ಮೈದಾನವೇ? ಕಣ್ಣಳತೆಗೂ ಮೀರಿ ಅತ್ಯಂತ ದೂರದವರೆಗೆ ಹಬ್ಬಿದೆ. ಇದನ್ನು ಕೆರೆ ಮಾಡಲು ಎಷ್ಟು ಜನ ಬೇಕು. ಎಷ್ಟು ಸಮಯ ಬೇಕು? ನನಗೇನೋ ಅಸಾಧ್ಯ ಎನಿಸುತ್ತದೆ."


ರಾಮಾನುಜರು ನಕ್ಕು ಹೇಳಿದರು,

"ಯಾವುದಯ್ಯಾ ಅಸಾಧ್ಯ? ಶ್ರೀ ಆಂಜನೇಯ ಸ್ವಾಮಿಯ ಶ್ಲೋಕ ಕೇಳಿಲ್ಲವೇ. 'ಅಸಾಧ್ಯ ಸಾಧಕಂ ಸ್ವಾಮಿನ್ ಅಸಾಧ್ಯಮ್ ತವ ಕಿಮ್ ವದ ಶ್ರೀರಾಮದೂತ ಕೃಪಾಸಿಂಧೋ ಮತ್ ಕಾರ್ಯಂ ಸಾಧಯ ಪ್ರಭೋ' ಆಂಜನೇಯ ಸ್ವಾಮಿಯನ್ನು ಪ್ರಾರ್ಥಿಸಿದರೆ ಸ್ವಾಮಿ ನಮಗೆ ಧೈರ್ಯ ನೀಡುತ್ತಾನೆ. ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದರೆ ಅವನು ಕರುಣಿಸುವುದಿಲ್ಲವೇ? ಅವನ ಕೃಪಾಕಟಾಕ್ಷ ದೊರೆತರೆ ಯಾವುದು ಅಸಾಧ್ಯ ದಾಶರಥಿ?"

"ನಿಜ. ತಾವು ಪ್ರಾರ್ಥಿಸಿದರೆ ಶ್ರೀಮನ್ನಾರಾಯಣ




▶▶ 22ನೇ ಪುಟಕ್ಕೆ



ಶ್ರೀ ವಿಷ್ಣು ಸಹಸ್ರನಾಮ ಮಹಾತ್ಮೆ

ಈವರೆಗೆ 'ದಾಸವಾಣಿ' ಎಂಬ ಅಂಕಣದಲ್ಲಿ ಪುರಂದರದಾಸರ ಕೀರ್ತನೆಗಳಿಗೆ ವ್ಯಾಖ್ಯಾನ ನೀಡಿರುವ **ಯತಿರಾಜ್ ವೀರಾಂಬುಧಿ**ಯವರು ಈ ಸಂಚಿಕೆಯಿಂದ ಶ್ರೀ ವಿಷ್ಣು ಸಹಸ್ರನಾಮದ ಕೆಲವು ಪದಗಳನ್ನು ಆಯ್ದುಕೊಂಡು ಅವನ್ನು ಅರ್ಥೈಸುತ್ತಾ ವಿಷ್ಣು ಸಹಸ್ರನಾಮವನ್ನು ಕುರಿತು ವ್ಯಾಖ್ಯಾನ ಮಾಡುತ್ತಾರೆ. ಸ್ವತಃ ಕಾದಂಬರಿಕಾರರಾಗಿರುವ ಯತಿರಾಜ ವೀರಾಂಬುಧಿಯವರು ಅಧ್ಯಾತ್ಮಜೀವಿಗಳೂ ಆಗಿದ್ದಾರೆ.



# ಅನುಕೂಲ

ಭಗವಂತನು ಎಂದಿಗೂ ಯಾರಿಗೂ ಪ್ರತಿಕೂಲ ಅಲ್ಲ. ನಾವು ಕೆಲವು ಸಲ ಅಂದುಕೊಳ್ಳುತ್ತೇವೆ: 'ನಾನ್ಯಾರಿಗೂ ಕೆಟ್ಟದ್ದನ್ನು ಮಾಡಿಲ್ಲ. ಆದರೂ ನನಗೆ ಭಗವಂತ ಇಂತಹ ಕಷ್ಟ ಕೊಟ್ಟ. ಅವನು ನನಗೆ ಅನುಕೂಲಿಸಲಿಲ್ಲ. ಅವನನ್ನು ನಾನು ಪೂಜಿಸಬೇಕೇ?' ಮುಂತಾದ ಮಾತುಗಳು ನಮ್ಮೊಳಗೆ ಉಕ್ಕಿ ಹರಿಯುತ್ತವೆ. ವಿಶೇಷವೆಂದರೆ ಪ್ರತಿಕೂಲ ಭಗವಂತನಿಂದ ಅಲ್ಲ ನಮಗೆ ಬರುವುದು, ನಮ್ಮ ಪೂರ್ವಜನ್ಮದ ಕರ್ಮಫಲದಿಂದ.

ಭಗವಂತನಿಗೆ ನಮ್ಮನ್ನು ನಡೆಸುವ ಶಕ್ತಿ ಇದೆ. ಅವನಿಗೆ ಯಾರ ಮೇಲೂ ದ್ವೇಷವಿಲ್ಲ. ನಂನಮ್ಮ ಜೀವಸ್ವರೂಪಕ್ಕೆ ಸಂಬಂಧಿಸಿದ ಯೋಗ್ಯತೆ ಏನಿದೆಯೋ ಅದಕ್ಕೆ ಸರಿಯಾಗಿ ನಮ್ಮಿಂದ ಕ್ರಿಯೆಗಳನ್ನು ನಡೆಸುತ್ತಾನೆ.

ಬಹಳ ಸಲ ಜೀವನದಲ್ಲಿ ಕಷ್ಟವನ್ನೆದುರಿಸಿದಾಗ, ನಮ್ಮ ಕೆಲಸವು ವೈಫಲ್ಯ ಕಂಡಾಗ, 'ದೇವದೇವನು ನಮಗೆ ಕೆಟ್ಟದ್ದನ್ನು ಮಾಡಿದ' ಎಂದುಕೊಳ್ಳುತ್ತೇವೆ. ಆದರೆ ಅದರ ಹಿಂದೆ ನಮ್ಮ ಉದ್ಧಾರಕ್ಕೆ ಒಂದು ಬೀಜವನ್ನು ನೆಟ್ಟಿರುತ್ತಾನೆ ಭಗವಂತ ಎನ್ನುವುದನ್ನು ನಾವು ನೆನಪಿಡಬೇಕು.

ತಂದೆ, ತಾಯಿ ಮಕ್ಕಳಿಗೆ ಕೊಡುವ ಶಿಕ್ಷೆ, ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷೆ ಮಕ್ಕಳ ಉದ್ಧಾರಕ್ಕೇ ಹೊರತು ಅವರ ಮೇಲಿನ ದ್ವೇಷದಿಂದಲ್ಲ.

ಎಲ್ಲರ ಆತ್ಮನಾದ ಅವನು ಎಲ್ಲರಿಗೂ ಹಿತವಾಗಿ ನಡೆದುಕೊಳ್ಳುತ್ತಾನೆ.

ಅವನು ಎಲ್ಲರ ಸ್ನೇಹಿತ. ಎಲ್ಲರ ಹಿತೈಷಿ. ಬೆಂಬಲವಾಗಿ ನಿಲ್ಲುವವನು. ಮಾರ್ಗದರ್ಶಿ, ಹಾದಿ ತೋರುವವನು, ನಮ್ಮ ಪ್ರಜ್ಞೆಯನ್ನು ಎಚ್ಚರದಿಂದಿಡುವವನು, ನಮ್ಮ ಒಳ್ಳೆಯತನದ ಬೇಲಿಯನ್ನು ನಾವು ದಾಟದಂತೆ ನೋಡಿಕೊಳ್ಳುವವನು, ನಮ್ಮನ್ನು ಒಳ್ಳೆಯತನದ ಚೌಕಟ್ಟಿನಲ್ಲಿ ಕಟ್ಟಿ ಹಾಕಲು ಪ್ರಯತ್ನಿಸುವವನು. ನಮ್ಮ ಗುರಿಯ ದಡ ಭಗವಂತ.

ಮೇಲಿನ ಎಲ್ಲವನ್ನೂ ನೋಡಿದರೆ ಭಗವಂತನು ನಮ್ಮ ಅತ್ಯುತ್ತಮ ಸ್ನೇಹಿತನಂತೆ ತೋರುತ್ತದಲ್ಲವೇ? ಅವನು ಅತ್ಯುತ್ತಮ ಏಕೆಂದರೆ ಅವನ ಗೆಳೆತನವು ಯಾವ ಷರತ್ತನ್ನೂ ಹಾಕುವುದಿಲ್ಲ. ಏನನ್ನೂ ಬಯಸುವುದಿಲ್ಲ. ಅವನದು ಬೇಷರತ್ತಿನ ಗೆಳೆತನ.

ನಾವೇನೇ ಆಯ್ಕೆ ಮಾಡಿಕೊಂಡರೂ ಅವನು ನಮ್ಮೊಡನಿರುತ್ತಾನೆ.

ಯಾರಾದರೂ ಅಗತ್ಯವಿರುವವರಿಗೆ ನಾವು ಸಹಾಯ ಮಾಡಬೇಕೆಂದರೆ ಅವನು ನಮ್ಮೊಂದಿಗಿದ್ದು ಅದನ್ನು ಮಾಡಿಸುತ್ತಾನೆ. ನಮ್ಮ ಯಾವ ಉದ್ದೇಶವನ್ನೂ ಅವನು ಎದುರಿಸುವುದಿಲ್ಲ. ಏಕೆಂದರೆ ಉದ್ದೇಶ ನಮ್ಮದು. ನಾವೇನು ಮಾಡಬೇಕೆಂದು ನಿರ್ಧರಿಸಿದರೂ ಅವನು ನಮ್ಮೊಂದಿಗೆ ಶತ ಪ್ರತಿಶತ ಇರುತ್ತಾನೆ. ಅವನು ಅನುಕೂಲಃ.

ಆದರೆ ಒಂದು ವಿಷಯ. ಈ ಅನುಕೂಲವನ್ನು ನಾವು ವಿರೋಧಿಸಬಹುದು ಅಥವಾ ಅದಕ್ಕೆ ಶರಣಾಗಬಹುದು. ನಾವು ಶರಣಾದರೆ ನಮಗೆ ಸಿಗುವ ಅನುಕೂಲಗಳು ಹೆಚ್ಚು ಎಂದು ತಿಳಿದವರು ಹೇಳುತ್ತಾರೆ. ನಾವು ಅವನನ್ನು ವಿರೋಧಿಸಿದರೆ ನಮ್ಮಿಂದ ಅವನು ದೂರ ನಿಲ್ಲುತ್ತಾನಾದರೂ ಅವನು ನಮ್ಮೊಂದಿಗೆ ಹೊಡೆದಾಡುವುದಿಲ್ಲ. ಅವನು ನಮ್ಮನ್ನು ಪ್ರೀತಿಸುತ್ತಾನೆ. ನಾವು ಅವನನ್ನು ಎದುರಿಸುವುದಕ್ಕೂ ಅವನೇ ನಮಗೆ ಬೆಂಬಲವಾಗುತ್ತಾನೆ!

ಅವನು ನಮ್ಮ ಗುರಿಯ ದಡ. ಅಂದರೆ ಸೀಮೆ, ಮಿತಿ, ಹದ್ದು ಅಥವಾ ನಮ್ಮ ಗಮ್ಯ. ಅವನೆಂತಹ ನಿಗಮಕ್ಕೆ ಸಿಲುಕದವನಾದರೂ ಭಕ್ತನು ಅವನನ್ನು ತನ್ನ ಪ್ರೇಮದಿಂದ ಕಟ್ಟಿಹಾಕಬಲ್ಲ.



ಉದಾಹರಣೆಯಂತೂ ಜಗತ್ಪ್ರಸಿದ್ಧವಾದುದು. ಜಗದೋದ್ಧಾರನ ಆಡಿಸಿದಳೆಶೋದೆ ಎಂದಿದ್ದಾರಲ್ಲ ಪುರಂದರದಾಸರು!

ಯಶೋದೆ ತನ್ನ ಮಗನನ್ನು ಹೊಟ್ಟೆಯ ಬಳಿ ಹಗ್ಗದಿಂದ ಕಟ್ಟಿದ್ದರಿಂದ ಅವನು ದಾಮೋದರನಾದ. (ದಾಮ=ಹಗ್ಗ; ಉದರ=ಹೊಟ್ಟೆ)

ಅಂದು ತುಂಟಕೃಷ್ಣನ ಗಲಾಟೆಯನ್ನು ತಡೆಯಲಾಗಲಿಲ್ಲ ಯಶೋದೆಗೆ. ಎಲ್ಲ ಗೋಪಿಯರ ಮನೆಗೆ ನುಗ್ಗಿ ಬೆಣ್ಣೆ ಕದ್ದು, ಹಾಲಿನ ಮೊಸರಿನ ಗಡಿಗೆಗಳನ್ನು ಒಡೆದು ಗಲಾಟೆ ಮಾಡಿದ್ದ. ಎಲ್ಲರ ದೂರನ್ನೂ ಕೇಳಿದ ಯಶೋದೆ ಸಿಟ್ಟಿನಿಂದ ತುಂಟ ಕೃಷ್ಣನನ್ನು ಹಗ್ಗವೊಂದರಿಂದ ಹೊಟ್ಟೆಯ ಬಳಿ ಕಟ್ಟಿ ಮನೆಯಲ್ಲಿದ್ದ ಒರಳುಕಲ್ಲಿಗೆ ಆ ಹಗ್ಗದ ಇನ್ನೊಂದು ತುದಿಯನ್ನು ಕಟ್ಟಿದಳು. 'ಹಗ್ಗವನ್ನು ಬಿಚ್ಚಿಕೊಂಡರೆ ಸುಮ್ಮನಿರೋಲ್ಲ!' ಎಂದು ಬೆದರಿಸಿದಳು ಯಶೋದೆ. ಕೃಷ್ಣ ನಕ್ಕ. ಸುಲಭವಾಗಿ ಆ ಗಂಟನ್ನು ಬಿಚ್ಚಿಕೊಳ್ಳಬಹುದಿದ್ದ ಅವನು ಚಂಚಲಚಿತ್ತನಂತೆ ಆ ಒರಳನ್ನೂ ಎಳೆದುಕೊಂಡು ಹೊರಟ. ಅವನ ಇಬ್ಬರು ಭಕ್ತರು ನಳಕೂಬರ ಮತ್ತು ಮಣಿಗ್ರೀವ. ಅವರಿಬ್ಬರೂ ನಾರದರಿಂದ ಶಾಪಕ್ಕೆ ತುತ್ತಾಗಿ ಯಮಳ ಮತ್ತು ಅರ್ಜುನ ಎಂಬ ಮರಗಳಾಗಿ ಯಶೋದೆಯ ಮನೆಯ ಮುಂದೆ ನಿಂತಿದ್ದರು. ಆ ಮರಗಳ ನಡುವಿನಿಂದ ಒರಳನ್ನು ಎಳೆದುಕೊಂಡು ಹೋದ. ಮರಗಳು ಉರುಳಿಬಿದ್ದವು. ಅನೇಕ ವರ್ಷಗಳಿಂದ ಕೃಷ್ಣನ ಆಗಮನಕ್ಕಾಗಿ ಕಾದಿದ್ದ ಆ ಕುಬೇರನ ಪುತ್ರರು ಶಾಪವಿಮೋಚನೆಗೊಂಡು ಕೃಷ್ಣನಿಗೆ ನಮಸ್ಕರಿಸಿ ಅಂತರ್ಧಾನರಾದರು.

ದಡವೆಂದರೆ ಭವಸಾಗರದಿಂದ ನಮ್ಮನ್ನು ದಾಟಿಸುವ ಅಂಬಿಗ. ಅಂಬಿಗ ನಾ ನಿನ್ನ ನಂಬಿದೆ, ಜಗದಂಬಾರಮಣ ನಾ ನಂಬಿದೆ ಎಂದಿದ್ದಾರೆ ದಾಸರು. ಅವನು ಅನುಕೂಲ. ಅವನಿರುವಾಗ ನಮಗೆ ಭವಸಾಗರವನ್ನು ದಾಟಲು ಏನು ಭಯ?



ಅನುಕೂಲವೆಂದರೆ ನಮ್ಮ ಪ್ರಜ್ಞೆಯನ್ನು ಎಚ್ಚರದಿಂದಿಡುವವನು ಎಂದೂ ಅರ್ಥವಿದೆ. ನಮ್ಮಲ್ಲಿ ಸದಾಚಾರಗಳು ಮತ್ತು ದುಷ್ಟಬುದ್ಧಿಗಳು ಇವೆ. ಇವೆರಡಕ್ಕೂ ಅವನು ಅನುಕೂಲ ಮಾಡಿಕೊಡುತ್ತಾನೆ. ಆದರೆ ನಮ್ಮ ಪ್ರಜ್ಞೆಯನ್ನು ಅವನು ಎಚ್ಚರದಿಂದ ಇಟ್ಟಿರುವುದರಿಂದ ನಾವು ನಮ್ಮ ಬುದ್ಧಿಯನ್ನು ನೆಟ್ಟಗಿಟ್ಟುಕೊಳ್ಳಬೇಕು.

ಪ್ರತಿಯೊಬ್ಬ ದಾರ್ಶನಿಕನೂ ಭಗವಂತನನ್ನು ಹಿತೈಷಿ ಅಥವಾ ಎಲ್ಲರ ಗೆಳೆಯ ಎಂದೇ ಕರೆಯುತ್ತಾರೆ. ಏಕೆಂದರೆ ಭಗವಂತನು ಎಲ್ಲರ ಜೀವನದ ಅತ್ಯಂತ ಮುಖ್ಯವಾದ ಭಾಗ. ಮೊದಲೇ ಹೇಳಿದಂತೆ ನಮ್ಮೆಲ್ಲ ಕೆಟ್ಟ ಕೆಲಸಗಳಿಗೂ ಅವನು ನಮಗೆ ಸಹಾಯ ಮಾಡಬಲ್ಲ. ಆದರೆ ಅವನು ನಮ್ಮ ಪ್ರಜ್ಞೆಯನ್ನು ಬಡಿದೆಬ್ಬಿಸುತ್ತಿರುತ್ತಾನೆ. ಆ ಪ್ರಜ್ಞೆಯನ್ನೂ ಮೀರಿ ನಾವು ದುಷ್ಟ ಕೆಲಸ ಮಾಡಿದರೆ ಅದಕ್ಕೂ ಅವನು ಅನುಕೂಲ ಮಾಡಿಕೊಡುತ್ತಾನೆ. ಆದರೆ ಅದರ ಫಲವನ್ನು ನಾವೇ ಅನುಭವಿಸಬೇಕು ಎನ್ನುವುದು ಶತಃಸಿದ್ಧ. ನಮ್ಮೆಲ್ಲರಲ್ಲಿ ಜನ್ಮಾಂತರಗಳಿಂದ ಬರುವ ವಾಸನೆಗೆ ಅವನೇ ಶಕ್ತಿ.

ಜಗದೀಶನಾಡುವ ಜಗವೇ ನಾಟಕರಂಗ. ಜಿಂದಗಿ ಏಕ್ ರಂಗಮಂಚ್ ಹೈ ಹಂ ಸಬ್ ಉಸ್ಕಾ ಕಠ್‌ಪುತಲಿಯಾ ಹೈ (ಜೀವನವು ಒಂದು ರಂಗಮಂಚ. ನಾವೆಲ್ಲರೂ ಅವನ ಕೈಯಲ್ಲಾಡುವ ಬೊಂಬೆಗಳು), ಬೊಂಬೆ ಆಡ್ಸೋನು ಮ್ಯಾಲೆ ಕುಂತೋನು, ಕೇಳದೆ ದುಃಖವ ಕೊಡುವ, ಹೇಳದೆ ಸುಖವ ತರುವ ... ಹೀಗೆ ನಾನಾ ರೀತಿಯ ಹಾಡುಗಳನ್ನೂ, ಸಂಭಾಷಣೆಗಳನ್ನೂ ನಾವು ಕೇಳಿಯೇ ಇದ್ದೇವೆ.

ಅನುಕೂಲ ಮಾಡಿಕೊಡುವ ದೇವದೇವ. ಅನೇಕ ಮನುಷ್ಯರೂ ಇದ್ದಾರೆ ಹೀಗೆ ಅನುಕೂಲ ಮಾಡಿಕೊಡುವಂತಹವರು.

ಒಬ್ಬ ಹುಡುಗ ನಾಯಕ ನಟನಾಗಲು ಬಹಳ ವರ್ಷಗಳಿಂದ ಪ್ರಯತ್ನಪಡುತ್ತಿದ್ದ. ಅವನ ಏಕನಿಷ್ಠ ಸಾಧನೆ, ಅಂಕಿತಭಾವಗಳು ಅವನಿಗೆ ಈ ಹಿಂದೆ ಪರಿಚಯವಿಲ್ಲದ ಒಬ್ಬ ವಯೋವೃದ್ಧನನ್ನು ಆಕರ್ಷಿಸಿದವು. ಅದು ಹೇಗೋ ಗೆಳೆತನ ಬೆಳೆಯಿತು.

ಆ ವಯೋವೃದ್ಧ ಅವನನ್ನು ಕೆಲವು ನಿರ್ದೇಶಕರ ಬಳಿ ಕರೆದೊಯ್ದ. ಆ ಹುಡುಗನೂ ಅವನ ಜೊತೆಗೆ ಬಂದ. ಅವನಿಗೆ ಹೀಗೆ ಸಹಾಯ ಮಾಡುವೆ ಎಂದಿದ್ದ ಅನೇಕ ಜನರು ಈಗಾಗಲೇ ಕರೆದೊಯ್ದು ವಿಫಲರಾಗಿದ್ದರು.

ಆದರೆ ದೇವದೇವನ ಮನೆಯಲ್ಲಿ ನಿಧಾನವಿದೆ, ಆದರೆ ಅವನು ಸತ್ಯವನ್ನು ನೋಡುತ್ತಾನೆ. ಯಾರು ನಿಷ್ಠರೋ ಅವರಿಗೆ ಯಾರನ್ನೋ ನಿಮಿತ್ತ ಮಾಡಿ ಆ ನಿಷ್ಠರಿಗೆ ಅನುಕೂಲ ಮಾಡುತ್ತಾನೆ.

ಅದೇ ನಡೆಯಿತು ಈ ಹುಡುಗನ ವಿಷಯದಲ್ಲಿ. ವಯೋವೃದ್ಧನಿಗೆ ತಿಳಿದ ನಿರ್ದೇಶಕರೊಬ್ಬರು ಚಲನಚಿತ್ರ ತೆಗೆಯುವರೆಂದು ತಿಳಿದುಬಂದಾಗ ಅವರಿಗೆ ದುಂಬಾಲು ಬಿದ್ದ ವಯೋವೃದ್ಧ.

ಆ ಹುಡುಗನನ್ನು ನಿರ್ದೇಶಕರು ಕಂಡರು. ಅವರಿಗೆ ಆ ಹುಡುಗನಲ್ಲಿನ 'ಪ್ರತಿಭೆಯ ಕಿಡಿ' ಕಂಡಿತ್ತು. ಅವನಿಗೆ ನಾಯಕನ ಪಾತ್ರವನ್ನೇ ಕೊಟ್ಟರು. ಅವನಿಂದ ಒಳ್ಳೆಯ ಕೆಲಸ ತೆಗೆದರು. ಅವನಿಗಾಗಿ ಕೆಲವು ದೃಶ್ಯಗಳನ್ನು ಬರೆದರು.

ಮತ್ತೆ ವಯೋವೃದ್ಧ ಆ ಹುಡುಗನನ್ನು ಚಿತ್ರಪ್ರಪಂಚಕ್ಕೆ ಪರಿಚಯಿಸಲು ಮಾಧ್ಯಮದ ಮೊರೆಹೊಕ್ಕ. ಅದೇನು ಮೋಡಿಯೋ ಏನೋ ಆ ವಯೋವೃದ್ಧನ ವಿನಂತಿ ಕೇಳಿ ಆ ಹುಡುಗನ ಬಗ್ಗೆ ಎಲ್ಲ ಪತ್ರಿಕೆಯವರೂ ಬರೆದರು. ಇಲ್ಲ, ಮೋಡಿಯಲ್ಲ, ಅದು ಭಗವಂತವನು ವಯೋವೃದ್ಧನ ಮೂಲಕ ಆ ಹುಡುಗನಿಗೆ ಮಾಡಿದ ಅನುಕೂಲ.

ಭಗವಂತ ಕೊಡುವ ಕಷ್ಟದಲ್ಲಿ ನಮ್ಮನ್ನು ತಿದ್ದುವ ಕಾರುಣ್ಯವಿದೆ. ಅದರಲ್ಲೇ ನಮ್ಮ ಉದ್ಧಾರದ ರಹಸ್ಯ ಅಡಗಿದೆ. ಸಜ್ಜನರಿಗೆ ಅವನು ಎಂದೂ ಪ್ರತಿಕೂಲ ಅಲ್ಲ. ಅವನು ಎಲ್ಲರಿಗೂ ಎಂದೆಂದಿಗೂ ಅನುಕೂಲಃ

ನಂ. ೮೯, 'ಚಿರಸ್ಮಿತ' ಬಸಪ್ಪ ಬಡಾವಣೆ, ಪಟ್ಟಣಗೆರೆ, ವೇರ್‌ಹೌಸ್ ಹಿಂದೆ, ರಾಜರಾಜೇಶ್ವರಿನಗರ, ಬೆಂಗಳೂರು-೫೬೦ ೦೯೮.

# ಅಮರನಾರೇಯಣ ಶತಕ

■ ನಿರೂಪಣೆ: ನಾರೇಯಣ ದಾಸ




**ತಾತಯ್ಯನವರ ದಾರಿದೀಪ**

ಯೋಗಿ ಕವಿಗಳು ಧ್ಯಾನದ ಮೂಲಕ ತಮ್ಮಲ್ಲೇ ಅಂತರ್ಯಾಮಿಯಾಗಿರುವ ಪರಂಜ್ಯೋತಿ ಪರಮಾತ್ಮನನ್ನು ಕಂಡು ಸಚ್ಚಿದಾನಂದ ಪಡೆಯುತ್ತಾರೆ. ಅದೇ ಆತ್ಮಜ್ಞಾನಾವಸ್ಥೆ. ಅಂಥ ಪರಮಾನಂದದ ಮನಸ್ಥಿತಿಯಲ್ಲಿ ಯೋಗಿ ಕವಿ ಕಾವ್ಯವನ್ನು ರಚಿಸುತ್ತಾನೆ. ಇಂಥ ಯಾವುದೇ ಅನುಭಾವವಿಲ್ಲದೆ ಕೇವಲ ಛಂದಸ್ಸು, ಕಾವ್ಯಶಾಸ್ತ್ರ, ಓದಿಕೊಂಡು ಪುಂಖಾನುಪುಂಖವಾಗಿ ಬರೆಯುವ ಲೌಕಿಕ ಕವಿಗಳು ತಮ್ಮನ್ನು ಶ್ಲಾಘಿಸಿಕೊಳ್ಳುವುದನ್ನು ಮಾತ್ರ ಮರೆಯುವುದಿಲ್ಲ. ಭಗವಂತನ ಸ್ಮರಣೆಯ ಸಾಹಿತ್ಯ ರಚಿಸುವ ಕವಿ ಅವರ ದೃಷ್ಟಿಯಲ್ಲಿ ಕನಿಷ್ಠ. ಅವನನ್ನು ಕಂಡರೆ ಅವರಿಗೆ ಅಸಹ್ಯ.

## ಪದ್ಯ–೯೮

ಆದಿಪರಂಜ್ಯೋತಿ – ಅಖಿಲಾಂಡನಾಯಕುನಿ
ಅಂತರಂಗಂಬುನ – ವುಂಡ ಚೂಚಿ ।
ಆತ್ಮಲೋ ವುಪ್ಪೊಂಗಿ – ಆ ಮಹಾತ್ಮುನಿ ಸ್ಮರಣ
ಚೇಸಿನ ಕವನಮು – ಶ್ರೇಷ್ಠಮನರು ।
ಶಾಸ್ತ್ರಸಂಪುಟಂಬುಲು – ಚಾಲ ವಿಚಾರಿಂಚಿ ।
ಕವನಮು ಸೇತುರು – ಕಲ್ಲಕವುಲು ।
ತಾಮು ಅಧಿಕುಲಮನುಚು – ತರ್ಕಿಂಚಿ ತರ್ಕಿಂಚಿ
ವೆಕ್ಕಸಪಡುದುರು – ಯೋಗಿವದ್ದ ॥
ನಿಜಮು ನಿಷ್ಠೂರಮ್ಮೈ ಕಲ್ಲ ನಿಜಮುಲಾಯ ।
ಆತ್ಮ ತೆಲಿಯಕ ಚೆಪ್ಪುದುರು ಅಲ್ಪಕವುಲು ।
ಅಮರನಾರೇಯಣಾಚ್ಯುತ – ಹರಿ ಮುಕುಂದ ।
ಕಲುಷಸಂಹಾರ ಕೈವರಪುರವಿಹಾರಾ ॥98॥

ಈ ಪದ್ಯದಲ್ಲಿ ಪರಮಜ್ಞಾನಿಗಳೂ ಶ್ರೇಷ್ಠ ಸದ್ಗುರುಗಳೂ ವರಕವಿಗಳೂ ಆದ ಕೈವಾರ ತಾತಯ್ಯನವರು ಕವಿ, ಕಾವ್ಯಗಳ ಸಾರ್ಥಕತೆಯ ಬಗ್ಗೆ ಪ್ರಸ್ತಾವಿಸುತ್ತಾರೆ. ಕವಿ, ಕಾವ್ಯ ಎಂಬ ಪದಗಳು ಇಡೀ ಸಾಹಿತ್ಯಕ್ಕೆ ಅನ್ವಯಿಸುವಂಥದು. ಒಬ್ಬ ಕವಿ, ಬರಹಗಾರ ಅಥವಾ ಚಿಂತಕನಿಗೂ ಈ ಪದ್ಯದಲ್ಲಿ ಹೇಳಲಾಗಿರುವ ತತ್ತ್ವ ಅನ್ವಯವಾಗುತ್ತದೆ.



ಸಾರಸ್ವತ ಲೋಕದಲ್ಲಿ ಬಗೆ ಬಗೆಯ ಸಾಹಿತ್ಯ ಸೃಷ್ಟಿಯಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಆದಿಕವಿ ವಾಲ್ಮೀಕಿ ಮಹರ್ಷಿ, ವ್ಯಾಸ ಮಹರ್ಷಿಗಳಿಂದ ಆರಂಭಿಸಿ ಪ್ರಪಂಚದ ಸಹಸ್ರ ಸಹಸ್ರ ಭಾಷೆಗಳಲ್ಲಿ ಸಾಹಿತ್ಯ ರಚನೆಯಾಗಿರುವುದುಂಟು. ಮಹಾಕಾವ್ಯ, ಕಾವ್ಯ, ಇತಿಹಾಸ, ನಾಟಕ, ಕಾದಂಬರಿ, ತತ್ತ್ವಶಾಸ್ತ್ರ, ವಿಜ್ಞಾನ, ಗಣಿತಶಾಸ್ತ್ರ ಮುಂತಾದ ವಿವಿಧ ಪ್ರಕಾರಗಳ ಬರವಣಿಗೆಗಳುಂಟು. ಕೆಲವು ಲೌಕಿಕವಾದವು. ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಗಣಿತಶಾಸ್ತ್ರ, ಖಗೋಳಶಾಸ್ತ್ರ ಮುಂತಾದವು ಹಲವಾರು ಶಾಸ್ತ್ರಗಳ ಬರಹಗಳು ಲೌಕಿಕವಾದವು. ಅಂತೆಯೇ ವೇದಗಳು, ಉಪನಿಷತ್ತುಗಳು, ಪುರಾಣಗಳು, ರಾಮಾಯಣ, ಮಹಾಭಾರತ, ಭಾಗವತ ಮುಂತಾದವು ಅಲೌಕಿಕ ಅಥವಾ ಅಧ್ಯಾತ್ಮ ಕ್ಷೇತ್ರಕ್ಕೆ ಸಂಬಂಧಿಸಿರುವುದೆಂದು ಸ್ಥೂಲವಾಗಿ ಹೇಳಬಹುದು.

ಕವಿಗಳಲ್ಲಿ, ಬರಹಗಾರರಲ್ಲಿ ಅನೇಕ ವಿಧ. ಅಕ್ಷರಜ್ಞಾನವನ್ನು ಗಳಿಸಿದ ಕೆಲವರು ಜಾಣರಾದ ಬರಹಗಾರರು ತಮ್ಮನ್ನು ಮೀರಿದ ಬೋರೊಬ್ಬ ಕವಿ ಇಲ್ಲ ಎಂದು ಬೀಗುವರು. ಶುಷ್ಕವಾದ ಬರವಣಿಗೆಗಳನ್ನು ಮಾಡಿ ಅದೇ ಸರ್ವಶ್ರೇಷ್ಠ ಸಾಹಿತ್ಯ ಎಂದು ವಾದಿಸುವರು. ಆದರೆ ಇಂಥವರು ಬರೆದದ್ದು ನಿಜವಾದ ಸಾರ್ಥಕ ಸಾಹಿತ್ಯವೇ? ಅದರಿಂದ ಏನಾದರೂ ಪುರುಷಾರ್ಥ ಸಾಧನೆ ಆಗುವುದುಂಟೋ? ಹಾಗಾದರೆ ಸಾರ್ಥಕ ಸಾಹಿತ್ಯ ಯಾವುದು? ಶ್ರೇಷ್ಠ ಕವಿ ಯಾರು ಎಂಬ ಸಂಗತಿಗಳತ್ತ ಬೆಳಕು ಚೆಲ್ಲುವ ಪದ್ಯ ಇದು.

ತಾತಯ್ಯನವರು ಇಂದಿನ ಆಧುನಿಕ ಲೌಕಿಕರು ಸುಳ್ಳನ್ನು ಬರೆಯುವ

ಕವಿಗಳನ್ನು ಪುರಸ್ಕರಿಸುತ್ತಾ ಭಗವಂತನತ್ತ ಕರೆದೊಯ್ಯುವ ಕಾವ್ಯ ಅಥವಾ ಬರವಣಿಗೆಯನ್ನು ತಿರಸ್ಕರಿಸುತ್ತಾರೆ ಎನ್ನುತ್ತಾರೆ.

**ಆದಿಪರಂಜ್ಯೋತಿ – ಅಖಿಲಾಂಡನಾಯಕುನಿ**
**ಅಂತರಂಗಂಬುನ – ವುಂಡ ಚೂಚಿ ।**
**ಆತ್ಮಲೋ ವುಪ್ಪೊಂಗಿ – ಆ ಮಹಾತ್ಮುನಿ ಸ್ಮರಣ**
**ಚೇಸಿನ ಕವನಮು – ಶ್ರೇಷ್ಠಮನರು ।**

ಇಲ್ಲಿ ತಾತಯ್ಯನವರು ಸುಳ್ಳು ಕವಿಗಳ ಬಗ್ಗೆ ಟೀಕಾ ಪ್ರಹಾರ ಮಾಡುತ್ತಾರೆ. ನಿಜವಾದ ಆತ್ಮೋತ್ಸರ್ಗವನ್ನು ಗುರಿಯನ್ನಾಗಿರಿಸಿಕೊಂಡು ಶ್ರೇಷ್ಠ ಆದರ್ಶಮಯ ಸಾಹಿತ್ಯವನ್ನು ರಚಿಸುವ, ಪರಮಾತ್ಮನನ್ನು ಸ್ಮರಣೆ ಮಾಡುವಂಥ ಬರವಣಿಗೆ ಮಾಡುವಂಥ ಆಧ್ಯಾತ್ಮಿಕ ಕವಿಗಳ ಮುಂದೆ ತಾವೇ ಶ್ರೇಷ್ಠರು, ತಮ್ಮ ರಚನೆಗಳೇ ಅತ್ಯುತ್ತಮವಾದುವೆಂದು ಹೊಗಳಿಕೊಳ್ಳುವ ಕವಿಗಳು ಆತ್ಮ ಪ್ರಶಂಸಕರು. ಭಗವಂತನನ್ನು ಆದಿಪರಂಜ್ಯೋತಿ, ಅಖಿಲಾಂಡನಾಯಕ, ಮಹಾತ್ಮ ಎಂದು ಈ ಪದ್ಯದಲ್ಲಿ ಕರೆದಿರುವ ತಾತಯ್ಯನವರು ಯೋಗಿ ಕವಿಗಳು. ಅವರು ರಚಿಸಿರುವ ಕಾವ್ಯಕ್ಕೆ ಭಗವಂತನಲ್ಲಿ ಅಂತರಂಗದಲ್ಲಿ ಸಾಕ್ಷತ್ಕರಿಸಿಕೊಂಡಿರುತ್ತಾರೆ. ಅಂಥವರ ಕಾವ್ಯ ಅವರ ಅಂತರಂಗದಲ್ಲಿ ಉಕ್ಕುಕ್ಕಿ ಬಂದು ಕಾವ್ಯವಾಗಿ ಹೊರಹೊಮ್ಮಿರುತ್ತದೆ. ಆದರೆ ಈ ಕಪಟ ಕವಿಗಳು ಅವನ್ನು ಗೌರವಿಸದೆ ತಮ್ಮ ರಚನೆಗಳನ್ನು ಹೊಗಳಿಕೊಂಡು ನಿಜ ಕಾವ್ಯವನ್ನು ಜರಿಯುತ್ತಾರೆ. ಅಂಥವರು ಸುಳ್ಳು ಕವಿಗಳು. ಅಲ್ಪ ಕವಿಗಳು. ಅಂಥವರಿಗೆ ಆತ್ಮಜ್ಞಾನವಿರುವುದಿಲ್ಲ.

ಇಂಥ ಕಪಟ ಕವಿಗಳನ್ನು ಕುರಿತೇ ಸುಭಾಷಿತ ಒಂದು ಹೀಗನ್ನುತ್ತದೆ.

**ಅಧೀತ್ಯ ಚತುರೋ ವೇದಾನ್ ವ್ಯಾಕೃತ್ಯಾಷ್ಟಾದಶ ಸ್ಮೃತಿಃ ।**
**ಅಹೋ ಶ್ರಮಸ್ಯ ವೈಫಲ್ಯಂ ಆತ್ಮೋಽಪಿ ಕಲಿತೋ ನ ಚೇತ್ ॥**

ನಾಲ್ಕು ವೇದಗಳನ್ನು ಕಲಿತು ಹದಿನೆಂಟು ಸ್ಮೃತಿಗಳನ್ನು ವ್ಯಾಖ್ಯಾನ ಮಾಡಿಯೂ ಆತ್ಮಜ್ಞಾನ ಸಂಪಾದಿಸದೆ ಹೋದರೆ ಹೋದಮೇಲೆ ಅಷ್ಟು ಶ್ರಮವೂ ವ್ಯರ್ಥವೇ ಸರಿ. ಇಲ್ಲಿ ಸುಭಾಷಿತಕಾರನು ಎಲ್ಲ ವಿದ್ಯೆಯ ಮೂಲ ಉದ್ದೇಶ ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನ ಪಡೆಯುವುದೇ ಆಗಿದೆ ಎಂಬುದನ್ನು ತಿಳಿಸಿದ್ದಾನೆ.

ಪರಂಜ್ಯೋತಿಯನ್ನು ಕುರಿತು ಅನುಭಾವಿ ಕವಿ ನಿಜಗುಣ ಶಿವಯೋಗಿಗಳ ಈ ಸುಂದರ ಹಾಡು ಪರಂಜ್ಯೋತಿ ಎಂದರೆ ಭಗವಂತನೇ ಎಂಬುದನ್ನು ವಿವರಿಸುತ್ತದೆ.

**ಜ್ಯೋತಿ ಬೆಳಗುತಿದೆ**
**ವಿಮಲ ಪರಂಜ್ಯೋತಿ ಬೆಳಗುತಿದೆ**
**ಮಾತು ಮನಂಗಳಿಂದತ್ತತ್ತ ಮೀರಿದ**
**ಸಾತಿಶಯದ ನಿರುಪಾಧಿಕ ನಿರ್ಮಲ**
**ಜ್ಯೋತಿ ಬೆಳಗುತಿದೆ ॥**

ತಾತಯ್ಯನವರು ಆದಿಪರಂಜ್ಯೋತಿಗೆ ನಿಜಗುಣ ಶಿವಯೋಗಿಗಳ ವ್ಯಾಖ್ಯಾನವಿದ್ದಂತಿದೆ ಈ ಕವನ.

**ಶಾಸ್ತ್ರಸಂಪುಟಂಬುಲು – ಚಾಲ ವಿಚಾರಿಂಚಿ ।**
**ಕವನಮು ಸೇತುರು – ಕಲ್ಲಕವುಲು ।**
**ತಾಮು ಅಧಿಕುಲಮನುಚು – ತರ್ಕಿಂಚಿ ತರ್ಕಿಂಚಿ**
**ವೆಕ್ಕಸಪಡುದುರು – ಯೋಗಿವದ್ದ ॥**

ಯೋಗಿ ಕವಿಗಳು ಧ್ಯಾನದ ಮೂಲಕ ತಮ್ಮಲ್ಲೇ ಅಂತರ್ಯಾಮಿಯಾಗಿರುವ ಪರಂಜ್ಯೋತಿ ಪರಮಾತ್ಮನನ್ನು ಕಂಡು ಸಚ್ಚಿದಾನಂದ ಪಡೆಯುತ್ತಾರೆ. ಅದೇ ಆತ್ಮಜ್ಞಾನಾವಸ್ಥೆ. ಅಂಥ ಪರಮಾನಂದದ ಮನಸ್ಥಿತಿಯಲ್ಲಿ ಯೋಗಿ ಕವಿ ಕಾವ್ಯವನ್ನು ರಚಿಸುತ್ತಾನೆ. ಇಂಥ ಯಾವುದೇ ಅನುಭಾವವಿಲ್ಲದೆ ಕೇವಲ ಛಂದಸ್ಸು, ಕಾವ್ಯಶಾಸ್ತ್ರ, ಓದಿಕೊಂಡು ಪುಂಖಾನುಪುಂಖವಾಗಿ ಬರೆಯುವ ಲೌಕಿಕ ಕವಿಗಳು ತಮ್ಮನ್ನು ಶ್ಲಾಘಿಸಿಕೊಳ್ಳುವುದನ್ನು ಮಾತ್ರ ಮರೆಯುವುದಿಲ್ಲ. ಭಗವಂತನ ಸ್ಮರಣೆಯ ಸಾಹಿತ್ಯ ರಚಿಸುವ ಕವಿ ಅವರ ದೃಷ್ಟಿಯಲ್ಲಿ ಕನಿಷ್ಠ. ಅವನನ್ನು ಕಂಡರೆ ಅವರಿಗೆ ಅಸಹ್ಯ.

**ನಿಜಮು ನಿಷ್ಠೂರಮ್ಮೈ ಕಲ್ಲ ನಿಜಮುಲಾಯ ।**
**ಆತ್ಮ ತೆಲಿಯಕ ಚೆಪ್ಪುದುರು ಅಲ್ಪಕವುಲು ।**

ಲೋಕದ ರೀತಿಯೇ ಹೀಗೆ. ಲೋಕದ ಜನರ ರೀತಿ ನೀತಿಯೇ ಹೀಗೆ. ನಿಜವನ್ನು ಹೇಳಿದರೆ ಜನಕ್ಕೆ ನಿಷ್ಠುರ. ಅವರಿಗೆ ಸತ್ಯದಲ್ಲಿ ನಂಬಿಕೆ ಇಲ್ಲ. ಇಂಥವರಿಗೆ ಸುಳ್ಳುಗಳೇ ಸತ್ಯವೆನಿಸುತ್ತವೆ. ಅದೇ ಅವರ ದೃಷ್ಟಿಯಲ್ಲಿ ಶ್ರೇಷ್ಠ. ಹೃದಯದಲ್ಲಿ ಪರಮಾತ್ಮನನ್ನು ದರ್ಶಿಸಿದ ಕವಿಯೋಗಿ ಬರೆದ ಪರಮಾತ್ಮ ಸ್ಮರಣೆಯ ಕಾವ್ಯ ಅವರಿಗೆ ಬೇಡ. ಆತ್ಮಜ್ಞಾನದ ಗಂಧವೇ ಇಲ್ಲದ ಅಲ್ಪ ಕವಿಗಳು ಎಂಥದೋ ಕಗ್ಗವನ್ನು ಬರೆದರೂ ಅದೇ ಅವರಿಗೆ ಆದರ್ಶವಾಣಿ. ಹೀಗೆ ಲೌಕಿಕ ಕವಿಗಳ ಜಂಭವನ್ನು ಮುರಿದು ಅಧ್ಯಾತ್ಮ ಅಥವಾ ಯೋಗಿ ಕವಿಗಳ ಹಿರಿಮೆಯನ್ನು ಕೊಂಡಾಡುವಂಥ ಪದ್ಯ ಇದಾಗಿದೆ.

(ಮುಂದುವರಿಯುವುದು)

---

**ಬ್ಯಾಂಕ್ ಮೂಲಕ ಚಂದಾ ಹಣ ಸಲ್ಲಿಸಲು ಇಚ್ಛಿಸುವವರು ಈ ಎಸ್‌ಬಿ ಅಕೌಂಟ್‌ಗೆ ಕಳುಹಿಸಬಹುದು**

For Subscription - Bank Transfer / RTGS
**Sri Yogi Nareyana Study Centre**
**SB A/c No. 141201011016824**
MSRIT Branch,
**VIJAYA BANK,** Bangalore 560 054
**IFSC Code: VIJB0001412**
**MICR Code: 560029070**
After Transfer please inform to below mentioned Mobile No. 94480 85975

ಯೋಗ ವಾಸಿಷ್ಠ ಕಥೆಗಳು

**ಯೋಗ ವಾಸಿಷ್ಠ ಒಂದು ಮಹಾನ್ ಅಧ್ಯಾತ್ಮ ಗ್ರಂಥ. ಬೃಹತ್ತಾದುದು ಕೂಡ. ವಸಿಷ್ಠರು ಹಾಗೂ ಶ್ರೀರಾಮನ ನಡುವಿನ ಸಂಭಾಷಣೆಯ ರೂಪದಲ್ಲಿರುವ ಈ ಗ್ರಂಥ ಅಧ್ಯಾತ್ಮ ವಿದ್ಯೆಯ ಪಠ್ಯಪುಸ್ತಕದಂತಿದೆ. ಬಹು ಪ್ರಾಚೀನವಾದ ಈ ಗ್ರಂಥದ ವೈಶಿಷ್ಟ್ಯವಿರುವುದೇ ಗಹನವಾದ ವಿಚಾರವನ್ನು ತಿಳಿಸಲು ಉಪಕಥೆಗಳನ್ನು ಬಳಸಿಕೊಂಡಿರುವುದು. ವಿದುಷಿ ನಂ. ನಾಗಲಕ್ಷ್ಮಿಯವರು ಸರಳ ಭಾಷೆಯಲ್ಲಿ ಅದರಲ್ಲಿನ ಕಥೆಗಳನ್ನು 'ಮಲ್ಲಾರ' ಓದುಗರಿಗಾಗಿ ಪ್ರತಿ ಸಂಚಿಕೆಯಲ್ಲೂ ಪ್ರಸ್ತುತಪಡಿಸುತ್ತಾರೆ.**



# ವಿಪಶ್ಚಿತ ರಾಜನ ಕಥೆ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಹಿಂದೆ 'ತತಮಿತಿ' ಎಂಬ ನಗರದಲ್ಲಿ ವಿಪಶ್ಚಿತನೆಂಬ ರಾಜನಿದ್ದನು. ಅವನು ತನ್ನ ದಕ್ಷ ಆಡಳಿತದಿಂದ ವಿಖ್ಯಾತನಾಗಿದ್ದನು. ಅವನು ಅಗ್ನಿಯ ಆರಾಧಕನೂ ಆಗಿದ್ದನು. ಅವನ ಮಂತ್ರಿಗಳಲ್ಲಿ ನಾಲ್ವರು ಪ್ರಧಾನರಾಗಿದ್ದರು. ಅವರೆಲ್ಲರ ಬೆಂಬಲದೊಂದಿಗೆ ಮತ್ತು ಬಲಿಷ್ಠವಾದ ಚತುರಂಗ ಬಲದ ನೆರವಿನೊಂದಿಗೆ ರಾಜನು ತನ್ನ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಬಲಾಢ್ಯನೆಂದು ಪ್ರಸಿದ್ಧನಾಗಿದ್ದನು.

ಒಮ್ಮೆ ಅವನ ಮೂವರು ಸಾಮಂತ ರಾಜರು ತಮ್ಮ ದೊಡ್ಡ ಸೈನ್ಯದೊಡನೆ ಆ ತತಮಿತಿ ರಾಜಧಾನಿಯ ಮೇಲೆ ದಾಳಿ ಮಾಡಿದರು. ಕೂಡಲೆ ವಿಪಶ್ಚಿತ ರಾಜನು ಯುದ್ಧಕ್ಕೆ ಸಕಲ ಸಿದ್ಧತೆಗಳನ್ನೂ ಮಾಡಿ ಎದುರಿಸಲು ಸಿದ್ಧರಾಗಬೇಕೆಂದು ಸೇನಾಪತಿಗೆ ತಿಳಿಸಿದ್ದನು ಅನಂತರ, ಗಂಗಾ ಸ್ನಾನ ಮಾಡಿ, ಅಗ್ನಿಶಾಲೆಗೆ ಹೋಗಿ ತನ್ನ ಆರಾಧ್ಯದೇವನಾದ ಅಗ್ನಿದೇವನನ್ನು ಕುರಿತು ವಿಧಿಪೂರ್ವಕವಾಗಿ ಪೂಜೆಯನ್ನು ಪ್ರಾರಂಭಿಸಿದನು. ಎಲ್ಲ ವಿಧಿಗಳಿಂದ ಪೂಜಿಸಿ ಕಡೆಗೆ ಅಗ್ನಿಗೆ ಕೈಜೋಡಿಸಿ ನಮಸ್ಕರಿಸಿ ಹೀಗೆಂದು ಪ್ರಾರ್ಥಿಸಿದನು. "ದೇವೇಶ್ವರನಾದ ಅಗ್ನಿದೇವನೇ, ಇಂದು ನಿನಗೆ ನಿನ್ನ ಈ ಭಕ್ತನಿಂದ ವಿಶೇಷವಾದ ಪೂಜೆಯು ಸಲ್ಲುವುದು, ನನ್ನ ಈ ಮಸ್ತಕವನ್ನು ನಿನಗೆ ಸಮರ್ಪಿಸುತ್ತಿದ್ದೇನೆ. ಇದು ಒಂದು ಅಪೂರ್ವವಾದ ಸಮರ್ಪಣೆಯಾಗಿದೆ. ಇದರ ಆಹುತಿಯಿಂದ ಸಂತುಷ್ಟನಾಗಿ ನೀನು ನನಗೆ ನಾಲ್ಕು ಶರೀರಗಳನ್ನು ಪ್ರಕಟ ಮಾಡುವ ಸಾಕ್ಷಾತ್ ನಾರಾಯಣನಂತೆಯೇ ಪ್ರಭಾವ ಹೊಂದಿ ಯಾವುದೇ ಶತ್ರುವಿನ ದಾಳಿಯನ್ನು ಎದುರಿಸಿ ಜಯಶಾಲಿಯಾಗುವಂತೆ ವರಗಳನ್ನು ಅನುಗ್ರಹಿಸು." ಹೀಗೆ ಪ್ರಾರ್ಥಿಸಿದ ಅನಂತರ ರಾಜನು ಖಡ್ಗದಿಂದ ತನ್ನ ಮಸ್ತಕವನ್ನು ಕತ್ತರಿಸಿ ಅಗ್ನಿಗೆ ಆಹುತಿಯನ್ನು ಅರ್ಪಿಸಿಬಿಟ್ಟನು. ಜೊತೆಗೇ ತನ್ನ ಶರೀರವನ್ನೂ ಅವನಿಗೆ ಅರ್ಪಣೆ ಮಾಡಿಬಿಟ್ಟನು.

ಸ್ವಲ್ಪ ಸಮಯದ ಅನಂತರ ಆ ಅಗ್ನಿಕುಂಡದಿಂದ ನಾಲ್ವರು ವಿಪಶ್ಚಿತರು ಪ್ರಕಟಗೊಂಡರು. ಅವರೆಲ್ಲರೂ ತೇಜಸ್ಸಿನಿಂದ ಕೂಡಿದ್ದು ಸಾಕ್ಷಾತ್ ಶ್ರೀಹರಿಯಂತೆ ಕಂಗೊಳಿಸುತ್ತಿದ್ದರು. ಕೆಲವೇ ಕ್ಷಣಗಳಲ್ಲಿಯೇ ಅವರೆಲ್ಲರೂ ಯುದ್ಧರಂಗಕ್ಕೆ ಹೋಗಿ ತಮ್ಮ ಸೇನೆಯ ಜೊತೆಗೆ ಸೇರಿಕೊಂಡು ಭಯಂಕರವಾದ ಯುದ್ಧವನ್ನು ಮಾಡಲು ಪ್ರಾರಂಭಿಸಿದರು. ಅವರ ಪರಾಕ್ರಮವನ್ನು ಕಂಡು ಬೆದರಿದ ಶತ್ರುಗಳು ಪಲಾಯನ ಮಾಡಲು ಪ್ರಾರಂಭಿಸಿದರು. ಪೆಟ್ಟು ತಿಂದು ಜರ್ಜರಿತರಾಗಿ ಓಡಲು ಪ್ರಯತ್ನಿಸಿದರೂ ನಾಲ್ಕೂ ಜನ ವಿಪಶ್ಚಿತರು ಅವರನ್ನು ಹಿಂಬಾಲಿಸಿ ಅವರ ಸೈನ್ಯದ ಬಹುಭಾಗವನ್ನು ನಾಶಪಡಿಸಿದರು. ಶತ್ರು ಸೈನಿಕರೆಲ್ಲರು ಸಮುದ್ರ ತೀರಕ್ಕೆ ಓಡಿಹೋದರು.

ಅನಂತರದಲ್ಲಿ ಮಂತ್ರಿಯು ವಿಪಶ್ಚಿತ ರಾಜರೆಲ್ಲರನ್ನು ಕರೆದೊಯ್ದು ಸಮುದ್ರ ತೀರದಲ್ಲಿ ಶತ್ರುಗಳು ರಾಶಿ ರಾಶಿಯಾಗಿ ಒಗೆದಿದ್ದ ಶಸ್ತ್ರಾಸ್ತ್ರಗಳನ್ನು ತೋರಿಸಿದನು. ಧರ್ಮಯುದ್ಧ ಮಾಡಿ ಮಡಿದ ಶತ್ರು ಸೈನಿಕರು ವಿಮಾನಗಳಿಂದ ಸ್ವರ್ಗಾರೋಹಣ ಮಾಡುತ್ತಿರುವ ದೃಶ್ಯಗಳನ್ನು ತೋರಿಸಿದನು. ನೀಲಮೇಘಗಳಿಂದ ತುಂಬಿದ ಆಕಾಶವನ್ನು ತೋರಿಸಿ, "ಮಹಾರಾಜರೆ, ಆಕಾಶವು ಎಷ್ಟು ಶಾಂತವಾಗಿ ಕಾಣುತ್ತಿದೆ. ಆ ವಿಶಾಲವಾದ ಪ್ರದೇಶವು ಧೂಮ, ಬಿರುಗಾಳಿ, ಧೂಳಿ, ಅಂಧಕಾರ, ಸೂರ್ಯ–ಚಂದ್ರರೇ ಆದಿಯಾಗಿ ಸಮಸ್ತ ಸೌರಮಂಡಲವೇ ಅಲ್ಲಿ ತುಂಬಿಕೊಂಡಿದ್ದರೂ ಅದು ಮಾತ್ರ ನಿರ್ವಿಕಾರವಾಗಿಯೇ ತೋರುತ್ತಿದೆ. ಈ ತ್ರಿಭುವನರೂಪಿಯಾದ ಭುವನವು ಕಾಲ ಕಾಲಕ್ಕೆ ನಡೆಯುವ ಕ್ರಿಯೆಗಳಿಂದ ಸುರಕ್ಷಿತವಾಗಿದೆ. ಹಾಗಿದ್ದರೂ ಆಗಾಗ ಅದರ ವ್ಯವಸ್ಥೆಯಲ್ಲಿ ಅನೇಕ ರೀತಿಗಳಿಂದ ಅವ್ಯವಸ್ಥೆಯು ಉಂಟಾಗುತ್ತಿರುತ್ತದೆ. ಅದರಿಂದ ಅವುಗಳ ನಾಶದ ವ್ಯವಸ್ಥೆಯೂ ಆಗುತ್ತಿರುತ್ತದೆ.

ಸಮಸ್ತ ಪ್ರಾಣಿಗಳೂ ಪಂಚಭೂತಗಳಲ್ಲಿ ಒಂದಾದ ಆಕಾಶದಲ್ಲಿ ಉತ್ಪನ್ನವಾಗುತ್ತವೆ; ಅಲ್ಲಿಯೇ ಸ್ಥಿರವಾಗಿಯೂ ಇರುತ್ತವೆ,



ಅನಂತರ ಅಲ್ಲಿಯೇ ಲೀನವೂ ಆಗುತ್ತವೆ. ಆದರೆ, ಆಕಾಶವನ್ನು ಶೂನ್ಯವೆಂದೂ ಹೇಳಲಾಗಿದೆ. ಮತ್ತು ಈಶ್ವರನ ಲಕ್ಷಣವನ್ನು ಆಕಾಶದಲ್ಲಿ ಕಾಣುವುದರಿಂದ ಅದು ಈಶ್ವರ ರೂಪವೂ ಆಗಿರುತ್ತದೆ. ಹಗಲು, ಇರುಳುಗಳೆಂಬ ವ್ಯಾಪಾರವು ಈ ಜಗತ್ತಿನಲ್ಲಿ ಆಗುವುದೂ ಆಕಾಶದಲ್ಲಿಯೇ. ಅದು ಅಸೀಮವಾಗಿದ್ದು ಸಮಸ್ತ ವಸ್ತುಗಳ ಧಾರಣೆಯನ್ನು ಮಾಡುವುದು. ಅದು ತ್ರಿಲೋಕಗಳ ಆಧಾರವೆನಿಸಿದೆ. ಆ ಮಹಾಕಾಶವು ಚಿತ್ಸ್ವರೂಪವಾಗಿದೆ; ಅದು ಪರಬ್ರಹ್ಮವೂ ಆಗಿದೆ." ಎಂದು ಆಕಾಶದ ಪರಿಚಯವನ್ನು ಮಾಡಿಕೊಟ್ಟರು.

ಅನಂತರದಲ್ಲಿ ಈ ದೃಶ್ಯ ಜಗತ್ತಿನ ಮತ್ತೊಂದು ಅಂಶವೆಂದು ಪರ್ವತವೊಂದರ ಪರಿಸರದ ವರ್ಣನೆಯನ್ನು ಈ ರೀತಿಯಲ್ಲಿ ಮಾಡಿದರು, "ಮಹಾರಾಜರೆ, ಇಲ್ಲಿ ಸುವೇಲವೆಂಬ ಪರ್ವತವಿರುವುದನ್ನು ನೋಡಿ. ಇದರ ಶಿಖರದಲ್ಲಿ ಒಂದು ಕಾಂತಿಯುಕ್ತವಾಗಿ ಮತ್ತು ನಿರ್ಮಲವಾಗಿರುವ ಶಿಲೆಯಿರುವುದು. ಅದರ ಕಾಂತಿಯು ಸೂರ್ಯಕಿರಣಗಳ ಪ್ರಭೆಯಿಂದ ಶೋಭಿಸುತ್ತಿದೆ. ಅದರ ತಪ್ಪಲಿನಲ್ಲಿರುವ ಗ್ರಾಮಗಳು ಸುಭಿಕ್ಷವಾಗಿದ್ದು ಜನರು ಆನಂದದಿಂದ ತಮ್ಮ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಕಾಲ ಕಾಲಕ್ಕೆ ಮಳೆಯಾಗುವುದರಿಂದ ಪೈರು ಪಚ್ಚೆಗಳು ತಮ್ಮ ತಮ್ಮ ಸಹಜ ಮನೋಧರ್ಮಗಳಿಗೆ ಅನುಗುಣವಾಗಿ ಧೈರ್ಯ, ಪ್ರಾಮಾಣಿಕತೆ ಮುಂತಾದ ಗುಣಗಳೊಂದಿಗೆ ಅನೇಕ ದುರ್ಗುಣಗಳನ್ನೂ ಸಹಜವೂ ಸ್ವಾಭಾವಿಕವೂ ಆದ ರೀತಿಯೇ ಹೊಂದಿರುವುವು."

ಈ ಎಲ್ಲ ವೈವಿಧ್ಯಮಯವಾದ ವರ್ಣನೆಗಳನ್ನು ಕೇಳಿದ ವಿಪಶ್ಚಿತರು ಪಂಚಭೂತಾತ್ಮಕವಾದ ದೃಶ್ಯಜಗತ್ತನ್ನು ವೀಕ್ಷಿಸಬೇಕೆಂದು ಆಶಿಸಿ ಅಗ್ನಿದೇವನನ್ನು ಪ್ರಾರ್ಥಿಸಿ ಸಾಕ್ಷಾತ್ಕಾರಪಡಿಸಿಕೊಂಡರೂ ದೇಹದಿಂದ ಸಂಚರಿಸಲು ಸಾಧ್ಯವಿದ್ದಲ್ಲಿ ದೇಹದಿಂದಲೂ, ಸಾಧ್ಯವಿಲ್ಲದಿದ್ದಲ್ಲಿ ಮಾನಸಿಕವಾಗಿಯೂ ಸಂಚರಿಸುವ ಸಾಮರ್ಥ್ಯವನ್ನು ಅಗ್ನಿದೇವನಿಂದ ಪಡೆದುಕೊಂಡರು.

ಹೀಗೆ ವಿಶೇಷ ಸಾಮರ್ಥ್ಯ ಹೊಂದಿದ ನಾಲ್ಕು ಜನ ವಿಪಶ್ಚಿತ ರಾಜರು ರಾಜ್ಯದ ವ್ಯವಸ್ಥೆಯನ್ನು ಮಂತ್ರಿಗಳಿಗೆ ಒಪ್ಪಿಸಿದರು. 'ಅಗ್ನಿ'ದೇವನ ವರಪ್ರಸಾದದಿಂದ ದೊರೆತ ಮಂತ್ರಶಕ್ತಿಯಿಂದ ಮೊದಲಿಗೆ ಅವರು ಸಮುದ್ರದಲ್ಲಿ ಪ್ರವೇಶ ಮಾಡಿದರು. ಮಹಾಸಾಗರದ ಆ ಜಲರಾಶಿಯಲ್ಲಿ ಪ್ರಯಾಣವನ್ನು ಪ್ರಾರಂಭಿಸಿ ಒಬ್ಬನು ಪಶ್ಚಿಮ ದಿಕ್ಕಿನ ಕೊನೆಯನ್ನು ಕಾಣಬೇಕೆಂದು ಅಪೇಕ್ಷಿಸಿ ಆ ದಿಕ್ಕಿನಲ್ಲಿ ಹೊರಟನು. ಆದರೆ ಅವನನ್ನು ಒಂದು ಬೃಹತ್ ಗಾತ್ರದ ಮತ್ಸ್ಯವು ನುಂಗಿಬಿಟ್ಟಿತು. ಸಮುದ್ರದಲ್ಲಿ ವೇಗವಾಗಿ ಚಲಿಸುತ್ತಲೇ ಇದ್ದ ಆ ಮತ್ಸ್ಯಕ್ಕೆ ರಾಜನನ್ನು ಪಚನ ಮಾಡಿಕೊಳ್ಳುವುದು ಕಠಿಣವೆನಿಸಿ ಕ್ಷೀರಸಾಗರವನ್ನು ತಲಪಿದೊಡನೆಯೇ ಅವನನ್ನು ಉಗುಳಿಬಿಟ್ಟಿತು. ಅವನನ್ನು ಪಕ್ಷಿರಾಜನಾದ ಗರುಡನು ತನ್ನ ಬೆನ್ನಮೇಲೆ ಕುಳ್ಳಿರಿಸಿಕೊಂಡು ಸಮುದ್ರ ದಾಟಿತು. ಮತ್ತೊಬ್ಬ ವಿಪಶ್ಚಿತ ರಾಜನು ದಕ್ಷಿಣ ದಿಕ್ಕಿಗೆ ಹೊರಟಿದ್ದು ಅವನನ್ನು ಒಬ್ಬ ಯಕ್ಷಿಣಿಯು ಮಾರ್ಗದಲ್ಲಿಯೇ ಆಕರ್ಷಿಸಿ ಅನಂತರ ಶಾಪಕ್ಕೆ ಗುರಿಯಾಗಿ ಯಕ್ಷನಾದನು. ನೂರು ವರ್ಷಗಳು ಹಾಗೆಯೇ ಕಳೆದು ಕಡೆಗೆ ಶಾಕ ದ್ವೀಪದಲ್ಲಿ ಅವನಿಗೆ ಶಾಪ ವಿಮೋಚನೆಯಾಯಿತು.

ಪೂರ್ವ ದಿಕ್ಕಿಗೆ ಹೊರಟಿದ್ದ ವಿಪಶ್ಚಿತನನ್ನು ಒಂದು ಮೊಸಳೆಯು ನುಂಗುವ ಪ್ರಯತ್ನವನ್ನು ಮಾಡಿತು. ಆದರೆ ಪರಾಕ್ರಮಿಯಾದ ರಾಜನು ಅದನ್ನು ತನ್ನ ಕತ್ತಿಯಿಂದ ಸೀಳಿ ಕೊಂದುಹಾಕಿದನು. ಅನಂತರ ಗಂಗಾದೇವಿಯು ಅವನನ್ನು ಕರೆದೊಯ್ದು ಕಾನ್ಯ ಕುಬ್ಜದ ಬಳಿಯಲ್ಲಿ ಬಿಟ್ಟಳು. ರಾಜನು ಕಾನ್ಯ ಕುಬ್ಜದೇಶವನ್ನು ಪ್ರವೇಶಿಸಿ ಅಲ್ಲಿನ ಕ್ರೌಂಚ ದ್ವೀಪದ ಒಂದು ಪರ್ವತ ಪ್ರದೇಶದ ಬಳಿಗೆ ಹೋದಾಗ ಅಲ್ಲಿ ಅವನನ್ನು ಒಬ್ಬ ರಾಕ್ಷಸನು ನುಂಗಿ ಹಾಕಿದನು. ಆದರೆ ಶೂರನಾದ ರಾಜನು ಆ ರಾಕ್ಷಸನ ಕರುಳನ್ನು ಕತ್ತರಿಸಿ ಹೊರಬಂದನು.

ಉತ್ತರ ದಿಕ್ಕಿಗೆ ಹೊರಟಿದ್ದ ವಿಪಶ್ಚಿತನು ಕುರುದೇಶಕ್ಕೆ ಹೋಗಿ, ಉಮಾಪರಮೇಶ್ವರನ ಆರಾಧನೆಯನ್ನು ಮಾಡಿ ಅಣಿಮಾದಿ ಸಿದ್ಧಿಗಳನ್ನು ಪ್ರಾಪ್ತ ಮಾಡಿಕೊಂಡನು. ಅನೇಕ ನದಿ-ಕಾಲುವೆಗಳನ್ನು ದಾಟುತ್ತ, ಸಮುದ್ರಯಾನ ಮಾಡುತ್ತ ಬಂದು ಪುಣ್ಯಭೂಮಿಯನ್ನು ತಲಪಿದನು. ಆದರೆ ಅಲ್ಲಿ ಸಿದ್ಧರ ಶಾಪಕ್ಕೆ ಗುರಿಯಾಗಿ ಶಿಲೆಯಾದರೂ ನೂರು ವರ್ಷಗಳಾದ ಬಳಿಕ ಅಗ್ನಿಯು ಅನುಗ್ರಹದಿಂದ ಶಾಪಮುಕ್ತನಾದನು.

(ಮುಂದುವರಿಯುವುದು)

ನಂ. ೨೫೧, ೧೨ನೇ 'ಬಿ' ಕ್ರಾಸ್, ೧ನೇ 'ಬಿ' ಮುಖ್ಯರಸ್ತೆ,
ಮಹಾಲಕ್ಷ್ಮಿಪುರಂ, ಬೆಂಗಳೂರು-೫೬೦ ೦೮೬.

**ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ | ಆಯ್ದ ಕಥೆಗಳು**

# ಜೀವನ ಶ್ರದ್ಧೆ





ಮಿಹಿರ್‌ಸೇನರ ಹೆಸರು ಜಗತ್ಪ್ರಸಿದ್ಧ. ಅವರು ವೃತ್ತಿಯಿಂದ ಕಲಕತ್ತಾದ ಹಿರಿಯ ವಕೀಲರು. ಪ್ರವೃತ್ತಿಯಿಂದ ಸಾಗರದ ಈಜುಗಾರರು. ಅವರು ಜಗತ್ತಿನ ಶ್ರೇಷ್ಠ ಕಡಲುಗಾಲುವೆಗಳನ್ನೆಲ್ಲ ಈಜಿದರು. ಸಾಗರದಲ್ಲಿ ಭಯಂಕರ ಜಲಚರ ಪ್ರಾಣಿಗಳು. ಪರ್ವತ ಗಾತ್ರದ ತೆರೆಗಳು. ಅಂಥ ಸಾಗರವನ್ನು ನಗು ನಗುತ್ತಲೇ ಈಜಿ ಇಷ್ಟೆಲ್ಲ ಸಾಹಸ ಮಾಡಿದರು. ಅವರು ತಮ್ಮ ಸಾಧನೆಯನ್ನು ಕುರಿತು ಒಂದು ಮಾತು ಹೇಳಿರುವರು. "ನನಗೆ ಎರಡು ಸಂಗತಿಗಳಲ್ಲಿ ಅಪಾರ ವಿಶ್ವಾಸ: 1) ಎಂದೂ ಸೋಲದ ನನ್ನ ಬಾಹುಗಳ ಸಾಮರ್ಥ್ಯದ ಮೇಲೆ 2) ಸಾಗರದಲ್ಲಿರುವ ಪ್ರಾಣಿಗಳ ಪ್ರಾಮಾಣಿಕತೆಯ ಮೇಲೆ. ಅವು ಎಂದೂ ನನ್ನನ್ನು ಮುಟ್ಟಲಿಲ್ಲ. ಏಕೆಂದರೆ ಅವು ನನಗೆ ವಿರೋಧಿಯಲ್ಲ. ಅವುಗಳಿಗೆ ನಾನು ವಿರೋಧಿಯಲ್ಲ. ಜಲಚರ ಪ್ರಾಣಿಗಳ ಮೇಲೆ ವಿಶ್ವಾಸವನ್ನಿಟ್ಟು ಮಿಹಿರ್‌ಸೇನರು ಸಾಗರಗಳನ್ನೇ ಈಜಿದರು. ನಾವಾದರೂ ನಮ್ಮ ನೆರೆಹೊರೆಯ ಜನಾಂಗದಲ್ಲಿ ವಿಶ್ವಾಸವನ್ನಿಟ್ಟರೆ ಈ ಸಂಸಾರ ಸಾಗರ ಸುಲಭವಾಗಿ ದಾಟುವೆವು! ಇದು ಜೀವನ ಶ್ರದ್ಧೆ! ●

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ

# ಬ್ರಹ್ಮಜ್ಞಾನ

ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿಗಳಾದ ಶ್ರೀ ಹೆಚ್.ವಿ. ಶ್ರೀನಿವಾಸ ಅವರ ಕಾವ್ಯನಾಮವೇ ಸಾಯಿಬಿಂದು. ಪ್ರಗತಿಪರ ಅಧ್ಯಾತ್ಮ ಚಿಂತಕರೂ ಉಪನ್ಯಾಸಕರೂ ಆಡಳಿತ, ತತ್ತ್ವಜ್ಞಾನ,



ಧ್ಯಾನ, ವ್ಯಕ್ತಿತ್ವ ವಿಕಸನ, ಬ್ಯಾಂಕಿಂಗ್ ಮುಂತಾದ ಗಂಭೀರ ವಿಷಯಗಳನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಯಿ ಎಂದರೆ ಸಾಗರ. ಬಿಂದು ಎಂದರೆ ಹನಿ. ಸಾಯಿ ಎಂಬ ಸಾಗರದಲ್ಲಿ ತಾನು ಒಂದು ಹನಿ ಎಂದು ತಮ್ಮ ಕಾವ್ಯನಾಮದ ಬಗ್ಗೆ ವಿವರಣೆ ನೀಡುತ್ತಾರೆ. 'ವ್ಯಕ್ತಿತ್ವ ವಿಕಸನ ಲೇಖನ ಮಾಲೆ'ಯಲ್ಲಿ ಅವರ ಚಿಂತನೆಗಳನ್ನು ಕಾಣುವಿರಿ.

ಇದೊಂದು ಚಿಂತನೆ. ಪಂಚೇಂದ್ರಿಯಗಳು ಅಂದರೆ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವುಗಳ ಮೂಲಕವೇ ಎಲ್ಲ ಹೊರಗಿನ ಜ್ಞಾನವನ್ನು ನಾವು ಗ್ರಹಿಸುವುದು, ಪಡೆಯುವುದು. ಹಾಗಾಗಿ ತಿಳಿಯುವುದಕ್ಕೆ, ತಿಳಿಯುವವನು ಅಥವಾ ಗ್ರಹಿಸುವವನು ಎಂದು ಒಬ್ಬನು ಬೇಕು. ಗ್ರಹಿಕೆ ಅಥವಾ ಗ್ರಹಿಸುವವನು ಇರಲಿ ಅಥವಾ ಇಲ್ಲದಿರಲಿ, ಜ್ಞಾನವೆಂಬುದು ಮಾತ್ರ ನಿರಂತರವಾಗಿ ಅಸ್ತಿತ್ವದಲ್ಲಿ ಇರುತ್ತದೆ. ಜ್ಞಾನವು ತನ್ನ ಇರುವಿಕೆಗೆ ಯಾರನ್ನೂ ಅವಲಂಬಿಸಿಲ್ಲ. ಅಸ್ತಿತ್ವವು ಸದಾ ಇರುತ್ತದೆ. ಆ ಅಖಂಡತೆಯಲ್ಲಿ ಮಿಂಚಿ ಹಾದುಹೋಗುವ ಎಲ್ಲ ದೈವಾಂಶ ಸಂಭೂತರೂ ಮಹಾಪುರುಷರೂ ಒಂದು ರೀತಿಯ ಗುರುಗಳೇ. ಅಲೆಗಳಲ್ಲಿ ದೊಡ್ಡದಾದರೇನು? ಅಥವಾ ಸಣ್ಣದಾದರೇನು? ಆದರೂ ಪ್ರತ್ಯೇಕಗಳಲ್ಲಿ ವ್ಯಕ್ತಿಗಳೂ, ಅವರ ಹೇಳುವಿಕೆ, ಕೇಳುವಿಕೆ, ತಿಳಿಯುವಿಕೆ ಈ ಎಲ್ಲವೂ ನಡೆದೇ ಇರುತ್ತವೆ. ಈ ಎಲ್ಲವನ್ನೂ ಮೀರಿ, ತಾನೇ ತಾನಾಗಿ ಏಕತ್ವದಲ್ಲಿ ಇರುವುದೇ ಪರಮ ಸತ್ಯ.

ಗ್ರಹಿಸುವವನಾಗಲಿ, ಗ್ರಹಿಸಿದ್ದು ಎನ್ನುವುದಾಗಲಿ ಎಲ್ಲವೂ ಒಂದು ರೀತಿಯಲ್ಲಿ ಗೌಣ. ಅವು ಪೂರ್ವ ಸಾಧನೆಯಷ್ಟೆ. ನಮಗೆ ಗೊತ್ತಿರುವುದು ಕೇವಲ ಹಿಡಿಯಷ್ಟು ಮಾತ್ರ. ಆದರೆ ನಮಗೆ ಗೊತ್ತಿಲ್ಲದಿರುವುದು ನಿಜಕ್ಕೂ ಆಕಾಶದಷ್ಟು. ಜೀವಿಯು, ತನ್ನೊಳಗೆ ಗ್ರಹಿಸುವವನು ಎಂಬ ಅಂಶ ಅಥವಾ ಗ್ರಹಿಕೆ ಎಂಬ ಪ್ರಕ್ರಿಯೆ ಇಲ್ಲದೆಯೇ ತಾನು ಅರಿಯಬಹುದು. ಗ್ರಹಿಸುವವನಿಗೆ, ಗ್ರಹಿಕೆಗಳಿಗೆ, ಆಧಾರವೆಂದರೆ ಈ ದೇಹ, ಮನಸ್ಸು, ಬುದ್ಧಿಗಳು. ಈ ಶರೀರಗಳು ಇತಿಮಿತಿಗಳಿಗೆ ಒಳಪಟ್ಟವು. ಇವುಗಳಿಂದ ಆಚೆಯಲ್ಲಿ ಪರಮ ಸತ್ಯವಿದೆ. ಅದು ಅಖಂಡ ಪ್ರಜ್ಞೆ.

ಮನಸ್ಸು ಎಂಬುದು ನಿಜಕ್ಕೂ ಮಲಿನತೆ. ಅದೊಂದು ಪ್ರತ್ಯೇಕತೆ. ಅದೊಂದು ಸುಳ್ಳಿನ ಕಂತೆ. ಪ್ರಜ್ಞೆ ಎಂಬುದು ನಿರ್ಮಾಲ್ಯ, ಸಮಗ್ರತೆ, ಅಖಂಡತೆ. ಪ್ರಜ್ಞೆಯು ಅಂತರಂಗದಲ್ಲಿ ಅರಿವಿನ ಕೇಂದ್ರವಾಗಿದೆ. ಆದರೆ ಅದನ್ನು ಮುಚ್ಚಿರುವುದು ಅಜ್ಞಾನದ ಮುಸುಕು. ಆ ಮುಸುಕನ್ನು ಹೋಗಲಾಡಿಸಬೇಕಾದರೆ ಜೀವಿಯು ಪಂಚೇಂದ್ರಿಯಗಳಿಂದ ವಿಮುಖವಾಗಿ, ಒಳಮುಖವಾಗಬೇಕು. ಆ ಅಖಂಡ ಅರಿವನ್ನು, ಆ ಪರಮ ಸತ್ಯವನ್ನು, ಆ ಪರಮಾಧಾರವನ್ನು ಸ್ಪರ್ಶಿಸಿ ಅದರಲ್ಲಿ ಮಿಂದಾಗ, ಜೀವಿಯು ತಾನಿರುವುದಿಲ್ಲ. ಅವನ ಇರುವಿಕೆಯು ಒಂದು ತೋರಿಕೆಯಷ್ಟೆ. ಅಲ್ಲಿ ದೇಹಭಾವವಿರುವುದಿಲ್ಲ. ಅಲ್ಲಿರುವುದು ದೈವಭಾವ ಮಾತ್ರ. ಅಂತಹ ಸ್ಥಿತಿಗೆ ಪಂಚೇಂದ್ರಿಯಗಳ ಅಗತ್ಯವಿರುವುದಿಲ್ಲ. ಆದರೆ, ಅಖಂಡದ ಅರಿವು ತಾನೇ ತಾನಾಗಿರುತ್ತದೆ. ಅಲ್ಲಿ, ನಾನು....ನೀನು, ಅವನು–ಇವನು, ಅದು–ಇದು ಎಂಬ ಯಾವ ಭೇದಗಳೂ ಇರುವುದಿಲ್ಲ. ಆ ಉಪಸ್ಥಿತಿಯನ್ನು ತಿಳಿಸಲು ಯಾವ ಭಾಷೆಯೂ ಇಲ್ಲ; ಯಾವ ಲೆಕ್ಕಾಚಾರವೂ ಇಲ್ಲ.

ಸತ್ಯವನ್ನು ಅಥವಾ ತತ್ತ್ವವನ್ನು ಮೊದಲಿಗೆ ತಿಳಿಯಬೇಕು. ಇದರಲ್ಲಿ ಬುದ್ಧಿಯ ಪಾತ್ರವೂ ಇರಬಹುದು. ಮೊದಲು ತಿಳಿಯುವಂತಹ ಕೆಲಸವಾದರೆ, ಸಮರದ ಅರ್ಧಭಾಗ ಯಶಸ್ವಿಯಾದಂತೆಯೇ. ಕೇವಲ ತಿಳಿವಳಿಕೆಯೆಂಬುದು ಪೂರ್ಣವಲ್ಲ. ಪೂರ್ಣ ಅರಿವು ಎಂದರೆ ಪೂರ್ಣ ಆನಂದವೇ. ಅಲ್ಲಿ ವ್ಯಕ್ತಿಭಾವ ಇರುವುದಿಲ್ಲ. ಆದರೆ ಅಲ್ಲಿ ಅಸ್ತಿತ್ವಭಾವ ಇರುತ್ತದೆ. ಅಂತಹ ದಿವ್ಯ ಉಪಸ್ಥಿತಿಯು, ಬಹುಶಃ ಬ್ರಹ್ಮಜ್ಞಾನಿಗಳವರದ್ದು ಅಥವಾ ಜೀವನ್ಮುಕ್ತರದ್ದು. ಅಂತಹವರು ಶಾಸ್ತ್ರಗಳಿಗೂ ಅಂಟಿದವರಲ್ಲ; ಅವನ್ನೂ ಮೀರಿದವರು; ಸಹಜದಲ್ಲಿ ಸ್ಥಿತರಾದವರು.

ಒಂದು ಕಲ್ಲು ಇದೆ. ಅದು ಹೇಗಿದ್ದರೇನು? ಪ್ರತ್ಯೇಕವಾಗಿ ಇದ್ದರೇನು? ಸಮಗ್ರವಾಗಿ ಇದ್ದರೇನು? ಒಂದೇ ಒಂದು ಬಂಡೆಯನ್ನು ಕಂಡಾಗ ಅದು ನಮಗೆ ಸಮಗ್ರವಾಗಿ ತೋರುವುದು. ಅದೇ ಬಂಡೆಯು ಚೂರು ಚೂರಾದಾಗ, ಪ್ರತಿ ಚೂರೂ ಸಹ ಬಿಡಿಬಿಡಿಯಾಗಿ ಪ್ರತ್ಯೇಕವಾಗಿ ತೋರುತ್ತದೆ. ಯಾವುದೇ ಆಗಲಿ ಅದು ಒಂದಾಗಿದ್ದರೆ ಅದನ್ನು ನಾವು ಬೇರೆ ಬೇರೆ ಮಾಡಬಹುದು. ಯಾವುದೇ ಆಗಲಿ, ಬೇರೆ ಬೇರೆಯಾಗಿದ್ದರೆ, ಅವನ್ನು ನಾವು ಒಂದಾಗಿಸಬಹುದು. ಆದರೆ ಇರುವಿಕೆ ಎಂಬುದು ನಿಜಕ್ಕೂ ಒಂದಾಗಿಯೂ ಇಲ್ಲ; ಬೇರೆಯಾಗಿಯೂ ಇಲ್ಲ; ತದೇಕವಾಗಿದೆ. ತೋರಿಕೆಯಲ್ಲಿ ಎಲ್ಲವೂ ಬೇರೆಯೇ. ಇರುವಿಕೆಯಲ್ಲಿ ಒಂದೇ.

ಆ ಬಂಡೆಯು ಜಡ ಎಂಬುದು ನಮ್ಮ ಗ್ರಹಿಕೆ, ವಿಶ್ಲೇಷಣೆ. ಆದರೆ ಅದು ಇದೆ. ಹಾಗೆಯೇ ನಾನೂ ಸಹ ಇದ್ದೇನೆ. ನನ್ನನ್ನು ನಾನು ಜಡ ಎಂದು ಹೇಳುವುದಿಲ್ಲ. ನಾನು ಚೇತನವೇ ಇರಬಹುದು. ನಾನು ಒಂದು ವಿಶಿಷ್ಟ ಪ್ರಜ್ಞೆಯೇ ಇರಬಹುದು. ನಾನು ಪ್ರತ್ಯೇಕವಾದರೇನು? ನಾನು ಸಮಗ್ರವಾದರೇನು? ಒಟ್ಟಿನಲ್ಲಿ, ನನ್ನನ್ನೂ ಸೇರಿ, ಇರುವಿಕೆ ಇದೆ. ಆ ಇರುವಿಕೆಯಲ್ಲೇ ಈಗಿರುವ, ಈ ರೂಪದ, ಈ ಕ್ಷಣದ ನಾನು. ಆ 'ನಾನು' ಸಮಗ್ರ ಎಂಬುದನ್ನು ಅರಿಯಬೇಕು. ಅದಕ್ಕಿರುವ ಒಂದೇ ತಂತ್ರವೆಂದರೆ ಸುಮ್ಮನಿರುವ ಕಲೆ. ಅದೇ ಧ್ಯಾನ. ಅದೇ ಮೌನ.

ನೋವು, ಸಂಕಟ, ಸಮಸ್ಯೆಗಳು ಒದಗುವುದು ಈ ಪ್ರತ್ಯೇಕ ಭಾವಕ್ಕೆ ಮಾತ್ರ. ಸಮಗ್ರದಲ್ಲಿ ಯಾವುದೀ ಇಲ್ಲ. ನಮ್ಮ ಅಜ್ಞಾನದ ತಿಳಿವಿನಲ್ಲಿ ಒಂದು ಕಡೆಯಿಂದ 'ನಾನು' ಎಂಬುದಾಗಿ ಪ್ರತ್ಯೇಕಿಸಿಕೊಂಡಿದ್ದೇನೆ. ಇನ್ನೊಂದು ಕಡೆಯಲ್ಲಿ ಆ ಸಮಗ್ರವನ್ನೂ ಸಹ ಪ್ರತ್ಯೇಕಿಸಿ, ಅದನ್ನು ವಸ್ತುಪ್ರಜ್ಞೆಯಲ್ಲಿ ಬೇರೆಯಾಗಿ ನೋಡುತ್ತೇನೆ. ಸಮಗ್ರವು ನನ್ನನ್ನೂ ಒಳಗೊಂಡು, ತನಗೇ ತಾನೇ ತಾನಾಗಿದೆ; ಅಭೇದವಾಗಿದೆ. ಅದಕ್ಕೆ ಇದು ಸುಂದರ, ಇದು ಕುರೂಪ, ಇದು ರೌದ್ರ, ಇದು ಶಾಂತ, ಇದು ಸಮರ ಎಂಬುದಿಲ್ಲ. ಸೃಷ್ಟಿ, ಸ್ಥಿತಿ, ಲಯ ಎಂಬ ಭಾವಲೇಪಗಳು ಸಮಗ್ರಕ್ಕೆ ಇಲ್ಲ. ಭಾರತದ ಉತ್ತರ ಖಂಡದಲ್ಲಿ ನಡೆದ ಇತ್ತೀಚಿನ ಘಟನೆಗಳೇ ಇದಕ್ಕೆ ಉದಾಹರಣೆ. ಎಲ್ಲವೂ ಸಮಗ್ರದ ಆಟವೇ, ಆನಂದ ಸಾಮ್ರಾಜ್ಯವೇ.

ಆಹಾ...ಎಂತಹ ಅದ್ಭುತ...ಅರ್ಥವಾಯಿತು. ಹೌದು, ಹಾಗೆ ಅನಿಸಿದೆ. ಆದರೆ, ಆ ಅದನ್ನು ಹೇಳುವುದು ಹೇಗೆ?....ಹೇಳಲು ಸಾಧ್ಯವಿಲ್ಲ. ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಶಾಸ್ತ್ರಗಳು, ಮಹಾಪುರುಷರು, ಹೇಳುತ್ತ, ಹೇಳುತ್ತ, ನಮ್ಮಂತಹ ಜೀವಿಗಳನ್ನು ಉತ್ತುಂಗ ಪ್ರಜ್ಞೆಗೇ ತಲಪಿಸಬಹುದು. ಆದರೆ ಅಂತಿಮವನ್ನು ಹೇಳಲು ಅವರಿಂದಲೂ ಸಾಧ್ಯವಿಲ್ಲ. ಅದು ಅನುಭೂತಿ. ಅದನ್ನು ಜೀವಿಯು ತಾನೇ ಅರಿಯಬೇಕು. ಅದು ಘಟಿಸುವುದು ಸಮಗ್ರಭಾವದಲ್ಲಿ ಮಾತ್ರ. ಅಲ್ಲಿ ಅರಿವಿದೆ, ಆದರೆ ತಾನಿಲ್ಲ. ಅಲ್ಲಿ ಅವನು ನಿರಾಧಾರಿ. ಅವನಿಗೆ ಯಾವುದರ ಸೋಂಕೂ ಇಲ್ಲ, ಶಂಕೆಯೂ ಇಲ್ಲ. ಅಲ್ಲಿ ಪೂರ್ಣತೆ ಇದೆ.

ಪ್ರೀತಿಸಿ....ಪ್ರಾರ್ಥಿಸಿ...ಧ್ಯಾನಿಸಿ...ಧನ್ಯರಾಗಿ

(ಮುಂದುವರಿಯುವುದು)

'ಮೈತ್ರೇಯಿ' ೧೪೯೮, ೭ನೇ ಮುಖ್ಯರಸ್ತೆ, 'ಇ' ವಿಭಾಗ, ೨ನೇ ಹಂತ,
ರಾಜಾಜಿನಗರ (ಸುಬ್ರಮಣ್ಯನಗರ) ಬೆಂಗಳೂರು–೫೬೦ ೦೧೦.



ಮಹಾಭಾರತದಲ್ಲಿ ಅನೇಕ ನೀತಿಬೋಧಕ ಕಥೆಗಳು ಇವೆ. ಬೆಂಗಳೂರು ಗಿರಿನಗರದ ಮಹಾಭಾರತ ಸಂಶೋಧನ ಪ್ರತಿಷ್ಠಾನ ಎಂಬ ಸಂಸ್ಥೆ ಪ್ರಕಟಿಸಿರುವ 'ಮಹಾಭಾರತದ ನೂರು ಕಥೆಗಳು' ಪುಸ್ತಕದಿಂದ ಈ ಉಪಾಖ್ಯಾನವನ್ನು ಆಯ್ಕೆ ಮಾಡಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತಿದೆ. (ಸಂಪಾದಕರು: ಡಾ. ಎಸ್.ಆರ್. ಲೀಲಾ, ಸಂಗ್ರಾಹಕರು: ಡಾ. ಟಿ. ರಮಾಮಣಿ ಮತ್ತು ವಿದ್ವಾನ್ ಸಿ.ಜಿ. ವಿಜಯಸಿಂಹ)

# ಕುಂಡಧಾರನ ಕರುಣೆ

ಯುಧಿಷ್ಠಿರನು ಭೀಷ್ಮ ಪಿತಾಮಹರನ್ನು ಪ್ರಶ್ನಿಸಿ ಅನೇಕ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದ ಸಂದರ್ಭದಲ್ಲಿಯೇ ಹೀಗೊಂದು ಪ್ರಶ್ನೆಯನ್ನು ಕೇಳಿದನು.

**ಧರ್ಮಮರ್ಥಂ ಚ ಕಾಮಂ ಚ ವೇದಾಃ ಶಂಸಂತಿ ಭಾರತ ।**
**ಕಸ್ಯ ಲಾಭೋ ವಿಶಿಷ್ಟೋsತ್ರ ತನ್ಮೇ ಬ್ರೂಹಿ ಪಿತಾಮಹ ॥**

ಧರ್ಮಾರ್ಥಕಾಮಗಳು ವೇದಗಳಿಂದ ಪ್ರತಿಪಾದಿಸಲ್ಪಟ್ಟಿವೆ. ಈ ಮೂರರಲ್ಲಿ ಯಾವುದರಿಂದ ವಿಶೇಷ ಲಾಭವೆಂಬುದನ್ನು ನನಗೆ ತಿಳಿಸಿ ಎಂದು ಕೇಳಿದಾಗ ಭೀಷ್ಮರು ಹೇಳಿದ ಉಪಾಖ್ಯಾನವಿದು.

ಬಹಳ ಹಿಂದೆ ಬಡವನಾದ ಬ್ರಾಹ್ಮಣನೊಬ್ಬನು ಅರ್ಥಕಾಮಗಳಲ್ಲಿಯೇ ಆಸಕ್ತನಾಗಿದ್ದನು. ಸದಾ ಹಣ ಸಂಪಾದನೆಯಲ್ಲೇ ಅವನಿಗೆ ದೃಷ್ಟಿ. ಎಷ್ಟು ಕಷ್ಟಪಟ್ಟರೂ ಹಣ ಸಂಪಾದನೆಯಲ್ಲಿ ನಿಷ್ಫಲನಾಗಿದ್ದನು. ಕೊನೆಗೆ ಬೇಸತ್ತು, "ಯಾವ ದೇವತೆಯನ್ನು ನಾನು ಪೂಜಿಸಲಿ? ನನ್ನನ್ನು ಅನುಗ್ರಹಿಸುವ ದೇವತೆ ಯಾರು." ಎಂದು ಗೋಳಾಡುತ್ತಿರುವಾಗ ಅವನ ಸಮೀಪದಲ್ಲಿ, ಕುಂಡಧಾರನೆಂಬ ಹೆಸರಿನ ದೇವತೆಗಳ ಅನುಚರನಾದ ಮೇಘಪುರುಷನು ಕಂಡನು. ಅವನ ಮೇಲೆ ಈ ಬ್ರಾಹ್ಮಣನಿಗೆ ಭಕ್ತಿ ಹುಟ್ಟಿತು. ಇವನು ನನಗೆ ಧನಪ್ರಾಪ್ತಿಯನ್ನುಂಟು ಮಾಡಬಹುದೆಂದು ಭಾವಿಸಿ, ಅವನನ್ನು ಪೂಜಿಸಿ, ಗಂಧ, ಪುಷ್ಪ, ಮಾಲೆ, ಧೂಪಾದಿಗಳನ್ನರ್ಪಿಸಿ ತೃಪ್ತಿಪಡಿಸಿದನು.

ತೃಪ್ತನಾದ ಕುಂಡಧಾರನು ಇವನಿಗೇನಾದರೂ ಮಂಗಲವನ್ನುಂಟುಮಾಡಬೇಕೆಂದು ಬಯಸಿದನು. ಅಂದು ಬ್ರಾಹ್ಮಣನು ನಿದ್ರಿಸಿದ್ದಾಗ ಕುಂಡಧಾರನ ತೇಜಸ್ಸು ಅವನಲ್ಲಿ ಪ್ರವೇಶಿಸಿತು. ಅದರ ಬಲದಿಂದ ಅವನಿಗೆ ಅನೇಕ ದರ್ಶನಗಳಾದವು.

ದೇವತೆಗಳು ಸತ್ಕಾರ್ಯವನ್ನು ಮಾಡಿದ ಜನರಿಗೆ ರಾಜ್ಯಧನಾದಿಗಳನ್ನು ಕೊಡುತ್ತಿದ್ದರು. ಹಾಗೆಯೇ ದುರ್ಜನರಿಂದ ರಾಜ್ಯ, ಧನಾದಿಗಳನ್ನು ಕಿತ್ತುಕೊಳ್ಳುತ್ತಿದ್ದುದನ್ನೂ ಕಂಡನು. ಆಗ ಕುಂಡಧಾರನು ಬಂದು ದೇವತೆಗಳಿಗೆ ನಮಸ್ಕರಿಸಿದನು. ದೇವತೆಗಳು "ಕುಂಡಧಾರ! ನಿನ್ನ ಕೋರಿಕೆಯೇನು?" ಎಂದು ಕೇಳಲು ಕುಂಡಧಾರನು ಮಧ್ಯಮಪುರುಷಾರ್ಥಗಳೆರಡರಲ್ಲಿಯೇ ಆಸಕ್ತನಾದ ಬಡಬ್ರಾಹ್ಮಣನನ್ನು ತೋರಿಸಿ, "ದೇವತೆಗಳೆ, ಇವನಿಗಾಗಿ ನಾನು ಧನವನ್ನು ಯಾಚಿಸಲಾರೆ. ಇವನ ಬುದ್ಧಿಯು ಸದಾ ಧರ್ಮದಲ್ಲಿ ನೆಲೆಸಿರುವಂತೆ ಅನುಗ್ರಹಿಸಿ" ಎಂದು ಬೇಡಿದನು. ದೇವತೆಗಳು ಕುಂಡಧಾರನ ಪ್ರಾರ್ಥನೆಯನ್ನೊಪ್ಪಿ ಅನುಗ್ರಹಿಸಿದರು.

ಎಚ್ಚರವಾದಾಗ ಬಡಬ್ರಾಹ್ಮಣನು ಆಶ್ಚರ್ಯಗೊಂಡನು. ಕುಂಡಧಾರನು ತನಗಾಗಿ ಧನವನ್ನು ಬೇಡಲಿಲ್ಲವೆಂಬ ವೇದನೆಯು ಅವನಿಗಿತ್ತು. ವಿರಕ್ತನಾಗಿ ನೇರವಾಗಿ ಕಾಡಿಗೆ ನಡೆದು ಧ್ಯಾನದಲ್ಲಿ ತೊಡಗಿದನು. ಹಣ್ಣು, ಗೆಡ್ಡೆ, ಗೆಣಸನ್ನು ಆಹಾರವಾಗಿ ತೆಗೆದುಕೊಳ್ಳುತ್ತಿದ್ದನು. ದೇವತೆಗಳಿಗೆ, ಅತಿಥಿಗಳಿಗೆ ಕೊಟ್ಟು ಮಿಕ್ಕಿದ್ದನ್ನು ತಾನು ಸ್ವೀಕರಿಸುತ್ತಿದ್ದನು. ಕ್ರಮೇಣ ಅವನಿಗೆ ಧರ್ಮದಲ್ಲಿಯೇ ಬುದ್ಧಿಯು ದೃಢವಾಗುತ್ತಾ ಬಂದಿತು. ಒಮ್ಮೆ ಸಮಯವನ್ನು ವ್ಯರ್ಥಮಾಡಲೆಣಿಸದೆ ಬರೀ ಎಲೆಗಳನ್ನು ತಿಂದು ಧ್ಯಾನನಿರತನಾಗಿದ್ದನು. ಅನಂತರ ಅದನ್ನೂ ಬಿಟ್ಟು ಬರೀ ನೀರನ್ನೇ ಸೇವಿಸುತ್ತಿದ್ದನು. ಅನಂತರ ಬರೀ ವಾಯುಭಕ್ಷಕನಾಗಿದ್ದನು. ಹೀಗೆ ಹಲವು ಸಂವತ್ಸರಗಳು ಕಳೆದ ಅನಂತರ ಅವನಿಗೆ ದಿವ್ಯದೃಷ್ಟಿಯುಂಟಾಯಿತು. ಅವನು ಸಂತೋಷಗೊಂಡು ನುಡಿದ ನುಡಿಗಳೆಲ್ಲ ಸತ್ಯವಾಗತೊಡಗಿದವು. ತನ್ನ ಬಗ್ಗೆ ತನಗೇ ಆಶ್ಚರ್ಯವುಂಟಾಯಿತು. ಮತ್ತೂ ತಪಸ್ಸಿನಲ್ಲಿ ನಿರತನಾದಾಗ ಸಂಕಲ್ಪ ಮಾತ್ರದಿಂದ ಸೃಷ್ಟಿ ಮಾಡುವ ಶಕ್ತಿಯೂ ತನಗೊದಗಿದೆಯೆಂದರಿತನು. ಹೀಗೆ ತನ್ನ ಅಪೂರ್ವ ಶಕ್ತಿಗಳ ಬಗ್ಗೆ ಚಿಂತಿಸುತ್ತಿರುವಾಗಲೇ ಕುಂಡಧಾರನು ಅವನ ಮುಂದೆ ಕಾಣಿಸಿಕೊಂಡನು.

ಕುಂಡಧಾರನು ಹೇಳಿದನು, "ಅಯ್ಯಾ, ನಿನಗೀಗ ದಿವ್ಯದೃಷ್ಟಿಯು ಬಂದಿದೆ. ಅದರಿಂದ ಧನವುಳ್ಳ ರಾಜರು ಮುಂತಾದವರ ಗತಿಯೇನೆಂದು ನೋಡಿ ತಿಳಿದುಕೊ."

ಬ್ರಾಹ್ಮಣನು ಹಾಗೆಯೇ ಮಾಡಿದನು. ಹಣದ ಆಸೆಗೆ ಶ್ರಮಿಸುತ್ತಿದ್ದ ಅನೇಕ ರಾಜರು ನರಕದಲ್ಲಿದ್ದುದನ್ನು ಕಂಡನು.

ಪುನಃ ಕುಂಡಧಾರನು ಹೇಳಿದನು, "ನೋಡು! ಹಣದ ಹಿಂದೆ ಬಿದ್ದವರ ಪಾಡನ್ನು! ನಿನಗಾಗಿ ನಾನು ದೇವತೆಗಳ ಬಳಿ ಧನವನ್ನೇ ಬೇಡಿದ್ದರೆ, ಇವರಂತೆಯೇ ನೀನೂ ಪತಿತನಾಗುತ್ತಿದ್ದೆ. ನೀನು ನನಗೆ ತೋರಿದ ಭಕ್ತಿಗೆ ಪ್ರತಿಫಲವಾಗಿ ದುಃಖಕಾರಣವಾದ ಅರ್ಥವನ್ನು ನಿವಾರಿಸಿ ನಿನಗಾಗಿ ಧರ್ಮಬುದ್ಧಿಯನ್ನು ಬೇಡಿದೆ."

"ಅರ್ಥದ ಆಸೆಯೂ ಕಾಮವೇ. ಅವಶ್ಯಕ್ಕಿಂತ ಹೆಚ್ಚಿನದನ್ನು ಆಸೆಪಡುವ ಅತಿಕಾಮಿಗೆ ಸ್ವರ್ಗದ ಬಾಗಿಲು ಮುಚ್ಚಿದಂತೆಯೇ! ಈಗಲೂ ನೀನು ಬಯಸಿದರೆ ರಾಜ್ಯ, ಕೋಶಾದಿಗಳನ್ನು ನಾನು ನೀಡುವೆ."

ಆಗ ಬ್ರಾಹ್ಮಣನು ಹೇಳಿದನು, "ದೇವ! ಅಂದು ನೀನು ನನಗಾಗಿ ಹಣವನ್ನು ಬೇಡದಿದ್ದಾಗ ನನಗೆ ನೋವಾಗಿತ್ತು. ನಿನ್ನ ಸ್ನೇಹವನ್ನು, ದೂರದೃಷ್ಟಿಯನ್ನು ಅರಿಯದೆ ಹೋದೆ. ನನ್ನನ್ನು ಕ್ಷಮಿಸುವೆಯಾ?"

ಕುಂಡಧಾರನು ಬ್ರಾಹ್ಮಣನನ್ನು ಪ್ರೇಮದಿಂದ ಆಲಿಂಗಿಸಿಕೊಂಡನು. ಉತ್ತಮ ಫಲಗಳನ್ನು ಅನುಗ್ರಹಿಸಿದನು. "ಧರ್ಮ ಶ್ರೇಷ್ಠವಾದುದು. ಅದರ ಮೂಲಕ ಪಡೆದ ಅರ್ಥ, ಕಾಮಗಳೂ ಅಷ್ಟೇ ಶ್ರೇಷ್ಠ" ಎಂದು ಭೀಷ್ಮರು ಮುಗಿಸಿದರು. ●

▶▶ 13ನೇ ಪುಟದಿಂದ...

ಖಂಡಿತ ಅನುಗ್ರಹಿಸುತ್ತಾನೆ."

"ಸುತ್ತಮುತ್ತಲ ವಿಶಾಲ ಪ್ರದೇಶದ ಕೃಷಿಗೆ ದೈವಾನುಗ್ರಹ ದೊರೆತು ಈ ಭೂಮಿ ಹೆಚ್ಚು ಫಲವತ್ತಾಗುತ್ತದೆ. ಜನರ ನೀರಿನ ಬವಣೆ ನಿವಾರಣೆಯಾಗಿ ತೊಂಡನೂರು ಸುಖ ಸಂತೋಷ ಸಂಪತ್ತುಗಳ ನೆಲೆಯಾಗುತ್ತದೆ. ಇದಕ್ಕೆ ಯೋಗಾ ನರಸಿಂಹಸ್ವಾಮಿ, ಶ್ರೀಮನ್ನಾರಾಯಣರ ಕೃಪೆ ದೊರೆತು ಮುಂದೆ ಸಹಸ್ರಾರು ವರ್ಷಗಳ ಕಾಲ ಇದು ಜನರಿಗೆ ಅನುಕೂಲ ಮಾಡಿಕೊಡುತ್ತದೆ. ಇದು ಮುಂದೆ ಎಂದೂ ಬತ್ತಿ ಹೋಗುವುದಿಲ್ಲ. ಏಕೆಂದರೆ ಇದರ ನಿರ್ಮಾಪಕರು ಮಾನವರಲ್ಲ. ಸ್ವತಃ ಶ್ರೀಮನ್ನಾರಾಯಣನೇ!"

"ಖಂಡಿತ ಮಹಾಸ್ವಾಮಿ. ಶುದ್ಧ ಹೃದಯದಿಂದ ಪ್ರಪತ್ತಿಯಿಂದ ಪ್ರಾರ್ಥಿಸಿದರೆ ಶ್ರೀಮನ್ನಾರಾಯಣ ಅನುಗ್ರಹಿಸುವ ವರ ಚಿರಸ್ಥಾಯಿಯಾಗಿರುತ್ತದೆ. ನಿಮ್ಮ ಪ್ರಾರ್ಥನೆ ವ್ಯರ್ಥವಾಗುವುದಿಲ್ಲ."

"ಸಂತೋಷ ದಾಶರಥಿ. ಇನ್ನು ಸಂಧ್ಯೆ, ಅರ್ಚನೆಗಳಿಗೆ ತಡವಾಗುತ್ತದೆ. ನಡಿ ಹೋಗೋಣ."

ಇಬ್ಬರೂ ಅಲ್ಲಿಂದ ಯೋಗಾ ನರಸಿಂಹ ಸ್ವಾಮಿ ದೇಗುಲದ ಕಡೆಗೆ ಹೊರಟರು.

ರಾಮಾನುಜರಿಂದ ಮಹಾರಾಜನಿಗೆ ಕರೆ ಹೋಯಿತು.

ಪರ್ಜನ್ಯ ಜಪ-ಹೋಮ, ಅದರಿಂದ ಮಳೆ ಸುರಿದಂದಿನಿಂದ ವಿಷ್ಣುವರ್ಧನನಿಗೆ ರಾಮಾನುಜರಲ್ಲಿ ಎಷ್ಟು ಭಕ್ತಿ ಮೂಡಿತ್ತೆಂದರೆ ಅವರಿಂದ ಕರೆ ಬಂದರೆ ತರಾತುರಿಯಿಂದ ಮರುಕ್ಷಣವೇ ಅವರ ಮುಂದೆ ಹಾಜರಾಗುತ್ತಿದ್ದ. ಅಂದೂ ಹಾಗೆಯೇ ಅವರ ಮುಂದೆ ಬಂದು ನಿಂತು ಗುರುಗಳಿಗೆ ವಂದಿಸಿ ಅವನಿಗಾಗಿ ಗುರುಗಳು ಸಿದ್ಧಪಡಿಸಿದ್ದ ಆಸನದಲ್ಲಿ ಕುಳಿತ. ಪ್ರಸನ್ನಚಿತ್ತರಾಗಿ ರಾಮಾನುಜರು ಕೇಳಿದರು,

"ಮಹಾರಾಜರೇ ಎಲ್ಲರೂ ಕುಶಲರೇ?"

"ತಮ್ಮ ಅನುಗ್ರಹದಿಂದ ಎಲ್ಲವೂ ಚೆನ್ನಾಗಿವೆ. ವರುಣದೇವ ಕಣ್ಣು ಬಿಟ್ಟಿದ್ದಾನೆ. ಪ್ರಜೆಗಳು ಸುಖಸಂತೋಷಗಳಿಂದಿದ್ದಾರೆ. ರಾಜಕುಮಾರಿ ಎಲ್ಲ ಹೆಣ್ಣುಮಕ್ಕಳಂತೆ ಸಹಜವಾಗಿ ನಡೆದುಕೊಳ್ಳುತ್ತಿದ್ದು ಆಕೆ ಸಂಪೂರ್ಣ ಗುಣಮುಖಳಾಗಿದ್ದಾಳೆಂದು ತಿಳಿಸಲು ಸಂತೋಷವಾಗುತ್ತಿದೆ."

"ಮಹಾರಾಜರೇ, ತಮ್ಮೊಂದಿಗೆ ಇನ್ನೊಂದು ಸಂಗತಿಯನ್ನು ಚರ್ಚಿಸಲು ಉತ್ಸುಕನಿದ್ದೀನಿ."

ಕುತೂಹಲಗೊಂಡ ವಿಷ್ಣುವರ್ಧನ,

"ಮಹಾಸ್ವಾಮಿ ಅದೇನೆಂದು ಕೇಳಬಹುದೇ?"

"ತೊಣ್ಣೂರಿನ ಹೊರವಲಯದಲ್ಲಿ ತಗ್ಗಿನಲ್ಲಿರುವ ಒಂದು ವಿಶಾಲವಾದ ಭೂಪ್ರದೇಶವಿದೆ. ಅದರಲ್ಲಿ ಕಲ್ಲು ಬಂಡೆಗಳೂ ಹಳ್ಳಗಳೂ ಇವೆ. ಸನಿಹದಲ್ಲೇ ಗುಡ್ಡಗಳಿದ್ದು ಅವುಗಳಿಂದ ನೀರಿನ ಝರಿಗಳು ಕೆಳಕ್ಕೆ ಹರಿದುಬರುತ್ತಿವೆ. ಅದನ್ನು ತಾವು ಗಮನಿಸಿದ್ದೀರೇನು?"

"ಅದು ನಮಗೆ ಗಮನಕ್ಕೆ ಬಂದಿಲ್ಲ. ಈ ಕುರಿತು ಸನ್ನಿಧಾನದವರು ಪ್ರಶ್ನಿಸಲು ಕಾರಣ?"

"ನೆನ್ನೆಯ ದಿವಸ ವಾಯುವಿಹಾರಾರ್ಥವಾಗಿ ಅತ್ತ ಕಡೆ ಹೋಗಿದ್ದೆವು. ಈ ಅದ್ಭುತ ಭೂಪ್ರದೇಶವನ್ನು ನೋಡಿ ನಮ್ಮ ಮನಸ್ಸಿಗೆ ಒಂದು ವಿಚಾರ ಹೊಳೆಯಿತು."

"ಅದೇನೆಂದು ನಾವು ತಿಳಿಯಬಹುದೇ?"

"ಅದನ್ನೇ ಹೇಳ ಹೊರಟಿರುವೆ. ಇತ್ತೀಚಿನ ಬರಗಾಲದಲ್ಲಿ ಪ್ರಜೆಗಳು ಪಟ್ಟ ಸಂಕಷ್ಟ ಕುರಿತೇ ಯೋಚಿಸುತ್ತಿದ್ದೆ. ಆಗೊಂದು ವಿಚಾರ ಹೊಳೆಯಿತು. ಅಲ್ಲೊಂದು ಕೆರೆಯನ್ನು ನಿರ್ಮಿಸಿದರೆ ಈ ಪ್ರದೇಶದ ಜನರಿಗೆ, ಅವರ ಕೃಷಿ ಕಾರ್ಯಗಳಿಗೆ ಶಾಶ್ವತವಾಗಿ ಬಹಳ ಅನುಕೂಲವಾಗಬಹುದೆಂದು ನಮಗನ್ನಿಸಿತು."

"ಮಹಾಸ್ವಾಮಿ. ವಿಶಾಲ ಪ್ರದೇಶ ಅನ್ನುತ್ತಿರುವಿರಿ....ಅದೇನು ಸುಲಭ ಸಾಧ್ಯದ ಮಾತೇ?" ವಿಷ್ಣುವರ್ಧನ ಅನುಮಾನಿಸಿದ.

"ಸತ್ಸಂಕಲ್ಪ ಮಾಡಿ ಆರಂಭಿಸೋಣ. ಹೇಗಿದ್ದರೂ ನಮ್ಮ ಬೆನ್ನಿಗೆ ಶ್ರೀಮನ್ನಾರಾಯಣ ಇದ್ದೇ ಇದ್ದಾನಲ್ಲ. ಕಾರ್ಯ ಸುಗಮಗೊಳ್ಳುವುದು ನಿಸ್ಸಂಶಯ."

"ತಮ್ಮ ಅನುಗ್ರಹ ಮಹಾಸ್ವಾಮಿ. ಶುಭ ಮುಹೂರ್ತವನ್ನು ನಿಶ್ಚಯಿಸಿ. ಅಂದಿನಿಂದ ಕಾರ್ಯಾರಂಭ ಮಾಡೋಣ. ಪ್ರಜಾ ಕ್ಷೇಮಕ್ಕಾಗಿ ಯಾವ ಕೆಲಸ ಬೇಕಾದರೂ ಮಾಡಲು ನಾವು ಸದಾ ಸಿದ್ಧ."

ಮಹಾರಾಜರ ಈ ಭೇಟಿಯ ಅನಂತರ ರಾಮಾನುಜರು ಸಮಯ ವ್ಯರ್ಥವಾಗಲು ಬಿಡಲೇ ಇಲ್ಲ. ತಮ್ಮ ಶಿಷ್ಯ ಮಂಡಲಿಯರವರೆಲ್ಲರಿಗೂ ತುರ್ತಾಗಿ ಬರಲು ಕರೆ ಕಳುಹಿಸಿದರು. ಆ ವೇಳೆಗಾಗಲೇ ರಾಮಾನುಜರ ಪ್ರಮುಖ ಶಿಷ್ಯರ ಸಂಖ್ಯೆ ಸಾವಿರಾರು ಆಗಿತ್ತು. ಅವರುಗಳೇ ವೈಷ್ಣವ ಮತ ಪ್ರಚಾರ ಕಾರ್ಯದಲ್ಲಿ ತಲ್ಲೀನರಾಗಿದ್ದವರು. ಅವರಲ್ಲದೆ ವೈಷ್ಣವ ದೀಕ್ಷೆ ಸ್ವೀಕರಿಸಿದ ಸಹಸ್ರ ಸಹಸ್ರ ಸಂಖ್ಯೆಯ ವಿವಿಧ ಜಾತಿ, ಮತ, ಪಂಥ, ಸ್ತರಗಳಿಗೆ ಸೇರಿದ ಸಾಮಾನ್ಯರೂ ಇದ್ದರು. ಈ ಶಿಷ್ಯರ ಗೋಷ್ಠಿಗಳನ್ನು ನಡೆಸಿದ ಗುರುಗಳು ಕೆರೆ ನಿರ್ಮಾಣದ ತಮ್ಮ ಉದ್ದೇಶವನ್ನು ವಿವರಿಸಿ ಅವರಲ್ಲಿ ಸ್ಫೂರ್ತಿ ತುಂಬಿದರು. ಈ ಹೊಸ ವಿಚಾರದಿಂದ ರೋಮಾಂಚಿತರಾದ ಶಿಷ್ಯರು ಅಲ್ಲಿಂದ ಹುರುಪಿನೊಂದಿಗೆ ಹಿಂದಿರುಗಿದರು.

ರಾಮಾನುಜರ ಕರೆ ಈ ಹಿಂಬಾಲಕರ ಮೂಲಕ ಹೊಯ್ಸಳ ರಾಜ್ಯದ ಮೂಲೆ ಮೂಲೆಗೂ ಹೋಗಿ ಮುಟ್ಟಿತು. ಎಲ್ಲ ಕಡೆಯಿಂದಲೂ ಜನ ಪ್ರವಾಹವೇ ಹರಿದು ಬರಲಾರಂಭಿಸಿತು. ಅಷ್ಟರಮಟ್ಟಿಗೆ ರಾಮಾನುಜರ ಪ್ರಭಾವ ಹಬ್ಬಿತ್ತು. ಅವರ ಮಾತಿಗೆ ಅಷ್ಟು ಬೆಲೆ ಬಂದಿತ್ತು. ಕೆಲವರು ಗುಂಪು ಮಾಡಿಕೊಂಡು ಎತ್ತಿನ ಬಂಡಿಗಳಲ್ಲಿ ಧಾವಿಸುತ್ತಿದ್ದರೆ ಇನ್ನು ಕೆಲವರು ಪಾದಚಾರಿಗಳಾಗಿಯೇ ಓಡೋಡಿ ಬರುತ್ತಿದ್ದರು. ಎಲ್ಲರ ಗಮ್ಯಸ್ಥಾನ ತೊಣ್ಣೂರಿನ ಬಳಿಯ ವಿಶಾಲವಾದ ತಗ್ಗು ಪ್ರದೇಶ. ಪ್ರತಿಯೊಬ್ಬರ ಕೈಯಲ್ಲೂ ಒಂದಲ್ಲ ಒಂದು ಸಲಕರಣೆ. ಹಾರೆ, ಗುದ್ದಲಿ, ಪಿಕಾಸಿ, ಬಾಂಡ್ಲಿಗಳನ್ನು ಹಿಡಿದುಬರುತ್ತಿದ್ದರು. ಅವರಲ್ಲಿ ಎಲ್ಲ ಜಾತಿಯ ಜನರೂ ಸೇರಿದ್ದರು. ಕೆಲವರು ಉತ್ಸಾಹದ ಭರದಲ್ಲಿ 'ಜೈ ಶ್ರೀಮನ್ನಾರಾಯಣ... ಜೈ ಶ್ರೀಮನ್ನಾರಾಯಣ' ಎಂದು ಕೂಗುತ್ತಿದ್ದರೆ ಇನ್ನು ಕೆಲವರು 'ಭಜ ಯತಿರಾಜಂ.... ಭಜ ಯತಿರಾಜಂ' ಎಂದು ರಾಮಾನುಜರನ್ನು ಸ್ಮರಿಸುತ್ತಿದ್ದರು. ನಿಗದಿತ ವೇಳೆಗೆ ಸರಿಯಾಗಿ ಸಹಸ್ರಾರು ಜನ ಕಾರ್ಯಸನ್ನದ್ಧರಾಗಿ ತೊಣ್ಣೂರಿನಲ್ಲಿ ನೆರೆದರು. ಇನ್ನೂ ಕೆಲವರು ಬಂದು ಸೇರುತ್ತಿದ್ದರು. ಹೀಗೆ ಬಂದವರಿಗೆಲ್ಲ ರಾಮಾನುಜರ ಪಾಕಶಾಲೆಯ ಕಡೆಯಿಂದಲೂ ಮಹಾರಾಜರ ಕಡೆಯಿಂದಲೂ ಶುಚಿ ರುಚಿಯಾದ ಭೋಜನ, ಉಪಾಹಾರಗಳ ವ್ಯವಸ್ಥೆ ಆಗಿತ್ತು. ಅಷ್ಟೇ ಅಲ್ಲದೇ ಸ್ಥಿತಿವಂತರಾದ ಕೆಲವರು ಭಕ್ತರು ಕೆರೆ ನಿರ್ಮಾಣಕ್ಕೆ ಬಂದವರಿಗೆ ತಂತಮ್ಮ ಮನೆಗಳಲ್ಲಿ ವಸತಿ, ಆಹಾರ ಅನುಕೂಲವನ್ನೂ ಮಾಡಿದರು.

ಶ್ರೀಮನ್ಮಹಾರಾಜ ವಿಷ್ಣುವರ್ಧನರು ರಾಮಾನುಜರ ಸೂಚನೆಯಂತೆ ರಾಜ್ಯದ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ

ಪೂಜೆಗಳನ್ನು ಮಾಡುವಂತೆ ಆದೇಶಿಸಿದ್ದರು. ಆ ಪ್ರಕಾರವಾಗಿ ಆಯಾ ದೇವಸ್ಥಾನಗಳ ಪಾರುಪತ್ತೇದಾರರು ಅರ್ಚಕರು ವಿಶೇಷ ಸಿದ್ಧತೆ ನಡೆಸಿ ಕೆರೆಯ ಆರಂಭದ ಮುಹೂರ್ತದಿಂದ ಹಿಡಿದು ಕೆಲಸ ಮುಕ್ತಾಯವಾಯಿತು ಎಂದು ಸಂದೇಶ ಬರುವವರೆಗೆ ಪೂರ್ಣ ಕೈಂಕರ್ಯ ನಡೆಸಲು ವ್ಯವಸ್ಥೆ ಮಾಡಿಕೊಂಡರು. ವಿಷ್ಣು ದೇವಾಲಯಗಳೆಲ್ಲದರಲ್ಲೂ ಹೋಮ, ಹವನ ವಿಷ್ಣು ಸಹಸ್ರನಾಮ ಪಠಣದ ಕಾರ್ಯಕ್ರಮಗಳು ಆರಂಭಗೊಂಡವು. ಪ್ರತಿ ವೈಷ್ಣವ ಗೃಹ ಹಾಗೂ ಬ್ರಾಹ್ಮಣರ ಮನೆಗಳಲ್ಲೂ ಸ್ತ್ರೀಯರು ಗುಂಪು ಗುಂಪಾಗಿ ಬೆಳಗ್ಗೆ ಮತ್ತು ಸಂಜೆ ವಿಷ್ಣು ಸಹಸ್ರನಾಮ ಪಠಣ ಮಾಡಲಾರಂಭಿಸಿದರು.

ಮುಹೂರ್ತಕ್ಕೆ ಬಹು ಮುನ್ನವೇ ರಾಮಾನುಜರು ಆಯ್ಕೆ ಮಾಡಿದ್ದ ವಿಶಾಲ ಭೂ ಪ್ರದೇಶಕ್ಕೆ ತಮ್ಮ ಶಿಷ್ಯ ಮಂಡಲಿ ಜೊತೆ ಬಂದು ತಲಪಿ ಸ್ವತಃ ಪೂರ್ವಸಿದ್ಧತೆಗಳನ್ನು ವಿಶ್ಲೇಷಿಸಿದರು. ಅವರ ಆಗಮನಕ್ಕೆ ಮುನ್ನ ಬಂದಿದ್ದ ದಾಶರಥಿ, ಗೋವಿಂದ, ಆಂಧ್ರಪೂರ್ಣ, ತೊಂಡನೂರು ನಂಬಿ ಮುಂತಾದವರು ಪೂರ್ವಸಿದ್ಧತೆಗಳನ್ನು ನಡೆಸಿದ್ದರು. ಭೂಮಿ ಪೂಜೆಗೆ ಸಕಲ ಪೂಜಾ ಸಾಮಗ್ರಿಗಳು ಸಿದ್ಧವಾಗಿದ್ದವು.

ರಾಮಾನುಜರು ಸ್ಥಳ ತಲಪಿದ ಸ್ವಲ್ಪ ಸಮಯಕ್ಕೇ ಮಹಾರಾಜ ವಿಷ್ಣುವರ್ಧನ ಅಶ್ವಾರೂಢನಾಗಿ ಅಲ್ಲಿಗೆ ಆಗಮಿಸಿದ. ಅವನ ಜೊತೆ ಅವನ ಅತ್ಯಂತ ನಿಷ್ಠಾವಂತ ದಂಡನಾಯಕರಾದ ಗಂಗರಾಜ, ಪುಣಿಸ, ಮರಿಯಾನೆ, ಭರತ ಮುಂತಾದವರೂ ಪ್ರಧಾನಾಮಾತ್ಯನೂ ಬಂದರು.

ತಾವು ಮಾಡುತ್ತಿರುವ ಭೂ ಅಗೆತದ ಕೆಲಸದಿಂದ ನೋವು ಮಾಡುತ್ತಿರುವುದಕ್ಕೆ ಭೂಮಾತೆಯ ಕ್ಷಮೆ ಯಾಚಿಸುವ ಪೂರ್ವ ಪೂಜೆಗಳು ಮುಗಿದು ಮುಹೂರ್ತ ಸಮೀಪಿಸುತ್ತಿದ್ದಂತೆ ವಿಷ್ಣುವರ್ಧನ ರಾಮಾನುಜರ ಸೂಚನೆಯಂತೆ ಅಲ್ಲಿದ್ದ ಸಲಕರಣೆಗಳಿಗೆಲ್ಲ ಪೂಜೆ ಮಾಡಿ, ಅಲಂಕೃತಗೊಂಡಿದ್ದ ಹಾರೆಯಿಂದ ಒಂದು ಏಟು ಕೊಟ್ಟು ನೆಲವನ್ನು ಅಗೆದ ಕೂಡಲೇ 'ಜೈ ಶ್ರೀಮನ್ನಾರಾಯಣ' ಎಂಬ ಉದ್ಘೋಷದೊಂದಿಗೆ ಆಯ್ಕೆಯಾಗಿದ್ದ ಆ ಸಮಸ್ತ ಭೂ ಪ್ರದೇಶದ ಸುತ್ತಲೂ ನೆರೆದಿದ್ದ ಜನರು ಭೂಮಿಯನ್ನು ಅಗೆಯಲು ಆರಂಭಿಸಿದರು.

ಕೆರೆ ನಿರ್ಮಾಣದ ಸಮಾಚಾರ ಹಬ್ಬುತ್ತಿದ್ದಂತೆ ಹೊಸ ಹೊಸ ಗುಂಪುಗಳು ಬರುತ್ತಿದ್ದವು. ಕೆಲಸ ಭರದಿಂದ ಸಾಗಿತು. ಆಯ್ಕೆಯಾದ ಸಮಸ್ತ ಭೂಮಿಯ ಸುತ್ತಲೂ ಕಟ್ಟೆ ಕಟ್ಟಿ ನೀರು ಶೇಖರಣೆಯಾಗಲು ವ್ಯವಸ್ಥೆ. ಒಂದು ಕಡೆ ರಾಮಾನುಜರ ಪ್ರಮುಖ ಶಿಷ್ಯರು ಪರಿವೇಕ್ಷಣೆ ನಡೆಸುತ್ತಿದ್ದರೆ ಇನ್ನೊಂದು ಕಡೆ ಮಹಾರಾಜರ ದಂಡನಾಯಕರು ತಮ್ಮ ಸೈನಿಕರನ್ನು ಕೆಲಸಕ್ಕೆ ಹಚ್ಚಿ ಮೇಲ್ವಿಚಾರಣೆ ನಡೆಸಿದರು.

ಅನಂತರ ರಾಮಾನುಜರ ಸೂಚನೆಯಂತೆ ಪಕ್ಕದ ಗುಡ್ಡಗಳಲ್ಲಿ ಹುಟ್ಟಿ ವ್ಯರ್ಥವಾಗಿ ಹರಿದುಹೋಗುತ್ತಿದ್ದ ನೀರಿನ ಝರಿಗಳನ್ನು ಒಂದೊಂದಾಗಿ ಸೇರಿಸುತ್ತಾ ಬಂದು ಅವು ಸಂಗ್ರಹಗೊಂಡು ಕೆರೆಯ ಪ್ರದೇಶದಲ್ಲಿ ಸೇರುವಂತೆ ಮಾಡಲಾಯಿತು. ಆಣೆಕಟ್ಟು ಕಟ್ಟಲಾಯಿತು. ಇಡೀ ತೊಣ್ಣೂರು ಕೆರೆಯ ಯೋಜನೆ ಮುಕ್ತಾಯಗೊಳ್ಳುವವರೆಗೆ ಯೋಗಾ ನರಸಿಂಹ ದೇವಾಲಯದಲ್ಲಿ ಪುರೋಹಿತರಿಂದ ಚತುರ್ವೇದ ಯಜ್ಞ, ಹೋಮ ಹವನ ಇತ್ಯಾದಿ ಕ್ರಿಯೆಗಳೂ ನಿರಂತರವಾಗಿ ಸಾಗುತ್ತಿದ್ದವು.

**(ಮುಂದುವರಿಯುವುದು)**


ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

## ಚಂದಾ ಪತ್ರಕ

**ನೀವು ಚಂದಾದಾರರಾಗಿ !**
**ನಿಮ್ಮ ಬಂಧು ಮಿತ್ರರನ್ನು**
**ಚಂದಾದಾರರನ್ನಾಗಿ ಮಾಡಿ !**

**ಕೈವಾರ ಶ್ರೀ ಯೋಗಿ ನಾರೇಯಣರ** ವಿಚಾರಗಳಿಂದ ಪ್ರೇರಣೆ ಪಡೆದು, ಭಾರತೀಯ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಕುರಿತು ಅಪೂರ್ವ ಮಾಹಿತಿಯನ್ನು ನೀಡುತ್ತಿರುವ ಜನಪ್ರಿಯ ಮಾಸಪತ್ರಿಕೆ **ಮಲ್ಲಾರ**. ಸುಲಭ ಬೆಲೆಯ ಸಮೃದ್ಧ ಸಾಹಿತ್ಯದ ರೂವಾರಿ ಮಲ್ಲಾರ.

ಮಲ್ಲಾರ ಚಂದಾದಾರರಾಗಲು ಕೆಳಗಿನ ಪತ್ರಕವನ್ನು ತುಂಬಿ 'Sri Yogi Nareyana Study Centre' ಹೆಸರಿನಲ್ಲಿ ಡಿಡಿ ಅಥವಾ ಚೆಕ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಚಂದಾದಾರರಾಗಿ

For Subscription - Bank Transfer/ RTGS:
Sri Yogi Nareyana Study Centre
SB A/c No. 141201011016824,
IFSC Code: VIJB0001412.
After Transfer Please Contact No. 94480 85975

**ಮಲ್ಲಾರ ಕಳುಹಿಸಬೇಕಾದ ನನ್ನ ವಿಳಾಸ**

ಹೆಸರು:......................................................
ವಿಳಾಸ:......................................................
..............................................................
..............................................................
ಪಿನ್ ಕೋಡ್ ಸಂಖ್ಯೆ: ......................................
ಮೊಬೈಲ್ /ಫೋನ್:.............................................


☐ **ಆಜೀವ ಚಂದಾ ರೂ.** 1500/-
☐ **5 ವರ್ಷಗಳ ಚಂದಾ ರೂ.** 500/-
☐ **ವಾರ್ಷಿಕ ಚಂದಾ ರೂ.** 140/-

ನಾನು ಡಿಡಿ /ಚೆಕ್ /ಮನಿಯಾರ್ಡರ್ ಮೂಲಕ
(ಚೆಕ್ /ಡಿಡಿ ಸಂ.................................................
ಬ್ಯಾಂಕ್..........................................................)
ಚಂದಾ ಹಣವನ್ನು ಕಳುಹಿಸಿದ್ದೇನೆ.

**ಸಹಿ** /-

**ನಿರ್ವಾಹಕ ಸಂಪಾದಕರು**
ಮಲ್ಲಾರ ಮಾಸಪತ್ರಿಕೆ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ, ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–560 054.

**ಜಾಹೀರಾತು ನೀಡಲು ಮತ್ತು ಚಂದಾದಾರರಾಗಲು ಸಂಪರ್ಕಿಸಿ**
**ಮೊ: 9916854885**







ಭಕ್ತ ಮಾರ್ಕಂಡೇಯ

# ಮಾರ್ಕಂಡೇಯ



ಡಾ. ಎಸ್. ಹೇಮಲತಾ.

ಮಾರ್ಕಂಡೇಯರು ಭಕ್ತಶ್ರೇಷ್ಠರು. ಇವರು ಭೃಗುವಂಶದ ಮೃಕಂಡುವೆಂಬ ಮಹರ್ಷಿಗಳ ಪುತ್ರರು. ಮಗುವು ಜನಿಸಿದಾಗ ದೈವಜ್ಞರು ಇವನ ಗ್ರಹಗತಿಯನ್ನು ವೀಕ್ಷಿಸಿ, ಇವನಿಗೆ ಕೇವಲ ಹದಿನಾಲ್ಕು ವರ್ಷ ಆಯುಷ್ಯವೆಂದು ಹೇಳಿದ್ದರು.

ಒಂದು ದಿನ ತಾಯಿ–ತಂದೆಯರು ತನ್ನ ಅಲ್ಪಾಯುಷ್ಯದ ವಿಷಯವಾಗಿ ಶೋಕಿಸುತ್ತಿದ್ದುದು ಹುಡುಗನ ಕಿವಿಗೆ ಬಿತ್ತು. ತಂದೆಯ ಮಾತಿನಂತೆ ಬಾಲಕ ಮಾರ್ಕಂಡೇಯನು ಈಶ್ವರನ ಆರಾಧನೆಯಲ್ಲಿ ತೊಡಗಿದನು. 'ಚಂದ್ರಶೇಖರನನ್ನು ಆಶ್ರಯಿಸಿದರೆ ಯಮನೂ ಏನೂ ಮಾಡಲಾರನು' ಎಂಬ ಬಾಲಕನ ನಂಬಿಕೆಯನ್ನು ಈಶ್ವರನು ಹುಸಿಮಾಡಲಿಲ್ಲ. ಶಿವನ ಸಮೀಪದಿಂದ ಯಮನಿಗೆ ಬಾಲಕನನ್ನು ಕರೆದೊಯ್ಯಲಾಗಲಿಲ್ಲ. ಹೀಗೆ ತನ್ನ ದೃಢಭಕ್ತಿಯಿಂದ ಯಮನನ್ನೇ ಸೋಲಿಸಿದ ಮಹಾಮಹಿಮರು ಮಾರ್ಕಂಡೇಯರು. ಅನಂತರ ಪರಮೇಶ್ವರನು ಹದಿನಾಲ್ಕು ಕಲ್ಪಗಳ ದೀರ್ಘಾಯುಷ್ಯವನ್ನು ಅವರಿಗೆ ಕರುಣಿಸಿದನು. ಇದು ವಿಷ್ಣು ಪುರಾಣದಲ್ಲಿ ಮಾರ್ಕಂಡೇಯರ ವಿಷಯವಾಗಿರುವ ಕಥೆಯಾದರೆ, ನೃಸಿಂಹ ಪುರಾಣವು ಮಾರ್ಕಂಡೇಯರು ವಿಷ್ಣುವನ್ನು ಕುರಿತು ತಪಸ್ಸು ಮಾಡಿ ಕೇವಲ ಹನ್ನೆರಡು ವರ್ಷವಿದ್ದ ತಮ್ಮ ಆಯಸ್ಸನ್ನು ಹದಿನಾಲ್ಕು ಕಲ್ಪಗಳಿಗೆ ವೃದ್ಧಿಪಡಿಸಿಕೊಂಡರೆಂದು ಹೇಳುತ್ತದೆ. ಶಿವ–ವಿಷ್ಣುಗಳಲ್ಲಿ ಅಭೇದವನ್ನು ಸಾಧಿಸಿದ ಮಹಾಮಹಿಮರು ಇವರೆಂಬುದು ಶತಃಸಿದ್ಧ. ಶಿವನಿಂದಲೇ ಮಾರ್ಕಂಡೇಯರು ನಾರಾಯಣನಲ್ಲಿ ಅನನ್ಯಭಕ್ತಿಯು ಸ್ಥಿರವಾಗಲೆಂದು ವರ ಪಡೆದವರು. ಜ್ಞಾನವೈರಾಗ್ಯಗಳ ನಿಧಿಯಾಗುವಂತೆಯೂ ಪುರಾಣಾಚಾರ್ಯರಾಗುವಂತೆಯೂ ಶಿವನೇ ಇವರಿಗೆ ಆದೇಶ ನೀಡಿದ್ದನು.

ಜಗತ್ತಿನ ಪ್ರಳಯ ಸಂಭವಿಸಿದಾಗ ಇಡೀ ಭೂಮಿ ಜಲಮಯವಾಗಿರುತ್ತದೆ. ಆ ಸಂದರ್ಭದಲ್ಲಿ ದೇವಾಸುರರಾಗಲೀ ಮನುಷ್ಯರಾಗಲೀ ವೃಕ್ಷಗಳಾಗಲೀ ಉಳಿಯುವುದಿಲ್ಲ. ಮಾರ್ಕಂಡೇಯರು ಇಂತಹ ಪ್ರಳಯವನ್ನು ಕಣ್ಣಾರೆ ಕಂಡವರು. ಜಲರಾಶಿಯ ಮಧ್ಯೆ ಭ್ರಾಂತರಾಗಿ, ಯಾವ ಪ್ರಾಣಿಯನ್ನೂ ಕಾಣದೆ ತಿರುಗಾಡುತ್ತಿದ್ದಾಗ, ಒಂದು ಕಡೆಯಲ್ಲಿ ವಿಶಾಲವಾದ ಆಲದ ಮರವನ್ನು ಕಂಡರು. ಅದರ ಶಾಖೆಗಳ ಮೇಲೆ ಒಂದು ದಿವ್ಯವಾದ ಮಂಚದಲ್ಲಿ ಸುಂದರವಾದ ಮಗುವೊಂದು ಮಲಗಿರುವುದನ್ನು ಅವರು ನೋಡಿದರು. ಭೂತಭವಿಷ್ಯದ್ವರ್ತಮಾನಗಳನ್ನು ಬಲ್ಲ, ಧ್ಯಾನಯೋಗಿಗಳಾದ ಮಹರ್ಷಿಗಳಿಗೂ ಆ ಮಗು ಯಾರೆಂದು ತತ್‌ಕ್ಷಣ ಹೊಳೆಯಲಿಲ್ಲ. ಆ ಮಗುವೇ ಮಾರ್ಕಂಡೇಯರನ್ನು ಉದ್ದೇಶಿಸಿ, "ಮುನಿವರ್ಯಾ! ನೀನು ಬಹಳವಾಗಿ ಬಳಲಿ ಬಂದಿರುತ್ತೀಯೆ. ನೀನು ಈಗ ವಿಶ್ರಾಂತಿಯನ್ನು ಅಪೇಕ್ಷಿಸುತ್ತೀಯೆಂದು ನನಗೆ ಗೊತ್ತು. ನನ್ನ ಶರೀರದಲ್ಲಿ ಪ್ರವೇಶಿಸಿ ನೀನು ವಿಶ್ರಾಂತಿಸುಖವನ್ನು ಅನುಭವಿಸಬಹುದು" ಎಂದು ಹೇಳುತ್ತ ತನ್ನ ಬಾಯನ್ನು ತೆರೆಯಿತು. ಮಾರ್ಕಂಡೇಯರು ತಮ್ಮ ಪ್ರಯತ್ನವಿಲ್ಲದೆಯೇ ಅದರ ಬಾಯಿಯೊಳಗೆ ಪ್ರವೇಶಿಸಿದರು. ಹಾಗೆಯೇ ಮುಂದೆ ಹೋಗುತ್ತ ಮಗುವಿನ ಉದರವನ್ನು ಸೇರಿದರು. ಅಲ್ಲಿ ಹಳ್ಳಿಗಳು, ಪಟ್ಟಣಗಳು, ಪರ್ವತಗಳು, ನದಿಗಳು ಮುಂತಾದವುಗಳಿಂದ ಕೂಡಿದ್ದ ಇಡೀ ಬ್ರಹ್ಮಾಂಡವನ್ನು ಕಂಡರು. ಯಜ್ಞಯಾಗಾದಿಗಳು, ಯುದ್ಧಗಳು, ವ್ಯಾಪಾರ ಮುಂತಾದ ಎಲ್ಲ ಕರ್ಮಗಳೂ ಎಂದಿನಂತೆಯೇ ನಡೆಯುತ್ತಿದ್ದವು. ಇಂದ್ರಾದಿ ದೇವತೆಗಳೂ ಅಲ್ಲಿಯೇ ಉಪಸ್ಥಿತರಿದ್ದರು. ಪ್ರಳಯದ ಮೊದಲು ಮೂರು ಲೋಕಗಳೂ ಹೇಗಿದ್ದವೋ ಹಾಗೆಯೇ ಶಿಶುವಿನ ಉದರದಲ್ಲಿ ಸುರಕ್ಷಿತವಾಗಿದ್ದವು. ಮುನಿಗಳು ತಮ್ಮ ಪ್ರಯತ್ನವಿಲ್ಲದೆಯೇ ನಿರಾಯಾಸವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುತ್ತ ಎಲ್ಲವನ್ನೂ ನೋಡುತ್ತಿದ್ದರು.

ಅವರಿಗೆ ಈಗ ಹಸಿವೆಯಾಗತೊಡಗಿತು. ಹಾಗೆ ಎನಿಸುತ್ತಿದ್ದಂತೆ ಉತ್ತಮವಾದ ಕಂದಮೂಲಫಲಗಳು ಸಿದ್ಧವಾದವು. ಹೀಗೆಯೇ ಸುತ್ತಾಡುತ್ತ ನೂರಾರು ವರ್ಷಗಳು ಕಳೆದುಹೋದವು. ಎಷ್ಟು ಸುತ್ತಾಡಿದರೂ ಅದರ ಅಂತ್ಯವೇ ಸಿಗಲಿಲ್ಲ. ಭ್ರಾಂತರಾದ ಮುನಿಗಳು ಎಲ್ಲವೂ ಪರಮಪುರುಷನ ಸಂಕಲ್ಪವೆಂದು ನಿಶ್ಚಯಿಸಿ, ಅನನ್ಯಶರಣನಾದ ಆ ಪುರುಷೋತ್ತಮನನ್ನೇ ಪರಮಭಕ್ತಿಯಿಂದ ಸ್ತೋತ್ರ ಮಾಡಿದರು. ಬಹಳ

ಹೊತ್ತು ಹಿಂದಿನಂತೆಯೇ ಆಲದೆಲೆಯ ಮೇಲೆ ಆಡುತ್ತಿದ್ದ ಆ ಮಗುವನ್ನು ಮಾತ್ರ ಕಂಡರು. ಮಗುವು ಋಷಿಗಳನ್ನು ನೋಡಿ ಒಮ್ಮೆ ಮುದ್ದಾಗಿ ನಗೆ ಬೀರಿತು. ಮರುಕ್ಷಣದಲ್ಲಿಯೇ ಅವರ ಹೃದಯದಲ್ಲಿ ಜ್ಯೋತಿಯೊಂದು ಬೆಳಗಿದಂತಾಯಿತು; ಪರಮಾದ್ಭುತವಾದ ದಿವ್ಯಜ್ಞಾನವನ್ನು ಪಡೆದ ಅನುಭವವಾಯಿತು. ಮಗುವಿನ ಕಮಲದಂತಹ ಪಾದಗಳಿಗೆ ಭಕ್ತಿಯಿಂದ ನಮಿಸಿದರು. ಅವರ ಕಣ್ಣುಗಳಿಂದ ಆನಂದಬಾಷ್ಪವು ಧಾರಾಕಾರವಾಗಿ ಸುರಿಯುತ್ತಿದ್ದಿತು. ಸಕಲ ಜಗತ್ತನ್ನೂ ನುಂಗಿ, ಏನೂ ತಿಳಿಯದ ಶಿಶುವಿನಂತೆ ಮಲಗಿರುವ ಆದಿಪುರುಷನ ಮಾಯೆಯನ್ನು ಹೀಗೆ ಮಹರ್ಷಿಗಳು ಕಣ್ಣಾರೆ ಕಂಡರು. ಆ ಶಿಶುವೇ ಮಾರ್ಕಂಡೇಯರಿಗೆ ಸೃಷ್ಟಿಯ ರಹಸ್ಯವನ್ನು ವಿಸ್ತರಿಸಿ ಹೇಳಿತು. ಭಗವದ್ಗೀತೆಯ ವಿಶ್ವರೂಪದರ್ಶನದಂತೆಯೇ ಬಾಲಮುಕುಂದನು ಮಾರ್ಕಂಡೇಯರಿಗೆ ತನ್ನ ನಿಜರೂಪದ ದರ್ಶನವನ್ನಿತ್ತನು. ತನ್ನ ಮಾಯೆಯ ಪ್ರಭಾವವನ್ನು ವಿಸ್ತಾರವಾಗಿ ವಿವರಿಸಿದನು. ಈ ರೀತಿಯಲ್ಲಿ ಮಾರ್ಕಂಡೇಯರ ಚರಿತ್ರೆಯನ್ನು ಭಾರತವು ವರ್ಣಿಸಿದರೆ, ಭಾಗವತವು ಪುಷ್ಪಭದ್ರಾ ನದಿಯ ತೀರದಲ್ಲಿ ಅವರು ಕುಳಿತಿದ್ದಾಗ ಬಲವಾದ ಗಾಳಿಯು ಬೀಸಿ, ಅವರನ್ನು ಎತ್ತಲೋ ಒಯ್ದಿತು –ಎಂದು ಪ್ರಾರಂಭಿಸಿ, ಇದೇ ಕಥೆಯನ್ನು ಇನ್ನೊಂದು ರೀತಿಯಲ್ಲಿ ವರ್ಣಿಸುತ್ತದೆ.

ಮಾರ್ಕಂಡೇಯರು ಪುಷ್ಪಭದ್ರಾ ನದಿಯ ದಡದಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ತಪಸ್ಸು ಮಾಡುತ್ತಿದ್ದರು. ಅವರ ತಪಸ್ಸನ್ನು ಭಂಗಿಸಲು ಇಂದ್ರನು ಮಾಡಿದ ಯಾವ ಪ್ರಯತ್ನಗಳೂ ಸಫಲವಾಗಲಿಲ್ಲ. ಮಹರ್ಷಿಗಳ ತಪೋನಿಷ್ಠೆಯನ್ನು ಕಂಡು, ಅವರನ್ನು ಅನುಗ್ರಹಿಸಲು ನರ–ನಾರಾಯಣರು ಬಂದರು. ಮಾರ್ಕಂಡೇಯರು ಅವರನ್ನು ಸತ್ಕರಿಸಿ, ಭಗವಂತನ ಮಾಯೆಯ ಪ್ರಭಾವವನ್ನು ಕಾಣಬೇಕೆಂಬ ತಮ್ಮ ಅಪೇಕ್ಷೆಯನ್ನು ಅವರಲ್ಲಿ ನಿವೇದಿಸಿದರು. ಅದರಂತೆ ಒಂದು ದಿನ ಬಿರುಗಾಳಿ ಬೀಸಿ, ಮಹರ್ಷಿಗಳನ್ನು ಎಳೆದುಕೊಂಡು ಹೋಗಿ, ಆಲದೆಲೆಯ ಮೇಲೆ ಮಲಗಿರುವ ಬಾಲಮುಕುಂದನನ್ನೂ, ಅವನ ಉದರದೊಳಗೆ ಅಡಗಿರುವ ಸಕಲಬ್ರಹ್ಮಾಂಡವನ್ನೂ ದರ್ಶನ ಮಾಡಿಸಿತು.

ಪಾರ್ವತೀಪರಮೇಶ್ವರರು ಇಂತಹ ಮಹರ್ಷಿಗಳನ್ನು ನೋಡುವುದೇ ಒಂದು ಭಾಗ್ಯವೆಂದು ಭಾವಿಸಿ, ತಾವಾಗಿಯೇ ಬಂದು ದರ್ಶನವನ್ನಿತ್ತು, ಅವರಿಗೆ ಜ್ಞಾನವನ್ನು ಅನುಗ್ರಹಿಸಿದರು. ಹೀಗೆ ಮಾರ್ಕಂಡೇಯರು ಇಹದಲ್ಲಿ ದೀರ್ಘವಾದ ಆಯಸ್ಸು ಮತ್ತು ಪರದಲ್ಲಿ ಮೋಕ್ಷ–ಎರಡನ್ನೂ ಸಂಪಾದಿಸಿದರು. ಇವರ ಹೆಸರಿನಲ್ಲಿ ಪ್ರಸಿದ್ಧವಾಗಿರುವ 'ಮಾರ್ಕಂಡೇಯ ಪುರಾಣ'ವು ಮಹಾಪುರಾಣಗಳಲ್ಲಿ ಒಂದಾಗಿದೆ. ಬ್ರಹ್ಮನ ಅನುಗ್ರಹದಿಂದ ಪಡೆದ ಜ್ಞಾನವನ್ನು ಮಾರ್ಕಂಡೇಯರು ಜೈಮಿನಿಗಳಿಗೆ ಉಪದೇಶ ಮಾಡಿರುತ್ತಾರೆ. ಸುಮಾರು ಒಂಬತ್ತು ಸಾವಿರ ಶ್ಲೋಕಗಳಿಂದಲೂ ನೂರಾಮೂವತ್ತೆಂಟು ಅಧ್ಯಾಯಗಳಿಂದಲೂ ಕೂಡಿದ ಈ ಪುರಾಣವು ಹರಿಹರ ಸಮಾನತೆಯನ್ನು ಎತ್ತಿಹಿಡಿಯುತ್ತದೆ. ಇದರಲ್ಲಿರುವ ದುರ್ಗಾಸಪ್ತಶತೀ ಭಾಗವಂತೂ ಉಪಾಸಕರಿಗೆ ಬಹಳ ಅಚ್ಚುಮೆಚ್ಚಿನದಾಗಿದೆ. ಈ ಭಾಗವು ಪಾರಾಯಣ, ಜಪ, ಹೋಮ ಮುಂತಾದ ಎಲ್ಲ ಉಪಾಸನಾ ವಿಧಿವಿಧಾನಗಳಲ್ಲಿ ಪ್ರಯೋಗಿಸಲ್ಪಡುತ್ತ ಸರ್ವಜನಾದರಣೀಯವಾಗಿದೆ.

ಮನುಸ್ಮೃತಿಯು ಮೊದಲು ಎಂಟು ಸಾವಿರ ಶ್ಲೋಕಗಳಿಂದ ಕೂಡಿ ಬಹಳ ವಿಸ್ತಾರವಾಗಿತ್ತೆಂದೂ ಮಾರ್ಕಂಡೇಯರು ಅದನ್ನು ಸಂಕ್ಷಿಪ್ತಗೊಳಿಸಿ ತಮ್ಮ ಶಿಷ್ಯರಾದ ಸುಮತಿಭಾರ್ಗವರಿಗೆ ಉಪದೇಶಿಸಿದರೆಂದೂ ಹೇಳುತ್ತಾರೆ. ಪಾಂಡವರು ವನವಾಸದಲ್ಲಿ ಶ್ರಮಪಡುತ್ತಿದ್ದಾಗ, ಅವರಲ್ಲಿಗೆ ಬಂದು ಸಮಾಧಾನಪಡಿಸಿ, ಅವರಿಗೆ ಸತ್ಯದ ಮಹಿಮೆಯನ್ನು ಮನದಟ್ಟುಮಾಡಿಕೊಟ್ಟವರು ಮಾರ್ಕಂಡೇಯರು. ಶ್ರೀರಾಮ, ನಾಭಾಗ, ಭಗೀರಥ ಮುಂತಾದವರ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದವರೂ ಅವರೇ. ಅವರು ರಚಿಸಿರುವ ಮಹಾಮೃತ್ಯುಂಜಯಸ್ತೋತ್ರ, ಚಂದ್ರಶೇಖರಾಷ್ಟಕ ಮುಂತಾದ ಸ್ತುತಿಗಳು ಸರ್ವರಿಗೂ ಪ್ರಿಯವಾಗಿವೆ. ಶಂಕರಾಚಾರ್ಯರೂ ತಮ್ಮ ನರ್ಮದಾಷ್ಟಕದಲ್ಲಿ, ನರ್ಮದೆಯು ಈ ಮಹಾತ್ಮರಿಗೆ ಜಗತ್ಪ್ರಳಯಕಾಲದಲ್ಲಿ ನೆಲೆ ನೀಡಿದಳೆಂದು ಹೊಗಳಿದ್ದಾರೆ. ಉತ್ತರ ಪ್ರದೇಶದ ಗೋಮತಿ ಮತ್ತು ಸರಯೂ ನದಿಗಳ ಸಂಗಮ ಪ್ರದೇಶದಲ್ಲಿರುವ ಭಾಗೇಶ್ವರವೆಂಬ ಸ್ಥಾನದಲ್ಲಿ ಈಗಲೂ ಮಾರ್ಕಂಡೇಯರ ಆಶ್ರಮವಿದೆ. ಮಾರ್ಕಂಡೇಯರು ನಮ್ಮ ಸಂಸ್ಕೃತಿಯಲ್ಲಿ ಪ್ರಾತಃಸ್ಮರಣೀಯರೆನಿಸಿದ್ದಾರೆ.



ನರ್ಮದಾ ನದಿಯ ದಡದಲ್ಲಿರುವ ಮಾರ್ಕಂಡೇಯನ ಆಶ್ರಮ

**ನಂ. ೧೧, ಎ.ಜಿ. ಲೇಔಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–೫೬೦ ೦೫೪.**



ಗುರುವಾಯೂರು ಕೃಷ್ಣನ ಮಹಾಭಕ್ತರಾದ ಮಹಾಕವಿ ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿಯವರ ಮಹಾನ್ ಭಕ್ತಿಕಾವ್ಯ 'ನಾರಾಯಣೀಯಮ್' ಈ ಸಂಚಿಕೆಯಿಂದ ಆರಂಭಿಸಿದ್ದೇವೆ. ಸ್ವತಃ ಸನಾತನ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ ಇದರ ಅನುವಾದಕರು.




# ನಾರಾಯಣೀಯಮ್

ಸರ್ಗ: 5

## ವಿಶ್ವ ಸೃಷ್ಟಿ ವಿಕಾಸ

**ವ್ಯಕ್ತಾ ವ್ಯಕ್ತ ಮಿದಂ ನ ಕಿಂಚಿದಭವತ್ ಪ್ರಾಕ್ ಪ್ರಾಕೃತ–ಪ್ರಕ್ಷಯೇ**
**ಮಾಯಾಯಾಂ ಗುಣಸಾಮ್ಯರುದ್ಧ ವಿಕೃತೌ ತ್ವಯ್ಯಾಗತಾಯಾಂ ಲಯಂ**
**ನೋ ಮೃತ್ಯುಶ್ಚ ತದಾಮೃತಂ ಚ ಸಮಭೂನ್ನಾಹ್ನೋನ ರಾತ್ರೇಃ ಸ್ಥಿತಿ–**
**ಸ್ತತ್ರೈಕಸ್ತ್ವ–ಮಶಿಷ್ಯಥಾಃ ಕಿಲ ಪರಾನಂದ ಪ್ರಕಾಶಾತ್ಮನಾ ॥1॥**

ಹಿಂದಿನ ಬ್ರಹ್ಮ ಪ್ರಳಯದ ಸಮಯದಲ್ಲಿ ಸತ್ತ್ವ–ರಜಸ್–ತಮಸ್–ಎಂಬ ಮೂರು ಗುಣಗಳ ಸಮಸ್ಥಿತಿಯಿಂದಾಗಿ ಕಾರ್ಯ ಸ್ಥಗಿತಗೊಂಡು ಮಾಯೆಯೂ ನಿನ್ನಲ್ಲಿ ಸೇರಿ ಹೋಗಿದ್ದಳು. ಆಗ ವ್ಯಕ್ತಾವ್ಯಕ್ತವಾದ ಸ್ಥೂಲ–ಸೂಕ್ಷ್ಮಗಳಿಂದ ಮಾಡಲ್ಪಟ್ಟ ಈ ಜಗತ್ತು ಇರಲಿಲ್ಲ. ಮೃತ್ಯುವಾಗಲೀ ಮೋಕ್ಷವಾಗಲೀ, ದಿನವಾಗಲೀ ರಾತ್ರಿಯಾಗಲೀ ಇರಲಿಲ್ಲ. ಆಗ ಕೇವಲ ನೀನು ಸಚ್ಚಿದಾನಂದನಾಗಿ ಬೆಳಗುತ್ತಿದ್ದೆ ಎಂಬುದಾಗಿ ಹೇಳುತ್ತಾರೆ. (1)



ಕನ್ನಡಾನುವಾದ:
ಬಿಂಡಿಗನವಿಲೆ ನಾರಾಯಣಸ್ವಾಮಿ

**ಕಾಲಃ ಕರ್ಮ ಗುಣಾಶ್ಚ ಜೀವನಿವಹಾ ವಿಶ್ವಂ ಚ ಕಾರ್ಯಂ ವಿಭೋ**
**ಚಿಲ್ಲೀಲಾರತಿಮೇಯುಷಿ ತ್ವಯಿ ತದಾ ನಿರ್ಲೀನತಾಮಾಯಯುಃ।**
**ತೇಷಾಂ ನೈವ ವದಂತ್ಯಸತ್ತ್ವಮಯಿ ಭೋಃ ಶಕ್ತ್ಯಾತ್ಮನಾ ತಿಷ್ಠತಾಂ**
**ನೋ ಚೇತ್ ಕಿಂ ಗಗನ ಪ್ರಸೂನ ಸದೃಶಾಂ ಭೂಯೋ ಭವೇತ್ಸಂಭವಃ ॥ 2 ॥**

ಹೇ ವಿಭುವೇ! ಪ್ರಳಯದ ಸಮಯದಲ್ಲಿ ಕಾಲ, ಕರ್ಮ, ಸತ್ತ್ವ, ರಜಸ್ಸು, ತಮೋ ಗುಣಗಳು, ಜೀವ ಸಮೂಹಗಳು ಹಾಗೂ ಮಾಯೆಯ ಕಾರ್ಯದಿಂದ ಆವಿರ್ಭವಿಸಿದ ವಿಶ್ವ, ಸಚ್ಚಿದಾನಂದ ಮಯವಾದ ನಿನ್ನನ್ನು ಸವಿಯುವ ಸಲುವಾಗಿ ನಿನ್ನಲ್ಲೇ ಮುಳುಗಿದ್ದವು. ಹೇ ಪ್ರಭುವೇ! ಕಾರಣೀಭೂತವಾಗಿ ಅಡಗಿದ್ದ ಅವುಗಳನ್ನು 'ಇರಲಿಲ್ಲ' ಎಂದು ವೇದಗಳು ಹೇಳುವುದಿಲ್ಲ. ಆಕಾಶ ಕುಸುಮದಂತೆ, ಅವು ಇಲ್ಲದೇ ಇದ್ದಿದ್ದರೆ, ಹೇಗೆ ತಾನೇ ಮತ್ತೆ ಅಸ್ತಿತ್ವಕ್ಕೆ ಬರುತ್ತಿದ್ದುವು?

**ಏವಂ ಚ ದ್ವಿಪರಾರ್ಧಕಾಲ–ವಿಗತಾವೀಕ್ಷಾಂ ಸಿಸೃಕ್ಷಾತ್ಮಿಕಾಂ**
**ಬಿಭ್ರಾಣೇ ತ್ವಯಿ ಚುಕ್ಷುಭೇ ತ್ರಿಭುವನೀಭಾವಾಯ ಮಾಯಾ ಸ್ವಯಂ ।**
**ಮಾಯಾತಃ ಖಲು ಕಾಲ ಶಕ್ತಿ–ರಖಿಲಾದೃಷ್ಟಂ ಸ್ವಭಾವೋಽಪಿ ಚ**
**ಪ್ರಾದುರ್ಭೂಯ ಗುಣಾನ್ ವಿಕಾಸ್ಯ ವಿದಧುಸ್ತಸ್ಯಾಃ ಸಹಾಯಕ್ರಿಯಾಂ ॥ 3 ॥**

ಬ್ರಹ್ಮನ ಆಯಸ್ಸಾದ ಎರಡು ಪರಾರ್ಧಗಳ ಕೊನೆಯಲ್ಲಿ ನಿನ್ನಲ್ಲಿ ಸೃಷ್ಟಿಕಾರ್ಯದಲ್ಲಿ ತೊಡಗುವ ಇಚ್ಛೆಯುಂಟಾದ್ದರಿಂದ ಈಕ್ಷಿಸಿದೆ. ಆ ಈಕ್ಷಣೆಯಿಂದ ಮಾಯೆಯು ಸಕ್ರಿಯಳಾಗಿ ತ್ರಿಭುವನಗಳನ್ನು ಸೃಷ್ಟಿಸಲು ಮೇಲೆದ್ದಳು. ಆಗ ಅವಳಿಂದ ಕಾಲವೆಂಬ ಶಕ್ತಿ, ಜೀವಗಳ ಸುಕೃತ ಮತ್ತು ದುಷ್ಕೃತ ರೂಪವಾದ ಎಲ್ಲ ಸಂಸ್ಕಾರಗಳು ಹಾಗೂ ಸ್ವಭಾವಗಳು ಪ್ರಕಟವಾಗಿ ತನ್ಮೂಲಕ ಸತ್ತ್ವ, ರಜಸ್ಸು ಮತ್ತು ತಮೋ ಗುಣಗಳು ವಿಕಸಿತವಾಗಿ ಅವಳ ಸೃಷ್ಟಿಕಾರ್ಯದಲ್ಲಿ ಸಹಾಯ ಮಾಡಲು ತೊಡಗಿದುವು. (3)

**ಮಾಯಾ ಸನ್ನಿಹಿತೋಽಪ್ರವಿಷ್ಟವಪುಷಾ ಸಾಕ್ಷೀತಿ ಗೀತೋ ಭವಾನ್**
**ಭೇದೈಸ್ತಾಂ ಪ್ರತಿಬಿಂಬತೋ ವಿವಿಶಿವಾನ್ ಜೀವೋಽಪಿ ನೈವಾಪರಃ ।**
**ಕಾಲಾದಿ–ಪ್ರತಿಬೋಧಿತಾಥ ಭವತಾ ಸಂಚೋದಿತಾ ಚ**
**ಸ್ವಯಂ ಮಾಯಾ ಸಾ ಖಲು ಬುದ್ಧಿತತ್ತ್ವಮಸೃಜದ್ಯೋಽಸೌ ಮಹಾನುಚ್ಯತೇ ॥ 4 ॥**

ನೀನು ಮಾಯೆಯೊಂದಿಗಿದ್ದರೂ ಅದರಲ್ಲಿ ಪ್ರವೇಶಿದವನಲ್ಲ. ಅವಳ ಪ್ರಭಾವಕ್ಕೆ ಒಳಗಾದವನಲ್ಲ. ಆದ್ದರಿಂದ ನಿನ್ನನ್ನು ಕೇವಲ 'ಸಾಕ್ಷಿ' ಎಂದು ವರ್ಣಿಸುತ್ತಾರೆ. ಆ ಮಾಯೆಯಲ್ಲಿ ನೀನು ವಿಧ ವಿಧವಾಗಿ ಪ್ರತಿಬಿಂಬಿತಗೊಂಡು ಜೀವಿಗಳೊಳಗೂ ಪ್ರವೇಶಿಸಿರುವುದರಿಂದ, ಅವರು ನಿನ್ನಿಂದ ಹೊರತಲ್ಲ.

ತದನಂತರದಲ್ಲಿ ಕಾಲವೇ ಮೊದಲಾದವುಗಳ ಮೂಲಕ ಮೇಲೆದ್ದ ಮಾಯೆಯು ನಿನ್ನಿಂದ ಪ್ರೇರಿತಳಾಗಿ ಬುದ್ಧಿತತ್ತ್ವವನ್ನು ಪ್ರಕಟಿಸಿದ್ದು ಆ ಬುದ್ಧಿತತ್ತ್ವದ ಮತ್ತೊಂದು ಹೆಸರೇ 'ಮಹತ್' ಎಂಬುದಾಗಿದೆ. (4)

**ತತ್ರಾಸೌ ತ್ರಿಗುಣಾತ್ಮಕೋಽಪಿ ಚ ಮಹಾನ್ ಸತ್ತ್ವಪ್ರಧಾನಃ ಸ್ವಯಂ**
**ಜೀವೇಸ್ಮಿನ್ ಖಲು ನಿರ್ವಿಕಲ್ಪ ಮಹಮಿತ್ಯುದ್ಬೋಧ ನಿಷ್ಪಾದಕಃ।**
**ಚಕ್ರೇಸ್ಮಿನ್ ಸವಿಕಲ್ಪಬೋಧಕ ಮಹತ್ತತ್ತ್ವಂ ಮಹಾನ್ ಖಲ್ವಸೌ**
**ಸಂಪುಷ್ಟಂ ತ್ರಿಗುಣೈಸ್ತಮೋತಿಬಹುಲಂ ವಿಷ್ಣೋ ಭವತ್ಪ್ರೇರಣಾತ್ ॥ 5 ॥**

ಮಾಯೆಯಿಂದ ಆವಿರ್ಭಾವವಾದ ಮಹತ್ ಎಂಬುದು ಮೂರು ಗುಣಗಳಿಂದ ಕೂಡಿದ್ದರೂ ಸತ್ತ್ವಗುಣ ಪ್ರಧಾನವಾಗಿದ್ದು, 'ಅದು' 'ಇದು' ಎಂಬ ವಿಕಲ್ಪಗಳಿಲ್ಲದೆ ಜ್ಞಾನವನ್ನುಂಟುಮಾಡುತ್ತದೆ. ತದನಂತರ, ಹೇ ವಿಷ್ಣುವೇ, ಆ ಮಹತ್ ಎಂಬುದೇ ನಿನ್ನ ಪ್ರೇರಣೆಯಿಂದ ಸಂಪೂರ್ಣವಾಗಿ ಮೂರು ಗುಣಗಳಿಂದ ಸಂಪುಷ್ಟವಾಗಿದ್ದರೂ ತಮೋಗುಣ ಬಹಳವಾಗಿದ್ದು 'ನಾನು ಪ್ರತ್ಯೇಕ' ಎಂಬ ಜ್ಞಾನವನ್ನು ಉಂಟುಮಾಡಿ ವಿಕಲ್ಪದಿಂದೊಡಗೂಡಿ ಅಹಂಕಾರ ತತ್ತ್ವವನ್ನು ಸೃಷ್ಟಿಸಿದೆ.

**ಸೋಹಂ ಚ ತ್ರಿಗುಣಕ್ರಮಾತ್ ತ್ರಿವಿಧತಾ-ಮಾಸಾದ್ಯ ವೈಕಾರಿಕೋ**
**ಭೂಯಸ್ತೇಜಸ-ತಾಮಸಾವಿತಿ ಭವನ್ನಾದ್ಯೇನ ಸತ್ತ್ವಾತ್ಮನಾ**
**ದೇವಾನಿಂದ್ರಿಯ-ಮಾನಿನೋಕೃತ ದಿಶಾ-ವಾತಾರ್ಕ-ಪಾಶ್ಯಾಶ್ವಿನೋ**
**ವಹ್ನೀಂದ್ರಾಚ್ಯುತ-ಮಿತ್ರಕಾನ ವಿಧು ವಿಧಿ ಶ್ರೀರುದ್ರಶಾರೀರಕಾನ್ ॥ 6 ॥**

ಆ ಅಹಂ-ತತ್ತ್ವವು ಸತ್ತ್ವ, ರಜಸ್ಸು ಹಾಗೂ ತಮಸ್ಸು ಎಂಬುವ ಮೂರು ಗುಣಗಳಿಂದ ಕ್ರಮವಾಗಿ ಮೂರಾಗಿ ವಿಭಾಗವಾಗಿ ವೈಕಾರಿಕ, ತೇಜಸ ಮತ್ತು ತಾಮಸ ಎಂಬುದಾಗಿ ಕರೆಯಲ್ಪಟ್ಟವು. ಮೊದಲಿನ ಸಾತ್ತ್ವಿಕದಿಂದ ದಿಕ್ಕುಗಳು, ವಾಯು, ಸೂರ್ಯ, ವರುಣ, ಅಶ್ವಿನೀಕುಮಾರರು, ಅಗ್ನಿ, ಇಂದ್ರ, ಉಪೇಂದ್ರ, ಮಿತ್ರ ಪ್ರಜಾಪತಿ, ಚಂದ್ರ, ಬ್ರಹ್ಮ, ಶ್ರೀರುದ್ರ, ಕ್ಷೇತ್ರಜ್ಞ ಮುಂತಾದ ಇಂದ್ರಿಯಾಭಿಮಾನಿ ದೇವತೆಗಳು ಸೃಷ್ಟಿಯಾದುವು. (6)

**ಭೂಮನ್ ಮಾನಸ ಬುದ್ಧ್ಯಹಂಕೃತಿ ಮಿಲಚ್ಚಿತ್ತಾಖ್ಯ ವೃತ್ತ್ಯನ್ವಿತಂ**
**ತಚ್ಚಾಂತಃಕರಣಂ ವಿಭೋ ತವ ಬಲಾತ್ ಸತ್ತ್ವಾಂಶ ಏವಾಸೃಜತ್ ।ಜಾತಸ್ತೈಜಸತೋ ದಶೇಂದ್ರಿಯಗಣ**
**ಸ್ತತ್ತಾಮಸಾಂಶಾತ್ಪುನ-ಸ್ತನ್ಮಾತ್ರಂ ನಭಸೋ ಮರುತ್ಪುರಪತೇ ಶಬ್ದೋಜನಿ ತ್ವದ್ಬಲಾತ್ ॥ 7 ॥**

ಹೇ ಭೂಮನ್! ನಿನ್ನ ಬಲದಿಂದಲೇ ಸಾತ್ತ್ವಿಕ ಗುಣ ಪ್ರಧಾನವಾದ ಅಹಂತತ್ತ್ವದಿಂದ ಮನಸ್ಸು, ಬುದ್ಧಿ, ಅಹಂಕಾರದಿಂದೊಡಗೂಡಿದ ಚಿತ್ತವೆಂಬ ವೃತ್ತಿಯಿಂದ ಕೂಡಿದ ಅಂತಃಕರಣ, ತೈಜಸ-ಅಹಂತತ್ತ್ವದಿಂದ ಐದು ಕರ್ಮೇಂದ್ರಿಯಗಳೂ ಮತ್ತು ಐದು ಜ್ಞಾನೇಂದ್ರಿಯಗಳು ಹುಟ್ಟಿದವು. ಅಲ್ಲದೆ, ಹೇ ಗುರುವಾಯೂರಪ್ಪ! ನಿನ್ನ ಬಲದಿಂದಲೇ ತಾಮಸ ಅಹಂತತ್ತ್ವದಿಂದ ಆಕಾಶದ ತನ್ಮಾತ್ರ ಸ್ವರೂಪವಾದ ಶಬ್ದವು ಪ್ರಕಟಗೊಂಡಿತು. (7)

**ಶಬ್ದಾದ್ವ್ಯೋಮ ತತಃ ಸಸರ್ಜಿಥ ವಿಭೋ ಸ್ಪರ್ಶಂ ತತೋ ಮಾರುತಂ**
**ತಸ್ಮಾದ್ರೂಪಮತೋ ಮಹೋಥ ಚ ರಸಂ ತೋಯಂ ಚ ಗಂಧಂ ಮಹೀಂ ।**
**ಏವಂ ಮಾಧವ ಪೂರ್ವಪೂರ್ವಕಲನಾದಾದ್ಯಾದ್ಯ ಧರ್ಮಾನ್ವಿತಂ**
**ಭೂತಗ್ರಾಮಮಿಮಂ ತ್ವಮೇವ ಭಗವನ್ ಪ್ರಾಕಾಶಯಸ್ತಾಮಸಾತ್ ॥ 8 ॥**

ಹೇ ವಿಭುವೇ! ಶಬ್ದದಿಂದ ಆಕಾಶ, ಆಕಾಶದಿಂದ ಸ್ಪರ್ಶ, ಸ್ಪರ್ಶದಿಂದ ವಾಯು, ವಾಯುವಿನಿಂದ ರೂಪ, ರೂಪದಿಂದ ಬೆಂಕಿ, ಬೆಂಕಿಯಿಂದ ರಸ ಹಾಗೂ ತದನಂತರದಲ್ಲಿ ನೀರು, ಗಂಧ ಹಾಗೂ ಪೃಥ್ವಿಯನ್ನು ನೀನು ಸೃಷ್ಟಿಸಿದೆ. ಹೇ ಮಾಧವ! ಹೇ ಭಗವನ್! ಈ ರೀತಿಯಲ್ಲಿ ಒಂದರಿಂದ ಮತ್ತೊಂದನ್ನು ಸಮನ್ವಯಗೊಳಿಸಿ, ಆ ವಸ್ತುಗಳ ಸಹಜ ಸ್ವಭಾವಗಳೊಂದಿಗೆ ಈ ಸೂಕ್ಷ್ಮ ವಸ್ತುಗಳ ಸಮೂಹವನ್ನು ನೀನೇ ತಾಮಸ ಅಹಂತತ್ತ್ವದಿಂದ ಪ್ರಕಟಪಡಿಸಿದೆ. (8)

**ಏತೇ ಭೂತಗಣಾಸ್ತಥೇಂದ್ರಿಯ ಗಣಾ ದೇವಾಶ್ಚ ಜಾತಾ ಪೃಥಕ್-**
**ನೋ ಶೇಕುರ್ಭುವನಾಂಡ-ನಿರ್ಮಿತಿವಿಧೌ ದೇವೈರಮೀಭಿಸ್ತದಾ**
**ತ್ವಂ ನಾನಾ ವಿಧ-ಸೂಕ್ತಿಭಿರ್ನುತಗುಣ-ಸ್ತತ್ತ್ವಾನ್ಯಮೂನ್ಯಾವಿಶಂ-**
**ಶ್ಚೇಷ್ಟಾಶಕ್ತಿ-ಮುದೀರ್ಯ ತಾನಿ ಘಟಯನ್ ಹೈರಣ್ಯಮಂಡಂ ವ್ಯಧಾಃ ॥ 9 ॥**

ಪಂಚಭೂತಗಳು, ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಹಾಗೂ ಅವುಗಳ ಅಭಿಮಾನಿ ದೇವತೆಗಳು ನಿನ್ನಿಂದ ಸೃಷ್ಟಿಗೊಂಡರೂ ಬ್ರಹ್ಮಾಂಡವನ್ನು ಸೃಷ್ಟಿಸುವ ಕಾರ್ಯದಲ್ಲಿ ಅವುಗಳಿಗೆ ಸ್ವಸಾಮರ್ಥ್ಯವಿಲ್ಲದೆ, ಆ ದೇವತೆಗಳೆಲ್ಲರೂ ನಿನ್ನನ್ನು ನಾನಾ ರೀತಿಯಲ್ಲಿ ಸ್ತುತಿಸಲು ನೀನು ಆ ಎಲ್ಲ ತತ್ತ್ವಗಳಲ್ಲೂ ಪ್ರವೇಶಿಸಿ ಅವುಗಳನ್ನು ಪ್ರಚೋದಿಸಿ, ಅವುಗಳನ್ನು ಸಂಘಟಿಸಿ, ಹಿರಣ್ಮಯವಾದ ಅಂಡವನ್ನು ಸೃಷ್ಟಿಸಿದೆ. (9)

**ಅಂಡಂ ತತ್ ಖಲು ಪೂರ್ವಸೃಷ್ಟಸಲಿಲೇತಿಷ್ಠತ್ ಸಹಸ್ರಂ ಸಮಾಃ ।**
**ನಿರ್ಭಿಂದನ್ನಕೃಥಾ-ಶ್ಚತುರ್ದಶ-ಜಗದ್ರೂಪಂ ವಿರಾಡಾಹ್ವಯಂ ।**
**ಸಾಹಸ್ರೈಃಕರಪಾದ ಮೂರ್ಧನಿವಹೈ-ರ್ನಿಶ್ಶೇಷ ಜೀವಾತ್ಮಕೋ**
**ನಿರ್ಭಾತೋಸಿ ಮರುತ್ಪುರಾಧಿಪ ಸ ಮಾಂ ತ್ರಾಯಸ್ವ ಸರ್ವಾಮಯಾತ್ ॥ 10 ॥**

ಆ ಹಿರಣ್ಮಯವಾದ ಅಂಡವು ಅದಕ್ಕಿಂತಲೂ ಹಿಂದೆಯೇ ಸೃಷ್ಟಿಯಾಗಿದ್ದ ನೀರಿನಲ್ಲಿ ಸಾವಿರಾರು ವರ್ಷಗಳ ಕಾಲ ಇರಲು ನೀನದನ್ನು ಒಡೆದು 'ವಿರಾಟ್' ಎಂಬ ಹೆಸರಿನ ಹದಿನಾಲ್ಕು ಲೋಕಗಳ ರೂಪದಲ್ಲಿ ಪ್ರಕಟಿಸಿ, ಎಲ್ಲ ಚರಾಚರ ಜೀವಗಳಲ್ಲೂ ಸಹಸ್ರಾರು ಕೈಗಳು, ಕಾಲುಗಳು, ತಲೆಗಳಾಗಿ ನೀನೇ ಬೆಳಗಿದೆ. ಹೇ ಗುರುವಾಯುರಪ್ಪ! ಅಂತಹ ನೀನು, ಸಮಸ್ತ ರೋಗಗಳಿಂದಲೂ ನನ್ನನ್ನು ರಕ್ಷಿಸು. (10)

**(ಮುಂದುವರಿಯುವುದು)**

# ೧೦೭, "ಕೇಶವ ಕೃಪ" ೧೭ನೇ ಕ್ರಾಸ್, ೧ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-೫೬೦ ೦೧೦




## ಗುರುನಾನಕರ ಜಯಂತಿ

ಪ್ರತಿ ವರ್ಷವೂ ಕಾರ್ತಿಕಮಾಸದ ಪೌರ್ಣಮಿಯ ದಿನವನ್ನು (ಈ ವರ್ಷ ನವೆಂಬರ್ 12ರಂದು ಮಂಗಳವಾರ) ಸಂತ ಗುರುನಾನಕರ ಜನ್ಮದಿನವನ್ನಾಗಿ ಆಚರಿಸಲಾಗುತ್ತದೆ. ಭಾರತದಲ್ಲಿನ ಸಿಖ್ ಜನಾಂಗದವರಿಗೆ ಈ ದಿನ ಪುಣ್ಯದಿನ. ಭಕ್ತಿಯಿಂದ ನಾನಕರ ಜನ್ಮದಿನವನ್ನು ಆಚರಿಸುತ್ತಾರೆ.

# ಸಮನ್ವಯದ ಸಂತ ಗುರುನಾನಕರು

ಭಾರತಾಂಬೆಯ ಗರ್ಭದಲ್ಲಿ ಜನಿಸಿದ ಮಹಾ ಮಹಾ ಸಂತರಲ್ಲಿ ಗುರುನಾನಕ್ ಕೂಡ ಒಬ್ಬರು. "ಸಮಾನತೆಯ ಗುರು ಸಂತ ನಾನಕ್" ಎಂದೇ ಅವರನ್ನು ಕರೆಯಲಾಗಿದೆ. ಭರತಖಂಡದಲ್ಲಿ ಪ್ರಚಲಿತವಾಗಿದ್ದ ಹಿಂದೂ ಮತ್ತು ಮಹಮ್ಮದೀಯ ಮತಗಳಿಗೆ ಸಮಾನವಾಗಿದ್ದ ಧರ್ಮಾಂಶಗಳನ್ನು ಎತ್ತಿಹಿಡಿದು, ಪರಸ್ಪರ ಹೊಂದಿಕೊಂಡು ಬಾಳಬಲ್ಲ ಹೊಸ ಜನಾಂಗವೊಂದನ್ನು ರೂಪಿಸಿದವರು ಗುರುನಾನಕ್. ಸರ್ವ ಸಮಾನತೆ, ವಿಶ್ವ ಭ್ರಾತೃತ್ವ ಗುರುನಾನಕರ ಹೆಗ್ಗುರಿಯಾಗಿತ್ತು. ಭಾರತೀಯ ಪರಂಪರೆಯ ಕ್ಷಾತ್ರ ಮತ್ತು ಬ್ರಾಹ್ಮ ಶಕ್ತಿಗಳ ಸಂಗಮವನ್ನು ಅವರಲ್ಲಿ ಕಾಣಬಹುದಾಗಿದೆ.



■ಡಾ. ಅನಸೂಯಾದೇವಿ
ನಿವೃತ್ತ ಪ್ರಾಧ್ಯಾಪಕಿ, ಚಿಂತಕಿ, ಕಾದಂಬರಿಗಾರ್ತಿ.

'ಸಿಖ್' ಪದವು ಸಂಸ್ಕೃತ ಭಾಷೆಯ 'ಶಿಷ್ಯ' ಪದದ ರೂಪಾಂತರ. ಸಿಖ್ ಪಂಥದ ಸ್ಥಾಪಕರೆನಿಸಿದ ಗುರುನಾನಕರು ಕ್ರಿ.ಶ. 1469ರಲ್ಲಿ ಜನಿಸಿದವರು. ಈಗ ಪಾಕಿಸ್ತಾನಕ್ಕೆ ಸೇರಿರುವ ಶೇಖುಪುರದಲ್ಲಿ ಅತಿ ಸಾಮಾನ್ಯವಾದ ಬಡ ಕುಟುಂಬವೊಂದರಲ್ಲಿ ನಾನಕರು ಜನಿಸಿದರು. ಇವರ ಬಾಲ್ಯದ ಹೆಸರು "ನಾನಕ್ ಚಾಂದ್" ಎಂದು. ಈ ಮಗು ಬಾಲ್ಯದಿಂದ ಕಡೆಯ ಜೀವಿತಭಾಗದವರೆಗೂ ದೇವೋನ್ಮಾದದಲ್ಲೆ ಬಾಳುತ್ತ ಅಧ್ಯಾತ್ಮ ಶಕ್ತಿಯ ಆಗರವಾದಾತ, ಜೀವ ಜಗತ್ತುಗಳ ರಹಸ್ಯವನ್ನು ಭೇದಿಸಿ ದೇವಮಾನವನಾದಾತ. ಇದೆಲ್ಲಕ್ಕಿಂತಲೂ ಮಿಗಿಲಾಗಿ ಗುರುನಾನಕರನ್ನು ನಾವು ನೆನೆಯಬೇಕಾಗಿರುವುದು ಹೇಗೆಂದರೆ "ಭಯಂಕರವಾದ ಮೃತ್ಯು ದವಡೆಯಿಂದ ಹಿಂದೂ ಧರ್ಮವನ್ನು ಉಳಿಸಿ ಉದ್ಧರಿಸಿದವರು" ಎಂಬುದಾಗಿ. ಕಾಳರಾತ್ರಿ ಮುಸುಗಿದ್ದ ಹಿಂದೂ ಧರ್ಮಕ್ಕೆ ದಿವ್ಯಜ್ಯೋತಿ ತಂದು ಬೆಳಕಾದವರು ಎಂದು.

ಚಿಕ್ಕವನಿದ್ದಾಗಲಿಂದಲೂ ನಾನಕ್ ನೋಡುತ್ತಿದ್ದುದು ಪಂಜಾಬ್ ಭಾಗದಲ್ಲಿ ನಡೆಯುತ್ತಿದ್ದ ಹಿಂದೂ ಮುಸ್ಲಿಮರ ತೀವ್ರತರ ಘರ್ಷಣೆ, ಅನಾಹುತಗಳನ್ನೇ. ಮಧ್ಯ ಏಷ್ಯದಿಂದ ತೆರೆ ತೆರೆಯಾಗಿ ನುಗ್ಗಿ ಬರುತ್ತಿದ್ದ ಮಹಮ್ಮದೀಯರು ಇಲ್ಲಿ ಸುತ್ತಮುತ್ತಲೂ ನೆಲೆಸಿದ್ದ ರಾಜ್ಯಗಳ ಪ್ರಜೆಗಳನ್ನು ಊಹೆಗೂ ಮೀರಿದ ಕ್ರೌರ್ಯದಿಂದ ಅಮಾನುಷ ರೀತಿಯಲ್ಲಿ ಹಿಂಸಿಸಿ ಅತ್ಯಾಚಾರಗಳನ್ನೆಸಗಿದರು. ಜೊತೆಗೆ ಇಲ್ಲಿನ ಜನರಲ್ಲೇ ಅನೈಕ್ಯತೆ. ಇದು ಇನ್ನೂ ಇನ್ನೂ ಹೊರಗಿನವರ ಪೈಶಾಚಿಕ ವೃತ್ತಿಗೆ ಹೆಚ್ಚಿನ ಅನುವು ಮಾಡಿಕೊಟ್ಟಿತು. ಇನ್ನೇನು ಸನಾತನ ಸಂಸ್ಕೃತಿ ಪೂರ್ತಿಯಾಗಿ ಸತ್ತೇಹೋಗಬಹುದೆಂಬ ವಾತಾವರಣ ನಿರ್ಮಾಣವಾಗಿತ್ತು. ಸೂಕ್ಷ್ಮ ಸ್ವಭಾವದ, ಸಾತ್ವಿಕ ಗುಣಗಳ ಬಾಲಕ ನಾನಕ್ ಮೇಲೆ ಇವೆಲ್ಲ ತೀವ್ರತರ ಘಾಸಿ ಉಂಟುಮಾಡತೊಡಗಿತು.

ಬಾಲಕ ನಾನಕ್‌ನಿಗೆ ಮೊದಲಿಂದ ಶಾಲಾ ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಮ್ಮಿ. ಆದರೆ ಓದಿನ ಗೀಳು ತೀವ್ರವಾಗಿತ್ತು. ಅನೇಕ ಹಿಂದೂ, ಮುಸ್ಲಿಂ ಎರಡೂ ಕಡೆಯ ಧರ್ಮಗ್ರಂಥಗಳನ್ನು ತರಿಸಿಕೊಂಡು, ಗುಡ್ಡೆ ಹಾಕಿಕೊಂಡು ಎಲ್ಲವನ್ನೂ ಓದಿ ಅರ್ಥೈಸಿಕೊಳ್ಳತೊಡಗಿದ ಬಾಲಕ ತನ್ನ ಈ ಅಧ್ಯಯನದ ಹಿನ್ನೆಲೆಯಲ್ಲಿ ಎರಡೂ ಜನಾಂಗಗಳನ್ನು ವೈರ ಕಳಚಿಸಿ ಒಗ್ಗೂಡಿಸಲು ಅಪಾರವಾಗಿ ಪ್ರಯತ್ನಿಸಿದ. ತನಗಿಂತ ಹಿರಿಯರಾಗಿದ್ದೂ ದ್ವೇಷದಲ್ಲಿ ಹೋರಾಡುತ್ತಿದ್ದ ಜನಗಳನ್ನು ತಾನು ಶಾಂತರಾಗಲು ತಿಳಿಹೇಳಿ ದ್ವೇಷ ಸಲ್ಲದೆಂದು ಸಾರಿ ಸಾರಿ ಬೇಡಿಕೊಂಡ. ಬಾಲಕನ ಘೋಷವಾಕ್ಯ ಇದೊಂದೇ ಆಗಿತ್ತು: "ಹಿಂದೂ ಇಲ್ಲ, ಮುಸ್ಲಿಂ ಇಲ್ಲ, ಇರುವವನು ಮನುಷ್ಯ ಮಾತ್ರ" ಕೆಲವು ಸಂಖ್ಯೆಯಲ್ಲಿ ಹದಿ ಹರೆಯದ ಹುಡುಗರೂ ನಾನಕನಿಂದ

ಪ್ರಭಾವಿತರಾಗಿ ಅವನ ಜತೆಗೂಡಿದರು.

ಹೀಗೆಯೇ ಮುಂದುವರಿದ ಬಾಲಕ ಅಂದಿನ ದಿನಗಳದೊಂಬಿ, ದ್ವೇಷದ ಗಲಾಟೆಯನ್ನು ಸಾಕಷ್ಟು ಪರಿಣಾಮಕಾರಿಯಾಗಿ ನಿಲ್ಲಿಸಲು ಯಶಸ್ವಿಯಾದ. ಅವನ ಈ ಮನೋಧರ್ಮವೇ ಮುಂದುವರಿದು ನಾನಕನು ಅಂದಿನ ದಿನಗಳಲ್ಲಿ ಪ್ರಚಲಿತವಾಗಿದ್ದ ಹಿಂದೂ ಮತ್ತು ಮಹಮ್ಮದೀಯ ಮತಗಳಿಗೆ ಸಮಾನವಾಗಿದ್ದ ಧರ್ಮಾಂಶಗಳನ್ನು ಸಮಾನವಾಗಿ ಹೆಣೆದು ಎತ್ತಿ ಹಿಡಿದು ಬೋಧಿಸುತ್ತ ಪರಸ್ಪರ ಹೊಂದಿಕೊಂಡು ಬಾಳಬಲ್ಲ ಹೊಸ ಜನಾಂಗವನ್ನೇ ರೂಪಿಸಬಲ್ಲಂಥ ನಾಯಕ ಗುರುವೂ ಆದನು.

ಗುರುನಾನಕ್ ತುಂಬ ಸರಳ ಹಾಗೂ ಸಹಜತೆಯ ಸ್ವಭಾವದವರಾಗಿದ್ದರು. ಎಲ್ಲ ಬಗೆಯ, ಎಲ್ಲ ಜಾತಿಯ ಜನರೊಂದಿಗೆ ಬೆರೆಯುತ್ತ ಬೇಗನೆ ಆತ್ಮೀಯರಾಗಿಬಿಡುತ್ತಿದ್ದರು. ಹಿಂದೂ, ಮುಸ್ಲಿಂ ಮುಖಂಡರೊಂದಿಗೆ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದರು. ಇಷ್ಟಲ್ಲದೆ ಬಾಲಕನಾಗಿದ್ದಾಗಲಿಂದಲೂ ಪದ್ಯಗಳನ್ನು ರಚಿಸುವ, ಅವುಗಳನ್ನು ಹಾಡುತ್ತಿರುವ ಹವ್ಯಾಸ ಬೆಳೆದುಬಂದಿತ್ತು. ಹೆಚ್ಚು ಕಾಲ ಕಾಡುಮೇಡುಗಳಲ್ಲಿ ಅಲೆಯುತ್ತಾ, ಏಕಾಂಗಿಯಾಗಿ ಹಾಡುಗಳನ್ನು ಹೇಳಿಕೊಳ್ಳುತ್ತಾ ತಿರುಗಾಡುವ ಅಭ್ಯಾಸವಿದ್ದಿತ್ತು. ಹೀಗೆ ಹಿಂದೂ ಮುಸ್ಲಿಂ ಎರಡೂ ವರ್ಗದವರ ಜೊತೆಗೆ ತಿರುಗಾಡುತ್ತಾ ಹಾಡುತ್ತಿದ್ದುದರಿಂದಲೂ ಅವರಿಗೆ ಎರಡು ವರ್ಗದಿಂದ ಸಾಕಷ್ಟು ಮಂದಿ ಶಿಷ್ಯರಾದರು, ಹಿಂಬಾಲಕರಾದರು.

> ದಾಖಲೆಯೊಂದರ ಪ್ರಕಾರ ಗುರುನಾನಕ್ 1469ರಲ್ಲಿ ಈಗಿನ ಪಾಕಿಸ್ತಾನದ ಬಳಿಯ ತಾಲವಂಡಿ ಎಂಬ ಗ್ರಾಮದಲ್ಲಿ (ಲಾಹೋರ್ ಬಳಿಯಿರುವ ಗ್ರಾಮ) ಕಲ್ಯಾಣ್‌ಚಂದ್ ಬೇಡಿ ಮತ್ತು ತೃಪ್ತಾ ಬೇಡಿ ದಂಪತಿಯ ಮಗನಾಗಿ ಜನಿಸಿದರು.
>
> 1487ರಲ್ಲಿ ಅವರಿಗೆ ಸೂಲಕ್ಕಾನಿ (ಅಥವಾ ಸುಲಾಖನಿ) ಯವರೊಂದಿಗೆ ವಿವಾಹವಾಯಿತು. ಶ್ರೀಚಂದ್ ಮತ್ತು ಲಕ್ಷ್ಮೀದಾಸ್ ಎಂಬ ಇಬ್ಬರು ಮಕ್ಕಳು ಇವರಿಗೆ.

ನಾನಕರಿಗೆ ಹನ್ನೊಂದನೇ ವಯಸ್ಸಿದ್ದಾಗಲೇ ಯಜ್ಞೋಪವೀತ ಧರಿಸುವ ಸಮಾರಂಭ ಮಾಡಲು ನಿಶ್ಚಯಿಸಿದ ಹಿರಿಯರೊಂದಿಗೆ ಈತ

"ತುಂಡಾಗದ, ಮಣ್ಣಾಗದ,
ಸುಟ್ಟು ಬೂದಿಯಾಗದ,
ಎಂದೂ ಕಳೆದು ಹೋಗದ
ದಾರ ನಿಮ್ಮ ಬಳಿ ಇದ್ದರೆ
ನೀಡಿ, ಅದನು ಮಾತ್ರ ಧರಿಸುವೆ"

ಎಂದು ಹಾಡಿದ್ದನಂತೆ. ಪ್ರತಿಯೊಂದರಲ್ಲೂ ಅರ್ಥ ಹುಡುಕುವ, ಅರ್ಥ ಕಾಣದಿದ್ದರೆ ತತ್‌ಕ್ಷಣವೇ ಅದನ್ನು ಪ್ರಶ್ನಿಸುವವನಾಗಿಯೇ ಬೆಳೆದರು. ತಂದೆ ತಾಯಿಯು ಇವರಿಗೆ ವಿವಾಹ ಮಾಡಿ ಎರಡು ಮಕ್ಕಳಾದರೂ ಬುದ್ಧಿ ಬರದೇ ಸದಾ ಹಾಡುತ್ತ, ಧಾರ್ಮಿಕ ಚರ್ಚೆ ಮಾಡುತ್ತ ಜನಾಂಗದ ಒಗ್ಗಟ್ಟಿಗಾಗಿ ಶ್ರಮಿಸುವುದೇ ಇವನ ಕಾಯಕವಾಯಿತಲ್ಲ ಎಂದು ವ್ಯಥೆ ಪಟ್ಟು ಸ್ವಯಂ ಉದ್ಯೋಗ ಮಾಡಲೆಂದು ಅಂಗಡಿ ಹಾಕಿಸಿಕೊಟ್ಟರು. ತಿಂಗಳೊಪ್ಪತ್ತಿನಲ್ಲಿ ಅಂಗಡಿಯಲ್ಲಿದ್ದ ಸಾಮಾನು, ವಸ್ತುಗಳನ್ನೆಲ್ಲ ಬಡಬಗ್ಗರಿಗೆ ಉದಾರವಾಗಿ ದಾನ ಮಾಡಿದ ನಾನಕರಿಗೆ ಬರಿಗೈಯಾಗಿ ಮನೆಯವರಿಂದ ಬೈಗುಳವಷ್ಟೇ ಉಳಿಯಿತು. ಪರಿಸರ ಬದಲಾದರಾದರು ಬುದ್ಧಿ ಬಂದೀತೆಂದು ಅವರ ಸಹೋದರಿಯ ಊರಾದ ಸುಲ್ತಾನ್‌ಪುರಕ್ಕೆ ಕಳುಹಿಸಿದರು. ಅಲ್ಲಿನ ಆಹಾರ ಪದಾರ್ಥ ವಿತರಣಾ ಇಲಾಖೆಯಲ್ಲಿ ಎರಡು ವರ್ಷ ಪ್ರಾಮಾಣಿಕನಾಗಿ ಕೆಲಸ ಮಾಡಿದ ನಾನಕರು ಅಲ್ಲಿಯೂ ನೆಲೆಯಾಗದೆ ಮುಂದೆ ಹೇಳದೆ ಕೇಳದೆ ಊರು ಬಿಟ್ಟು ಹೋದರು. ಹಾಗೆಯೇ ಪರಿವ್ರಾಜಕರಾಗಿ ಊರೂರು ತಿರುಗಿದರು. ಹಲವು ಧರ್ಮೀಯ ಪಂಥಗಳ, ಭಕ್ತಿಪಂಥದ, ಸೂಫಿ...ಆಚರಣೆಯ ಸಾಧು ಸಂತರು, ದಾಸರು ಹೀಗೆ ಹಲವು ಜನರೊಡನೆ ಬೆರೆತರು. ವಿಚಾರ ವಿನಿಮಯ ನಡೆಸಿದರು. ತಮ್ಮ ವಾದದ ನಿಲುವನ್ನು ದೃಢವಾಗಿ ಸ್ಪಷ್ಟಪಡಿಸಿದರು.

ಉತ್ತರ ಭಾರತದಿಂದ ಹೊರಟು ಪೂರ್ವದ ಅಸ್ಸಾಂ, ದಕ್ಷಿಣದ ರಾಮೇಶ್ವರದವರೆಗೂ ನಾನಕ್ ಸಂಚರಿಸುತ್ತ ಇಡೀ ಭಾರತದ ಎಲ್ಲ ಭಾಗಗಳು, ಸಿಂಹಳ, ಅರೇಬಿಯಾ, ಮೆಖ್ಖಾ, ಮದೀನ ಹೀಗೆ ಅನೇಕಾನೇಕ ಕಡೆಗೆ ಭೇಟಿಯಿತ್ತರು. ಹೋದೆಡೆಯಲ್ಲೆಲ್ಲ ಸಮಾನತೆಯನ್ನೇ ಬೋಧಿಸಿದರು. ಧರ್ಮಾಂಧತೆಯ ವಿರುದ್ಧ ಧಾರ್ಮಿಕ ಹೋರಾಟ ನಡೆಸಿದರು. ಆಗ ತೀವ್ರವಾಗಿ ಮುಸ್ಲಿಮರಲ್ಲಿ ಧಾರ್ಮಿಕ ಅಂಧತೆ ನೆಲೆಸಿತ್ತು. ಅದನ್ನು ನಾನಕರು ನಿರ್ಭಿಡೆಯಿಂದ ವಿರೋಧಿಸಿ ಖಂಡಿಸಿದರು. ಅಂತೆಯೇ ಹಿಂದೂಗಳ ಹೀನ ಅರ್ಥ ಶೂನ್ಯ ಶಾಸ್ತ್ರಾಚರಣೆಗಳನ್ನು ನಿರ್ದಯವಾಗಿ ಖಂಡಿಸಿದರು. ಸರ್ವ ಸಮಾನತೆ, ವಿಶ್ವ ಭ್ರಾತೃತ್ವದಲ್ಲಿ ಜನರನ್ನು ಕೊಂಡೊಯ್ಯುವುದೇ ನಾನಕರ ಗುರಿಯಾಗಿತ್ತು. ಅಂದಿನ ಮಾನವರಲ್ಲಿ ಅಟ್ಟಹಾಸ ಗೈಯ್ಯುತ್ತಿದ್ದ ಜಾತಿ ಮತ ಪಂಥಗಳ ಪ್ರತ್ಯೇಕತಾ ಮನೋಭಾವವನ್ನು ಖಂಡಿಸಿ ಸರ್ವ ಸಮರಸ ಜೀವನದ ಆದರ್ಶವನ್ನು ನಾನಕರು ಎತ್ತಿ ಹಿಡಿದರು.

> **ಗುರುನಾನಕರ ಪದ್ಯವೊಂದು ಈ ಕೆಳಗಿನ ಅರ್ಥ ನೀಡುತ್ತದೆ:**
>
> "ಧರ್ಮ ಎಲ್ಲಿದೆ? ಅದು ಕಾವಿಯಲ್ಲಿಲ್ಲ
> ಅವ ಹಿಡಿಯುವ ದಂಡದಲೂ ಇಲ್ಲ.
> ಅವ ಬಳಿಯುವ ಬೂದಿಯಲೂ ಇಲ್ಲ.
> ಬೋಳಿಸಿದ ತಲೆಯಲಿಲ್ಲ, ಶಂಖನಾದದಲಿಲ್ಲ.
>
> ಧರ್ಮವಿದೆ, ಎಲ್ಲಿ? ಬದುಕಿನೊಳಗಣ
> ದೋಷಗಳ ಮಧ್ಯದಲ್ಲಿದ್ದೂ ಗೆಲ್ಲುವುದರಲ್ಲಿ!
> ಭೀತಿ ಅನುಮಾನ ಚಿತ್ತ ಚಾಂಚಲ್ಯ ಕಳೆಯುವುದರಲ್ಲಿ
> ಎಲ್ಲರನ್ನು ತನ್ನಂತೆ ಎಂದು ಭಾವಿಸುವುದರಲ್ಲಿ!

ನಾನಕರ ಬಗ್ಗೆ ಅವರ ಜೀವಿತ ಕಾಲದಲ್ಲೇ ಅವರ ಅನುಯಾಯಿಗಳಿಂದ ಹಾಡೊಂದು ಹುಟ್ಟಿ ಜನಪ್ರಿಯವಾಯಿತು. "ಗುರುನಾನಕ್ ಷದ್ ಫಕೀರ್! ಹಿಂದೂ ಕಾ ಗುರು, ಮುಸಲ್ಮಾನಕಾ ಪೀರ್" (ಗುರುನಾನಕರು ಒಬ್ಬ ಫಕೀರ; ಹಿಂದೂಗಳಿಗೆ ಗುರು, ಮುಸಲ್ಮಾನರಿಗೆ ಪೀರ್) ನಾನಕರ ಕಾಲದಲ್ಲಿ ಅವರ ಅನುಯಾಯಿಗಳು ಹಿಂದೂಗಳೂ ಆಗಿರದೆ, ಮುಸಲ್ಮಾನರೂ ಆಗಿರದೆ ಕೇವಲ ಮಾನವರಾಗಿದ್ದರು ಎನ್ನಲಾಗಿದೆ. ಮುಂದೆ ಅವರ ಅನುಯಾಯಿಗಳದೇ ಸಿಖ್ ಎಂಬ ಪ್ರತ್ಯೇಕ ವರ್ಗವಾಯಿತು. ಶಿಷ್ಯ ಎಂಬ ಅರ್ಥದ "ಸಿಖ್" ಹೆಸರಿನ ಧರ್ಮ ಆದದ್ದು ನಾನಕರ ಕಾಲದ ಬಳಿಕವೇ. ಪಂಜಾಬೀ ಭಾಷೆಯಲ್ಲಿ 'ಸಿಖ್' ಎಂದರೆ ಕಲಿಯುವವ ಎಂಬ ಅರ್ಥವಿದೆ.

ದೈವೀಪ್ರೇಮ, ಮಾನವ ಪ್ರೀತಿಗಳು ನಾನಕರ ಉಚ್ಛ್ವಾಸ, ನಿಃಶ್ವಾಸಗಳಾಗಿದ್ದವೆಂಬಂತೆ ಬಾಳಿ ಬದುಕಿದವರಾದರು. ಸ್ವಭಾವವೋ ತೀರ ಮೃದು! ಜೊತೆಗೆ ಬೇಕಾದಷ್ಟು ಹಾಸ್ಯ ಪ್ರವೃತ್ತಿಯ ಅವರ ನಡೆನುಡಿಗಳು ಎಲ್ಲವೂ ಸೇರಿ ಅವರಿಗೆ ಜನಮನಪ್ರಿಯತೆ ಲಭ್ಯವಾಗುವಂತೆ ಮಾಡಿತು. ಪ್ರೀತಿಯೊಂದೇ

ಅವರು ತೋರುತ್ತಿದ್ದುದು, ಅದೇ ಮುಖ್ಯ ಆಕರ್ಷಣೆಯಾಗಿ ಎಲ್ಲರನ್ನೂ ಬೇಗನೇ ಸೆಳೆಯುತ್ತಿತ್ತು. ಹೀಗೆ ಅನುಯಾಯಿ ಶಿಷ್ಯಂದಿರನ್ನು ಕೂಡಿಕೊಂಡು ಮುಸ್ಲಿಂ, ಹಿಂದೂ ಧರ್ಮಗಳೆರಡರ ಒಳಿತಿನ ಸಾರವನ್ನು ಪಡೆದು ನಾನಕರು ರೂಪಿಸಿದ ಧರ್ಮವೇ ಮುಂದೆ "ಸಿಖ್ ಧರ್ಮ"ವಾಯಿತು. ಅವರ ಕಾಲದ ಅನಂತರ ವ್ಯಾಪಕ ಪ್ರಚಾರ ಪಡೆಯಿತು.

ಗುರುನಾನಕರ ಬೋಧನೆಗಳು ಮಂತ್ರಗಳ ರೂಪದಲ್ಲಿಲ್ಲ. ಅವೆಲ್ಲ ಸರಳವಾದ ಆಡುಭಾಷೆಯಲ್ಲಿವೆ, ಸರಳವಾದ ಶೈಲಿಯ ಹಾಡುಗಳ ರೂಪದಲ್ಲೂ ಇವೆ. ಅವರ ಬೋಧನೆಗಳಾವುವೂ ಒತ್ತಾಯ, ಒತ್ತಡದ ಹೇರಿಕೆಯ ರೂಪದಲ್ಲಿಲ್ಲ. ಮನನೀಯ ಪ್ರೀತಿ ಮಾತುಗಳ ರೂಪದಲ್ಲಿವೆ.

## ಬಾಬರನ ಸೆರೆಯಲ್ಲಿ ಗುರು

ಭಾರತದ ಮೇಲೆ ಬಾಬರನ ದಾಳಿಯ ಸಮಯದಲ್ಲಿ ನಾನಕ್‌ರನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು ಎನ್ನಲಾಗಿದೆ. ಆದರೆ ನಾನಕರು ಸೆರೆಮನೆಯಲ್ಲೂ ಹಾಡುತ್ತ ದೇವರನ್ನು ನೆನೆದು ಭಜಿಸುತ್ತ, ಇತರರಿಗೆ ತಮಾಷೆ ಮಾಡಿ ನಗಿಸುತ್ತ ಕಾಲ ಕಳೆಯುತ್ತಿದ್ದರಂತೆ. ಇದನ್ನೆಲ್ಲ ಬಾಬರನು ದೂತರ ಮೂಲಕ ಅರಿತು ಹತ್ತಿರ ಬಂದು ನಾನಕರನ್ನು ನೋಡಿ ಪ್ರಭಾವಿತರಾಗಿ ಅವರನ್ನು ಬಿಡುಗಡೆ ಮಾಡಿದನಂತೆ.

ನಾನಕರ ಬೋಧನಾ ವಾಕ್ಯದಲ್ಲಿ ಬಹು ಮುಖ್ಯವಾದುದು "ದೇವರನ್ನು ಪ್ರೀತಿಸುವ ಬದಲು ಪರಸ್ಪರರನ್ನು ಪ್ರೀತಿಸಿ" ಎಂಬುದು. "ರಾಜನಾಗಲಿ, ಸೇವಕನಾಗಲಿ, ಗುರುವಿರಲಿ, ಶಿಷ್ಯನಿರಲಿ, ಶ್ರೀಮಂತನಿರಲಿ, ದಟ್ಟ ದರಿದ್ರನಾಗಲಿ–ಎಲ್ಲರೂ ಪರಸ್ಪರ ಭಾಯಿಗಳು. (ಸೋದರರು) ದೇವರ ಎದುರಿನಲ್ಲಿ ನಿಂತಾಗ ಜಾತಿ ಹುಟ್ಟುಗಳ ಪ್ರಶ್ನೆ ಏಳುವುದಿಲ್ಲ. ಆತನ ಮುಂದೆ ಒಪ್ಪಿಸಬೇಕಾದದ್ದು 'ಹೇಗೆ ಬಾಳಿದೆ' ಎಂಬುದನ್ನು" ಎಂದಿದ್ದಾರೆ ಗುರುನಾನಕರು.

"ದೇವರ ನಾಮಸ್ಮರಣೆ ಸಕಲ ಭವರೋಗಗಳಿಗೂ ಸಿದ್ಧೌಷಧ. ಭಗವದ್ ವಾಣಿ ಶುದ್ಧ ಹೃದಯದಲ್ಲಿ ಮಾತ್ರ ನಿನದಿಸುತ್ತದೆ. ಆದ್ದರಿಂದ ಮನಸ್ಸು ಮೊದಲು ಶುದ್ಧವಾಗಲಿ. ಬಾಳು ಹಸನಾಗಲು ಮೂರು ಬಗೆಯ ಸಾಧನೆಗಳು ಬಲು ಮುಖ್ಯ. ಅವು ಯಾವುವು ಎಂದರೆ 1) ಸತ್‌ನಾಮ (ನಾಮ ಜಪ); 2) ತಹಲ್ (ಸೇವೆ); ಮತ್ತು 3) ಭಕ್ತಿ (ಪ್ರೀತಿ). ಯಾವಾಗಲೂ ಮಾನವನ ಇಚ್ಛೆಯು ದೈವೇಚ್ಛೆಗೆ ಅನುಸಾರಿಯಾಗಬೇಕು" ಎಂದು ಬೋಧಿಸಿದ್ದಾರೆ.

ಒಮ್ಮೆ ಗುರುನಾನಕರು ಹಿಮಾಲಯಕ್ಕೆ ಹೋಗಿದ್ದಾಗ ಅಲ್ಲಿದ್ದ ಸಿದ್ಧರು "ಎಲ್ಲಿಂದ ಬಂದೆ? ಭರತ ಖಂಡದ ಜನ ಹೇಗಿದ್ದಾರೆ? ಸ್ಥಿತಿಗತಿ ಉತ್ತಮವಿದೆಯೆ? ಎಂದು ಪ್ರಶ್ನಿಸಿದಾಗ ನಾನಕರು ಹೀಗೆ ಹಾಡಿದರಂತೆ:

"ಈ ಕಲಿಯುಗ ಕತ್ತು ಕೊಯ್ಯುವ
ಕತ್ತಿ, ಎಲ್ಲರೂ ಹಿಡಿದಿಹರದನು
ರಾಜರೆಲ್ಲ ಕಟುಕರಾಗಿಹರು;
ಧರ್ಮಕೆ ವನವಾಸವೇ ಗತಿ
ಮಿಥ್ಯೆಯ ಕತ್ತಲು ಎಲ್ಲೆಡೆ ಮುಸುಕಿದೆ
ಸತ್ಯವೆಂಬ ಚಂದ್ರ ಅಸ್ತಂಗತ
ಈ ಕಗ್ಗತ್ತಲೆಯಲಿ ಹಾದಿಯ ಕಾಣದೆ
ತೊಳಲಾಡುತಿಹೆನು ನಾನು
ಗಳಗಳನಳುತಿಹೆನು ನಾನು ॥"

ತಾನು ಬೋಧಿಸಿದ್ದಕ್ಕೆ ತಾನೇ ಒಂದು ಜ್ವಲಂತವಾದ



ಗುರುನಾನಕ್ ಮತ್ತು ಗುರುಗೋವಿಂದ್ ಸಿಂಗ್

ಉದಾಹರಣೆಯಾಗಿ ನಾನಕರು ಬಾಳಿದರು. ದುಡಿತದಲ್ಲಿ ನಿಷ್ಠೆ, ದೇವತಾರಾಧನೆ, ಪ್ರೇಮ ಮತ್ತು ಸೇವೆ ಇವು ನಾನಕರು ರೂಪಿಸಿದ ನೂತನ ಸಮಾಜದ ಹೆಗ್ಗುರುತುಗಳು. ಅವರ ಕಾಲದಲ್ಲಿ ಅವರು ಪಟ್ಟ ಶ್ರಮ ಸಾರ್ಥಕವಾಗಿ ಅವರೇ ರೂಪಿಸಿದ ಆ ಸಮಾಜದಲ್ಲಿ ನಿಸ್ವಾರ್ಥದ ಬೆಳಕು ಪ್ರಜ್ವಲಿಸಿ ನೂತನ ಜೀವನ, ನೂತನ ಭರವಸೆಗಳು ಮೂಡಿದ್ದವು. ಅಂದಿನ ಜನಮನ ಹಸನಾಗಿ ಪ್ರೇಮ ಶಾಂತಿಗಳ ಹೂದೋಟವೇ ಆಗಿ ಭಕ್ತಿಯ ನಂದನವನವೇ ಆಗಿತ್ತು.

ಗುರುನಾನಕರು ಎಪ್ಪತ್ತು ವರ್ಷಗಳ ಕಾಲ ಬದುಕಿದ್ದರು. ಈಗಿನ ಪಾಕಿಸ್ತಾನದ ಭಾಗವಾಗಿರುವ ಕರ್ತಾರಪುರದಲ್ಲಿ 1539ರ ಸೆಪ್ಟೆಂಬರ್ 22ರಂದು ಅವರು ನಿಧನರಾದರೆಂದು ದಾಖಲೆಯೊಂದು ತಿಳಿಸುತ್ತದೆ. ನಿಸ್ವಾರ್ಥದ ಬೆಳಕನ್ನು ಸಮಾಜದಲ್ಲಿ ಹರಡಿದ ಗುರುನಾನಕರ ಪ್ರಭಾವವು ಇಂದಿಗೂ ಅಚ್ಚಳಿಯದೇ ಉಳಿದು ಬಂದಿದೆ. ಆತನ ಸಂತವಾಣಿ ಅನುರಣಿತವಾಗುತ್ತಿದೆ. ಹಿಂದೂಗಳಿಗೂ ಅವರು ಒಂದು ಮಾದರಿ; ಮುಸ್ಲಿಮರಿಗೂ ಅವರೊಂದು ಮಾದರಿ. ಭಾವೈಕ್ಯಕ್ಕೆ ಅವರೊಂದು ದೀಪ.

ಹಿಂದೂ, ಮುಸ್ಲಿಂ ಧರ್ಮಗಳ ಆಚರಣೆಯಲ್ಲಿದ್ದ ಲೋಪದೋಷಗಳನ್ನು ಕುರಿತು ನಾನಕರು ಮಾತನಾಡುತ್ತಿದ್ದಾಗ ಅವರನ್ನು ಮುಸ್ಲಿಂ ಖಾಜಿಯೊಬ್ಬ ಪ್ರಶ್ನಿಸಿದನಂತೆ:

"ಏನಯ್ಯಾ? ನಿನ್ನ ದೃಷ್ಟಿಯಲ್ಲಿ 'ಮುಸ್ಲಿಂ' ಎಂದರೆ ಏನು ಹಾಗಾದರೆ?" ನಾನಕರ ಉತ್ತರ ಹೀಗಿತ್ತು:

"ಕರುಣೆಯೇ ಮಸೀದಿ, ಭಕ್ತಿಯೇ ಚಾಪೆ, ಮನುಷ್ಯತ್ವವೇ ಕುರಾನು; ಸಹನೆ, ಸನ್ನಡತೆಗಳೇ ಉಪವಾಸ, ನಡತೆಯ ಒಳ್ಳೆತನವೇ 'ಕಾಬಾ'ಯಾತ್ರೆ, ಪ್ರಾರ್ಥನೆಯೇ ಜಪಮಣಿ ಹೀಗೆ ಇರುವವನೇ ನಿಜವಾದ ಮುಸ್ಲಿಂ."

ಸಿಖ್ ಜನಾಂಗದವರಿಗೆ ದೇವರು ಮತ್ತು ಗುರು ಬೇರೆ ಬೇರೆಯಲ್ಲ. ಸಿಖ್ ಪಂಥದ ಸಂಸ್ಥಾಪಕರೂ ಮೊದಲ ಗುರುಗಳೂ ಎಂದಾದ ಗುರುನಾನಕರೇ ಅವರಿಗೆ ದೇವರಾದರು.

ಗುರುನಾನಕರ ಬಗ್ಗೆ ಗುರುದಾಸ್ ಎಂಬುವವರು ಬರೆದಿರುವ ಜೀವನಚರಿತ್ರೆ "ಜನಮಸಾಖಿಸ್" ಎಂಬ ಗ್ರಂಥ. ಇದರಲ್ಲಿ ಅವರು ಗ್ರಂಥ "ಗುರುಮುಖಿ"ಯನ್ನೂ ರಚಿಸಿದ್ದಾರೆ. ಈ ಗುರುಮುಖಿಯಲ್ಲಿ ವಿಶೇಷವಾಗಿ ಗುರುನಾನಕರು ಜನಸಮೂಹಕ್ಕೆ ಬೋಧಿಸಿದ ಉಪದೇಶಾಮೃತಗಳು ದಾಖಲಾಗಿವೆ. ಆ

ಉಪದೇಶಾಮೃತಗಳಲ್ಲಿ ಕೆಲವು ಹೀಗೆ ಇವೆ:

**ಮೊದಲನೆಯದು:** "ವಾಂದ್ ಚಾಕೋ"-ಎಂದರೆ ನಾವು ಸ್ವಾರ್ಥಕ್ಕಾಗಿ ಬದುಕಬಾರದು. ಎಲ್ಲರ ಒಳಿತಿಗಾಗಿ ಬದುಕಬೇಕು. ಎಲ್ಲರಿಗೂ ಹಂಚುವ ಮೂಲಕ ತೃಪ್ತಿ ಪಡೆಯಬೇಕು.

**ಎರಡನೆಯದು:** ನಾವು ಪ್ರಾಮಾಣಿಕವಾಗಿ ಬದುಕಬೇಕು. ಯಾವಾಗಲೂ ದೇವರ ಸ್ಮರಣೆ ಮಾಡುತ್ತಿರಬೇಕು.

**ಮೂರನೆಯದು:** ಭಗವಂತನೇ ನಮಗೆ ಎಲ್ಲವೂ ಆಗಿದ್ದಾನೆ ಎಂಬುದನ್ನು ತಿಳಿದು ಅದರಂತೆಯೇ ಬಾಳಬೇಕು.

ಇಂಥ ಅನೇಕ ಉಪದೇಶಗಳನ್ನು ನೀಡುತ್ತಾ, ಅದರಂತೆಯೇ ತಾವೂ ಬಾಳಿ ಬದುಕುತ್ತ, ಈ ಮೂಲಕ ಜನರು ಋಜು ಮಾರ್ಗದಲ್ಲಿಯೇ ಸಾಗುವಂತೆ ಮಾಡಿದವರು ಗುರುನಾನಕರು.

## ಗುರು ಗ್ರಂಥ ಸಾಹಿಬ್

ಸಿಖ್ ಪಂಥದಲ್ಲಿ ಬಂದ ಎಲ್ಲ ಹತ್ತು ಮಂದಿ ಗುರುಗಳ ಒಟ್ಟು ವಿಚಾರಧಾರೆಯ ಕೃತಿಯಾಗಿ ಮೂಡಿರುವುದೇ ಗುರು ಗ್ರಂಥ ಸಾಹಿಬ್. ಸಿಖ್ಖರಿಗೆ ಈ ಗ್ರಂಥವೇ ಪರಮಗುರು. ಇದು ಜಗತ್ತಿನಲ್ಲಿಯೇ ಒಂದು ವಿಶಿಷ್ಟ ಗ್ರಂಥವೆನ್ನಿಸಿಕೊಂಡಿದೆ. ಇದರಲ್ಲಿ ಗುರುನಾನಕರಿಂದ ಮೊದಲುಗೊಂಡು ಸಿಖ್ ಗುರುಗಳೆಲ್ಲರ ವಿಚಾರಗಳು ಪದ್ಯಗಳ ಜೊತೆಯಲ್ಲಿಯೇ ಹಿಂದೂ ಮುಸ್ಲಿಂ ಗುರುಗಳನೇಕರ ವಿಚಾರಗಳು, ಪದ್ಯಗಳು, ಎಲ್ಲವೂ ಸೇರಿ ಕ್ರೋಡೀಕರಣಗೊಂಡು ಈ ಮೂಲಕ ಈ ಗ್ರಂಥ ಐತಿಹಾಸಿಕ ಮಹತ್ತ್ವವನ್ನೂ ಪಡೆದುಕೊಂಡಿದೆ. ಈ ಗ್ರಂಥದಿಂದಾಗಿ "ಪಾವಿತ್ರ್ಯ" ಎಂಬ ಪದಕ್ಕೆ ಹೊಸ ಅರ್ಥವೇ ಸೃಷ್ಟಿಯಾಗಿದೆ ಎಂದರೆ ಉತ್ಪ್ರೇಕ್ಷೆಯಿಲ್ಲ.

ಗುರು ಗ್ರಂಥ ಸಾಹಿಬ್ ಬೃಹತ್ ಗ್ರಂಥವಾಗಿದ್ದು 1430 ಶ್ಲೋಕಗಳನ್ನು ಹೊಂದಿದೆ. ಪ್ರಾರ್ಥನೆಯ ಹಾದಿ ಮತ್ತು ಮೂಲ ಸಿಖ್ಖರಿಗೆ ಇದು ಆದಿಗ್ರಂಥವೇ ಆಗಿದೆ. ಧರ್ಮ ಮತ್ತು ತತ್ತ್ವದ ಎಲ್ಲ ಬಗೆಯ ಪ್ರಶ್ನೆಗಳಿಗೂ ಈ ಗ್ರಂಥವೇ ಉತ್ತರವಾಗಿದೆ. "ನಾವೆಲ್ಲ ಮನುಷ್ಯರೂ ಒಂದೇ" ಎಂಬ ಭಾವನೆಯನ್ನು ಪ್ರಕಟಿಸಿರುವುದೇ ಈ ಗ್ರಂಥದ ಸಾರ ಮತ್ತು ಶಕ್ತಿಯಾಗಿದೆ. "ಇದು ಮಾನವ ಹೃದಯದ ಬಗ್ಗೆ ಮಾತನಾಡುತ್ತದೆ ಮತ್ತು ಮನಸ್ಸಿನ ಹುಡುಕಾಟದ ಬಗ್ಗೆಯೂ ತಿಳಿಸುತ್ತಾ ಉತ್ತರವನ್ನೂ ಕೂಡ ನೀಡುತ್ತದೆ" ಎಂದು ಗೋಪಾಲ್‌ಸಿಂಗ್ ಎಂಬ ಭಾಷಾ ತಜ್ಞರು 1960ರಲ್ಲಿ ಹೇಳಿಕೆ ನೀಡಿದ್ದಾರೆ.

### ಗುರುನಾನಕರು-ಕನ್ನಡನಾಡಿನಲ್ಲಿ

ಮಹಾರಾಷ್ಟ್ರದ "ನಾಂದೇಡ್"ಗೆ ನಾನಕರು ಬಂದು ಕೆಲಕಾಲವಿದ್ದು ಅಲ್ಲಿಂದ ಬೀದರ್‌ಗೂ ಬಂದು ಇಲ್ಲಿನ ಗುಹೆಯೊಂದರಲ್ಲಿ ತಂಗಿದ್ದರು. ಇದರ ದ್ಯೋತಕವಾಗಿ ಬೀದರಿನ ಆ ಗುಹೆಯ ಒಳಗಿರುವ ಝರಿ ಅಥವಾ ಹಳ್ಳವನ್ನು "ನಾನಕ್ ಝರಾ" ಎಂದು ಇಂದಿಗೂ ಕೂಡ ಕರೆಯುತ್ತಾರೆ. ಇದು ಕನ್ನಡನಾಡಿನೊಂದಿಗೆ ಗುರುನಾನಕರನ್ನು ಹೆಣೆದ ಬಂಧುತ್ವದ ನೆಲೆ. ಇಂದಿಗೂ 'ನಾಂದೇಡ್'ನ ಗುರುದ್ವಾರವು ಸಿಖ್ಖರ ಪ್ರಮುಖ ಪಂಚತೀರ್ಥಗಳಲ್ಲಿ ಒಂದು.

ಸಮನ್ವಯದ ಸಂತ ಗುರುನಾನಕರು ತಮ್ಮ ಇಹಲೋಕದ ಬದುಕನ್ನು ಮುಗಿಸಿದ ಮೇಲೆ, ಇವರ ನೆನಪಿಗಾಗಿ ಹಿಂದೂಗಳು, ಮುಸ್ಲಿಮರು ಸೇರಿ ರಾವಿ ನದಿ ದಂಡೆಯಲ್ಲಿ ಭವ್ಯ ಸ್ಮಾರಕವೊಂದನ್ನು ನಿರ್ಮಿಸಿದ್ದಾರೆ. ಗುರುನಾನಕರ ಜಯಂತಿಯನ್ನು ಸಿಖ್ಖರು ಅತಿ ಗೌರವ, ಹೆಮ್ಮೆ, ಮತ್ತು ಆದರಗಳಿಂದ, ಭಕ್ತಿ ಶ್ರದ್ಧೆಗಳಿಂದ ಆಚರಿಸುತ್ತಾರೆ.

ಸಂತ ಗುರುನಾನಕರ ಸಮಾಧಿ ಅಂತರರಾಷ್ಟ್ರೀಯ ಗಡಿಪ್ರದೇಶಕ್ಕೆ ಹೊಂದಿಕೊಂಡಂತೆ ಪಾಕಿಸ್ತಾನದ ನೆಲದ ಕರ್ತಾರ್‌ಪುರದಲ್ಲಿದೆ. ಭಾರತ ಮಾತ್ರವಲ್ಲ, ವಿಶ್ವದಾದ್ಯಂತ ಸಿಖ್ಖರು ಗುರುದ್ವಾರಗಳನ್ನು ನಿರ್ಮಿಸಿಕೊಂಡು ಅಲ್ಲಿ ತಮ್ಮ ಗುರುನಾನಕರ ಜಯಂತಿಯನ್ನು ಆಚರಿಸುತ್ತಾರೆ. ಈ ಗುರುದ್ವಾರಗಳಲ್ಲಿ ಅಖಂಡ ಪಥ್-ಗುರು ಗ್ರಂಥ ಸಾಹಿಬ್‌ನ್ನು ಹಬ್ಬಕ್ಕೂ ಎರಡು ದಿನ ಮುನ್ನ ಪ್ರಾರಂಭಿಸಿ 48 ಗಂಟೆಗಳ ಕಾಲ ನಿರಂತರ ಪಠಣ ಮಾಡಲಾಗುತ್ತದೆ.

'ಬೀದರ್'ನಲ್ಲಿರುವ ಗುರುದ್ವಾರದಲ್ಲಿಯೂ ಕರ್ನಾಟಕದಾದ್ಯಂತ ನೆಲೆಸಿರುವ ಸಿಖ್ಖರು ಗುರುನಾನಕರ ಜನ್ಮದಿನೋತ್ಸವಕ್ಕಾಗಿ ಸೇರುತ್ತಾರೆ, ವಿಜೃಂಭಣೆಯಿಂದ ಇಲ್ಲಿ, ಗುರು ಗ್ರಂಥ ಸಾಹಿಬ್‌ನ ಮೆರವಣಿಗೆ, ದರ್ಶನ ಪಡೆದು ಧನ್ಯರಾಗುತ್ತಾರೆ. ಎರಡು ದಿನಗಳು ಪೂರ್ತಿ ಇಲ್ಲಿಯೂ ಧಾರ್ಮಿಕ ಕಾರ್ಯಗಳು ಬಿಡುವಿಲ್ಲದೇ ನಡೆಯುತ್ತವೆ.



ಸಿಖ್ ಪಂಥದವರಿಂದ ಶ್ರೀ ಗುರುನಾನಕ್ ಜಯಂತಿ ಆಚರಣೆ


**ಪ್ರಧಾನಿ ನರೇಂದ್ರ ಮೋದಿಯವರು** ಕಳೆದ ವರ್ಷದ ನಾನಕರ ಜಯಂತಿಯಂದು ಹೀಗೆ ಟ್ವೀಟ್ ಮಾಡಿದ್ದಾರೆ, "ಗುರುನಾನಕ್ ಜಯಂತಿಯಂದು ಶ್ರೀ ಗುರುನಾನಕ್‌ರಿಗೆ ನಾವೆಲ್ಲ ನಮಸ್ಕರಿಸೋಣ. ಅವರ ಚಿಂತನೆಗಳನ್ನು ನೆನಪಿಸಿಕೊಳ್ಳುವುದಕ್ಕೆ ಇದು ಸಕಾಲ" ಎಂದು ನುಡಿದಿದ್ದಾರೆ.

### ಕ್ಷಾತ್ರ ಪಡೆಯಾಗಿ ಸಿಖ್ ಪಂಥ

ಮಹತ್ತ್ವದ ಸಂಗತಿಯೆಂದರೆ ಮುಂದೆ ಇದೇ ಸಿಖ್ ಪಂಥದಲ್ಲಿ ಬಂದ ಗುರು ಗೋವಿಂದ ಸಿಂಗರ ನೇತೃತ್ವದಲ್ಲಿ ದೇಶಕ್ಕೆ ಒದಗಿದ್ದ ದಾಸ್ಯವನ್ನು ಹೋರಾಡಿ ಹೋಗಲಾಡಿಸುವ ಕ್ಷಾತ್ರ ಪಡೆಯಾಗಿ ನಿರ್ಮಾಣವಾಗಿ ಚರಿತ್ರೆಯಲ್ಲಿ ದಾಖಲಾಗಿಸಿದ್ದು ಸಿಖ್ಖರನ್ನು ನಾವು ನೆನೆಯಲು ಕಾರಣವಾಗಿದೆ. ಈಗಲೂ ದೇಶವನ್ನು ಕಾಯುವ ಕ್ಷಾತ್ರ ಪಡೆಯಲ್ಲಿ ಸಿಖ್ಖ ಜನಾಂಗವೇ ಮೇಲುಗೈಯಾಗಿರುವುದೂ ಸತ್ಯವಾಗಿದೆ.

ಸಂತ ಗುರುನಾನಕ್ ಅದ್ವಿತೀಯ ಪ್ರೇಮಮಯೀ ವ್ಯಕ್ತಿತ್ವದವರು. ಅತ್ಯಂತ ಶೂರ ಪರಂಪರೆಯೊಂದನ್ನು ಕಟ್ಟಿ ಬೆಳೆಸಿದರು, ಆದರೆ ಹಿಂಸೆಯನ್ನೆಂದೂ ಅನುಸರಿಸಲಿಲ್ಲ. ಅವರು ಕಟ್ಟಿದ ಪಂಥದ ಪರಂಪರೆಯಲ್ಲಿ ಇಂದು ಅವರ ಸಂದೇಶದಂತೆಯೇ, "ಎಲ್ಲೆಡೆ ಪ್ರೇಮಯೋಧರೇ ತುಂಬಿಕೊಂಡಿದ್ದರೆ ಜಗತ್ತು ಶಾಂತಿವನವಾಗುವುದು" ಎಂಬ ಅವರ ನುಡಿಯಂತೆಯೇ ಜಗತ್ತಿನಾದ್ಯಂತದ ಅವರ ಅನುಯಾಯಿಗಳು ನಡೆದುಕೊಳ್ಳುತ್ತಿದ್ದಾರೆ.

ಶ್ರೀಕೃಷ್ಣಕೃಪಾ, ಸೆಡಾರ್ ಬ್ಲಾಕ್-೨, ಹರವಿಜಯ ಅಪಾರ್ಟ್‌ಮೆಂಟ್ಸ್,
ರವಿಗುಡ್ಡ, ಇಟ್ಟಮಡು, ಬನಶಂಕರಿ ೩ನೇ ಹಂತ,
ಬೆಂಗಳೂರು-೫೬೦ ೦೦೫



# ಗೀತಾ ಪ್ರವಚನ

■ ಸಂತ ವಿನೋಬಾ ಬಾವೆ.
■ ಕನ್ನಡ ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮಾ



# ಚಿತ್ತ ವೃತ್ತಿ ನಿರೋಧ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

## 25. ಆತ್ಮೋದ್ಧಾರದ ಆಕಾಂಕ್ಷೆ

1. ಮನುಷ್ಯನ ಮೇಲ್ನೆಗೆತ ಎಲ್ಲಿಯ ತನಕ ಹೋದೀತೋ ಐದನೆಯ ಅಧ್ಯಾಯದಲ್ಲಿ ಕಲ್ಪನೆ, ವಿಚಾರದ ಮೂಲಕ ನಾವು ನೋಡಿದ್ದೇವೆ. ಕರ್ಮ ವಿಕರ್ಮ-ಅಕರ್ಮ ಎಲ್ಲವೂ ಸೇರಿ ಸರ್ವಸಾಧನೆ ಪೂರ್ಣವಾಗುತ್ತದೆ. ಕರ್ಮ ಸ್ಥೂಲವಸ್ತು. ನಾವು ಮಾಡುವ ಸ್ವಧರ್ಮ-ಕರ್ಮದಲ್ಲಿ-ನಮ್ಮ ಮನಸ್ಸೂ ಸಹಕರಿಸಬೇಕು. ಈ ಮಾನಸಿಕ ಶಿಕ್ಷಣದ ಕರ್ಮ ಮಾಡುವುದು ವಿಕರ್ಮ, ವಿಶೇಷ ಕರ್ಮ ಅಥವಾ ಸೂಕ್ಷ್ಮ ಕರ್ಮ ಎನಿಸುತ್ತದೆ. ಕರ್ಮ-ವಿಕರ್ಮ-ಎರಡೂ ಬೇಕು. ಇವೆರಡು ಪ್ರಯೋಗ ಮಾಡಮಾಡುತ್ತ, ಅಕರ್ಮದ ಭೂಮಿಕೆ ಸಿದ್ಧವಾಗುತ್ತದೆ. ಭೂಮಿಕೆಯಲ್ಲಿ ಕರ್ಮ ಸಂನ್ಯಾಸ ಎರಡೂ ಒಂದೇ ಆಗುತ್ತೆಂಬುದನ್ನು ಹಿಂದಿನ ಅಧ್ಯಾಯ ತಿಳಿಸಿದೆ. ಆರನೆಯ ಅಧ್ಯಾಯದ ಪ್ರಾರಂಭದಲ್ಲಿ ಮತ್ತೆ ಅದನ್ನೇ ಹೇಳಿದೆ. ಕರ್ಮಯೋಗ ಸಂನ್ಯಾಸಗಳ ಭೂಮಿಕೆಗಳು ಬೇರೆ ಬೇರೆ ಕಂಡರೂ ಅಕ್ಷರಶಃ ಅವು ಒಂದೇ ರೂಪು. ನಮ್ಮ ದೃಷ್ಟಿಯಲ್ಲೇ ಈ ಭೇದವಿದೆ. ಐದನೆಯ ಅಧ್ಯಾಯದಲ್ಲಿ ಬಣ್ಣಿಸಿದ ಅವಸ್ಥೆಯ ಸಾಧನೆಯ ಆರನೆಯದರ ಮುಖ್ಯ ವಿಷಯ.

2. ಪರಮಾರ್ಥ, ಗೀತೆ, ಇವೆಲ್ಲ ಕೇವಲ ಸಾಧುಗಳಿಗೆ ಮಾತ್ರ ಎಂಬ ಭ್ರಾಂತಿ ಜನರಲ್ಲಿದೆ. ನಾನೇನು ಸಾಧುವಲ್ಲ ಎಂದ ಒಬ್ಬ ಗೃಹಸ್ಥ. ಸಾಧುವೆಂಬ ಪ್ರಾಣಿ ಒಂದಿದೆ, ಅದು ನಾನಲ್ಲ ಎಂದ ಹಾಗೆ. ಕುದುರೆ, ಸಿಂಹ, ಕರಡಿ, ಹಸು ಮುಂತಾದ ಪ್ರಾಣಿಗಳ ಹಾಗೆ ಸಾಧು ಎಂಬ ಪ್ರಾಣಿ ಒಂದು ಇದೆ. ಪರಮಾರ್ಥದ ಕಲ್ಪನೆ ಆ ಪ್ರಾಣಿಗೆ ಮಾತ್ರ! ವ್ಯವಹಾರದಲ್ಲಿ ತೊಡಗಿದ ಜನರು ಬೇರೆ. ಅವರ ಆಚಾರ ವಿಚಾರ ಬೇರೆ. ಇದರಲ್ಲಿ ಸಾಧುಶರಣರು ಲೋಕದ ಜನರೂ ಬೇರೆ ಬೇರೆ ಎಂದಾಗುತ್ತದೆ. ಗೀತಾ ರಹಸ್ಯದಲ್ಲಿ ತಿಲಕರೂ ಈ ವಿಷಯದ ಕಡೆ ಗಮನ ಸೆಳೆದಿದ್ದಾರೆ. "ಗೀತೆ ಸರ್ವಸಾಮಾನ್ಯ ವ್ಯಾವಹಾರಿಕರಿಗಾಗಿ ಹೇಳಿದ ಗ್ರಂಥ" ಎನ್ನುತ್ತಾರೆ ತಿಲಕರು. ಅಕ್ಷರಶಃ ನಿಜ ಎನ್ನುತ್ತೇನೆ ನಾನು. ಭಗವದ್ಗೀತೆ ಇಡೀ ಜಗತ್ತಿಗಾಗಿ ಇದೆ. ಪರಮಾರ್ಥದ ಸರ್ವಸಾಧನವೂ ಪ್ರತಿಯೊಬ್ಬ ವ್ಯಾವಹಾರಿಕನಿಗೂ ಇದೆ. ವ್ಯವಹಾರವನ್ನು ಶುದ್ಧವಾಗಿ ನಡೆಸಿ, ಅದರಲ್ಲಿ ಶಾಂತಿ ಹೇಗೆ ದೊರೆತ್ತದೆಂಬುದನ್ನು ಕಲಿಸುವುದೇ ಪರಮಾರ್ಥ. ವ್ಯವಹಾರವನ್ನು ಹೇಗೆ ಶುದ್ಧಗೊಳಿಸಬೇಕೆಂಬುದನ್ನು ಕಲಿಸಲು ಗೀತೆ ಹುಟ್ಟಿದೆ. ಎಲ್ಲಿ ವ್ಯವಹಾರವಿದೆಯೋ ಅಲ್ಲಿ ಗೀತೆ ಬರುತ್ತದೆ. ಆದರೆ ಅಲ್ಲೇ ಯಾರನ್ನು ಇರಗೊಡದು. ಮುಂದಿನ ಮಜಲಿಗೆ ಕೈಹಿಡಿದೆಳೆದೊಯ್ಯುತ್ತದೆ. ಪ್ರಸಿದ್ಧ ಗಾದೆಯಿಲ್ಲವೆ. ಬೆಟ್ಟ ಮಹಮ್ಮದನ ಬಳಿಗೆ ಬಾರದಿದ್ದರೆ ಮಹಮ್ಮದನೇ ಬೆಟ್ಟದ ಬಳಿಗೆ ಹೋದಾನು. ಜಡಪರ್ವತಕ್ಕೂ ತನ್ನ ಸಂದೇಶ ಸಿಗಲಿ ಎಂಬ ಚಿಂತೆ ಮಹಮ್ಮದನಿಗೆ. ಪರ್ವತ ಜಡವಾದುದರಿಂದ ಅದರ ಬರವಿಗಾಗಿ ಮಹಮ್ಮದ್ ಕಾದು ಕೂತಿರುವಂತಿಲ್ಲ. ಗೀತೆಯೂ ಹೀಗೇ. ಬಡವ, ನಿರ್ಬಲ, ತುಂಟ ಇವರಿದ್ದಲ್ಲಿ ಗೀತೆ ಬರುತ್ತದೆ. ಅವರನ್ನು ಅಲ್ಲೇ ಇಡಲಿಕ್ಕಲ್ಲ. ಅವರನ್ನು ಕೈಹಿಡಿದು ಮುಂದಕ್ಕೆ ಎಳೆಯಲು, ಮೇಲಕ್ಕೆ ಎತ್ತಲು. ಮನುಷ್ಯ ತನ್ನ ವ್ಯವಹಾರವನ್ನು ಶುದ್ಧ ಮಾಡಿಕೊಳ್ಳಲಿ, ಅವನಿಗೆ ಪರಮೋಚ್ಚ ಸ್ಥಿತಿ ಸಿಗಲಿ-ಇದೇ ಗೀತೆಯ ಇಚ್ಛೆ. ಇದಕ್ಕಾಗಿಯೇ ಗೀತೆ ಹುಟ್ಟಿತು.

3. ಆದ್ದರಿಂದ 'ನಾನು ವ್ಯಾವಹಾರಿಕ, ಸಾಂಸಾರಿಕ ಜೀವ' ಎಂದು ಹೇಳಿಕೊಂಡು ನಿಮ್ಮ ಸುತ್ತಮುತ್ತ ಬೇಲಿ ಹಾಕಿಕೊಳ್ಳಬೇಡಿ. 'ನನ್ನ ಕೈಯಿಂದೇನಾದೀತು? ಈ ಮೂರೂವರೆ ಮೊಳದಗಲದ ದೇಹದಲ್ಲೇ ನನ್ನ ಸಾರಸರ್ವಸ್ವವುಂಟೆಂದು ಹೇಳಬೇಡಿ. ಈ ಬಂಧನದ ಕೋಟೆಯನ್ನು, ಸೆರೆಮನೆಯನ್ನು, ನಿಮ್ಮ ಸುತ್ತಲೂ ನಿಲ್ಲಿಸಿಕೊಂಡು ಪಶುಗಳು ವರ್ತಿಸುವ ಹಾಗೆ ವರ್ತಿಸಬೇಡಿ. ಮುಂದೆ ನಡೆಯುವ, ಮೇಲೆ ಏರುವ ಧೈರ್ಯವಿರಲಿ. 'ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್'



ಖಂಡಿತವಾಗಿ ಮೇಲಕ್ಕೇರುತ್ತಾನೆ ಎಂಬ ಧೈರ್ಯವಿರಲಿ. ಕ್ಷುದ್ರ ಸಾಂಸಾರಿಕ ಜೀವ ನಾನು ಎಂದುಕೊಂಡು ಮನಸ್ಸಿನ ಶಕ್ತಿಯನ್ನು ನಾಶಗೊಳಿಸಬೇಡಿ. ಕಲ್ಪನೆಯ ರೆಕ್ಕೆಗಳನ್ನು ಮುರಿಯಬೇಡಿ. ಕಲ್ಪನೆ ವಿಶಾಲವಾಗಲಿ. ಹಕ್ಕಿಯದು ಹೀಗೇ ಅಲ್ಲವೆ? ಬೆಳಗ್ಗೆ ಸೂರ್ಯನನ್ನು ನೋಡಿ ಅದು ಹೇಳುತ್ತದೆ ಮೇಲೆ ಹಾರಿ ಅವನನ್ನು ಮುಟ್ಟುತ್ತೇನೆ. ನೀವೂ ಹಾಗಿರಬೇಕು. ಹಕ್ಕಿ ತನ್ನ ದುರ್ಬಲ ರೆಕ್ಕೆಗಳಿಂದ ಎಷ್ಟು ದೂರ ಹಾರಿದರೂ ಸೂರ್ಯನನ್ನು ಮುಟ್ಟಲಾರದು. ಆದರೆ ಕಲ್ಪನಾಶಕ್ತಿಯಿಂದ ಅದು ಸೂರ್ಯನನ್ನು ಮುಟ್ಟಬಲ್ಲದು. ನಮ್ಮ ವರ್ತನೆ ಇದಕ್ಕೆ ವ್ಯತಿರಿಕ್ತ. ನಮ್ಮಿಂದ ಸಾಧ್ಯವಾಗುವಷ್ಟು ಮೇಲೆ ಕೂಡ ಏರಲಾರದೆ, ನಮ್ಮ ಕಲ್ಪನೆಗೂ ಭಾವನೆಗೂ ನಾವು ಕಟ್ಟಿ ಹಾಕಿಕೊಳ್ಳುವುದರಿಂದ ನಮಗೆ ನಾವೇ ಕೆಳಗೆ ಬೀಳುತ್ತೇವೆ. ನಮ್ಮಲ್ಲಿರುವ ಶಕ್ತಿಯನ್ನು ಹೀನಭಾವನೆಯಿಂದ ಕೊಂದುಬಿಡುತ್ತೇವೆ. ಕಲ್ಪನೆಯ ಕಾಲುಗಳನ್ನೇ ಮುರಿದುಬಿಟ್ಟಮೇಲೆ ಕೆಳಕ್ಕೆ ಬೀಳದಿನ್ನೇನು? ಕಲ್ಪನೆಯ ಜೋಲಿ ಯಾವಾಗಲೂ ಮೇಲಕ್ಕೆ ಇರಬೇಕು. ಕಲ್ಪನೆಯ ನೆರವಿನಿಂದ ಮನುಷ್ಯ ಮುಂಬರಿಯುತ್ತಾನೆ. ಆದುದರಿಂದ ಕಲ್ಪನೆಯನ್ನು ಸಂಕುಚಿತಗೊಳಿಸಿಕೊಳ್ಳಬೇಡಿ.

**"ಗಟ್ಟಿ ಜಾಡ ಬಿಡಲುಬೇಡ**
**ಅಡ್ಡ ಹಾದಿ ಹಿಡಿಯಬೇಡ, ಅತ್ತ ಇತ್ತ ಸುಳಿಯಬೇಡ ॥"**

ಹೀಗೆ ಅಳುಬುರುಕರಾಗಿ ಕೂತಿರಬೇಡಿ. ಆತ್ಮದ ಅವಮಾನ ಮಾಡಿಕೊಳ್ಳಬೇಡಿ. ಸಾಧಕನಲ್ಲಿ ವಿಶಾಲ ಕಲ್ಪನೆ, ಆತ್ಮವಿಶ್ವಾಸ ಇದ್ದರೆ ಅವನಿಗೆ ನೆಲೆ. ಅಂಥವನಿಗೆ ಉದ್ಧಾರ. ಆದರೆ ಧರ್ಮವೆಲ್ಲ ಸಾಧುಗಳದು; ಅವರ ಬಳಿ ಹೋಗುವುದಾದರೂ 'ನೀವು ವರ್ತಿಸುವುದು ನಿಮ್ಮ ಪರಿಸ್ಥಿತಿಗೆ ಯೋಗ್ಯವಾದುದೇ' ಎಂಬ ಪ್ರಶಸ್ತಿ ಪತ್ರವನ್ನು ಅವರಿಂದ ಪಡೆಯುವುದಕ್ಕಾಗಿ ಎಂಬ ಕಲ್ಪನೆಯನ್ನು ತ್ಯಜಿಸಿ. ಇಂಥ ಭೇದಾತ್ಮಕ ಕಲ್ಪನೆಗಳಿಂದ ನಿಮ್ಮನ್ನು ನೀವು ಕಟ್ಟಿಹಾಕಿಕೊಳ್ಳದಿರಿ. ಉಚ್ಚ ಆಕಾಂಕ್ಷೆಗಳನ್ನಿಟ್ಟುಕೊಳ್ಳದಿದ್ದರೆ ಹೆಜ್ಜೆ ಎಂದೂ ಮುಂದೆ ಹೋಗಲಾರದು.

ಈ ದೃಷ್ಟಿ, ಈ ಆಕಾಂಕ್ಷೆ, ಈ ಮಹತ್ತರ ಭಾವನೆಯಿದ್ದರೆ ಮಾತ್ರ ಇತರ ಸಾಧನೆಗಳ ವಿಚಾರ ಅಗತ್ಯವಾದೀತು. ಇಲ್ಲವಾದರೆ ಕಥೆಯೇ ಮುಗಿದಂತೆ. ಬಾಹ್ಯ ಕರ್ಮಗಳಿಗೆ ಜೊತೆಯಾಗಿ ಮಾನಸಿಕ ಸಾಧನೆ ವಿಕರ್ಮ ಎಂದು ಹೇಳಲಾಯಿತು. ಕರ್ಮದ ನೆರವಿಗೆ ವಿಕರ್ಮ ಸದಾ ಅಗತ್ಯ. ಈ ಎರಡರ ಸಹಾಯದಿಂದ ಪ್ರಾಪ್ತವಾಗುವ ಅಕರ್ಮದ ದಿವ್ಯಸ್ಥಿತಿಯನ್ನೂ ಅದರ ರೀತಿಗಳನ್ನೂ ಐದನೆಯ ಅಧ್ಯಾಯದಲ್ಲಿ ವಿವರಿಸಲಾಯಿತು. ಈಗ ಈ ಆರನೆಯ ಅಧ್ಯಾಯದಲ್ಲಿ–ವಿಕರ್ಮದ ರೀತಿಗಳನ್ನು ವಿವರಿಸಿದೆ. ಮಾನಸಿಕ ಸಾಧನೆಯನ್ನೂ ಹೇಳಿದೆ. ಈ ಮಾನಸಿಕ ಸಾಧನೆಗಳನ್ನು ವಿವರಿಸುವುದಕ್ಕೆ ಮೊದಲು "ಎಲೆ ಜೀವ, ನೀನೂ ದೇವತೆಯಾಗಬಲ್ಲೆ. ಈ ದಿವ್ಯ ಆಕಾಂಕ್ಷೆ ಯಾವಾಗಲೂ ನಿನ್ನಲ್ಲಿರಲಿ. ಮನಸ್ಸನ್ನು ಮುಕ್ತವಾಗಿರಿಸಿ ರೆಕ್ಕೆಗಳನ್ನು ಸಜ್ಜುಗೊಳಿಸಿರು" ಎಂದು ಗೀತೆ ಹೇಳುತ್ತದೆ. ಸಾಧನೆಯ ರೀತಿ, ವಿಕರ್ಮ ರೀತಿ ಭಿನ್ನ ಭಿನ್ನ ಪ್ರಕಾರ ಇದೆ. ಭಕ್ತಿಯೋಗ, ಧ್ಯಾನ, ಜ್ಞಾನ ವಿಜ್ಞಾನ, ಗುಣ ವಿಕಾಸ, ಆತ್ಮಾನಾತ್ಮ ವಿವೇಕ, ಹೀಗೆ ಎಷ್ಟೋ ಪ್ರಕಾರಗಳುಂಟು. ಧ್ಯಾನಯೋಗ ಸಾಧನೆಯನ್ನು ಕುರಿತು ಆರನೆಯ ಅಧ್ಯಾಯದಲ್ಲಿ ಹೇಳಿದೆ.

## 26. ಚಿತ್ತದ ಏಕಾಗ್ರತೆ:

4. ಧ್ಯಾನಯೋಗದಲ್ಲಿ ಮುಖ್ಯ ವಿಷಯ ಮೂರು: ಎ) ಚಿತ್ರದ ಏಕಾಗ್ರತೆ ಬಿ) ಚಿತ್ತದ ಏಕಾಗ್ರತೆಗೆ ಉಪಯುಕ್ತವಾದ ಬಾಳಿನ ಪರಿಮಿತತನ. ಸಿ) ಸಾಮ್ಯದೆಶೆ ಅಥವಾ ಸಮದೃಷ್ಟಿ. ಈ ಮೂರು ವಸ್ತುಗಳಿಲ್ಲದೆ ನಿಜವಾದ ಸಾಧನೆಯಾಗಲಾರದು. ಚಿತ್ತದ ಏಕಾಗ್ರತೆಯೆಂದರೆ ಚಿತ್ತದ ಚಂಚಲತೆಗೆ ಅಂಕುಶ. ಜೀವನದ ಪರಿಮಿತತನವೆಂದರೆ ಎಲ್ಲ ಕ್ರಿಯೆಯನ್ನೂ ತೂಕ ಮಾಡಿ ಮಾಡುವುದು. ಸಮದೃಷ್ಟಿಯೆಂದರೆ ವಿಶ್ವದ ಬಗ್ಗೆ ಉದಾರ ದೃಷ್ಟಿ. ಈ ಮೂರು ವಸ್ತುಗಳಿಂದ ಧ್ಯಾನಯೋಗ ಸಿದ್ಧಿಸುತ್ತದೆ. ಈ ಮೂರು ಸಾಧನೆಗಳಿಗೂ ಸಾಧನಗಳುಂಟು; ಅಭ್ಯಾಸ ಮತ್ತು ವೈರಾಗ್ಯ. ಈ ಐದು ವಿಷಯಗಳನ್ನು ಸ್ವಲ್ಪ ವಿವೇಚಿಸೋಣ.
5. ಮೊದಲು ಮನಸ್ಸಿನ ಏಕಾಗ್ರತೆ. ಪ್ರತಿಯೊಂದು ಕೆಲಸಕ್ಕೂ ಇದು ಅಗತ್ಯ. ವ್ಯಾವಹಾರಿಕ ವಿಷಯಗಳಿಗೂ ಇದು ಬೇಕೇ ಬೇಕು. ವ್ಯವಹಾರಕ್ಕೆ ಬೇಕಾದ ಗುಣ ಬೇರೆ, ಪರಮಾರ್ಥಕ್ಕೆ ಬೇರೆ ಗುಣ ಅಲ್ಲ. ವ್ಯವಹಾರವನ್ನು ಶುದ್ಧಗೊಳಿಸುವುದೆಂದರೇನೇ ಪರಮಾರ್ಥ. ವ್ಯವಹಾರ ಯಾವುದಿದ್ದರೂ ಅದರ ಸೋಲು ಗೆಲವು ನಿಮ್ಮ ಏಕಾಗ್ರತೆಯನ್ನವಲಂಬಿಸಿದೆ. ವ್ಯಾಪಾರ, ವ್ಯವಹಾರ, ಶಾಸ್ತ್ರಶೋಧನೆ, ರಾಜಕೀಯ ಮುತ್ಸದ್ದಿತನ– ಯಾವುದೇ ಇದ್ದರೂ ಅದರಲ್ಲಿ ಯಶಸ್ಸು ಸಿಗಬೇಕಾದರೆ ಆಯಾಯ ಪುರುಷನ ಮನಸ್ಸಿನ ಏಕಾಗ್ರತೆಯೇ ಕಾರಣ. ನೆಪೋಲಿಯನ್ ಬಗ್ಗೆ ಒಂದು ಕತೆಯಿದೆ. ಯುದ್ಧದ ಏರ್ಪಾಟು ಮಾಡಿಕೊಟ್ಟ ತರುವಾಯ ಆತ ಸಮರರಂಗದಲ್ಲಿ ಗಣಿತದ ಸಿದ್ಧಾಂತಗಳನ್ನು ಬಿಡಿಸುತ್ತಿದ್ದನಂತೆ. ಡೇರೆಯ ಮೇಲೆ ಗುಂಡು ಹಾರಲಿ, ಸೈನಿಕರು ಸಾಯುತ್ತಿರಲಿ, ನೆಪೋಲಿಯನ್ನನ ಚಿತ್ತ ಮಾತ್ರ ಗಣಿತದಲ್ಲೇ. ಅವನ ಏಕಾಗ್ರತೆ



▶▶ 39ನೇ ಪುಟಕ್ಕೆ



ಸ್ವಾಮಿ ನಿಮಿಷಾನಂದಜೀಯವರ ಲೇಖನ ಮಾಲೆ ನಮ್ಮ ದೈನಂದಿನ ಜೀವನಗಳನ್ನು, ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧರಿಸಿ, ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಯಪಡಿಸುವಂತಹವು. ಮರೀಚಿ ಮಹರ್ಷಿಗಳ ಮಕ್ಕಳಾದ ಕಶ್ಯಪರು ಮಾನವ ಧರ್ಮದ ಮೂಲಭೂತ ರಹಸ್ಯ ತತ್ತ್ವಗಳನ್ನು ಕಶ್ಯಪ ಸೂತ್ರಗಳಲ್ಲಿ ವಿವರಿಸಿದ್ದಾರೆ.

# ಶಾಬ್ದೇದನೇನ ಸದಾಶಿವತ್ವಂ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಆದರೆ ನಾವು ಇಂದು ಈ ಸ್ವಾತಂತ್ರ್ಯವನ್ನು ಅನುಭವಿಸುತ್ತಿಲ್ಲ. ಇದಕ್ಕೆ ಕಾರಣ ನಮ್ಮೊಳಗಿನ ಉಸಿರು ಮತ್ತು ಹೊರಗಿನ ವಾಯು, ನಮ್ಮೊಳಗಿನ ಆತ್ಮಜ್ಯೋತಿ ಮತ್ತು ಹೊರಗಿನ ಬೆಂಕಿ, ನಮ್ಮೊಳಗಿನ ಶಾಖ ಮತ್ತು ಹೊರಗಿನ ಶಾಖ ಎಲ್ಲವೂ ಒಂದೇ ಎಂಬುದನ್ನು ನಾವು ಅರಿತಿಲ್ಲ. ಏಕೆಂದರೆ ನಮಗೆ ಮನಸ್ಸಲ್ಲಿ ಸ್ವಾತಂತ್ರ್ಯವಿಲ್ಲ. ಇದನ್ನು ತಿಳಿಯಪಡಿಸುವುದೇ ಈ ಸೂತ್ರದ ಮೂಲ ತಿರುಳು. ನಾವು ನಮ್ಮಲ್ಲಿರುವ ಅರಿಷಡ್ವರ್ಗಗಳ ಗಂಟನ್ನು ಭೇದಿಸುವ ಕತ್ತರಿಯನ್ನು ಎಂದು ಉಪಯೋಗಿಸುತ್ತೇವೆಯೋ ಅಂದೇ ನಮಗೆ, ನಾವು ಯಾರು ಎಂಬ ಶಿವತತ್ತ್ವದ ಅರಿವಾಗುತ್ತದೆ. ಈ ಶಿವತತ್ತ್ವ ಅರಿವಾದಾಗ ನಮ್ಮದೇ ಆದಂತಹ ಸ್ವಧರ್ಮ ತಿಳಿಯುತ್ತದೆ. ಇಲ್ಲಿ ಕಶ್ಯಪರ ಐದನೆಯ ಸೂತ್ರವಾದ "ಸೃಷ್ಟಿ ಧರ್ಮೇಣ ಜೀವಯಾತ್ರ" ಇದನ್ನು ನೆನಪಿಸಿಕೊಳ್ಳೋಣ. ನಮ್ಮ ಸೃಷ್ಟಿಯಾದಾಗಲೇ ನಮಗೆಂದೇ ಒಂದು ಭಕ್ತಿ ಅಥವಾ ಜ್ಞಾನ ಅಥವಾ ಕರ್ಮ ಮಾರ್ಗಗಳ ಒಂದು ಧರ್ಮ ನಿಗದಿತವಾಗಿರುತ್ತದೆ. ಯಾವ ಮಾರ್ಗವೇ ಆಗಿರಲಿ, ಯಾವ ಧರ್ಮವೇ ಆಗಿರಲಿ, ಯಾವುದರಲ್ಲಿದ್ದೇವೋ ಅದನ್ನೇ ನಮ್ಮ ಸರ್ವಸ್ವವೂ ಎಂದು ಪರಿಪಾಲಿಸಬೇಕು. ಹಾಗೆ ಪಾಲಿಸಿದಾಗ ನಮಗೆ ನಮ್ಮಲ್ಲಿರುವ ಶಿವತತ್ತ್ವದ ಬಗ್ಗೆ ಅರಿವಾಗುತ್ತದೆ. ಈ ಅರಿವಿನ ಶಕ್ತಿ ಗೊತ್ತಾದಾಗ ನಮಗೆ ಮೊದಲನೆಯ ಸ್ವಾತಂತ್ರ್ಯ ದೊರೆಯುತ್ತದೆ. ಇದು ಸಿಕ್ಕಾಗ ಯಾವ ತೊಂದರೆ ತಾಪತ್ರಯಗಳು ನಮ್ಮನ್ನು ಕಾಡುವುದಿಲ್ಲ. ಆ ಬ್ರಹ್ಮಚೈತನ್ಯ, ಬ್ರಹ್ಮಶಕ್ತಿ, ಬ್ರಹ್ಮಾಂಡವನ್ನೇ ಸೃಷ್ಟಿಮಾಡಿದಂತಹ ಶಕ್ತಿಯ ಒಂದು ಭಾಗ ಎಂಬ ಅರಿವಿನ ಜ್ಞಾನ ನಮಗೆ ಬಂದಾಗ ನಮಗೆ ಸ್ವಾತಂತ್ರ್ಯ ಸಿಕ್ಕಿದಂತಾಗುತ್ತದೆ. ಇದರ ಮುಂದೆ ತೊಂದರೆ ಮತ್ತು ತಾಪತ್ರಯಗಳು ತೃಣ ಸಮಾನವಾಗಿ ಕಾಣುವಂತಹ ಸಂಕಲ್ಪ ನಮ್ಮೊಳಗೇ ಬರುತ್ತದೆ. ಆ ಸಂಕಲ್ಪ ಬಂದಾದನಂತರ ನಮ್ಮಲ್ಲಿ ತಪಸ್ಸು ಆರಂಭವಾಗುತ್ತದೆ. ನಮಗೆ ಭಕ್ತಿ, ಜ್ಞಾನ ಮತ್ತು ಕರ್ಮ ಮಾರ್ಗಗಳು ತಿಳಿದಿವೆ. ಆದರೆ ತಪಸ್ಸೆಂಬುದು ತಿಳಿದಿಲ್ಲ. ನಾವು ಮಾಡುವ ಒಂದೊಂದು ಸೇವೆಯೂ ತಪಸ್ಸಾಗುತ್ತಿಲ್ಲ. ಈ ಸೇವೆಗಳು ನಮ್ಮ ತಾಪಗಳನ್ನು ತೆಗೆದಿಲ್ಲವಾದ್ದರಿಂದ, ನಮ್ಮ ಸೇವೆಗಳು ತಪಸ್ಸಾಗುತ್ತಿಲ್ಲ. ಇದೇ ಕಾರಣ ನಮ್ಮ ಮನಸ್ಸನ್ನು ನಾವು ಕಲ್ಲಾಗಿಟ್ಟುಕೊಂಡಿದ್ದೇವೆ. ಆ ಕಲ್ಲನ್ನು ಚೂರುಚೂರಾಗಿ ಪುಡಿಮಾಡಬೇಕಾದರೆ, ತಪಸ್ಸು ಎಂಬ ಸಿಡಿಗುಂಡನ್ನು ಅಥವಾ ಸಿಡಿಮದ್ದನ್ನು ಅಲ್ಲಿ ಇಡಬೇಕು. ಇದನ್ನು ಮಾಡಲು ಗುರು ಮುಖ್ಯವಾಗುತ್ತಾರೆ. ಗುರು ನಮ್ಮ ಸಾಧನೆಗೆ ದೃಢತನ, ಬೆಂಬಲ, ಶಕ್ತಿ ಕೊಡುವುದಲ್ಲದೆ ನಮ್ಮ ಸಾಧನೆಯನ್ನು ತಪಸ್ಸಾಗಿಸುತ್ತಾರೆ. ಗುರು ನಮ್ಮ ತರಂಗಾಂತರವನ್ನು ಹೆಚ್ಚಿಸಿ ನಮ್ಮ ಇಚ್ಛೆಯನ್ನು ದೈವೇಚ್ಛೆಯೊಂದಿಗೆ ಶ್ರುತಿಯಾಗಿಸಿ ಸಮರಸಗೊಳಿಸುವಂತೆ ಮಾಡುತ್ತಾರೆ. ನಮ್ಮ ಮೇಲೆ ನಮಗೆ ತೀವ್ರವಾದ ನಂಬಿಕೆ, ವಿಶ್ವಾಸ, ದೃಢತನ ಬಂದು ನಾವು ಮಾಡುವ ಸೇವೆ ತಪಸ್ಸಾಗಬೇಕೆಂಬ ದೃಢಶಕ್ತಿಯನ್ನು ಗುರು ನಮಗೆ ನೀಡುತ್ತಾರೆ. ಅಲ್ಲದೆ ನಾವು ಮಾಡುವ ವಿವಿಧ ಸಾಧನೆಗಳನ್ನು, ಭಜನೆ, ನಾಮಸ್ಮರಣೆ, ಧ್ಯಾನಗಳನ್ನು ತೀವ್ರವಾದ ತಪಸ್ಸಾಗಿ ಪರಿವರ್ತಿಸಿಕೊಳ್ಳುವ ಶಕ್ತಿಯನ್ನು ಗುರು ನೀಡುತ್ತಾರೆ. ಮಾನಸಿಕ ಚಂಚಲತೆಯನ್ನು ಸಂಪೂರ್ಣ ನಿಗ್ರಹಿಸುವ ಶಕ್ತಿ ಮತ್ತು ದೃಢತೆಯನ್ನು ಗುರುವು ನೀಡುತ್ತಾರೆ.

ನಾವೆಲ್ಲ ತಿಳಿದಿರುವ ಹಾಗೆ ಗುರು ನಮಗೆ ಕಾರು, ಬಂಗಲೆ, ಐಶ್ವರ್ಯ ಕೊಡುವುದಿಲ್ಲ. ಉದ್ಯೋಗದಲ್ಲಿ ಬಡ್ತಿ ನೀಡುವವರಲ್ಲ. ನಮ್ಮ ಭೌತಿಕ, ಲೌಕಿಕದ ಆಸೆಗಳನ್ನು ನೀಗಿಸುವುದು ಗುರುವಿನ ಕೆಲಸವಲ್ಲ. ನಮ್ಮಲ್ಲಿ ನಮಗೆ ದೃಢಶಕ್ತಿ ಯಾವಾಗ ಹೆಚ್ಚುತ್ತಾ ಹೋಗುತ್ತದೆಯೋ

ಆಗ ಗುರುವಿನ ಶಕ್ತಿಯಿಂದ ತನಗೆ ತಾನೇ ನಮ್ಮ ಬಾಹ್ಯಜೀವನವೂ ಸರಿ ಹೋಗುತ್ತಾ ಬರುತ್ತದೆ. ಇದೇ ನಮ್ಮ ಎರಡನೆಯ ಸ್ವಾತಂತ್ರ್ಯ. ಗುರುಗಳು ನಮಗೆ ಅಧಿಕಾರಯುಕ್ತತೆಯಿಂದ ಮುಕ್ತನನ್ನಾಗಿ ಮಾಡುತ್ತಾರೆ. ನಮಗೆ ಕಾರು, ಬಂಗಲೆ, ಆಸ್ತಿಪಾಸ್ತಿಗಳ ಮೇಲೆ ಮೋಹ ಮತ್ತು ವ್ಯಾಮೋಹವಿದೆ. ಇದರಲ್ಲಿ ಸ್ವಲ್ಪ ಏರುಪೇರಾದರು ನಮ್ಮ ತಲೆ ಕೆಡುತ್ತದೆ. ಆದರೆ ನಮ್ಮೊಳಗೆ ಇರುವ ಆತ್ಮದ ಮೇಲೆ ನಮಗೆ ಮೋಹ ಮತ್ತು ವ್ಯಾಮೋಹವಿಲ್ಲ. ಗುರುಗಳು ಅಂತರಾಳದ, ಅಂತರಾತ್ಮದ, ಅಂತರದ ಮನಸ್ಸಿನ ಜೀವನವನ್ನು ಸರಿಮಾಡುತ್ತಾರೆ. ಆಗ ಮೇಲಿನದೆಲ್ಲ ಗೌಣವಾಗಿಬಿಡುತ್ತದೆ. ನಿಜವಾದ ಆಸ್ತಿ ಏನು ಎಂಬುದನ್ನು ನಾವು ವಿಶ್ಲೇಷಿಸಬೇಕು. ನಾವು ಒಂದು ಆಸ್ತಿ ಮಾಡುತ್ತೇವೆ. ಈ ಆಸ್ತಿಯನ್ನು ದಿನಾ ಸಂಜೆ ಮನೆಗೆ ತಂದು ಮತ್ತೆ ಬೆಳಗ್ಗೆ ಪುನಃ ಹಿಂದೆ ತೆಗೆದುಕೊಂಡು ಹೋಗಿ ಇಡುತ್ತೇವೆಯೋ? ಇಲ್ಲ, ಆದರೆ ನನ್ನದೇ ಆದ ಒಂದು ಆಸ್ತಿ ಇದೆ ಎಂಬ ಭಾವನೆ ನಮ್ಮೊಂದಿಗೆ ಸದಾ ಇರುತ್ತವೆ. ಈ ಆಸ್ತಿಯ ಮೂಲ ಪ್ರತಿಗಳು ನಮ್ಮ ಮನೆಯ ಕಪಾಟಿನಲ್ಲೋ, ಇಲ್ಲ ಬ್ಯಾಂಕಿನಲ್ಲೋ ಇರುತ್ತವೆ. ಆದರೆ ಅದು ಇದೆ ಎಂಬುದರ ಪರಿವೆ ನಮ್ಮ ಮನಸ್ಸಿನಲ್ಲಿ ಮೂಡಿರುತ್ತದೆ. ಈ ಮನಸ್ಸು ನಮಗೆ ಒಂದು ರೀತಿಯ ಭರವಸೆ ಮತ್ತು ಭದ್ರತೆಯನ್ನು ಕೊಡುತ್ತದೆ. ಆದರೆ ಈ ಭಾವನೆಯಿಂದ ನಾವು ಹೊರಬರುವುದು ಹೇಗೆ ಎಂಬುದು ಪ್ರಮುಖವಾಗಿದೆ. ಆಸ್ತಿಪಾಸ್ತಿಗಳಿಗೆ ಪಂಚಭೂತಗಳು, ಮಳೆ ಮತ್ತು ಬಿಸಿಲುಗಳು ಅಭ್ಯಾಸ ಆಗಿಹೋಗಿದೆ. ಆದರೆ ನಮ್ಮ ಮನಸ್ಸಿಗೆ ಇದರ ಅಭ್ಯಾಸ ಆಗಿಲ್ಲ. ಮನಸ್ಸು ಚೆನ್ನಾಗಿಯೇ ಇದೆ. ಆದರೆ ಅದರ ಸುತ್ತ ವಿಕಲ್ಪ ಎಂಬ ಕಳೆಗಳು ಬೆಳೆದು ಬಂಧನ ಮಾಡಿದೆ. ಈ ಬಂಧನ ಎಷ್ಟರ ಮಟ್ಟಿಗೆ ನಮ್ಮಲ್ಲಿ ಬೇರೂರಿವೆ ಎಂದರೆ ಯಾರಾದರು ಬಂದು ನಿಮ್ಮ ಆಸ್ತಿಯಲ್ಲಿ ಬೇಲಿ ಹಾಕುತ್ತಿದ್ದಾರೆ ಎಂದು ಹೇಳಿದೊಡನೆ ನಾವು ಎಲ್ಲ ಕೆಲಸಗಳನ್ನು ಬಿಟ್ಟು ನಮ್ಮ ಆಸ್ತಿಯ ಹತ್ತಿರ ಧಾವಿಸುತ್ತೇವೆ, ವಕೀಲರನ್ನು ಸಂಪರ್ಕಿಸುತ್ತೇವೆ. ಆದರೆ ಈ ಸುದ್ದಿ ಸುಳ್ಳು ಎಂದು ತಿಳಿದಾಗ ಮಾರನೆಯ ದಿವಸ ನಮ್ಮ ಭದ್ರತೆಗಾಗಿ ಇದು ಇಂತಹವರ ಆಸ್ತಿ, ಇದು ಮಾರಾಟಕ್ಕಿಲ್ಲ, ಅಕ್ರಮ ಪ್ರವೇಶ ಮಾಡಿದವರಿಗೆ ಶಿಕ್ಷೆ ವಿಧಿಸಲಾಗುತ್ತದೆ ಎಂದು ಫಲಕವನ್ನು ಹಾಕುತ್ತೇವೆ. ಫಲಕವನ್ನು ಕನ್ನಡ ಮತ್ತು ಆಂಗ್ಲ ಭಾಷೆ ಎರಡರಲ್ಲೂ ಬರೆಸುತ್ತೇವೆ. ಮನೆಗೆ ಬಂದ ಅನಂತರ ನಮ್ಮ ಮನಸ್ಸು ತುಮುಲದಲ್ಲಿರುತ್ತದೆ. ರಾತ್ರಿ ನಿದ್ರೆಯೂ ಬರುವುದಿಲ್ಲ. ಯಾರಾದರೂ ಫಲಕವನ್ನು ಕಿತ್ತು, ಒಂದು ಗುಡಿಸಲನ್ನು ಎಬ್ಬಿಸಿದರೆ ಏನಾಗುವುದು ಎಂಬ ಯೋಚನೆ ಮನಸ್ಸಿನಲ್ಲಿ ಪ್ರಾರಂಭವಾಗುತ್ತದೆ. ಇದೇ ಮನಸ್ಸಿಗೆ ಬಾಧನೆ ಆಗುವ ರೀತಿ. ಇದು ನಮಗೆ ಸ್ವತ್ತು ಇರುವುದರಿಂದ ಆದ ತೊಂದರೆಯಲ್ಲ, ಸ್ವತ್ತಿನಿಂದ ಉಂಟಾದ ವಿಕಲ್ಪ ಭಾವನೆಗಳಿಂದ, ಯೋಚನಾಲಹರಿಗಳಿಂದ, ತೊಂದರೆಯಿಂದಾಗಿ ಬಂಧನ ಉಂಟಾಗುತ್ತದೆ. ಈ ಬಂಧನದಿಂದ ನಮಗೆ ಸ್ವಾತಂತ್ರ್ಯ ಸಿಗುವುದು ನಾವು ದೇಹ ಬಿಟ್ಟಾಗಲೆ. ಬುದ್ಧಿ ಬಂದ ವಯಸ್ಸಿನಿಂದ ದೇಹ ಬಿಡುವವರೆಗೂ ನಮಗೆ ಸ್ವಾತಂತ್ರ್ಯವಿರುವುದಿಲ್ಲ. ಲೌಕಿಕದಲ್ಲಿ ನಾವು ಹೆಚ್ಚುಹೆಚ್ಚು ಜ್ಞಾನಿಯಾದಷ್ಟು ನಮ್ಮಲ್ಲಿ ಹೆಚ್ಚಿನ ಅಧಿಕಾರ ಬರುತ್ತದೆ. ನಮಗೆ ಹೆಚ್ಚಿನ ಅಧಿಕಾರ ಬಂದಾಗ ಹೆಚ್ಚಿನ ಅಧಿಕಾರ-ಯುಕ್ತತೆ ಉಂಟಾಗಿ ಜೀವನದಲ್ಲಿ ಸ್ವಾತಂತ್ರ್ಯ ಕಡಮೆಯಾಗುತ್ತದೆ. ಇದನ್ನೆಲ್ಲ ನೋಡಿಯೇ ಒಬ್ಬ ಪುಣ್ಯಾತ್ಮ "ಲೌಕಿಕ ಅರಿವು ಇಲ್ಲದವನಿಗೇ ಪರಮಾನಂದ" (Ignorance is Bliss) ಎಂದು ನುಡಿದಿದ್ದಾನೆ. ನಾವು ಎಷ್ಟು ಲೌಕಿಕ ಜ್ಞಾನ ಪಡೆಯಲು ಇಚ್ಛೆ ಪಡುತ್ತೇವೋ ಅಷ್ಟರಮಟ್ಟಿಗೆ ನಮ್ಮ ಊಹಾಪೋಹಗಳು ಹೆಚ್ಚಾಗುತ್ತವೆ. ನಮ್ಮ ಊಹಾಪೋಹಗಳು ಹೆಚ್ಚಾದಂತೆ ನಮ್ಮ ಸ್ವಾತಂತ್ರ್ಯ ಕಡಮೆಯಾಗುತ್ತದೆ.

ನಾರದ ಮಹಾಮುನಿಗೂ ಒಮ್ಮೆ ದ್ವಂದ್ವ ಉಂಟಾಯಿತಂತೆ. ನಾರದರು ಬದ್ರಿಕಾಶ್ರಮಕ್ಕೆ ಭೇಟಿ ನೀಡಿದಾಗ ಅಲ್ಲಿ ಆತ್ಮಜ್ಞಾನದ ಬಗ್ಗೆ ಶೌನಕಾದಿ ಮುನಿಗಳು ಮತ್ತು ಸನತ್‌ಕುಮಾರರು ಜಿಜ್ಞಾಸೆ ಮಾಡುವುದನ್ನು ಕೇಳಿ ಅವರನ್ನು ಪ್ರಶ್ನಿಸಿದರಂತೆ, "ನನಗೆ ಒಂದು ದ್ವಂದ್ವ ಇದೆ. ನಾನು ನಾರಾಯಣನ ನಾಮಸ್ಮರಣೆ ಮಾಡುವುದು ಮೋಹ ವ್ಯಾಮೋಹವೇ?" ಎಂದು. ಅದಕ್ಕೆ ಅವರು ಹೇಳಿದರಂತೆ, "ನಾರಾಯಣನ ನಾಮಸ್ಮರಣೆ ವ್ಯಾಮೋಹವಲ್ಲ. ಆದರೆ ಅದನ್ನು ಜಪಿಸುವಾಗ ನಿನ್ನ ತಂಬೂರಿ, ಕಮಂಡಲ, ಕೃಷ್ಣಾಜಿನ ಪಕ್ಕದಲ್ಲಿವೆಯೇ ಎಂಬುದರ ಬಗ್ಗೆ ಯೋಚಿಸುವುದು ಮೋಹ, ವ್ಯಾಮೋಹವಾಗುತ್ತದೆ. ಆಗ ನಿನ್ನ ನಾಮಸ್ಮರಣೆ ಯಾಂತ್ರಿಕವಾಗುತ್ತದೆ. ಯಾವ ಯೋಚನೆಯೂ ಇಲ್ಲದೆ, ಕಾಲ ಸಂದರ್ಭ, ಸಂಗತಿ ಮತ್ತು ವಾತಾವರಣವನ್ನು ಮರೆತು ನಾರಾಯಣ ಜಪವನ್ನು ಮಾಡಿದ್ದು ಮಾತ್ರ ಭಗವಂತನಿಗೆ ತಲಪುತ್ತದೆ" ಎಂದು. ಇದರಿಂದ ನಮಗೆ ತಿಳಿಯುವುದೇನೆಂದರೆ ನಾವು ಎಲ್ಲವನ್ನೂ ಮರೆತು ತಲ್ಲೀನರಾಗಿ ತಪಸ್ಸು ಮಾಡಬೇಕಾದರೆ ಸುತ್ತ ಇರುವ ವಾತಾವರಣ, ಕುಳಿತಿರುವ ಜಾಗವನ್ನು, ನಮ್ಮ ಪರಿಸರವನ್ನು ಮರೆತು ಧ್ಯಾನವನ್ನು ಏಕಾಗ್ರಚಿತ್ತದಿಂದ ಮಾಡಬೇಕು. ಅದೇ ತಪಸ್ಸು ಎನ್ನುತ್ತಾರೆ ಕಶ್ಯಪ ಮುನಿ. ಇಂತಹ ತಪಸ್ಸಿಗೆ ಶಕ್ತಿ ಕೊಡುವವರೇ ಗುರು. ಈ ರೀತಿ ಧ್ಯಾನ ಮಾಡಿದಾಗ ಗುರುವಿನ ಶಕ್ತಿಯಿಂದ, ಕೃಪೆಯಿಂದ ನಮ್ಮಲ್ಲಿ ನಾವೇ ಶಿವ ಎಂಬ ಅರಿವಿನ ಶಕ್ತಿ ಧಾರಾಕಾರವಾಗಿ ಹರಿದು ನಮ್ಮನ್ನು ತೇಲಿಸಿಕೊಂಡು ಹೋಗುತ್ತದೆ. ಇತರ ಯಾವುದೇ ಶಕ್ತಿಯೂ ನಮ್ಮ ಒಳಗಡೆ ಹರಿಯವುದಿಲ್ಲ. ಒಳಗಡೆಯ ಶಕ್ತಿ ಹೊರಗೆ ಬರುವುದಿಲ್ಲ. ನಮಗೆ ಸ್ವಾತಂತ್ರ್ಯ ತಂದುಕೊಟ್ಟು ಹೊರಗಡೆ ಇರುವ ಶಕ್ತಿ, ಒಳಗಡೆ ಇರುವ ಶಕ್ತಿ ಅಂದರೆ ಹೊರಗಿನ ಬ್ರಹ್ಮಾಂಡದಲ್ಲಿ ಇರುವಂತಹ ಬ್ರಹ್ಮಾಂಡ ಶಕ್ತಿ ಮತ್ತು ಒಳಗಡೆ ಇರುವ ಪಿಂಡಾಂಡ ಶಕ್ತಿ ಸೇರಿ ನಮ್ಮನ್ನು ಹೀಗೆ ಆನಂದದಲ್ಲಿ ತೇಲಿಸುತ್ತದೆ.


**(ಮುಂದುವರಿಯುವುದು)**

**ಶ್ರೀ ನಿಮಿಷಾಂಬಾ ಆಶ್ರಮ, ನಂ. ೭೩, ೪ನೇ ಕ್ರಾಸ್, ಕಾನ್‌ಕಾರ್ಡ್ ಗಾರ್ಡನ್ ಸಿಟಿ ಲೇಔಟ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು-೫೬೦ ೦೫೯.**

# ‘ಈ ನಾಲಗೆ ಒಂದು ಸುಳ್ಳು ಹೇಳಬೇಕೆ?’

■ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ನಾಟಕಶಿರೋಮಣಿ ಎ.ವಿ. ವರದಾಚಾರ್ಯರು ಒಬ್ಬ ಅಸಾಧಾರಣ ವ್ಯಕ್ತಿ, ತಮ್ಮ ಕಾಲಕ್ಕೇ ಐತಿಹ್ಯವಾಗಿ ಪ್ರಸಿದ್ಧಿಗಳಿಸಿದ ಮಹಾನ್ ಕಲಾವಿದರು. ಅವರು ಅಭಿನಯಿಸಿದ ನಾಟಕಗಳು, ಆ ನಾಟಕಗಳಲ್ಲಿ ಅವರು ಹಾಡುತ್ತಿದ್ದ ಹಾಡುಗಳು ಅದ್ಭುತ ಪರಿಣಾಮವನ್ನು ಅಂದಿನ ರಸಿಕರ ಮೇಲೆ ಬೀರಿದುವು. ಅವರ ಘನವ್ಯಕ್ತಿತ್ವವೂ ಔದಾರ್ಯದ ಹಿರಿಮೆಯೂ ಪ್ರಸಿದ್ಧವಾದವು. ಅವರ ಬಳಿ ಬೇಡುವುದಕ್ಕೆ ಹೋಗಿ ಬರಿಗೈಯಲ್ಲಿ ಯಾರೂ ಹಿಂದಿರುಗುತ್ತಿರಲಿಲ್ಲ. ನೂರಾರು ಮಂದಿ ದೀನ ದರಿದ್ರರಿಗೆ ಅವರು ಅನ್ನ ವಸ್ತ್ರಗಳನ್ನು, ಉದ್ಯೋಗವನ್ನು ಕಲ್ಪಿಸಿಕೊಟ್ಟರು. ಯಾಚನೆ ಮಾಡಬಂದವರಿಗೆ ಆ ಗಳಿಗೆಗೆ ತಮ್ಮ ಕೈಯಲ್ಲಿ ಏನಿದ್ದರೆ ಅದನ್ನು ಕೊಟ್ಟು ‘ಕೃಷ್ಣಾರ್ಪಣ’ ಎಂದು ಕೈಮುಗಿಯುತ್ತಿದ್ದರು. ಅವರು ಎಂಥ ಸತ್ಯವಂತರು ಎಂಬುದನ್ನು ಈ ಪ್ರಕರಣ ಹೇಳುತ್ತದೆ:



ವರದಾಚಾರ್ಯರು ಒಂದು ಸಲ ಒಬ್ಬ ಸಾಹುಕಾರರ ಹತ್ತಿರ ಹಣ ಸಾಲ ತೆಗೆದುಕೊಂಡಿದ್ದರು. ಅಸಲು ಬಡ್ಡಿ ಸೇರಿ ಕೊಡಬೇಕಾದ್ದು ಸುಮಾರು 30 ಸಾವಿರ ಆಗಿತ್ತು. ಆ ಸಾಹುಕಾರ ಇನ್ನು ಹೆಚ್ಚು ಕಾಲ ಕಾಯಲು ಸಿದ್ಧನಿರಲಿಲ್ಲ. ಮೊಕದ್ದಮೆ ಹೂಡಿದ. ಕೋರ್ಟ್ ಆರ್ಡರಿನಂತೆ ಜಪ್ತಿ ಕ್ರಮ ಖಂಡಿತ ಎಂಬ ಘಟ್ಟಕ್ಕೆ ವಿಷಯ ಬಂತು.

ಈಗ ವರದಾಚಾರ್ಯರ ಗೆಳೆಯರೊಬ್ಬರು, ಈ ಪ್ರಕರಣವನ್ನು ಖುದ್ದಾಗಿ ಡಿ.ವಿ.ಜಿ. ಅವರಿಗೆ ನಿರೂಪಿಸಿದ ವಕೀಲರನ್ನು ಸಂಪರ್ಕಿಸಿದರು. ಇವರು ಪರಮಪ್ರಾಮಾಣಿಕರಾದ ವಕೀಲರು, ತಮ್ಮ ಕಸಬಿನಲ್ಲಿ ಹೆಸರು ಮಾಡಿದ್ದವರು. ಅವರು ಕೇಸಿನ ಕಾಗದದ ಕಟ್ಟುಗಳನ್ನೆಲ್ಲ ಪರೀಕ್ಷೆ ಮಾಡಿ ನೋಡಿದರು. ಬಳಿಕ ತಮ್ಮ ಅಭಿಪ್ರಾಯವನ್ನು ಹೀಗೆ ಆ ಮಿತ್ರರಿಗೆ ತಿಳಿಸಿದರು.

“ಮೊಕದ್ದಮೆಯೇನೋ ಬಲವಾಗಿದೆ. ಆದರೆ ಒಂದು ದಸ್ತಾವೇಜು ಇದರಲ್ಲಿ ಕಾಣಿಸುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಸಂಗತಿಯನ್ನು ರುಜುವಾತುಮಾಡಲು ಎದುರು ಕಕ್ಷಿಗೆ ಯಾವ ಆಧಾರವೂ ಇಲ್ಲ. ಆ ವಿಚಾರ ಕುರಿತು ಜಡ್ಜಿಯೋ ಎದುರುಕಕ್ಷಿಯ ವಕೀಲರೋ ಪ್ರಶ್ನೆ ಮಾಡಿದರೆ, ಆಗ ವರದಾಚಾರ್ಯರು, ‘ಅದು ತಮಗೆ ಜ್ಞಾಪಕವಿಲ್ಲ’ ಎಂದು ಹೇಳಬೇಕು; ಹಾಗೆ ಹೇಳಿದರೆ ಕೇಸು ನಿಲ್ಲಲಾರದು. ನಿಮ್ಮ ಸ್ನೇಹಿತರು ಹಾಗೆ ಹೇಳಿಯಾರೋ?”

ವರದಾಚಾರ್ಯರ ಮಿತ್ರರು ಈ ಸಲಹೆಯನ್ನು ವರದಾಚಾರ್ಯರಿಗೆ ತಿಳಿಸಿ, ಸಾಲದ ಕ್ಲೇಶದಿಂದ ಅವರನ್ನು ಪಾರುಮಾಡಲು ನೋಡಿದರು. ಆಚಾರ್ಯರು ತಮಗೆ ಸಹಜವಾಗಿದ್ದ ಅಟ್ಟಹಾಸದ ನಗೆಯನ್ನು ನಕ್ಕು, ತಮ್ಮ ಆ ಮಿತ್ರರಿಗೆ ತಮ್ಮ ಅಭಿಪ್ರಾಯವನ್ನು ಹೀಗೆ ತಿಳಿಸಿದರು:


“30 ಸಾವಿರ ರೂಪಾಯಿಗೋಸ್ಕರ ಈ ನಾಲಗೆ ಒಂದು ಸುಳ್ಳು ಹೇಳಬೇಕೆ? ಭಗವಂತ ಈ ಕೈಗೆ ಅಂಥ 30 ಸಾವಿರ ರೂಪಾಯಿಗಳನ್ನು ಎಷ್ಟು ಸಲ ಅನುಗ್ರಹಿಸಿದ್ದಾನೆ! ಇನ್ನೂ ಅನುಗ್ರಹ ಮಾಡಲಾರನೇ? ಇರಲಿ. ಸಾಹುಕಾರ ಏನು ತಾನೆ ಮಾಡುತ್ತಾನೆ? ನನ್ನ ಹಳೆಯ ಪರದೆಗಳನ್ನೂ ಹಳೆಯ ಬೊಂತೆಗಳನ್ನೂ ಕಿತ್ತುಕೊಂಡು ಹೋದಾನು. ಹೋಗಲಿ. ಬೇರೆ ಕಡೆ ಹಣ ತೆಗೆದು ಹೊಸ ಪರದೆ ಬರೆಸಿ, ಹೊಸ ಡ್ರೆಸ್ ಹಾಕಿ ನಾಟಕ ಆಡೋಣ. ಆಗ ಆ ಸಾಲ ಈ ಸಾಲ ಎರಡನ್ನೂ ತೀರಿಸೋಣ. ಸುಳ್ಳು ಹೇಳಿ ಋಣದಿಂದ ತಪ್ಪಿಸಿಕೊಳ್ಳುವುದು ನನ್ನಿಂದ ಆಗುವ ಕೆಲಸವಲ್ಲ.”

ಇದು ಆಚಾರ್ಯರಲ್ಲಿದ್ದ ಸತ್ತ್ವ; ಅವರ ಜೀವನದ ಮೇಲ್ಮೆಯ ಅಂತರಂಗ. ಅವರ ನಾಟಕ ಕಳೆಕಟ್ಟಿದ್ದು ಇಂತಹ ಋಜುತೆಯಿಂದ.

**‘ಬ್ರಾಹ್ಮಿ,’ ೬೮ಬಿ, ಆಶ್ರಮ್ ರಸ್ತೆ, ೩ನೇ ಬ್ಲಾಕ್,**
**ಜಯಲಕ್ಷ್ಮೀಪುರಂ, ಮೈಸೂರು-೫೭೦ ೦೧೨**




ಭಕ್ತಕವಿ ವಿದ್ವಾನ್ ಕೆ.ವಿ. ವರದರಾಜಯ್ಯಂಗಾರ್



# ಯಶೋದೆಯ ಮುದ್ದುಕೃಷ್ಣ

**ಶ್ಲೋಕ–14**

ಮಾತಃ ಕಿಂ ಯದುನಾಥ ದೇಹಿ ಚಷಕಂ ಕಿಂ ತೇನ ಪಾತುಂ ಪಯಃ
ತನ್ನಾಸ್ತ್ಯದ್ಯ ಕದಾಸ್ತಿ ವಾ ನಿಶಿ ನಿಶಾ ಕಿಂ ವಾಂಧಕಾರೋದಯೇ
ಆಮೀಲ್ಯಾಕ್ಷಿಯುಗಂ ನಿಶಾಪ್ಯುಪಗತಾ ದೇಹೀತಿ ಮಾತುರ್ಮುಹುಃ
ವಕ್ಷೋಜಾಂಬರ ಕರ್ಷಣೋದ್ಯತಕರಃ ಕೃಷ್ಣಃ ಸ ಪುಷ್ಣಾತು ನಃ *(II-61)*

**'ಅಮ್ಮಾ!' 'ಏನದು ಕೃಷ್ಣ?' 'ಕೊಡು ಬಟ್ಟಲಂ,' 'ಏಕದು?' 'ಹಾಲುಕುಡಿಯೆ'**
**'ಈಗ ವೇಳೆಯದಲ್ಲ,' 'ಇನ್ನು ಯಾವಾಗ?' 'ರಾತ್ರಿಯಲ್ಲಿ,' 'ರಾತ್ರಿ ಎಂದರೇನು?'**
**'ಕತ್ತಲೆಯು ಕವಿದಾಗ!' ತನ್ನೆರಡು ಕಂಗಳನು ಮುಚ್ಚಿ, 'ಕತ್ತಲಾಯಿತು ಈಗ ಕೊಡು'**
**ಎಂದೆನುತ ಕರಗಳಲಿ ತಾಯ ಸೆರಗನು ಸೆಳೆದ ಕೇಶವನು ಪೋಷಿಸಲಿ ನಮ್ಮನನವರತ**

ಮುದ್ದುಕೃಷ್ಣನಿಗೆ ಒಮ್ಮೆ ಬಾಯಾರಿದಂತಾಗಿ ಹಾಲು ಕುಡಿಯಬೇಕೆನಿಸಿತು. ಆದರೆ ಸ್ವಲ್ಪ ಹೊತ್ತಿಗೆ ಮುಂಚೆಯೇ ಯಶೋದೆಯು ಅವನಿಗೆ ಹಾಲು ಕುಡಿಸಿದ್ದಳು. ಆದರೂ ಕೃಷ್ಣನು ಅಮ್ಮನನ್ನು ಕೇಳಿದ–ಅಮ್ಮ ನನಗೊಂದು ಬಟ್ಟಲನ್ನು ಕೊಡು.

ಚಕಿತಳಾದ ತಾಯಿ ಕೇಳಿದಳು: ಕೃಷ್ಣ ಬಟ್ಟಲು ಏಕೆ ಬೇಕು?

**ಕೃಷ್ಣ:** ಅಮ್ಮ, ನಾನು ಹಾಲು ಕುಡಿಯಬೇಕು.

**ಯಶೋದೆ:** ಈಗ ಹಾಲು ಕುಡಿಯುವ ಸಮಯವಲ್ಲ, ಆಮೇಲೆ ಕೊಡುತ್ತೇನೆ.

**ಕೃಷ್ಣ:** ಅಮ್ಮ, ಹಾಲು ಕುಡಿಯಲು ಯಾವುದು ಸರಿಯಾದ ವೇಳೆ?

**ಯಶೋದೆ:** ಮಗು, ರಾತ್ರಿ ಊಟ ಮಾಡಿದ ಮೇಲೆ ಮಲಗುವಾಗ ಕೊಡುತ್ತೇನೆ.

ಕೃಷ್ಣ: ಅಮ್ಮ, ರಾತ್ರಿ ಎಂದರೇನು? ಯಾವಾಗ ಆಗುವುದು ಈ ರಾತ್ರಿ.

**ಯಶೋದೆ:** ಮಗು, ಕತ್ತಲೆಯ ಕವಿದಾಗ ರಾತ್ರಿಯಾಗುತ್ತದೆ.

ಕೃಷ್ಣ ಯೋಚಿಸಿದ; ಕತ್ತಲೆಯು ಕವಿದಾಗ ಕಣ್ಣು ಕಾಣಿಸುವುದಿಲ್ಲ. ಬೆಳಕಿನಲ್ಲಾದರೆ ಕಣ್ಣು ಕಾಣಿಸುವುದು. ಆದ್ದರಿಂದ ರಾತ್ರಿ ಎಂದರೆ ಕಣ್ಣು ಮುಚ್ಚಿಕೊಂಡಾಗಲೇ ಎಂದು ನಿಶ್ಚಯಿಸಿದ. ಕೂಡಲೇ ತನ್ನೆರಡು ಕೈಗಳಿಂದ ತನ್ನ ಎರಡು ಕಣ್ಣುಗಳನ್ನೂ ಗಟ್ಟಿಯಾಗಿ ಮುಚ್ಚಿಕೊಂಡು ಅಮ್ಮನಿಗೆ ಹೇಳಿದ, "ಅಮ್ಮ! ಈಗ ಕತ್ತಲಾಯಿತು, ಈಗ ನನಗೆ ಹಾಲನ್ನು ಕುಡಿಯಲು ಕೊಡು"–ಎಂದು ಪೀಡಿಸಿದ. ಜೊತೆಗೆ ತನ್ನ ಮನವಿಯನ್ನು ಅವಳ ಗಮನಕ್ಕೆ ಸೆಳೆಯಲು ಅವಳ ಸೆರಗನ್ನು ಹಿಡಿದು ಎಳೆದ ಪುಟ್ಟ ಮಗು ಶ್ರೀಕೃಷ್ಣ.

ಭಗವಂತನಾದ ನಾರಾಯಣನಿಗೆ ಸೂರ್ಯ–ಚಂದ್ರರು ಕಣ್ಣುಗಳಂತೆ. ಶ್ರೀಕೃಷ್ಣನೇ ಅರ್ಜುನನಿಗೆ ಭಗವದ್ಗೀತೆಯಲ್ಲಿ ಹೀಗೆ ಹೇಳಿರುವನು:

"ಆದಿತ್ಯಾನಾಂ ಅಹಂ ವಿಷ್ಣುಃ ಜ್ಯೋತಿಷಾಂ ರವಿರಂಶುಮಾನ್
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಂ ಅಹಂ ಶಶೀ"
(ವಿಭೂತಿಯೋಗ ಅಧ್ಯಾಯ –10, ಶ್ಲೋಕ–21)

ವಿಶ್ವರೂಪದರ್ಶನವಾದಾಗ, ಸಂಜಯನು ತಾನು ನೋಡಿದ್ದನ್ನು ಹೀಗೆ ವರ್ಣಿಸಿರುವನು:

"ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ
ಯದಿ ಭಾಃ ಸದೃಶಿ ಸಾ ಸ್ಯಾತ್ ಭಾಸಸ್ತಸ್ಯ ಮಹಾತ್ಮನಃ"
(ವಿಶ್ವರೂಪದರ್ಶನಯೋಗ ಅಧ್ಯಾಯ –11, ಶ್ಲೋಕ–12)

ಇದೇ ವಿಶ್ವರೂಪವನ್ನು ದರ್ಶಿಸಿದ ಅರ್ಜುನನ ಉದ್ಗಾರ ಹೀಗಿದೆ:–

"ಕಿರೀಟಿನಂ ಗದಿನಂ ಚಕ್ರಿಣಂ ಚ
ತೇಜೋರಾಶಿಂ ಸರ್ವತೋ ದೀಪ್ತಿಮಂತಮ್
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾತ್
ದೀಪ್ತಾನಲಾರ್ಕದ್ಯುತಿಮಪ್ರಮೇಯಮ್"

ಅಂದರೆ ಶ್ರೀಕೃಷ್ಣನು ಆದಿತ್ಯರಲ್ಲೆಲ್ಲ ಶ್ರೇಷ್ಠನಾದ ವಿಷ್ಣುವೇ ಆಗಿದ್ದಾನೆ. ಬೆಳಗುವವರಲ್ಲಿ, ಬೆಳಕಿಗೆ ನೆಲೆಯಾಗಿರುವವರಲ್ಲಿ ಅತಿಬೆಳಗುವ ರವಿಯೇ ಆಗಿದ್ದಾನೆ. ನಕ್ಷತ್ರಗಳಲ್ಲೆಲ್ಲ ಶ್ರೇಷ್ಠನಾದ ಚಂದ್ರನೇ ಶ್ರೀಕೃಷ್ಣ. ಹಾಗೆಯೇ ಸಹಸ್ರಾರು ಸೂರ್ಯರು ಒಮ್ಮಿಂದೊಮ್ಮೆಗೇ ಆಕಾಶದಲ್ಲಿ ಬೆಳಗಿದರೆ ಎಷ್ಟು ಬೆಳಕಾಗುವುದೋ ಅಷ್ಟೇ ಬೆಳಕಿನಿಂದ ಬೆಳಗುತ್ತಿರುವವನು ಶ್ರೀಕೃಷ್ಣ. ಅವನು ಒಂದು ಮಹತ್ತರವಾದ ತೇಜೋ ರಾಶಿ, ಎಲ್ಲ ಕಡೆಯೂ ಬೆಳಗುತ್ತಿರುವವನು. ಅತ್ಯುಜ್ವಲವಾಗಿ ಬೆಳಗುತ್ತಿರುವ ಸೂರ್ಯ ಅಗ್ನಿಗಳಂತೆ ಅಸಾಮಾನ್ಯ ಪ್ರಕಾಶವನ್ನು ಪಡೆದಿರುವನು ಶ್ರೀಕೃಷ್ಣ.

ಇಂತಹ ಕೃಷ್ಣನು ತನ್ನ ಮನಸ್ಸು ಮಾಡಿ ಕಣ್ಣು ಮುಚ್ಚಿಕೊಂಡರೆ ವಿಶ್ವದಲ್ಲೆಲ್ಲ ಅಂಧಕಾರವು ಕವಿಯುವುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಕಣ್ಣುಮುಚ್ಚಿಕೊಂಡು ಶಿಶು ಕೃಷ್ಣನು "ಈಗ ರಾತ್ರಿಯಾಯಿತು." ಎಂದರೆ ಅದು ಅಬದ್ಧವೇನಲ್ಲ. ಸತ್ಯಕ್ಕೆ ಸತ್ಯವೇ ಆದುದು.

ಹೀಗಿದ್ದರೂ ತನ್ನ ಮುಗ್ಧತೆಯನ್ನು ಪ್ರದರ್ಶಿಸುತ್ತಾ ಸರ್ವಜ್ಞನಾದ ಶ್ರೀಕೃಷ್ಣನು ತನ್ನ ತಾಯಿಯನ್ನೊಲಿಸಿಕೊಳ್ಳುವುದನ್ನೂ, ಸೆರಗನ್ನು ಹಿಡಿದು ಬೇಡುವುದನ್ನೂ, ಕಂಡು ಯಾರು ತಾನೇ ಮನಕರಗರು. ಅಂತಹ ಮುದ್ದುಕೃಷ್ಣನು, ಚತುರಪೋರನು ನಮ್ಮನ್ನು ರಕ್ಷಿಸಲಿ. ಇದೇ ರೀತಿಯ ಅವನ ಲೀಲಾವಿನೋದಗಳಿಂದ ನಮ್ಮಲ್ಲಿ ಆನಂದ, ಶಾಂತಿ ನೆಮ್ಮದಿಗಳನ್ನು ಬೆಳೆಸಿ ಪೋಷಿಸುತ್ತಿರಲಿ ಎಂಬುದೇ ಎಲ್ಲರ ಪ್ರಾರ್ಥನೆ.

**(ಮುಂದುವರಿಯುವುದು)**



# KALAJNANA

(Written in 1813 A.D.)

## Sri Yogi Nareyana Tataiah

### ಮೂಲಮು–19

ತುರಗಮುಲ್ ಪದಿ ವೇಲು – ತುರುಪು ಸಿಪಾಯಿಲು
ತೋಸಿಖಾನ ಬಂಡ್ಲು – ತೊಂಬನೂರು ।
ಕಟ್ಟಾಯುತಂ ಬೈನ – ಜಟ್ಲು ಮುಪ್ಪದಿ ವೇಲು ।
ಭಾರು ಕರ್ನಾಟಕಂ – ನೂರು ವೇಲು ।
ಪೇರು ಪೇರ್ರೈನ (ವೇರು ವೇರ್ರೈನ) ಯಾ ಸ್ವಾರೀ ಫಿರಂಗುಲು
ವೇಯು, ರೆಂಡು ವೇಲು – ಯನಬನೂರು ।
ವಿಲ್ಲು ನಂಬುಲು – ಬಿರುದು – ಈಟಿ, ವಂಕೀ, ಬಾಕು
ನೌಜಿ ಕತ್ತುಲವಾರು – ನಾಲ್ಗು ವೇಲು ॥
ಭೇರಿ ನೌಭತ್ತು ಭಾಂಕಾ ಮೃ–ದಂಗಮುಲು ನೂರು ।
ದಿಕ್ಕು ದಿಕ್ಕುಲ ರಾಜುಲಕು – ಗುಂಡೆ ದಿಗುಲು ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು – ಭೀಮಲಿಂಗ ॥ 19 ॥

***Thuragamul padi vaelu, thurupu sipayilu***
***Thosi Khana bandlu thombanooru |***
***Kattayuthamhaina jatlu muppadi Vaelu |***
***Bharu Karnatakam nooru vaelu |***
***Paerupaeraina (Vaeru Vaeraina) Ya swaree phirangulu,***
***Vaeyu, rendu vaelu yanabanooru |***
***Villu Nambulu, birudu, yeeti,vankee, baku***
***Nouji kathulavaru nalgu vaelu ||***
***Bhaeri noubathtu, Bhanka, mridangamulu, nooru |***
***Dikku dikku rajulaku gunde digulu |***
***Amara Naraeyanuni Sakha, Hara, mahatma |***
***Adhika BhavaBhanga, Kaiwaramu Bheemalinga | 19 |***

### Meaning:

(The enlightened ruler's strong fighting force). The army will consist of 10,000 cavalry. The artillery force will have 900 (9000?) Well-built, strong and fearless men.30,000 extremely strong and valiant wrestlers (jattis) specialised in single combat.100,000 will be the number of bharu Karnataka (? ?). A mobile force of 2800 men specialised in the use of cannon will be suitably deployed. 4000 soldiers using native weapons like sword (dagger), spear, sickle etc. The military band using martial instruments such as drum, mridangam, kettle drum etc. will consist of a hundred men. The ruler in possession of such a good and well-equipped army will strike terror in the hearts of the rulers of all other states, both far and near.

### ಮೂಲಮು – ೨೦

ಪಂಚವನ್ನೆಲ ಡೇರ – ಪಶಿಡಿ ಕಲಶಮು ಲಾರು
ಚುಟ್ಟು ಪರದಾ ಮಂಚಿ – ಸೂರ್ಯಪಟ್ಟು ।
ರಜಿತಪು ಟೇದಾರಿ – ಚುಟ್ಟುಕೋಟ ಕವಾತು ।
ನಾಲ್ಕು ದಿಕ್ಕುಲ ನಾಲ್ಗು – ಕೊತ್ತಳಮುಲು ।
ಉತ್ತರ–ದಕ್ಷಿಣಂ–ಉಭಯ ದ್ವಾರಮುಲಂದು ।
ಏರುಕೋಲು ಬಂಟ್ಲು – ಯನಬನೂರು ।
ವೀಣೆ–ತಂಬುರ–ವೇಣು–ಮದ್ದೆಳ್ಳು–ಗಿಡಿಬಿಳ್ಳು ।
ಚುಟ್ಟು ಪಾರಾ ಗಸ್ತಿ – ತಿರುಗು ಚುಂಡು ॥
ವಕ್ಕ ದಿನಮ್ಮೈನ ವಕ ಚೋಟ – ವುಂಡುಟರುದು ।
ತಿರುಗುಚುಂಡುನು ಭುವಿಯೆಲ್ಲ – ತೀವ್ರ ಮುಗನು ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು – ಭೀಮಲಿಂಗ ॥ ೨೦ ॥

***Panchavennala daera, pashidi kalashamu laru,***
***Chuttu parada manchi Sooryapattu |***
***Rajithapu Taedari chuttu kota kavathu |***
***Nalku dikkula nalgu koththalamulu |***
***Uttara dakshinam Ubhaya dwaramulandu |***
***Yaerukolu bantlu yenabanooru |***
***Veene,thambura,Vaenu, maddellu, gidibillu ||***

*Chuttu para gasthi thirugu-chundu ||*
*Vakka dinamaina vaka chota vundutarudu |*
*Thiruguchundunu bhuviyella theevramuganu |*
*Amara Naraeyanuni Sakha, Hara, mahatma |*
*Adhika BhavaBhanga, Kaiwaramu Bheemalinga | 20 |*

## Meaning:

While on tour or in a camp the (future) Monarch will stay in a truly royal tent made up of five distinct colours (a sign of royalty or power). While he is in procession or a royal march six shining golden domes will be ceremoniously carried in the vanguard. Round him, there will be a curtain

(Prudhah). Just behind him there will be a golden colours Soorya Prabha and over his head the traditional, highly decorated, pure white umbrella (symbol of royalty) with a silver handle and silver ribs.

His palace will be protected by a strong fortress with bastions facing the four main directions. The north and the south gates of the fort will be guarded by 800 armed guards. Wherever the (future) King lives or camps sweet music emanating from string, wind and percussion instruments will be heard. Even while the sentinels are on their watchful rounds (when they are patrolling) the (enlivening) music will not cease.

The (future) ruler will not stay for more than a day in any Particular place. He will be on tour keeping a watchful eye on all happenings and affairs. He will be constantly going round and round his vast empire to Know, see, inspect and learn everything first hand.

For loose cotton, cloth and jewellery the duty to be paid will be one duddu (a coin of those future days which might be considered equivalent to three paise of today). For a gunny bag of arecanut the tax will be a paraka (a coin which will be one eighth of the value of a rupee). Freshly harvested grains will be exempted from tax. For a bag of salt the tax will be one saeru fo salt (one and one third of a k.g.) or its equivalent price in money. For a basket of betel leaves the duty will be the price equivalent to 100 betel leaves (half a kattu). With respect to horse-trading, both the buyer and the seller shall pay a quarter of a rupee as tax. For an oil mill the levy will be a saeru (quantity) of oil or its equivalent price in money. The tax will not be levied in proportion to the oil produced. Weavers will pay a tax of one duddu every month. Taxes paid in kind shall not be collected by tax collectors. That would be the responsibility of the wholesalers who buy the goods for sale. Those merchants who collect taxes in kind shall remit them duly to the government.

**(To be continued...)**

▶▶ 33ನೇ ಪುಟದಿಂದ

ಬಹಳ ಗಾಢವಾದುದೆಂದು ನಾನನ್ನುವುದಿಲ್ಲ. ಅದಕ್ಕೂ ಹೆಚ್ಚಿನ ಏಕಾಗ್ರತೆಯ ದೃಷ್ಟಾಂತವನ್ನು ತೋರಿಸಬಹುದು. ಆದರೂ ಅದು ಅವನ ಹತ್ತಿರ ಎಷ್ಟಿತ್ತು ಎಂಬುದನ್ನು ನೋಡಿ. ಖಲೀಫ ಉಮರನ ಬಗೆಗೂ ಇಂಥದೇ ಒಂದು ಕತೆಯುಂಟು. ಕಾಳಗ ನಡೆದಿದ್ದಾಗ ಪ್ರಾರ್ಥನೆಯ ಸಮಯವಾದಲ್ಲಿ (ಮುಸಲ್ಮಾನೀ ಧರ್ಮದಲ್ಲಿ ಐದು ಸಲ ಪ್ರಾರ್ಥನೆ ಹೇಳಿದೆ.) ತತ್‌ಕ್ಷಣ ಮನಸ್ಸನ್ನು ಏಕಾಗ್ರಗೊಳಿಸಿ, ಮೊಣಕಾಲೂರಿ ರಣರಂಗದಲ್ಲೇ ಆತ ಪ್ರಾರ್ಥನೆಗಾರಂಭಿಸುತ್ತಿದ್ದ. ಆ ಏಕಾಗ್ರತೆಯಲ್ಲಿ ಯಾರನ್ನು ಯಾರು ಕೊಲ್ಲುತ್ತಿರುವರೆಂಬುದರ ಅರಿವೂ ಅವನಿಗುಳಿಯುತ್ತಿರಲಿಲ್ಲ. ಮೊದಮೊದಲಿನ ಮುಸಲ್ಮಾನರ ಈ ಪರಮೇಶ್ವರ ನಿಷ್ಠೆಯಿಂದ, ಈ ಏಕಾಗ್ರತೆಯಿಂದ ಇಸ್ಲಾಂ ಧರ್ಮ ಪ್ರಸಾರವಾಯಿತು.

6. ಮೊನ್ನೆ ಒಂದು ಕಥೆ ಕೇಳಿದೆ. ಒಬ್ಬ ಮುಸಲ್ಮಾನ ಇದ್ದ. ಅವನ ಶರೀರದಲ್ಲೊಂದು ಬಾಣ ಸೇರಿತು. ಅದರಿಂದ ತುಂಬ ನೋವಾಗುತ್ತಿತ್ತು. ಬಾಣವನ್ನು ಕೀಳಲು ಹೋದರೆ, ಕೈ ಹಚ್ಚುತ್ತಲೂ ನೋವು ಇನ್ನು ಹೆಚ್ಚುತ್ತಿತ್ತು. ಅದರಿಂದಾಗಿ ಅದನ್ನು ತೆಗೆಯುವುದೂ ಅಸಾಧ್ಯವಾಯಿತು. ಈಗಿನ ಕ್ಲೋರೋಫಾರಂನಂಥ ಅಮಲಿನ ಔಷಧವೂ ಆಗ ಇರಲಿಲ್ಲ. ಸರಿ, ದೊಡ್ಡ ಸಮಸ್ಯೆಯೇ. ಆ ಸಾಧುವನ್ನು ಬಲ್ಲ ಕೆಲವರು ಮುಂದೆ ಬಂದು "ಬಾಣ ತೆಗೆಯುವುದು ಸದ್ಯ ಹಾಗಿರಲಿ. ಮೊದಲು ಈತ ಪ್ರಾರ್ಥನೆಗೆ ತೊಡಗಲಿ. ಅನಂತರ ಅದನ್ನು ತೆಗೆದರಾಯಿತು" ಎಂದರು. ಸಾಯಂಕಾಲದ ಪ್ರಾರ್ಥನೆಯ ಸಮಯವಾಯಿತು. ಸಾಧು ಪ್ರಾರ್ಥನೆಗೆ ತೊಡಗಿದ. ಒಂದು ಕ್ಷಣದಲ್ಲಿಯೇ ಆತ ಚಿತ್ತವನ್ನೇಕಾಗ್ರಗೊಳಿಸಿ ಪ್ರಾರ್ಥನೆಯಲ್ಲಿ ತಲ್ಲೀನನಾದ. ಆಗ ಅವನ ಶರೀರದಿಂದ ಬಾಣವನ್ನು ಕಿತ್ತರೂ ಅದರ ಅರಿವು ಅವನಿಗಿರಲಿಲ್ಲ. ಇದು ಎಂಥ ಏಕಾಗ್ರತೆ!

7. ಸಾರಾಂಶ–ವ್ಯವಹಾರವಿರಲಿ, ಪರಮಾರ್ಥವಿರಲಿ, ಚಿತ್ತದ ಏಕಾಗ್ರತೆಯಿಲ್ಲದೆ ಅದರಲ್ಲಿ ಯಶಸ್ಸು ಸಿಕ್ಕುವುದು ಕಠಿಣ. ಚಿತ್ತ ಏಕಾಗ್ರವಾದರೆ ಎಂದಿಗೂ ಸಾಮರ್ಥ್ಯ ಕಡಮೆಯಾಗಲಾರದು. ನಿಮಗೆ ಅರುವತ್ತು ವರ್ಷ ವಯಸ್ಸಾಗಿದ್ದರೂ ಕೂಡ ನಿಮ್ಮಲ್ಲಿ ಯೌವನದ ಉತ್ಸಾಹ, ಶಕ್ತಿ ಕಾಣಿಸೀತು. ವಯಸ್ಸಾದ ಹಾಗೆಲ್ಲ ಮನುಷ್ಯ ಮನಸ್ಸು ಗಟ್ಟಿಯಾಗುತ್ತ ಹೋಗಬೇಕು. ಹಣ್ಣನ್ನು ನೋಡಿ, ಅದು ಕಸುಕಾಗಿರುತ್ತದೆ, ಪಕ್ವವಾಗುತ್ತದೆ, ಕೊಳೆಯುತ್ತದೆ, ನಾಶ ಹೊಂದುತ್ತದೆ. ಆದರೂ ಅದರೊಳಗಿನ ಬೀಜ ಮಾತ್ರ ಗಟ್ಟಿಯಾಗುತ್ತಿರುತ್ತದೆ. ಹೊರಗಿನ ಶರೀರ ಒಣಗೀತು, ಬಿದ್ದೀತು. ಆದರೆ ಅದೇ ಕಾಯಿಯ ಸಾರ ಸರ್ವಸ್ವವಲ್ಲ. ಅದರ ಆತ್ಮವೆಂದರೆ ಬೀಜ. ಶರೀರದ ವಿಷಯವೂ ಹೀಗೇ. ಶರೀರ ವೃದ್ಧವಾದರೂ ಸ್ಮರಣಶಕ್ತಿ ಹೆಚ್ಚುತ್ತಿರಬೇಕು. ಬುದ್ಧಿ ತೇಜಸ್ವಿಯಾಗಿರಬೇಕು. ಆದರೆ ಹಾಗಾಗದು. ಮನುಷ್ಯ ಹೇಳುತ್ತಾನೆ–'ಈಚೆಗೆ ಏನೂ ನೆನಪಾಗುವುದಿಲ್ಲ.' ಏಕೆ? 'ವಯಸ್ಸಾಯಿತು' ನಿನ್ನ ಜ್ಞಾನ, ವಿದ್ಯೆ, ಸ್ಮರಣೆ ಇವು ನಿನ್ನ ಬೀಜ. ವೃದ್ಧವಾದಂತೆಲ್ಲ ಶರೀರ ಸಡಿಲು ಬೀಳುವ ಹಾಗೆ ಒಳಗಿನ ಆತ್ಮ ಬಲಶಾಲಿಯಾಗಬೇಕು. ಅದಕ್ಕಾಗಿ ಏಕಾಗ್ರತೆ ಬೇಕು.

**(ಮುಂದುವರಿಯುವುದು)**



**ಶ್ರೀ ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರು** ಇತ್ತೀಚಿನ ವರೆಗೂ ಜೀವಿಸಿದ್ದು ಪಾದಚಾರಿಗಳಾಗಿಯೇ ದೇಶ ಸಂಚಾರ ಮಾಡುತ್ತಾ **ಕರತಲ ಭಿಕ್ಷಾ ತರುತಲ ವಾಸಃ** ಎಂಬಂತೆ ಪರಿಶುದ್ಧ ಸಂನ್ಯಾಸ ಜೀವನ ನಡೆಸಿ ಶತಾಯುಷಿಗಳಾಗಿ ಬ್ರಹ್ಮೈಕ್ಯರಾದರು. ಅವರು ಸನಾತನ ಧರ್ಮದ ಸಾರಸರ್ವಸ್ವವನ್ನೂ ಆಧುನಿಕ ಪರಿಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಮುಂಬಯಿ ಭಕ್ತರು ಒಂದೂಗೂಡಿ **'ಶ್ರೀ ಕಂಚಿ ಮಹಾಸ್ವಾಮಿ ಪೀಠಾರೋಹಣ ಶತಾಬ್ದಿ ಮಹೋತ್ಸವ ಟ್ರಸ್ಟ್' (ಮುಂಬೈ–400 002)** ರಚಿಸಿಕೊಂಡು ಪರಮಾಚಾರ್ಯರ ಅತ್ಯಂತ ಅಮೂಲ್ಯವಾದ ವಿಚಾರಗಳನ್ನೆಲ್ಲ 'ದೈವವಾಣಿ' ಎಂಬ ಹೆಸರಿನಲ್ಲಿ 7 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ. ಈ ಬರಹವನ್ನು ಎರಡನೆ ಸಂಪುಟದಿಂದ ಆಯ್ಕೆ ಮಾಡಿ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ.

# ಜಗತ್ತು ಮಾಯೆ ಎಂಬುದು ಹೇಗೆ?

ಅದ್ವೈತವು ಸಾರುವ, 'ಜಗತ್ತು ಮಾಯೆ' ಎಂಬ ವಾದವನ್ನು ಅನೇಕರು ಅರ್ಥಮಾಡಿಕೊಂಡಿಲ್ಲ. ಅವರು ಆ ವಾದಕ್ಕೆ ಆಕ್ಷೇಪ ಎತ್ತುತ್ತಾರೆ; ಅಂಥ ವಿಚಾರವನ್ನು ಖಂಡಿಸುತ್ತಾರೆ. "ಈ ಜಗತ್ತು ಜೀವಿಗಳಿಂದ ತುಂಬಿದೆ. ವೈವಿಧ್ಯಪೂರ್ಣವಾದ ವಸ್ತುಗಳ ನಡುವೆ ಇರುವ ಕಾರ್ಯ–ಕಾರಣಗಳನ್ನು ನಿಯಂತ್ರಿಸುವ ಹಲವು ಕಟ್ಟಳೆಗಳಿರುವುದರಿಂದ ಹಲವು ನಿರ್ವಹಣೆಗಳು ಸಾಧ್ಯವಾಗಿವೆ; ನಮ್ಮ ಕೆಲಸದ ಫಲವನ್ನು ಸಾಧಿಸಿಕೊಳ್ಳುವುದು ಸಾಧ್ಯವಾಗಿದೆ. ಅದನ್ನು ನೀವು ಮಾಯೆ ಎಂದರೆ ಹೇಗೆ ಒಪ್ಪಲು ಸಾಧ್ಯ?" ಎಂದು ಅವರು ಕೇಳುತ್ತಾರೆ.

ಆಚಾರ್ಯ ಶಂಕರರು ಜಗತ್ತನ್ನು ಮಾಯೆ ಎನ್ನುವಾಗ ಅದು ಅವಾಸ್ತವ/ಸುಳ್ಳು ಎಂದು ಹೇಳುತ್ತಿದ್ದಾರೆ ಎಂಬ ತಪ್ಪು ಗ್ರಹಿಕೆಯಿಂದಾಗಿ ಈ ಆಕ್ಷೇಪ ಏಳುತ್ತಿದೆ.


"ಇದು ವಿಚಿತ್ರ! ಅಂದರೆ, ಆಚಾರ್ಯರು, 'ಜಗತ್ತು ಮಾಯೆ, ಆದರೆ ಅವಾಸ್ತವವಲ್ಲ' ಎನ್ನುತ್ತಿದ್ದಾರೆ ಎಂದು ಅರ್ಥವೇ? ಅಂಥ ವಿಚಿತ್ರ ತರ್ಕ ನಮಗೆ ಅರ್ಥವಾಗುವುದಿಲ್ಲ" ಎಂದು ನಾವು ಯೋಚಿಸಬಹುದು.

ಆಚಾರ್ಯರ ಅಭಿಪ್ರಾಯ/ದೃಷ್ಟಿಕೋನವನ್ನು ಪರೀಕ್ಷಿಸೋಣ. ಸತ್ಯ–ಅಸತ್ಯ–ಮಾಯೆ ಇವುಗಳ ವೈಲಕ್ಷಣ್ಯವನ್ನು ಹೇಗೆ ಗುರುತಿಸಿದ್ದಾರೆ ನೋಡೋಣ.

ಅವರ ಅಭಿಪ್ರಾಯದಲ್ಲಿ, ಸರ್ವಾಂತರ್ಯಾಮಿಯಾದ ಒಂದು ಆತ್ಮಮಾತ್ರವೇ ಸತ್ಯವಾದುದು. ಅದನ್ನು ಬ್ರಹ್ಮ ಎಂದೂ ಕರೆಯುತ್ತೇವೆ. ಅದು ಮಾತ್ರ ಎಂದಿಗೂ ಬದಲಾಗದಂಥದು. ಆದ್ದರಿಂದಲೇ ಅದು ಸತ್ಯವಾದುದು.

ಜಗತ್ತು ಪರಿವರ್ತನಶೀಲವಾದುದಲ್ಲವೆ? ನಾವೆಲ್ಲರೂ ನಿತ್ಯವೂ ಬದಲಾಗುತ್ತಿಲ್ಲವೆ? ಪ್ರತಿ ಕ್ಷಣವೂ ನಮ್ಮ ಮನಸ್ಸೂ, ಚಿಂತನೆಯೂ ಬದಲಾಗುತ್ತಲೇ ಇವೆಯಲ್ಲವೆ? ಆದ್ದರಿಂದ ಆಚಾರ್ಯರು ಇವುಗಳನ್ನು ಸತ್ಯವೆಂದು ನಿರ್ಣಯ ಮಾಡುವುದಿಲ್ಲ.

ಅವರು ಅದನ್ನು ಅಸತ್ಯ ಎನ್ನುತ್ತಾರೆಯೆ? ಇಲ್ಲ, ಅವರು ಹಾಗೂ ಹೇಳುವುದಿಲ್ಲ. 'ಸತ್ಯ' ಎಂಬುದರ ಹಿಂದೆ 'ಅ' ಎಂಬ ಅಕ್ಷರವನ್ನು ಸೇರಿಸಿದರೆ ಅದು ಸತ್ಯಕ್ಕೆ ಪೂರ್ಣವಾಗಿ ವಿರೋಧವಾಗುತ್ತದೆ. ಅದು ಅಸ್ತಿತ್ವದಲ್ಲೇ ಇಲ್ಲ ಎಂದು ಅರ್ಥವಾಗಿಬಿಡುತ್ತದೆ. ಆಚಾರ್ಯರು ಜಗತ್ತು ಅಸ್ತಿತ್ವದಲ್ಲಿಲ್ಲದ 'ಅಸತ್ಯ' ಎಂದು ಹೇಳಿಯೇ ಇಲ್ಲ. ಅದೇ ಸಮಯಕ್ಕೆ ಅದು ಸತ್ಯವೂ ಅಲ್ಲ ಅಥವಾ ಚಿರಕಾಲದ ಪ್ರಾಮಾಣ್ಯವೂ ಅಲ್ಲ. ಅದನ್ನು 'ಮಿಥ್ಯಾ' ಎಂದು ಕರೆದಿದ್ದಾರೆ. 'ಮಿಥ್ಯಾ' ಎಂಬುದನ್ನು 'ನಿಜವಲ್ಲದ್ದು' ಎಂದು ನಾವು ಗ್ರಹಿಸುತ್ತೇವೆ. ವಾಸ್ತವವಾಗಿ ಅದು ಅಬಾಧಿತವಾದ ಸತ್ಯವೂ ಅಲ್ಲ, ಪೂರ್ಣವಾಗಿ ಅವಾಸ್ತವವೂ ಅಲ್ಲ; ಅವೆರಡರ ನಡುವಿನ ಅವಸ್ಥೆ ಅದರದು.



ಶ್ರೀ ಶಂಕರಾಚಾರ್ಯರು

ನಮ್ಮ ಆಚಾರ್ಯರು ಸತ್ಯವನ್ನು ಮೂರು ಭಿನ್ನ ರೀತಿಯಲ್ಲಿ ವಿಭಾಗಿಸಿದ್ದಾರೆ. ಈ ಮೂರರಲ್ಲಿ ಯಾವುದಾದರೂ ಒಂದಕ್ಕೂ ಸೇರದಂಥದನ್ನು ಮಾತ್ರ 'ಅಸತ್ಯ' ಎಂದು ವರ್ಜಿಸಿದ್ದಾರೆ:

1. ಪಾರಮಾರ್ಥಿಕ ಸತ್ಯ
2. ವ್ಯಾವಹಾರಿಕ ಸತ್ಯ
3. ಪ್ರಾತಿಭಾಸಿಕ ಸತ್ಯ



ಅಸತ್ಯವು ಈ ಮೂರರಲ್ಲಿ ಯಾವುದಕ್ಕೂ ಸೇರುವುದಿಲ್ಲ. ಈ ಮೂರರ ಪೈಕಿ ಪಾರಮಾರ್ಥಿಕ ಸತ್ಯವು ಬ್ರಹ್ಮ ಸ್ವರೂಪ ಅಂದರೆ ಅದ್ವೈತ ಎನಿಸುತ್ತದೆ.

ದಿನನಿತ್ಯದ ಆಗುಹೋಗುಗಳಲ್ಲಿ ವಾಸ್ತವವೆಂಬಂತೆ ಏನೇನನ್ನು ನೋಡುತ್ತೇವೋ ಅದು ವ್ಯಾವಹಾರಿಕ ಸತ್ಯ. ಪ್ರಾಪಂಚಿಕ ಜೀವನವು ವಾಸ್ತವವೆಂದು ನಾವು ಯೋಚಿಸುವುದು ವ್ಯಾವಹಾರಿಕ ಸತ್ಯ. ತಗಡಿನ ಡಬ್ಬದ ಮುಚ್ಚಳ ಬಿಸಿಲಿನಲ್ಲಿ ಬಿದ್ದಿರುತ್ತದೆ ಮತ್ತು ಅದು ಬೆಳ್ಳಿಯ ನಾಣ್ಯದಂತೆ ಕಾಣುತ್ತದೆ. ಅದು ಪ್ರಾತಿಭಾಸಿಕ ಸತ್ಯ. ಕೆಲವು ಸೆಕೆಂಡುಗಳವರೆಗೆ ಅದು ಹಾಗೆ ಕಾಣಿಸುತ್ತದೆ. ಆದರೆ ಅದು ನಿಜವಲ್ಲ. ಕನಸೂ ಹಾಗೆಯೇ, ಈ ಮೂರಕ್ಕೂ ಹೊರತಾಗಿ ಯಾವುದು ಅಲ್ಲಿ ಇಲ್ಲವೋ ಅದು ಅಸತ್ಯ. ಯೋಗಶಾಸ್ತ್ರವು ಅದನ್ನು 'ವಿಕಲ್ಪ' ಎಂದು ಕರೆಯುತ್ತದೆ.

ಶಬ್ದಜ್ಞಾ ಭಾತಿ ವಸ್ತುಶೂನ್ಯೋ ವಿಕಲ್ಪಃ

'ಬಂಜೆಯ ಮಗ': ಆಧಾರವಸ್ತುವಿಲ್ಲದ ಧ್ವನಿ (ಪದ) ವಿಕಲ್ಪ ಎನಿಸುತ್ತದೆ. ಈ ಅಸತ್ಯವನ್ನು ವಿನೀತರಾಗಿ 'ಅತ್ಯಂತ ಅಸತ್' ಎನ್ನುತ್ತಾರೆ.

ಹುಲ್ಲನ್ನು ಹೊಸೆದು ಮಾಡಿರುವ ಹಗ್ಗವು ಸಂಜೆಯ ಮಬ್ಬಿನಲ್ಲಿ ಹಾವಿನಂತೆ ಕಾಣುತ್ತದೆ. ಅದು ಹಾವು ಎಂಬುದು ಸತ್ಯವಲ್ಲ. ಅದು ಹಾವಿನಂತೆ ಕಾಣುತ್ತದೆ ಎನ್ನುವುದು ವಾಸ್ತವ. ಅಂಥ ಸ್ಥಿತಿಯಲ್ಲಿ ಸತ್ಯವಲ್ಲದ್ದು ಮತ್ತು ವಾಸ್ತವ ಎರಡೂ ಬೆರೆತಿವೆ. ಅದರ ಹತ್ತಿರಕ್ಕೆ ಹೋಗಿ ನೋಡಿದಾಗ ಅದು ನಿಜವಾಗಿ ಹಾವಾಗಿರುವುದಿಲ್ಲ. ಆದರೆ ಈ ನಡುವಿನ ಕೊಂಚ ಹೊತ್ತು ಅದು ವಾಸ್ತವದಂತೆ ಕಂಡಿತು, ಅದೇ ಪ್ರಾತಿಭಾಸಿಕ ಸತ್ಯ.

ನಿಜವಾದ ಜ್ಞಾನ ಲಭಿಸಿದಾಗ ವ್ಯಾವಹಾರಿಕ ಸತ್ಯ ಮತ್ತು ಪ್ರಾತಿಭಾಸಿಕ ಸತ್ಯ ಎರಡೂ ಅವಾಸ್ತವವಾಗುತ್ತವೆ. ನಿಜವಾದ ಜ್ಞಾನ ಇಲ್ಲದಾಗ ವಾಸ್ತವವೆಂಬಂತೆ ಸತ್ಯ ಎರಡೂ ಅವಾಸ್ತವವಾಗುತ್ತವೆ. ನಿಜವಾದ ಜ್ಞಾನ ಇಲ್ಲದಾಗ ವಾಸ್ತವವೆಂಬಂತೆ ಏನು ಕಾಣುತ್ತದೋ ಅದನ್ನು ವೇದಾಂತವು 'ಮಿಥ್ಯಾ' ಎಂದು ಕರೆಯುತ್ತದೆ. ವಾಸ್ತವವೆಂಬಂತೆ ಏನು ಕಂಡೇ ಇಲ್ಲವೋ ಅದು ಅಸತ್ಯ.

ವಾಸ್ತವವಾಗಿ, ನಿಜವಾದ ಜ್ಞಾನವು ಉದಿಸಿದಾಗ ಪ್ರಾತಿಭಾಸಿಕ ಸತ್ಯದಂತೆಯೇ ವ್ಯಾವಹಾರಿಕ ಸತ್ಯವೂ ಇಲ್ಲವಾಗಬಹುದು ಎನ್ನುತ್ತಾರೆ ಆಚಾರ್ಯರು. 'ಭಾಸ' ಎಂದರೆ ಬೆಳಕು. 'ಪ್ರತಿಭಾಸ' ಎಂದರೆ ಪ್ರತಿಫಲಿತವಾದ ಬೆಳಕು. ತಗಡುಮುಚ್ಚಳದ ಮೇಲೆ ಬಿದ್ದ ಸೂರ್ಯನ ಬೆಳಕು ಪ್ರಾಸಂಗಿಕ. ಹಾಗಾಗಿ ಅದು ಬೆಳ್ಳಿಯಂತೆ ಕಂಡಿತು. ಆದರೂ ಅದು ಬೆಳ್ಳಿಯಲ್ಲ. ಅದು ಪ್ರಾತಿಭಾಸಿಕ. ಹಾಗೆಯೇ ಬ್ರಹ್ಮನ ಚೈತನ್ಯದ ಕಾರಣದಿಂದಾಗಿ ಈ ಜಗತ್ತು ವಾಸ್ತವವೇನೋ ಎಂಬಂತೆ ಕಾಂತಿಯುಕ್ತವಾಗಿದೆ. ಬಿಸಿಲಿನಲ್ಲಿ ಬಿದ್ದಿರುವ ಚಿಪ್ಪು ಬೆಳ್ಳಿಯಂತೆ ಹೊಳೆಯುವುದು ಖಂಡಿತವಾಗಿ ವಾಸ್ತವವಂತೆಯೇ ಕಾಣಿಸುತ್ತದೆ. ಅದು ಪೂರ್ಣವಾಗಿ ಅಸತ್ಯವಲ್ಲ. ಅದು ನಮ್ಮ ಕಲ್ಪನೆಯಾಗಿರಲಿಲ್ಲ. ಅದು ಬೆಳ್ಳಿ ಎಂದು ನಾವು ಅಂದುಕೊಂಡಾಗ, ಸಾಮಾನ್ಯವಾಗಿ ಬೆಳ್ಳಿಯನ್ನು ನೋಡಿದಾಗ ಏಳುವ ಯೋಚನೆಗಳು ಮತ್ತು ಭಾವನೆಗಳೇ ಅನುಭವಕ್ಕೆ ಬರುತ್ತವೆ; ನಮಗೆ ಸಂತೋಷವಾಗುತ್ತದೆ. ಅದರಿಂದ ಇಂತಿಂಥ ಒಡವೆಗಳನ್ನು ಮಾಡಿಸಿಕೊಳ್ಳಬಹುದು ಅಥವಾ ಅದರಿಂದ ಇಷ್ಟು ಹಣ ಬರುತ್ತದೆ ಎಂದು ತತ್ಕ್ಷಣ ಲೆಕ್ಕಹಾಕತೊಡಗುತ್ತೇವೆ. ಹಾಗೆಯೇ, ಹುಲ್ಲಿನಿಂದ ಹೊಸೆದ ಹಗ್ಗವನ್ನು ಹಾವು ಎಂದುಕೊಂಡಾಗ ಕೂಡ ನಿಜವಾದ ಹಾವನ್ನೇ ಕಂಡಂತೆ ಹೆದರಿಕೆ, ತಲೆಸುತ್ತುವುದು, ಹೊಟ್ಟೆಯಲ್ಲಿ ತಳಮಳವೇ ಮೊದಲಾದವನ್ನು ಅನುಭವಿಸುತ್ತೇವೆ. 'ಬಂಜೆಯ ಮಗ' ಎಂದೋ 'ಮೊಲದ ಕೊಂಬು' ಎಂದೋ ಹೇಳಿದಾಗ ಅಂಥ ಭಾವನೆಗಳು ನಮ್ಮಲ್ಲಿ ಏಳುತ್ತವೆಯೆ? ಅವನ್ನು ಪೂರ್ಣವಾಗಿ ಅಸತ್ಯ ಎಂದು ತಳ್ಳಿಹಾಕುತ್ತೇವೆಯೋ! ಅವು ಮತ್ತೆ ಹೇಗೋ ಕಂಡು ನಮ್ಮನ್ನು ವಂಚಿಸುವುದಿಲ್ಲ.

ವಾಸ್ತವವೇ ಎಂಬಂತೆ ತೋರಿಕೊಂಡು ಯಾವುದು ನಮ್ಮನ್ನು ವಂಚಿಸುತ್ತದೋ ಅದು 'ಮಾಯಾಶಕ್ತಿ' ಎನಿಸುತ್ತದೆ. ಹೇಗೆ ಬೆಳ್ಳಂಬೆಳಕಿನಲ್ಲಿ ತಗಡಿನ ಮುಚ್ಚಳವು ಬೆಳ್ಳಿಯಂತೆ ಕಂಡಿತೋ, ಹುಲ್ಲಿನಿಂದ ಹೊಸೆದ ಹಗ್ಗವು ಮಂದ ಬೆಳಕಿನಲ್ಲಿ ಹಾವಿನಂತೆ ಕಂಡಿತೋ ಹಾಗೆ ಮಾಯಾಶಕ್ತಿಯ ದೆಸೆಯಿಂದಾಗಿ ಬ್ರಹ್ಮವು ಜಗತ್ತಿನ ರೂಪದಲ್ಲಿ ತೋರಿಕೊಳ್ಳುತ್ತದೆ.

ಬ್ರಹ್ಮವು ಜಗತ್ತಿನಂತೆ ಗೋಚರವಾಗುತ್ತದೆ. ನಾವು ಜಗತ್ತೇ ಪರಮಸತ್ಯ ಎಂದು ಯೋಚಿಸುವಂತೆ ಮೋಸಹೋಗುತ್ತೇವೆ. ನಮಗೆ ಜ್ಞಾನೋದಯವಾದಾಗ ಏನಾಗುತ್ತದೆ? ಬ್ರಹ್ಮವಲ್ಲದೆ ಮತ್ತಾವುದೂ ಇಲ್ಲ ಎಂಬುದನ್ನು ಮನಗಾಣುತ್ತೇವೆ. ಈ ಜಗತ್ತು ಕೂಡ ಅದಕ್ಕಿಂತ ಅನ್ಯವಲ್ಲ. 'ಮಾಯೆ'ಯ ಕಾರಣದಿಂದಾಗಿ ಈ ಜಗತ್ತು ಅದರಿಂದ ಕಲ್ಪಿತವಾಗಿದೆ. ಹಗ್ಗದ ಸಮೀಪಕ್ಕೆ ಬರುತ್ತಿದ್ದಂತೆಯೇ ಅದು ಹಾವೆಂಬ ನಮ್ಮ ಯೋಚನೆ ಹೊರಟುಹೋಗುತ್ತದೆ. ತಗಡಿನ ಮುಚ್ಚಳವನ್ನೋ ಕಪ್ಪೆಚಿಪ್ಪನ್ನೋ ಕೈಗೆತ್ತಿಕೊಂಡಾಗ ಅದು ಬೆಳ್ಳಿಯಲ್ಲ ಎಂಬುದನ್ನು ಮನಗಾಣುತ್ತೇವೆ. ಹಾಗೆಯೇ 'ಜ್ಞಾನ' ಲಭಿಸಿದಾಗ ಮೊದಲು ನಾವು ಈ ಜಗತ್ತು ವಾಸ್ತವ ಎಂದುಕೊಂಡದ್ದು ಹೊರಟುಹೋಗುತ್ತದೆ. ತಗಡಿನ ಮುಚ್ಚಳವನ್ನು ಬೆಳ್ಳಿಯೆಂದು ತಿಳಿದಾಗ ಹಾಗೂ ಹಗ್ಗವನ್ನು ಹಾವು ಎಂದು ತಿಳಿದಾಗ ನಮ್ಮಲ್ಲಿ ಎದ್ದ ಯೋಚನೆಗಳೆಲ್ಲ ಗುರುತೂ ಇಲ್ಲದಂತೆ ಅಗೋಚರವಾಗುತ್ತವೆ. ಹಾಗೆಯೇ, ಈ ಜಗತ್ತು ವಾಸ್ತವ ಎಂದುಕೊಂಡಿದ್ದಾಗ ಎದ್ದ ಯೋಚನೆಗಳೆಲ್ಲ ಜ್ಞಾನವನ್ನು ಹೊಂದಿದಾಗ ಸ್ಥಗಿತಗೊಳ್ಳುತ್ತವೆ. ಅಂದರೆ, ವ್ಯವಹಾರ ಸತ್ಯದ ಹಲವು ಗೊತ್ತುಪಾಡುಗಳ ನಡುವೆ ಈ ಜಗತ್ತಿನಲ್ಲಿ ವಾಸ್ತವವೆಂದು ನಾವು ಒಪ್ಪಿಕೊಂಡಿದ್ದೆಲ್ಲ, ಅದ್ವೈತಸಮಾಧಿಯ ಅವಸ್ಥೆಯಲ್ಲಿ, ಪ್ರಾತಿಭಾಸಿಕ ಸತ್ಯದಂತೆ ಇಲ್ಲವಾಗಿ ಹೋಗುತ್ತದೆ. ಆದಾಗ್ಯೂ ಆಚಾರ್ಯರು ಈ ಜಗತ್ತಿಗೆ ವ್ಯಾವಹಾರಿಕ ಸತ್ಯದ ಸ್ಥಾನಮಾನವನ್ನು ನೀಡಿದ್ದಾರೆ; ಏಕೆಂದರೆ ಅದು ಕಾರ್ಯಕಾರಣದ ಹಲವು ನಿಯಮಗಳನ್ನು ಪೂರೈಸುತ್ತದೆ

ಮತ್ತು ಕೆಲವೇ ಜ್ಞಾನಿಗಳನ್ನು ಬಿಟ್ಟರೆ ಬಹುತೇಕ ಜನರು ಈ ತಿಳಿವಳಿಕೆಯಿಂದಲೇ ವ್ಯವಹರಿಸುತ್ತಿದ್ದಾರೆ.

ವ್ಯಾವಹಾರಿಕ ಸತ್ಯ ಮತ್ತು ಪ್ರಾತಿಭಾಸಿಕ ಸತ್ಯ ಅಲ್ಲದೆ 'ಸತ್ಯತರ' ಎಂಬುದಿದೆ. ಅದೇ ಪರಮಸತ್ಯ ಅಂದರೆ ಬ್ರಹ್ಮ. ಆದ್ದರಿಂದ ಎರಡು ಇವೆ–ಒಂದು ಸತ್ಯ, ಇನ್ನೊಂದು ಅಸತ್ಯ. ಸತ್ಯವೇ ದೇವರು, ಬ್ರಹ್ಮ. ಅಸತ್ಯವು ಬಂಜೆಯ ಮಗ. ಈಶ್ವರನು ಇಲ್ಲ ಎಂಬುದು ಇಲ್ಲವೇ ಇಲ್ಲ. ಅವನು ಸತ್ಯ. ಬಂಜೆಯ ಮಗನೊಬ್ಬನು ಇರಲು ಸಾಧ್ಯವೇ ಇಲ್ಲ. ಅವನು ಅಸತ್ಯ. ಕೆಲವು ವಸ್ತುಗಳು ಅಸ್ತಿತ್ವದಲ್ಲಿ ಇಲ್ಲದೇ ಇದ್ದಿರಬಹುದು, ಆದರೆ ಅನಂತರ ಕಾಣಿಸಿಕೊಳ್ಳಬಹುದು. ಅದು ಈಗ ಇಲ್ಲದಿರಬಹುದು, ಮುಂದೆ ಉತ್ಪತ್ತಿಗೊಳ್ಳಬಹುದು. ಕೆಲವೊಮ್ಮೆ ಅಸ್ತಿತ್ವವು ಕೊನೆಗೊಂಡ ಸ್ಥಿತಿ ಇದ್ದಿರಬಹುದು. ಸತ್ಯದ ಮಟ್ಟಿಗೆ, ಯಾವಾಗಲಾದರೂ ಅದು ಇಲ್ಲ ಎಂದು ಹೇಳಲೇ ಆರೆವು. ಪರಮಾತ್ಮನ ವಿಷಯವು ಹಾಗೆ. ಅಸ್ತಿತ್ವದಲ್ಲೇ ಇಲ್ಲದ್ದು ಅಸತ್ಯ––ನೆನ್ನೆ ಅದು ಅದು ಇರಲಿಲ್ಲ,



ಸಾಗರದ ಅಲೆಗಳೆಲ್ಲವೂ ಒಂದೇ–ಇದೇ ಅದ್ವೈತ

ಇಂದು ಇಲ್ಲ, ಅಥವಾ ನಾಳೆ ಇರುವುದಿಲ್ಲ. ಇವುಗಳ ನಡುವೆ ಸತ್ಯದ ಛಾಯೆಯಿರುವ ಮತ್ತು ಅಸತ್ಯದ ಛಾಯೆ ಇರುವ ಎರಡು ಮಿಥ್ಯೆಗಳಿವೆ. ಅವೇ ಭ್ರಾಂತಿಗಳು, ಸತ್ಯವಲ್ಲದವು. ವ್ಯಾವಹಾರಿಕ ಮತ್ತು ಪ್ರಾತಿಭಾಸಿಕ ಎರಡೂ ಮಿಥ್ಯೆಗಳು ಅಥವಾ ಭ್ರಾಂತಿಗಳು.

ನಾವು ಯಾವ ರೀತಿಯ ಜೀವಿಗಳು? ನಮ್ಮ ದೇಹ ಕೆಲದಿನಗಳ ಹಿಂದೆ ಅಸ್ತಿತ್ವದಲ್ಲಿರಲಿಲ್ಲ. ಮುಂದೆಯೋ, ಅದು ಅಳಿದುಹೋಗುವಂಥದು. ಆದ್ದರಿಂದ ಅದು ವಾಸ್ತವವಲ್ಲ. ಕೆಲಕಾಲ ಅಸ್ತಿತ್ವದಲ್ಲಿದ್ದುದರಿಂದ ಅದು ಅಸತ್ಯವಲ್ಲ! ಅವಾಸ್ತವವೂ ಅಲ್ಲ. ಅದು ಸಂಪೂರ್ಣ ಸತ್ಯವಾದರೆ ಅದು ಎಂದೂ–– ನೆನ್ನೆಯಾಗಲಿ ಇಂದಾಗಲಿ ನಾಳೆಯಾಗಲಿ––ನಾಶವಾಗಬಾರದು. ದೇಹವು ನಾಶವಾಗದೇ ಇರದು. ಇದು 'ಶುಕ್ತಿರೂಪ್ಯ'ದಂತೆ ಅಂದರೆ ಇದು ಸೂರ್ಯನ ಬೆಳಕಿನಲ್ಲಿ (ರೂಪ್ಯಮ್) ಕಂಡ ಬೆಳ್ಳಿ (ಶುಕ್ತಿ)ಯಂತೆ. ರೂಪ್ಯಮ್ ಎಂದರೆ ಬೆಳ್ಳಿ. ಅದರಿಂದ 'ರೂಪಾಯಿ' ಎಂಬ ಶಬ್ದ ನಿಷ್ಪತ್ತಿಯಾಗಿದೆ. ಕಪ್ಪೆ ಚಿಪ್ಪಿನಲ್ಲಿ ಕಂಡ ಬೆಳ್ಳಿ; ಅದು ಸತ್ಯವೋ ಅಸತ್ಯವೋ?


ಚಿಪ್ಪು ಬಿಸಿಲಿನಲ್ಲಿ ಥಳಥಳಿಸುವಾಗ ಒಂದು ನಿಮಿಷದವರೆಗಾದರೂ ಅಲ್ಲಿ ಬೆಳ್ಳಿ ಇದೆಯೇನೋ ಎನ್ನುವಂತೆ ಕಾಣುತ್ತದೆ. ಆದರೆ ಬಂಜೆಯ ಮಗ; ಒಂದು ಸೆಕೆಂಡಿನಮಟ್ಟಿಗಾದರೂ ಅವನು ಕಾಣಸಿಗುವನೆ? ಇಲ್ಲ, ಅದು ಸಾಧ್ಯವೇ ಇಲ್ಲ. ಈ ವಿಷಯ ಹಾಗಲ್ಲ. 'ಇದೆ' (ಅಸ್ತಿತ್ವ) ಎಂಬ ಅಂಶ ಇದರಲ್ಲಿ ಬೆರೆತಿದೆ. ಕುದುರೆಯ ಕೊಂಬು ಎಂಬುದರಂಥ ಯಾವುದಾದರೊಂದರಲ್ಲಿ ಅದು ಬೆರೆಯುವುದಿಲ್ಲ. ನಾವು 'ಕುದುರೆಯ ಕೊಂಬು' ಎಂಬುದನ್ನು ಒಂದು ಅಭಿವ್ಯಕ್ತಿಯಾಗಿ ಬಳಸಬಹುದು. ಆದರೆ ಅಂಥದೇನೂ ಅಸ್ತಿತ್ವದಲ್ಲಿರದು. ಆದಾಗ್ಯೂ ಈ ವಿಷಯದಲ್ಲಿ, 'ಇದೆ' (ಅಸ್ತಿತ್ವ) ಎಂಬ ಅಂಶ ಇರುವುದರಿಂದ ಅದನ್ನು ಅವಾಸ್ತವ/ಸತ್ಯವಲ್ಲದ್ದು ಅಥವಾ ಅಸತ್ಯ ಎಂದು ಹೆಸರಿಸಲಾಗದು. ಹಾಗಾದರೆ ಅದು ಸತ್ಯವೆ? ಅದು ಸತ್ಯವಾದರೆ ಆಗ ಈ ಆಕೃತಿಯು ಎಂದೆಂದೂ ಅಸ್ತಿತ್ವದಲ್ಲಿರಬೇಕು. ಅದು ಚಿಪ್ಪು ಎಂದು ತಿಳಿದ ತತ್‌ಕ್ಷಣ ಬೆಳ್ಳಿಯ ಗುರುತೂ ಇಲ್ಲದ ಹಾಗೆ ಅಗೋಚರವಾಗುತ್ತದೆ. ಆದಾಗ್ಯೂ, ಅಂಥ ಬಿಂಬವು ಮೂಡಿತ್ತು. ಬಿಸಿಲು ಕಣ್ಮರೆಯಾದ ತತ್‌ಕ್ಷಣ ಬಿಂಬವೂ ಅಗೋಚರವಾಯಿತು. ಮೊದಲನೆಯದಾಗಿ ಅಲ್ಲಿ ಬೆಳ್ಳಿ ಇರಲೇ ಇಲ್ಲ. ಆದರೂ ಅಂಥ ಬೋಧೆ ಉಂಟಾಗಿತ್ತು. ಬಿಸಿಲು ಮರೆಯಾದಂತೆ ಈ ಬೋಧೆಯೂ ಇಲ್ಲವಾಯಿತು. ಬೆಳ್ಳಿಯು ಅಗೋಚರವಾದರೂ ಅದಕ್ಕೆ (ಮಾಯೆಗೆ) ಆಧಾರವಾಗಿದ್ದ ಚಿಪ್ಪು ಇನ್ನೂ ಅಲ್ಲಿದೆ. ಹೊಸೆದ ಹುಲ್ಲಿನ ಹಗ್ಗ ಕಾಣಿಸಿಕೊಂಡ ತತ್‌ಕ್ಷಣವೇ ಹಾವಿನ ಬಿಂಬವು ಕಣ್ಮರೆಯಾಯಿತು. ಆ ಆಕೃತಿ ಅಥವಾ ಬಿಂಬವು ವಾಸ್ತವವಾಗಿದ್ದಿದ್ದರೆ, ಅದು ಕಣ್ಮರೆಯಾಗುತ್ತಿರಲಿಲ್ಲ. ಆದ್ದರಿಂದ ಇದು ಸತ್ಯಕ್ಕಿಂತ ಭಿನ್ನವಾದುದು. ಅಂದಮೇಲೆ ಇದು ಮಾಯೆ. ಈ ಮಿಥ್ಯಾಕ್ಕೆ ಆಧಾರವಾದ ಒಂದು ಸತ್ಯವಿದೆ. ಹಾವಿನ ಮಿಥ್ಯೆಗೆ, ಹೊಸೆದ ಹಗ್ಗವು ಆಧಾರ. ಹಾವು ಕಣ್ಮರೆಯಾದ ಮೇಲೂ ಹೊಸೆದ ಹುಲ್ಲಿನ ಹಗ್ಗವು ಅಲ್ಲಿ ಇನ್ನೂ ಇದೆ. ಹಾಗೆಯೇ, ಬೆಳ್ಳಿಯ ಯೋಚನೆ ಅಳಿಸಿಹೋದಮೇಲೂ ಆಧಾರವಾಗಿ ಚಿಪ್ಪು ಇನ್ನೂ ಅಲ್ಲಿದೆ. ಹೊಸೆದ ಹುಲ್ಲಿನ ಹಗ್ಗ ಮತ್ತು ಚಿಪ್ಪಿನ ಆಧಾರದಿಂದ ಮಾತ್ರ ಹಾವೂ ಬೆಳ್ಳಿಯ ನಾಣ್ಯವೂ ಗೋಚರಿಸಿದವು. ಹಾಗೆಯೇ ಈ ಮಿಥ್ಯಾಲೋಕದ (ಜಗತ್ತಿನ) ಆಧಾರವು ಬ್ರಹ್ಮವಾಗಿದೆ. ಜಗತ್ತಿನ ದೃಶ್ಯವು ಅಗೋಚರವಾದರೂ ಎಲ್ಲವೂ ಶೂನ್ಯವಾಗಿಬಿಡುವುದಿಲ್ಲ. ಆಧಾರವಾಗಿದ್ದ ಬ್ರಹ್ಮವು ಸತ್ಯವಾಗಿ ಅಲ್ಲಿ ಇನ್ನೂ ಇರುತ್ತದೆ. ಹಾವಿನ ಯೋಚನೆ ಕಣ್ಮರೆಯಾದ ಮೇಲೂ ಹೊಸೆದ ಹುಲ್ಲಿನ ಹಗ್ಗವು ಉಳಿಯಲಿಲ್ಲವೆ? ಸತ್ಯಬ್ರಹ್ಮವು ಮಿಥ್ಯಲೋಕವಾಗಿ (ಮಾಯಾ ಪ್ರಪಂಚ) ಗೋಚರಿಸುವಂತೆ ಮಾಡುವುದೇ ಮಾಯೆ.

ಮಾಯೆಯು ಅನಿರ್ವಚನೀಯವಾದುದು ಎನ್ನುತ್ತಾರೆ ಆಚಾರ್ಯರು. ಅಂದರೆ ವಿವರಣಾತೀತವಾದುದು. ಅದು ಸತ್ಯವಲ್ಲ, ಅಥವಾ ನಿಜವಲ್ಲದ್ದೂ ಅಲ್ಲ. ಯಾವ ರೀತಿಯೂ ಅದನ್ನು ವಿವರಿಸುವುದು ಸಾಧ್ಯವಿಲ್ಲ. ಅದು ಅಸ್ತಿತ್ವದಲ್ಲಿದೆ ಎಂದು ಹೇಳಲೂ ಸಾಧ್ಯವಿಲ್ಲ, ಅಸ್ತಿತ್ವದಲ್ಲಿಲ್ಲ ಎನ್ನಲೂ ಆಗದು. ಕೆಲವೊಮ್ಮೆ ಅದು ಇರುವಂತೆ ಕಾಣುತ್ತದೆ. ಆಮೇಲೆ ಜ್ಞಾನವು ಮೂಡಿದಾಗ ಅದು ಅಗೋಚರವಾಗುತ್ತದೆ. ತಮಿಳು ಗ್ರಂಥವೊಂದರಲ್ಲಿ ಅದು 'ಮಾಯೆಯ ಮಹಾಸಮುದ್ರ' ಎಂದು ವರ್ಣಿತವಾಗಿದೆ. ಅದು ಮಾಯೆ ಎಂದರೆ ಭ್ರಾಂತಿ ಎನ್ನುತ್ತದೆ



52ನೇ ಪುಟಕ್ಕೆ

# ಮಾಂಧಾತಾ



ಮಹಾಭಾರತದಲ್ಲಿ ಅನೇಕ ನೀತಿಬೋಧಕ ಕಥೆಗಳು ಇವೆ. ಬೆಂಗಳೂರು ಗಿರಿನಗರದ ಮಹಾಭಾರತ ಸಂಶೋಧನ ಪ್ರತಿಷ್ಠಾನ ಎಂಬ ಸಂಸ್ಥೆ ಪ್ರಕಟಿಸಿರುವ 'ಮಹಾಭಾರತದ ನೂರು ಕಥೆಗಳು' ಪುಸ್ತಕದಿಂದ ಈ ಉಪಾಖ್ಯಾನವನ್ನು ಆಯ್ಕೆ ಮಾಡಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತಿದೆ. (ಸಂಪಾದಕರು: ಡಾ. ಎಸ್.ಆರ್. ಲೀಲಾ, ಸಂಗ್ರಾಹಕರು: ಡಾ. ಟಿ. ರಮಾಮಣಿ ಮತ್ತು ವಿದ್ವಾನ್ ಸಿ.ಜಿ. ವಿಜಯಸಿಂಹ)

ಮಹಾಭಾರತದಲ್ಲಿ ವೇದವ್ಯಾಸರು ಅದೆಷ್ಟು ವೈಚಿತ್ರ್ಯಗಳನ್ನು ತಿಳಿಸಿದ್ದಾರೆ! ಎಷ್ಟೇ ವಿಚಿತ್ರವೆನಿಸಿದರೂ ಅವು ಸತ್ಯ. ಅಷ್ಟೇ ಅಲ್ಲ, ಅಲ್ಲಲ್ಲಿ ಈಗಲೂ ಕಂಡು ಬರುತ್ತವೆ. ಪುರುಷನೊಬ್ಬನು ಮಗನಿಗೆ ಜನ್ಮವಿತ್ತ ಕಥೆಯಿದು.

ಯೌವನಾಶ್ವನು ರಾಜ. ಸಂತಾನಾರ್ಥಿಯಾಗಿ ಅನೇಕ ಯಾಗಗಳನ್ನು ಮಾಡಿದನು. ಆದರೂ ಅಪುತ್ರನಾಗಿಯೇ ಉಳಿದ. ವಿರಕ್ತನಾಗಿ ರಾಜ್ಯವನ್ನು ಮಂತ್ರಿಗಳಿಗೊಪ್ಪಿಸಿ, ಕಾಡಿಗೆ ತೆರಳಿ ತಪೋನಿರತನಾದನು.

ಒಂದು ಸಲ ಅವನು ಉಪವಾಸದಿಂದ ಬಹಳ ಬಳಲಿ, ಬಾಯಾರಿಕೆಯಿಂದ ಎದೆಯೊಣಗಿ ಭೃಗುವಿನ ಆಶ್ರಮಕ್ಕೆ ಬಂದನು.

ಅದೇ ದಿನ ಭೃಗು ಮಹರ್ಷಿಯ ಮಗನು ಯೌವನಾಶ್ವನ ಸಂತಾನಪ್ರಾಪ್ತಿಗಾಗಿ ಇಷ್ಟಿಯೊಂದನ್ನು ಮಾಡಿಸಿದ್ದನು. ಕಲಶವೊಂದರಲ್ಲಿ ಮಂತ್ರಿತ ಜಲವನ್ನು ಸಂಗ್ರಹಿಸಿ, ರಾಜನ ಪತ್ನಿಗಾಗಿ ಅದನ್ನು ಕಾದಿರಿಸಿದ್ದನು. ಆ ತೀರ್ಥಸೇವನೆಯಿಂದ ಸಂತಾನಪ್ರಾಪ್ತಿಯಾಗುವುದಿತ್ತು. ರಾತ್ರಿಯಾಗಿದ್ದರಿಂದ ಬಳಲಿದ್ದ ಎಲ್ಲರೂ ನಿದ್ರಾವಶರಾದರು.

ದಾಹದಿಂದ ಗಂಟಲೊಣಗಿದ್ದ ಯೌವನಾಶ್ವನು ನೀರನ್ನರಸುತ್ತಾ ಯಜ್ಞಮಂಟಪಕ್ಕೆ ಬಂದನು. ವೇದಿಕೆಯ ಮೇಲಿದ್ದ ತೀರ್ಥವನ್ನು ಅದು ಮಂತ್ರಜಲವೆಂದರಿಯದೆ ಕುಡಿದು ಬಿಟ್ಟನು. ಪಾತ್ರೆಯನ್ನು ಬಿಸುಟನು.

ನಿದ್ರೆಯಿಂದ ಎಚ್ಚೆತ್ತವರು ಬರಿದಾದ ಪಾತ್ರೆಯನ್ನು ಕಂಡು ಆಶ್ಚರ್ಯಗೊಂಡು ಇದಾರ ಕೆಲಸವೆಂದು ವಿಚಾರ ಮಾಡಿದರು.

ಯೌವನಾಶ್ವನು, "ಪೂಜ್ಯರೇ, ಆ ನೀರನ್ನು ಕುಡಿದವನು ನಾನೇ" ಎನ್ನಲು

ಭಾರ್ಗವನು, "ರಾಜಾ, ನೀನು ಅಕಾರ್ಯವನ್ನು ಮಾಡಿಬಿಟ್ಟೆ! ಸಂತಾನಪ್ರಾಪ್ತಿಗಾಗಿ ಮಂತ್ರಿಸಿದ ಜಲವದು. ನಿನ್ನ ಪತ್ನಿಗಾಗಿ ತೆಗೆದಿರಿಸಿದ್ದು. ಅದನ್ನು ನೀನು ಕುಡಿದು ತಪ್ಪು ಮಾಡಿದೆ. ಆ ತೀರ್ಥದ ಶಕ್ತಿಯಿಂದ ಬಲವೀರ್ಯಗಳುಳ್ಳ ಮಗನು ಹುಟ್ಟುವುದಂತೂ ಖಂಡಿತ!" ಎಂದನು. ಮುಂದುವರಿದು, "ಆಗಲಿ, ಅವನು ನಿನ್ನ ಗರ್ಭದಲ್ಲಿಯೇ ಬೆಳೆಯುವನು. ಅದನ್ನು ತಪ್ಪಿಸಲಂತೂ ಸಾಧ್ಯವಿಲ್ಲ. ದೈವಲೀಲೆಗೆ ಯಾರೂ ಹೊರತಲ್ಲ. ನಿನಗೆ ಶ್ರಮವಾಗದಂತೆ ಪುತ್ರ ಜನನವಾಗಲಿ" ಎಂದು ಆಶೀರ್ವದಿಸಿದನು.

ಕೆಲಕಾಲದ ಅನಂತರ ಯೌವನಾಶ್ವನ ಎಡಭಾಗದಿಂದ ಸುಂದರವಾದ, ತೇಜೋವಂತನಾದ ಮಗನು ಜನಿಸಿದನು. ಇದರಿಂದ ಯೌವನಾಶ್ವನಿಗೆ ಕೊಂಚವೂ ವೇದನೆಯಾಗಲಿಲ್ಲ.

ಪುರುಷ ಗರ್ಭದಿಂದ ಗಂಡುಮಗುವಿನ ಜನನವೆಂಬ ವಿಷಯವು ಎಲ್ಲೆಡೆ ಹರಡಿತು. ಇಂದ್ರನನ್ನೂ ಮುಟ್ಟಿತು. ಆಶ್ಚರ್ಯ ತಂದಿತು.

ಸರಿ, ಇಂದ್ರನು ಆ ಮಗುವನ್ನು ನೋಡಲು ದೇವತೆಗಳೊಡನೆ ಕುತೂಹಲದಿಂದ ರಾಜನ ಅರಮನೆಗೆ ಬಂದನು. ಮಗುವನ್ನು ಕಂಡು ದೇವತೆಗಳು ಇಂದ್ರನನ್ನು ಪ್ರಶ್ನಿಸಿದರು.

"ಪ್ರಭು, ಸ್ತನ್ಯವಿಲ್ಲದೆ ಈ ಶಿಶುವು ಬೆಳೆಯುವುದು ಹೇಗೆ?"

ಇಂದ್ರನು, "ಇವನು ನನ್ನನ್ನು ಪಾನ ಮಾಡುವನು (ಮಾಂ ಧಾಸ್ಯತಿ)" ಎಂದು ಹೇಳುತ್ತಾ ತನ್ನ ತೋರುಬೆರಳನ್ನು ಬಾಯಲ್ಲಿಟ್ಟನು. ಮಾಂಧಾತನೆಂದೇ ದೇವತೆಗಳು ಅವನನ್ನು ಕರೆದರು.

ಮಾಂಧಾತನು ಬಲಶಾಲಿಯಾಗಿ ಬೆಳೆದನು. ದೇವತೆಗಳ ಆಶೀರ್ವಾದದಿಂದ ಎಲ್ಲ ವಿದ್ಯೆಗಳನ್ನು ಕಲಿತು, ರಾಜನಾಗಿ ಧರ್ಮದಿಂದ ರಾಜ್ಯವಾಳಿದನು. ತಂದೆತಾಯಿಗೂ ಎಲ್ಲ ದೇವತೆಗಳಿಗೂ ಸಮಸ್ತ ಲೋಕಗಳಿಗೂ ಪ್ರಿಯನಾದನು. ●



**ತಿರುಮಲೆಯ ಚರಿತಾಮೃತ**

ತೆಲುಗು ಮೂಲ:
■ ಪಿ.ವಿ.ಆರ್.ಕೆ. ಪ್ರಸಾದ್
(ನಿವೃತ್ತ ಐ.ಎ.ಎಸ್. ಅಧಿಕಾರಿ)
■ ಕನ್ನಡಕ್ಕೆ: ಸೂರ್ಯವಂಶಿ

# ಆಲಯವೇ ಆಳ್ವಾರಾದರೆ

ಸಾವಿರಾರು ಜನ ಭಕ್ತರು ಪ್ರತೀ ದಿನವೂ ಬರುವಂತಹ ದೇವಾಲಯವನ್ನು ಶುಚಿಯಾಗಿಡುವುದಕ್ಕಾಗಿ ದೇವಸ್ಥಾನವನ್ನೆಲ್ಲ ಆಳ್ವಾರರೆಂದು ಭಾವಿಸಿ, ಅಭಿಷೇಕ (ತಿರುಮಂಜನ)ದಿಂದ ಆಲಯವನ್ನು ಶುಭ್ರಗೊಳಿಸುವುದೇ ಆಳ್ವಾರ್ ತಿರುಮಂಜನಂ. ಇದನ್ನು 19-10-1544ರಲ್ಲಿ ಮೊದಲ ಬಾರಿಗೆ ಪ್ರಾರಂಭಿಸಿದಂತೆ ಶಾಸನವಿದೆ. ವಂಗಪುರ ನಾರಾಯಣಶೆಟ್ಟಿ ಎಂಬ ತಿರುಪತಿಯ ವ್ಯಾಪಾರಿಯು ಬ್ರಹ್ಮೋತ್ಸವಕ್ಕೆ ಮೊದಲು ತನ್ನ ಖರ್ಚುಗಳಿಂದ ಗರ್ಭಗುಡಿ, ಶಯನ ಮಂಟಪ, ಸ್ನಪನ ಮಂಟಪದ ಗೋಡೆಗಳು, ಮೇಲ್ಛಾವಣಿಗಳೊಂದಿಗೆ ಚೆನ್ನಾಗಿ ಉಜ್ಜಿಸಿ, ಶುಭ್ರಪಡಿಸಿ, ತೊಳೆದು, ಅದರ ಮೇಲೆ ಗಂಧ, ಕರ್ಪೂರದ ಮುದ್ದೆಯನ್ನು ಗೋಡೆಗೆ ಲೇಪಿಸಿದ. ಇದರಿಂದ ದೇವಸ್ಥಾನದ ಒಳಗೆ ಗಾಳಿ ಪರಿಶುಭ್ರವಾಗಿ ಕ್ರಿಮಿಕೀಟಗಳು ಬರದಂತೆ ಶುಚಿಯಾಗಿರುವುದಕ್ಕೆ ಅನುಕೂಲವಾಗುತ್ತದೆ. ಈ ಕೋಯಿಲ್ ಆಳ್ವಾರ್ ತಿರುಮಂಜನಂಅನ್ನು ಈಗಲೂ ಪ್ರತಿಯೊಂದು ದೊಡ್ಡ ಉತ್ಸವಕ್ಕೂ ಮೊದಲು, ಬ್ರಹ್ಮೋತ್ಸವಗಳಿಗೆ ಮೊದಲು ನಡೆಸುತ್ತಾರೆ. ವರ್ಷಕ್ಕೆ ಕೊನೇಪಕ್ಷ ನಾಲ್ಕು ಬಾರಿಯಾದರೂ ನಡೆಸುವ ಈ ಕಾರ್ಯಕ್ರಮದಲ್ಲಿ ದೇವಸ್ಥಾನದಲ್ಲಿನ ಎಲ್ಲ ವಿಗ್ರಹಗಳನ್ನು ವಸ್ತ್ರಗಳಿಂದ ಮುಚ್ಚಿ, ಗರ್ಭಗುಡಿಯಲ್ಲಿ ಮಾತ್ರ ಆಲಯದ ಅರ್ಚಕರೇ ಶುಭ್ರಗೊಳಿಸುತ್ತಾರೆ.

ಉಳಿದ ದೇವಾಲಯವನ್ನೆಲ್ಲ ಕಾರ್ಯನಿರ್ವಹಣಾಧಿಕಾರಿಯಿಂದ ಹಿಡಿದು ಚಿಕ್ಕ ಉದ್ಯೋಗಿಯವರೆಗೂ ಎಲ್ಲರೂ ಪಾಲ್ಗೊಂಡು, ದೇವರ ಸೇವೆಯಂತೆ ಈ ಕೆಲಸ ನಿರ್ವಹಿಸುತ್ತಾರೆ.

ಈ ಸಮಯದಲ್ಲಿ ದರ್ಶನವಿರುವುದಿಲ್ಲ. ಅದೇ ಸಮಯದಲ್ಲಿ ದೇವರ ಸನ್ನಿಧಿಯಲ್ಲಿ ಬಳಸುವ ಎಲ್ಲ ದೀಪಗಳೂ, ಗಂಗಾಳಗಳೂ, ಪಾತ್ರೆಗಳು, ಪೀಠಗಳು, ಸಹಸ್ರಕಲಶಾಭಿಷೇಕದ ಪಾತ್ರೆಗಳು ದೇವರ ವಾಹನಗಳು, ಪಲ್ಲಕ್ಕಿಗಳು...ಎಲ್ಲವನ್ನೂ ಶುಭ್ರಗೊಳಿಸುತ್ತಾರೆ.

ಈ ನಡುವಿನ ಕಾಲದಲ್ಲಿ ಈ ಸೇವೆಯನ್ನು ಆರ್ಜಿತ ಸೇವೆಯನ್ನಾಗಿ ಬದಲಿಸಿ, ಸೇವಾದಾರರೂ ಈ ಸೇವೆಯಲ್ಲಿ ಪಾಲ್ಗೊಂಡು ಅನಂತರ ದೇವರ ದರ್ಶನವನ್ನು ಮಾಡುವ ಏರ್ಪಾಟು ಮಾಡಿದ್ದಾರೆ.

## ಕಲ್ಯಾಣೋತ್ಸವ

ತಿರುಮಲೆಯ ಆಲಯದಲ್ಲಿ ದೇವರಿಗೆ ನಿತ್ಯಕಲ್ಯಾಣೋತ್ಸವ ನಡೆಯುತ್ತದೆ. ಪ್ರಾಚೀನ ಕಾಲದಲ್ಲಿ ಈ ನಿತ್ಯಕಲ್ಯಾಣೋತ್ಸವದ ಸಂಪ್ರದಾಯ ಕಂಡುಬರುವುದಿಲ್ಲ. ಬ್ರಹ್ಮೋತ್ಸವಗಳನ್ನು ದೇವರ ಕಲ್ಯಾಣೋತ್ಸವಗಳೆಂದು ಭಾವಿಸುತ್ತಿದ್ದರೆಂದು ತಿಳಿದು ಬರುತ್ತಿದೆ. ಆದರೆ ಬ್ರಹ್ಮೋತ್ಸವದಲ್ಲಿ ದೇವರಿಗೆ, ದೇವಿಯರಿಗೆ ಕಲ್ಯಾಣ ಮಾಡುವಂತಹ ಉತ್ಸವಗಳ್ಯಾವುವೂ ಇಲ್ಲ.

ವಿಶೇಷವಾಗಿ ದೇವರ ವೈವಾಹಿಕ ಉತ್ಸವವನ್ನು ಮೊದಲ ಬಾರಿಗೆ ಕ್ರಿ.ಶ. 1546 ಜುಲೈ 17ರಂದು ತಾಳ್ಳಪಾಕ ದೊಡ್ಡ ತಿರುಮಲ ಅಯ್ಯಂಗಾರರು ಪ್ರಾರಂಭಿಸಿದಂತೆ ಶಾಸನವಿದೆ.

ಇದು ಅಂದಿನ ಸಂಪ್ರದಾಯವಾಗಿ ಐದು ದಿನಗಳ ವಿವಾಹ ಕಾರ್ಯಕ್ರಮ. ಅನುರಾಧ ನಕ್ಷತ್ರದಿಂದ ಉತ್ತರಾಷಾಢದವರೆಗೂ ಐದು ದಿನಗಳ ಈ ವೈವಾಹಿಕ ಉತ್ಸವ ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಪ್ರಾರಂಭವಾಗುತ್ತಿತ್ತು. ಆ ದಿನಗಳಲ್ಲಿ ಐದು ದಿನಗಳ ವಿವಾಹಗಳಲ್ಲಿ ನಡೆಯುವ ಎಲ್ಲ



ಸಂಪ್ರದಾಯಗಳನ್ನೂ, ಕಾರ್ಯಕ್ರಮಗಳನ್ನೂ ಈ ಉತ್ಸವದಲ್ಲಿ ನಡೆಸುತ್ತಿದ್ದರು. ಅಭ್ಯಂಜನ ಸ್ನಾನ, ತಿರುಮಂಜನ, ನೂತನ ವಸ್ತ್ರಧಾರಣೆ, ದೇವಸ್ಥಾನದ ಬೀದಿಗಳಲ್ಲಿ ಉತ್ಸವ, ನೈವೇದ್ಯ, ದೇವರನ್ನೂ, ದೇವಿಯರನ್ನು ಉಯ್ಯಾಲೆಯಲ್ಲಿ ಕೂಡಿಸಿ ಉಯ್ಯಾಲೋತ್ಸವ (ಹಂಸ ಗುಬ್ಬಚ್ಚಿ ಪಕ್ಷಿಗಳ ಮೇಲೆ ದೇವಿಯರು), ಮದುಮಗನ ಕಾಲುಗಳನ್ನು ಹಾಲಿನಿಂದ ತೊಳೆಯುವುದು–ಧ್ರುವ ನಕ್ಷತ್ರದ ದರ್ಶನ, ಚಂದನವಸಂತೋತ್ಸವ, ಕಲ್ಯಾಣಹೋಮ, ಮಂಗಳಸೂತ್ರಧಾರಣೆ, ಹೂಚೆಂಡಿನ ಆಟ...ಹೀಗೆ ಎಲ್ಲ ಕಾರ್ಯಕ್ರಮಗಳೂ ಈ ಐದು ದಿನಗಳ ವಿವಾಹೋತ್ಸವದಲ್ಲಿ ಏರ್ಪಾಟು ಮಾಡಿದ್ದರು.

ತಾಳ್ಲಪಾಕದವರು ಏರ್ಪಡಿಸಿದ ಈ ಉತ್ಸವದಲ್ಲಿ ಅವರುಗಳೇ ಪ್ರಧಾನ ಪಾತ್ರ ವಹಿಸಿ ದೇವರಿಗೆ ಕನ್ಯಾದಾನ ಮಾಡುವ ಸಂಪ್ರದಾಯ ಪ್ರಾರಂಭವಾಯಿತು.

ಇಂದಿಗೂ ನಡೆಯುವ ನಿತ್ಯಕಲ್ಯಾಣೋತ್ಸವದಲ್ಲಿ ಕನ್ಯೆಯರ ಪರವಾಗಿ ತಾಳ್ಲಪಾಕ ವಂಶದವರು ಇದ್ದು ಕನ್ಯಾದಾನ ಮಾಡುವಂತೆ ಕಾರ್ಯಕ್ರಮ ನಡೆಯುತ್ತದೆ. ಅವರಿಗೆ ದೇವಸ್ಥಾನದ ಪರವಾಗಿ ಸಂಭಾವನೆ, ಪ್ರಸಾದವೂ ದೊರೆಯುತ್ತದೆ. ಈ ಕಲ್ಯಾಣೋತ್ಸವದ ಖರ್ಚುಗಳಿಗಾಗಿ, ತಾಳ್ಲಪಾಕ ದೊಡ್ಡ ತಿರುಮಲ ಅಯ್ಯಂಗಾರರು 'ಕೊಂಡವೀಡು' ಸೀಮೆಯಲ್ಲಿನ 'ಶೆಂದಲೂರು' ಎಂಬ ಗ್ರಾಮವನ್ನು (ಅದರ ಆದಾಯ 500 ಗಟ್ಟಿ ಬಂಗಾರದ ವರಹಗಳು) 'ಮಲ್ಲವರಂ' (ಅವರ ಆದಾಯ 120 ಗಟ್ಟಿ ಬಂಗಾರದ ವರಹಗಳು), ದೇವಾದಾಯ ಮಾಡಿದರಂತೆ.

ಈ ಸಮಯದಲ್ಲಿ ಮಲಯಪ್ಪಸ್ವಾಮಿಗೆ, ದೇವಿಯರಿಗೇ, ಅಲ್ಲದೇ, ಆಲಯದಲ್ಲಿನ ಕೃಷ್ಣನಿಗೆ, ಅಲಮೇಲುಮಂಗ, ವರಾಹಸ್ವಾಮಿಗೂ ನೈವೇದ್ಯಗಳನ್ನು ಏರ್ಪಾಟು ಮಾಡಿದರು.

## ಅಡುಗೆಯ ಮಿರಾಸೀದಾರರು

ಪ್ರತೀ ನಿತ್ಯವೂ ನೂರಾರು ಗಂಗಾಳಗಳಲ್ಲಿ ಪ್ರಸಾದ–ವಿವಿಧ ರೀತಿಯ ಭಕ್ಷ್ಯಗಳು, ಅಪ್ಪಪಡಿ (ಕಜ್ಜಾಯ), ಅತಿರಸ, ದೋಸೆ ಸ್ವಾಮಿಗೆ ಎಷ್ಟೋ ಬಾರಿ ನೈವೇದ್ಯ ಮಾಡುವುದಕ್ಕೆ ಶಾಸನಗಳಲ್ಲಿ ನೂರಾರು ದೇವಾದಾಯಗಳ ವಿವರವಿದೆ.

ಅವುಗಳೇ ಅಲ್ಲದೆ ಚಿಕ್ಕಪುಟ್ಟ ದಾನಿಗಳು, ಸಾವಿರಾರು ನೈವೇದ್ಯ ಸೇವೆಗಳಿಗೆ ಅನೇಕ ರೀತಿ ಭಕ್ಷ್ಯಗಳು, ಭೋಜ್ಯಗಳನ್ನು ಮಾಡಬೇಕಾಗಿತ್ತು. ಅನೇಕ ರೀತಿಯ ಅನ್ನನೈವೇದ್ಯಗಳೂ ಇದ್ದುವು. ಉಪ್ಪು ಹುಗ್ಗಿ, ಸಕ್ಕರೆ ಪೊಂಗಲ್, ಪುಳಿಯೋಗರೆ ಮೊಸರನ್ನ, ಹುಳಿಯನ್ನ...ಹೀಗೆ ಅನೇಕ ರೀತಿಯವು ನೂರಾರು ಗಂಗಾಳಗಳಲ್ಲಿ ಪ್ರತೀ ದಿನವೂ ಅನೇಕ ಸಂದರ್ಭಗಳಲ್ಲಿ ನೈವೇದ್ಯ ನಡೆಯುತ್ತಿತ್ತು.

ಯಾದವರಾಜರ ಕಾಲದಲ್ಲಿ ಪ್ರಾರಂಭವಾಗಿ ಕ್ರಿ.ಶ. 1800ರಲ್ಲಿ ಕಂಪೆನಿಯವರ ನೇತೃತ್ವದಲ್ಲಿ ದೇವಸ್ಥಾನದ ಪಾಲನೆ ನಡೆಸುವವರೆಗೂ...ಈ ನೈವೇದ್ಯ ಸೇವೆ ಅಭಿವೃದ್ಧಿಯಾಗಿತ್ತು. ಪೂಜಾ ಸಮಯದಲ್ಲೇ ಅಲ್ಲದೇ, ದಾನಿಗಳು ವಿಪರೀತವಾಗಿ ಹೆಚ್ಚಾದ್ದರಿಂದ ಪೂಜೆಗಳ ನಡುವೆ ಸಂಧಿಕಾಲದಲ್ಲೂ ನೈವೇದ್ಯಗಳು, ಅವಕಾಶ ದೊರೆತಾಗಲೆಲ್ಲ, ವಿವಿಧ ರೀತಿಯ ನೈವೇದ್ಯಗಳನ್ನು ಹೆಚ್ಚಾಗಿ ಮಾಡಬೇಕಾಗಿ ಬಂತು.

ದೇವಸ್ಥಾನದ ನಿರ್ವಾಹಕರಿಗೆ ಈ ಪ್ರಸಾದವನ್ನು ತಯಾರಿಸುವ ಕೆಲಸ ಶಕ್ತಿ ಮೀರಿದ್ದಾದ್ದರಿಂದ, ಅವರ ಪರವಾಗಿ ಗುತ್ತಿಗೆದಾರರನ್ನು ನೇಮಿಸಿ, ತಮ್ಮ ಪರವಾಗಿ ಅವರೇ ಆ ದಿನದ ನೈವೇದ್ಯಗಳನ್ನು ಸಿದ್ಧಪಡಿಸುವುದಕ್ಕೆ ಗುತ್ತಿಗೆದಾರರನ್ನು ಒಪ್ಪಿಸಿದರು. ಆತನೂ ಶ್ರೀವೈಷ್ಣವ ಬ್ರಾಹ್ಮಣನೇ! ಆತ ಆ ರೀತಿ ದೇವಸ್ಥಾನದಲ್ಲಿ ನೇಮಕಗೊಂಡರು.

ಶ್ರೀವೈಷ್ಣವ ಅಡುಗೆ ಬ್ರಾಹ್ಮಣರನ್ನು ನೂರಾರು ಜನರನ್ನು ಸಿದ್ಧಗೊಳಿಸಿ, ದೇವಸ್ಥಾನದ ಉಗ್ರಾಣದಿಂದ ಅಂದಿನ ನೈವೇದ್ಯಗಳಿಗೆ ಬೇಕಾದ ಎಲ್ಲ ಸರಕುಗಳನ್ನೂ ತೆಗೆದುಕೊಂಡು (ಸೌದೆಗಳೊಂದಿಗೆ) ಬೇಕಾದ ಎಲ್ಲ ನೈವೇದ್ಯಗಳನ್ನು ಆಯಾ ಕಾಲಕ್ಕೆ ತಯಾರಿಸಿ ಕೊಡುವುದು ಇವರ ಜವಾಬ್ದಾರಿಯಾಗಿತ್ತು. ಅವರಿಗೆ ಆ ಕೆಲಸ ಮಾಡಿದ್ದಕ್ಕೆ ನಗದು ರೂಪದಲ್ಲಿ ಜೊತೆಗೆ ಪ್ರಸಾದದ ರೂಪದಲ್ಲೂ ಪಾಲನ್ನು ನೀಡುತ್ತಿದ್ದರು.

ಈ ಪ್ರಸಾದದ ಪಾಲನ್ನು ದೇವಸ್ಥಾನದ ಯಾತ್ರಿಕರಿಗೆ ಮಾರಿಕೊಂಡು ಅವರ ಖರ್ಚುಗಳೆಲ್ಲ ಕಳೆದು, ಸ್ವಲ್ಪ ಹಣವನ್ನು ಉಳಿಸಿಕೊಳ್ಳುತ್ತಿದ್ದರು. ಈ ರೀತಿ ಎಲ್ಲ ಪ್ರಸಾದಗಳಲ್ಲೂ ಸಾಕಷ್ಟು ಭಾಗ ಪ್ರತೀ ದಿನವೂ ಅವರ ಪಾಲಿಗೆ ಬರುವುದು, ಅವನ್ನು ಅಡುಗೆಯ ಬ್ರಾಹ್ಮಣರಿಗೆ ನೀಡಿದಾಗ ಅದರಲ್ಲಿ ಸಾಕಷ್ಟು ಪ್ರಸಾದ ಉಳಿಯುತ್ತಿದ್ದುದರಿಂದ, ಎಲ್ಲರಿಗಿಂತಲೂ



ತಿರುಮಲೆಯ ಚರಿತಾಮೃತ ಗ್ರಂಥ ಬರೆದಿರುವ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆಯ ಶ್ರೀನಿವಾಸ ದೇವರ ಮಹಾಭಕ್ತರು. ಉತ್ತಮ ಐಎಎಸ್ ಅಧಿಕಾರಿ ಎಂದು ಕೀರ್ತಿ ಗಳಿಸಿರುವವರು. ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೀಯುತರು ಪ್ರಧಾನಮಂತ್ರಿ ದಿವಂಗತ ಪಿ.ವಿ. ನರಸಿಂಹರಾಯರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದವರು. ಅಂತೆಯೇ ತಿರುಮಲೆ ತಿರುಪತಿ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳಾಗಿ ಅಪೂರ್ವ ಸೇವೆ ಸಲ್ಲಿಸಿರುವ ಶ್ರೀಯುತರು ತಮ್ಮನ್ನು 'ಶ್ರೀನಿವಾಸದಾಸ' ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುವ ಭಾಗವತರು. 'ತಿರುಮಲೆಯ ಚರಿತಾಮೃತ'ವನ್ನು ಕನ್ನಡಕ್ಕೆ ತಂದಿರುವ



ಶ್ರೀಮತಿ ಸೂರ್ಯವಂಶಿ ಉತ್ತಮ ಅನುವಾದಕಿ. ತೆಲುಗಿನಿಂದ ಹಲವಾರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿರುವವರು. ಟಿಟಿಡಿ ನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆ ಪತ್ರಾಗಾರದಲ್ಲಿ ದೊರೆತ ಅನೇಕ ದಸ್ತಾವೇಜುಗಳನ್ನು, ಪ್ರಾಚೀನ ದಾಖಲೆಗಳನ್ನು, ಹಳೆಯ ರೆಕಾರ್ಡ್‌ಗಳನ್ನು, ಶಿಲಾಶಾಸನಗಳನ್ನು ಅಧ್ಯಯನ ಮಾಡಿ ರಚಿಸಿರುವ 'ತಿರುಮಲೆಯ ಚರಿತಾಮೃತ' ಒಂದು ಅಧಿಕೃತ ಗ್ರಂಥ. ಈ ಇಬ್ಬರು ದೈವಭಕ್ತರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತಾ 'ತಿರುಮಲೆಯ ಚರಿತಾಮೃತ'ವನ್ನು ಓದುಗರಿಗೆ ನೀಡುತ್ತಿದ್ದೇವೆ

–ಸಂ.

ಇವರಿಗೆ ಪ್ರಸಾದಗಳನ್ನು ಮಾರುವುದಕ್ಕೆ ಅವಕಾಶ ಹೆಚ್ಚಾಗಿರುತ್ತಿತ್ತು. ನಿಧಾನವಾಗಿ ಅವರ ಪಾಲಿನ ಪ್ರಸಾದಗಳೇ ಅಲ್ಲದೇ ಇತರರ ಪ್ರಸಾದದ ಪಾಲನ್ನೂ ಇವರೇ ಖರೀದಿಸಿ ಎಲ್ಲರ ಪರವಾಗಿ, ಪ್ರಸಾದಗಳನ್ನು ಮಾರುವಂತಹ ಗುತ್ತೇದಾರರಾಗಿ ತಯಾರಾದರು. ಅನಂತರದ ಕಾಲದಲ್ಲಿ ಇವರೇ ಅಡುಗೆಯ ಮೀರಾಸಿದಾರರಾದರು.

ಕೆಲಕಾಲ ಗುತ್ತೇದಾರರಾಗಿ ಕೆಲಸ ಮಾಡಿದರೂ ಅನಂತರ ಅರ್ಚಕರು, ಆಚಾರ್ಯಪುರುಷರು, ಗೊಲ್ಲ, ತಾಳ್ಳಪಾಕದವರಂತೆ ಅಡುಗೆಯವರಿಗೂ ದೇವಾಲಯದಲ್ಲಿ ವಂಶಪಾರಂಪರ್ಯವಾದ ಹಕ್ಕುಗಳು ದೊರೆತು ಮೀರಾಸಿದಾರರಾದರು.

ಪ್ರತಿಯೊಂದು ಪ್ರಸಾದದಲ್ಲೂ ಯಾರ್‍ಯಾರಿಗೆ ಎಷ್ಟು ಭಾಗವೋ ಆಗಲೇ ತಿಳಿದುಕೊಂಡೆವು. ಇದು ಅನ್ನಪ್ರಸಾದಗಳಿಗೂ ಅನ್ವಯಿಸುತ್ತದೆ. ಪಣ್ಯಾರಗಳ ಪ್ರಸಾದಗಳಿಗೂ ಅನ್ವಯಿಸುತ್ತದೆ. ಒಂದು ಪಡಿ ಅಂದರೆ 51 ವಡೆಗಳು, ದೋಸೆಗಳು, ಮನೋಹರ ಅನಂತರದ ಕಾಲದಲ್ಲಿ ಲಾಡುಗಳು, ಕಜ್ಜಾಯ, ಜಿಲೇಬಿ...ಈ ರೀತಿ ಎಲ್ಲದರಲ್ಲೂ ಎಲ್ಲರಿಗೂ ಪಾಲಿದ್ದೇ ಇದೆ.

ನಾನು 1978ರಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿದ್ದಾಗ, ಎಲ್ಲ ಮೀರಾಸಿದಾರರಿಗಿಂತಲೂ ಅಡುಗೆಯ ಮೀರಾಸಿದಾರರೇ ಹೆಚ್ಚಾಗಿ ಸಂಪಾದಿಸುತ್ತಿದ್ದರು. ಗೌರವದಲ್ಲಿ ಅರ್ಚಕರು, ಆಚಾರ್ಯ ಪುರುಷರೇ ಮೊದಲಾದರೂ ಈ ಅಡುಗೆಯ ಮೀರಾಸಿದಾರರ ಮಾತು ಎಲ್ಲೆಡೆಯಲ್ಲೂ ನಡೆಯುತ್ತಿತ್ತು.

ಹೆಚ್ಚು ಕಡಮೆ 400 ಜನ ಅಡುಗೆಯ ಬ್ರಾಹ್ಮಣರು ಇವರ ಕೈಕೆಳಗೆ ದೇವಾಲಯದಲ್ಲಿ ಎರಡು ಷಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದರು.

ಅನೇಕ ಅಧಿಕಾರಿಗಳೂ ಇವರು ಹೇಳಿದಂತೆ ಕೇಳುವವ ರೆಂದುಕೊಳ್ಳುತ್ತಿದ್ದರು. ಯಾರಿಗೆ ಉಚಿತವಾಗಿ ಪ್ರಸಾದವನ್ನು ಕೊಡಬೇಕೆಂದರೂ ದೇವಸ್ಥಾನದ ಒಳಗೆ ಏನಾದರು ಮಾಡಬೇಕೆಂದರೂ ಮಾಡುವಂತಹ ಶಕ್ತಿ ಸಾಮರ್ಥ್ಯ ಇವರಿಗೆ ಕ್ರಮೇಣ ಕೈಗೂಡಿತು.

ಉಳಿದ ಮೀರಾಸಿದಾರರೊಂದಿಗೆ, ಇವರ ಮೀರಾಸೀದಾರತ್ವವೂ ಸುಪ್ರೀಂಕೋರ್ಟಿನ ತೀರ್ಪಿನಿಂದಾಗಿ ರದ್ದಾಯಿತು. ಆದರೂ ಇಂದಿಗೂ ದೇವಸ್ಥಾನದ ಅಡುಗೆ ಶಾಲೆಯಲ್ಲಿ, ಆಲಯಾಧಿಕಾರಿಗಳು, ನೈವೇದ್ಯಗಳನ್ನು ಮುಖ್ಯವಾಗಿ ಲಾಡುಗಳನ್ನು ಸಾಕಷ್ಟು ತಯಾರಿಗೊಳಿಸಲಾರದೇ, ತಯಾರಿಸುವ ಬ್ರಾಹ್ಮಣರು ದೇವಸ್ಥಾನದ ಸಿಬ್ಬಂದಿಗಳಾಗಿ ಬದಲಾಗಿ ಖರ್ಚು ವಿಪರೀತವಾಗಿ ಹೆಚ್ಚಾಗುತ್ತಿರುವುದರಿಂದ ಪುನಃ ಗುತ್ತಿಗೆದಾರರ ಮೂಲಕ ಪ್ರಸಾದಗಳನ್ನು ತಯಾರಿಸಲಾಗುತ್ತಿದೆ.

### ಕ್ರಿ.ಶ. ೧೫೫೦ರಲ್ಲಿ ತಿರುಮಲೆಯ ಆಲಯದಲ್ಲಿ ನಿರ್ವಹಿಸುತ್ತಿದ್ದ ಉತ್ಸವಗಳು

- ಅಧ್ಯಯನೋತ್ಸವ–25 ದಿನಗಳು–ತಮಿಳು ಪ್ರಬಂಧ ಪಾರಾಯಣ
- ವಸಂತೋತ್ಸವ–ಐದು ದಿನಗಳು–ತಿರುಮಲ ರಾಜಯ್ಯ ಪ್ರಾರಂಭಿಸಿದ್ದು.
- ದವನಾರೋಹಣ ವಸಂತೋತ್ಸವ–ಐದು ದಿನಗಳು ಉತ್ಸವ ಮೂರ್ತಿಗಳನ್ನು 'ದವನ'ದಿಂದ ಪೂರ್ತಿಯಾಗಿ ತುಂಬಿ ಆರಾಧನೆ, ಅರ್ಚನೆ ಮಾಡುವುದು.
- ಊಂಜಲ್ ಮಹೋತ್ಸವ–9 ದಿನಗಳು
  ಪೆಂಡ್ಲಿ ತಿರುನಾಳ್ಳ (ವಿವಾಹ ಮಹೋತ್ಸವ) ಐದು ದಿನಗಳು ಕ್ರಿ.ಶ. 17–07–1546ರಲ್ಲಿ ತಾಳ್ಳಪಾಕ ಚಿನ್ನಣ್ಣ ಪ್ರಾರಂಭಿಸಿದ್ದು.
- ಲಕ್ಷ್ಮೀದೇವಿಯ ಮಹೋತ್ಸವಗಳು–ಐದು ದಿನಗಳು.
- ಬೇಸಿಗೆ ಕಾಲದ ಉತ್ಸವಗಳು–ಇಪ್ಪತ್ತು ದಿನಗಳು.
- ತೆಪ್ಪೋತ್ಸವ–ಒಂಬತ್ತು ದಿನಗಳು.
- ಪಲ್ಲವೋತ್ಸವ–ಐದು ದಿನಗಳು
- ಫಲೋತ್ಸವ–ಮೂರು ದಿನಗಳು
- ಅಧ್ಯಯನೋತ್ಸವ–(ರಾಮಾನುಜರಿಗೆ)–ಆರು ದಿನಗಳು.

ಹತ್ತು ಬ್ರಹ್ಮೋತ್ಸವಗಳೇ ಅಲ್ಲದೇ ಉಳಿದ ಹದಿನೈದು ಉತ್ಸವಗಳನ್ನೂ ವಿಶೇಷ ಉತ್ಸವಗಳೆಂದೇ ಪರಿಗಣಿಸುತ್ತಿದ್ದರು.

ಈ ಉತ್ಸವಗಳೇ ಅಲ್ಲದೇ ಪ್ರತೀ ತಿಂಗಳೂ ನಡೆಯುವ ಉತ್ಸವಗಳು ಆ ದಿನಕ್ಕೆ ಪ್ರತ್ಯೇಕ ಪೂಜೆಗಳು, ನೈವೇದ್ಯಗಳೂ ಇವೆ.

ಹನ್ನೆರಡು ಮಾಸ ಸಂಕ್ರಮಣಗಳು (ತಮಿಳು ಪಂಚಾಂಗದ ಪ್ರಕಾರ ಪ್ರತೀ ತಿಂಗಳೂ ಮೊದಲ ದಿನ).

ಹದಿಮೂರು ಅಮಾವಾಸ್ಯೆಗಳು, ಹದಿಮೂರು ಹುಣ್ಣಿಮೆಗಳು, ಇಪ್ಪತ್ತೈದು ದಶಮಿಗಳು, ಇಪ್ಪತ್ತೈದು ಏಕಾದಶಿಗಳು, ಇಪ್ಪತ್ತೈದು ದ್ವಾದಶಿಗಳು, ಹದಿಮೂರು ರೋಹಿಣಿ, ಮೃಗಶಿರ, ಪುನರ್ವಸು, ಪುಷ್ಯಮಿ, ಉತ್ತರ ಫಲ್ಗುಣಿ, ಮೂಲ, ಪೂರ್ವಾಷಾಢ, ಉತ್ತರಾಷಾಢ ಶ್ರವಣ–ಪ್ರತೀ ನಕ್ಷತ್ರಕ್ಕೂ ವರ್ಷಕ್ಕೆ ಹದಿಮೂರು ದಿನಗಳು, ಈ ರೀತಿ ವಾರ್ಷಿಕ, ಮಾಸ ಸೇವೆಗಳೇ ಅಲ್ಲದೇ ವಿಶೇಷವಾದ ದಿನಗಳಲ್ಲೂ ಪ್ರತ್ಯೇಕವಾದ ಪೂಜೆಗಳಿರುತ್ತಿದ್ದುವು.

ಶ್ರೀಜಯಂತಿ, ಊರಿ–ಅಡಿ
ಉತ್ಥಾನ ದ್ವಾದಶಿ, ಆರ್ದ್ರಾಸಿ ಪೂರ್ವಾಷಾಢ
ದೀಪಾವಳಿ, ಕಾರ್ತಿಕ,
ಮರಕ ಸಂಕ್ರಮಣ, ಪಾರುವೇಟ (ಬೇಟೆ)
ತಾಂಪೂಸಮು, ತನ್ನೀರು–ಅಮುದು
ಉಗಾದಿ, ಶ್ರೀರಾಮನವಮಿ
ವೈಶಾಖ, ಮಾಸಿ ಮಖ

ಇವೇ ಅಲ್ಲದೇ ಅನೇಕ ಭಕ್ತರು ಅವರವರ ಜನ್ಮದಿನಗಳಲ್ಲಿ ಅಥವಾ ವಿವಾಹದ ದಿನಗಳಲ್ಲಿ ಪಿತೃವರ್ಧಂತಿ ದಿನಗಳಲ್ಲಿ, ಪ್ರತ್ಯೇಕ ಪೂಜೆಗಳಿಗೆ ದೇವಾದಾಯಗಳನ್ನು ಮಾಡಿ ನಡೆಸಿದಂತಹ ಪೂಜೆಗಳು.

ತಾಳ್ಳಪಾಕ ಚಿನ್ನಣ್ಣ ತನ್ನ ಕುಟುಂಬದ ಸದಸ್ಯರು, ತಂದೆ, ತಾತ ಅನ್ನಮಯ್ಯರ ಹೆಸರಿನಲ್ಲಿ ದೇವಾದಾಯಗಳನ್ನು ಮಾಡಿ ಪ್ರತೀ ವರ್ಷವೂ ಉತ್ಸವಗಳನ್ನು ನೈವೇದ್ಯಗಳೊಂದಿಗೆ ಏರ್ಪಡಿಸಿದಂತೆ ಶಾಸನಗಳಿವೆ. ಇನ್ನು ರಾಜರ ವಿಷಯ ಹೇಳಬೇಕಾದ್ದಿಲ್ಲ.


ತಿರುಮಲೆಯ ಆಲಯದಲ್ಲಿ ಇಂದಿಗೂ ರಥಸಪ್ತಮಿ ವಾಹನ ಸೇವೆಗಳಿಂದ ವೈಭವವಾಗಿ ನಡೆಯುತ್ತದೆ. ಈ ಸೇವೆ ಕ್ರಿ.ಶ. 1550ರಲ್ಲಿ ಕರನಿಕ ಅಪ್ಪಲಯ್ಯ ಎಂಬಾತ ಪ್ರಾರಂಭಿಸಿದಂತೆ ತಿಳಿದುಬರುತ್ತಿದೆ. ಆ ಕಾಲದಲ್ಲಿ ಉತ್ಸವದ ಪ್ರಾರಂಭದಲ್ಲಿ ಅಂಕುರಾರ್ಪಣೆ, ಹೋಮ, ತಿರುಮಂಜನ, ಉತ್ಸವದಂತೆ ಮಾಡಿ ಸೂರ್ಯೋದಯದ ವೇಳೆಗೆ ಶ್ರೀಹರಿಯನ್ನು ಸೂರ್ಯಪ್ರಭ ವಾಹನದಲ್ಲಿ ಮೆರವಣಿಗೆ ಮಾಡಿಸುತ್ತಿದ್ದರು. ಅನಂತರ ವರಾಹಸ್ವಾಮಿ ಆಲಯದ ಮಂಟಪದಲ್ಲಿ ಪುನಃ ತಿರುಮಂಜನ, ಸುದರ್ಶನ ಆಳ್ವಾರರಿಗೆ ದೇವಸ್ಥಾನದ ಬೀದಿಯಲ್ಲಿ ಉತ್ಸವ, ತಿರುಮಂಜನ, ರಾತ್ರಿ ಪುನಃ ದೇವಸ್ಥಾನದ ಬೀದಿಗಳಲ್ಲಿ ಉತ್ಸವ ನಡೆಯುತ್ತಿತ್ತು.

**ಮುಂದುವರಿಯುವುದು**

# ಶ್ರೀ ಯೋಗಿ ನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ



**ದೂರವಾಣಿ: 08154-239525 / ಮೊಬೈಲ್ : 9945337398**
klnarayankaiwara53@gmail.com




**ನವೆಂಬರ್ 2019ನೇ ಮಾಹೆಯ ಸಾಪ್ತಾಹಿಕ ಸೇವೆಗಳ ವಿವರ**

## ನಾದಸುಧಾರಸ

ವಿನೂತನ ಯೋಜನೆಯಲ್ಲಿ ಅಮೋಘ ಸಂಕೀರ್ತನ ಸಂಗೀತ ಕಚೇರಿಗಳು

| ದಿನಾಂಕ | ಸಮಯ | ವಿದ್ವಾಂಸರ ಹೆಸರುಗಳು | ಕಾರ್ಯಕ್ರಮ |
|---|---|---|---|
| 02.11.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಡಾ.ಎಂ.ವಿ. ಶ್ರೀನಿವಾಸಮೂರ್ತಿ, ಬೆಂಗಳೂರು<br>ಶ್ರೀ ಸಂಜೀವ್ ಕುಮಾರ್, ಬೆಂಗಳೂರು – ಪಿಟೀಲು<br>ಶ್ರೀ ಮುರಳಿ, ಬೆಂಗಳೂರು – ಮೃದಂಗ | ಗಾಯನ |
| 09.11.2019<br>ಶನಿವಾರ | ಸಂಜೆ<br>5.00 ಗಂಟೆಗೆ | ನಾದಸುಧಾರಸ ತಂಡದವರಿಂದ | ಗಾಯನ |
| 12.11.2019<br>ಮಂಗಳವಾರ | ಬೆಳಗ್ಗೆ 11.00 ರಿಂದ<br>12.00 ಗಂಟೆವರೆಗೆ | ಶ್ರೀ ವಾನರಾಶಿ ಬಾಲಕೃಷ್ಣ ಭಾಗವತ ಅವರಿಂದ<br>ಪೋತನ ಭಾಗವತ ಪ್ರವಚನ | ಹುಣ್ಣಿಮೆ |
| | ಸಂಜೆ 4.00 ಗಂಟೆಗೆ | ವಿಶೇಷ ಪೂಜೆ ಮತ್ತು ಆಲಂಬಗಿರಿಯಲ್ಲಿ ಗಿರಿ ಪ್ರದಕ್ಷಿಣೋತ್ಸವ<br>ಡಾ. ಎಂ.ಆರ್. ಜಯರಾಮ್ ಅವರ ನೇತೃತ್ವ | |
| 16.11.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ಬಿ.ಎಂ. ಆಂಜನಪ್ಪ, ಭೈರತಿ, ಬೆಂಗಳೂರು<br>ಶ್ರೀ ಶ್ರೀಕಾಂತ್, ಮೈಸೂರು – ಪಿಟೀಲು<br>ಶ್ರೀ ಜೆ. ಕಿರಣ್, ಮೈಸೂರು – ಮೃದಂಗ<br>ಪುಷ್ಪಲತಾ ಆಂಜನಪ್ಪ, ಭೈರತಿ – ಖಂಜಿರ | ಗಾಯನ |
| 23.11.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ವೆಂಕಟಶಾಮಚಾರಿ, (ಶಿಲ್ಪಿ) ಹಾಲೇರಿ<br>ಶ್ರೀ ಅಂಜನಾಚಾರಿ, ದೇವನಹಳ್ಳಿ – ಹಾರ್ಮೋನಿಯಂ<br>ಶ್ರೀ ಮಂಜುನಾಥಚಾರಿ, ಮುಳಬಾಗಿಲು – ತಬಲ | ಹರಿಕಥೆ |
| 30.11.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಜ್ಞಾನಾಂಭಾ ಭಾಗವತಾರಿಣಿ, ಕುಪ್ಪಂ<br>ಶ್ರೀ ಮುನಿಯಪ್ಪ, ಕುಪ್ಪಂ – ಹಾರ್ಮೋನಿಯಂ<br>ಶ್ರೀ ಸುಬ್ರಹ್ಮಣಿ, ಕುಪ್ಪಂ – ತಬಲ | ಹರಿಕಥೆ |

**ಬಾಲಕೃಷ್ಣ ಭಾಗವತರ್**
ಸಂಯೋಜಕರು:
ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ



**ಡಾ|| ಎಂ.ಆರ್. ಜಯರಾಮ್**
ಧರ್ಮಾಧಿಕಾರಿಗಳು

## ಮಲ್ಲಾರ ಚಂದಾದಾರರಲ್ಲಿ ವಿನಂತಿ

ಮಲ್ಲಾರ ಕಛೇರಿಯಲ್ಲಿ ಹಂಚಿಕೆಯ ವಿಭಾಗದಿಂದ ಚಂದಾದಾರ/ಓದುಗರಿಗೆ 3ನೇ ದಿನಾಂಕದೊಳಗಾಗಿ ತಲುಪುವಂತೆ ಪತ್ರಿಕೆ ಕಳುಹಿಸಲಾಗುತ್ತಿದೆ. ಯಾವುದೇ ಕಾರಣದಿಂದ 10ನೇ ದಿನಾಂಕದೊಳಗಾಗಿ ತಲುಪದಿದ್ದರೆ ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಬೇಕು. ತಲುಪದ ಬಗ್ಗೆ ನಮ್ಮ ಕಛೇರಿಯ ಹಂಚಿಕೆ ವಿಭಾಗಕ್ಕೆ ಪೋಸ್ಟ್ ಕಾರ್ಡ್ ಮೂಲಕ 20ನೇ ದಿನಾಂಕದೊಳಗಾಗಿ ಲಿಖಿತವಾಗಿ ದೂರು ಸಲ್ಲಿಸಬೇಕು. ಪೋಸ್ಟ್ ಕಾರ್ಡ್‌ನಲ್ಲಿ ನಿಮ್ಮ ಗ್ರಾಹಕ ಸಂಖ್ಯೆ, ಸದಸ್ಯತ್ವ (ವಾರ್ಷಿಕ, ಪೋಷಕ ಇತ್ಯಾದಿ) ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ದೂರು ಬಂದ ನಂತರ ಆ ತಿಂಗಳ ಸಂಚಿಕೆಯನ್ನು ಮಾತ್ರ ನಂತರದ ತಿಂಗಳಿನ ಸಂಚಿಕೆಯೊಂದಿಗೆ ಪ್ರತ್ಯೇಕವಾಗಿ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇತರ ಹಳೆಯ ಸಂಚಿಕೆಗಳು ಲಭ್ಯವಿಲ್ಲ. ಅಂಚೆ ಅಧಿಕಾರಿಗಳನ್ನು ಸಂಪರ್ಕಿಸಲು ಅನುಕೂಲವಾಗುವಂತೆ ದೂರನ್ನು ಲಿಖಿತವಾಗಿ ಮಾತ್ರ ನೀಡಬೇಕಾಗಿ ವಿನಂತಿ: ಫೋನ್ ಕರೆ ಸಾಕಾಗುವುದಿಲ್ಲ. ಡಿ.ಡಿ./ಚೆಕ್‌ಗಳು 'Sri Yogi Nareyana Study Centre' ಹೆಸರಿನಲ್ಲಿ ಮಾತ್ರ ಕಳಿಸಬೇಕು; ಅಲ್ಲಿ ಬೇರೇನೂ ಇರಬಾರದು; ಕಾರ್ಯಾಲಯ ವಿಳಾಸಕ್ಕೆ ಕಳಿಸಬೇಕು.

ಸಂಪಾದಕರು.

# ಕರ್ಮ ಸಿದ್ಧಾಂತ


(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ವಿಗ್ರಹವು ಭಗವಂತನ ಭಾವನೆಯನ್ನು ಕೊಡುವುದು ಹೇಗೆ ಸಾಧ್ಯ ಎಂಬ ಶಂಕೆ ಕೆಲವರಲ್ಲಿ ಏಳಬಹುದು. ಇದಕ್ಕೆ ಉತ್ತರವಾಗಿ ಸ್ವಾಮಿ ವಿವೇಕಾನಂದರ ಜೀವನದಲ್ಲಿ ಬರುವ ಒಂದು ಘಟನೆಯನ್ನು ಗಮನಿಸಬಹುದು. ಆಳ್ವಾರ್ ಎಂಬ ಸಂಸ್ಥಾನದ ಮಹಾರಾಜ ಪಾಶ್ಚಾತ್ಯರ ವಿಚಾರಗಳಿಂದ ಪ್ರಭಾವಿತನಾಗಿ ಸನಾತನ ಧರ್ಮದ ಆಚಾರವಿಚಾರಗಳಲ್ಲಿ ಅಪನಂಬಿಕೆ ತಾಳಿದ್ದನು. ಅವನು ಮೂರ್ತಿಪೂಜೆಯನ್ನು ಅವಹೇಳನ ಮಾಡುತ್ತಿದ್ದನು. ಒಮ್ಮೆ ಸ್ವಾಮಿ ವಿವೇಕಾನಂದರು ಅಲ್ಲಿಗೆ ಬಂದಿದ್ದಾಗ ಆ ಮಹಾರಾಜರು ಅವರ ಎದುರಿನಲ್ಲಿಯೇ ವಿಗ್ರಹಾರಾಧನೆಯ ಬಗ್ಗೆ ಅವಹೇಳನಕಾರಿಯಾದ ಮಾತುಗಳನ್ನು ಆಡಿದನು. ವಿವೇಕಾನಂದರಿಗೆ ಆ ಅಜ್ಞಾನಿಯನ್ನು ತಿದ್ದಬೇಕೆನಿಸಿತು. ಅವರು ಆಸ್ಥಾನದಲ್ಲಿದ್ದ ದಿವಾನನನ್ನು ಕರೆದು ಅಲ್ಲಿಯೇ ಇದ್ದ ರಾಜನ ಭಾವಚಿತ್ರವನ್ನು ತರಿಸಿ, ಅದರ ಮೇಲೆ ಉಗುಳಬೇಕೆಂದು ತಿಳಿಸಿದರು. ದಿವಾನರು ಅದಕ್ಕೆ ಒಪ್ಪದೆ, "ಅದು ಸಾಧ್ಯವಿಲ್ಲ, ಹಾಗೆ ಮಾಡಿದರೆ ಮಹಾರಾಜರಿಗೆ ಅವಮಾನಮಾಡಿದಂತಾಗುತ್ತದೆ" ಎಂದ. "ಬರಿಯ ಚಿತ್ರದ ಮೇಲೆ ಉಗುಳಿದರೆ ಹೇಗೆ ಅದು ಮಹಾರಾಜನಿಗೆ ಅವಮಾನಮಾಡಿದಂತಾಗುತ್ತದೆ" ಎನ್ನುತ್ತ ವಿವೇಕಾನಂದರು ರಾಜನಿಗೆ, "ಈ ಚಿತ್ರದಲ್ಲಿ ಅವರು ಮಹಾರಾಜರನ್ನೇ ಕಾಣುತ್ತಿದ್ದಾರೆ. ಹಾಗೆಯೇ ಭಕ್ತರು ವಿಗ್ರಹದಲ್ಲಿ ಭಗವಂತನನ್ನು ಕಾಣಬಾರದೇಕೆ?" ಎಂದು ಕೇಳುತ್ತಾರೆ. ಇದನ್ನು ಕೇಳಿದ ಆಳ್ವಾರ್ ಮಹಾರಾಜನಿಗೆ ಜ್ಞಾನೋದಯವಾಗುತ್ತದೆ. ಈ ಘಟನೆಯು ವಿಗ್ರಹವು ಹೇಗೆ ಉಪಾಸನಾಮೂರ್ತಿಯಾಗಬಲ್ಲದು, ಹೇಗೆ ಭಗವಂತನ ಭಾವ ಅದರಲ್ಲಿ ಬರಬಲ್ಲದು ಎಂಬುದಕ್ಕೆ ಅತ್ಯುತ್ತಮವಾದ ಉದಾಹರಣೆಯಾಗಿದೆ.

ಎಲ್ಲರೂ, ಎಲ್ಲ ಮತದವರೂ ಅವರವರ ಧರ್ಮದ ಸಂಕೇತವಾಗಿ ಒಂದೊಂದು ವಸ್ತುವನ್ನು ಪವಿತ್ರವನ್ನಾಗಿ ಸ್ವೀಕರಿಸಿ, ಗೌರವಿಸುತ್ತಾರೆ. ಪ್ರಾರ್ಥನಾ ಮಂದಿರಗಳು, ಧ್ವಜಗಳು, ಗ್ರಂಥಗಳು ಅಷ್ಟೇಕೆ, ರಾಷ್ಟ್ರಧ್ವಜಗಳು ಇವುಗಳೆಲ್ಲ ಕೇವಲ ಬಟ್ಟೆಗಳು, ಕಾಗದ, ಕಲ್ಲು, ಮಣ್ಣು, ಇಟ್ಟಿಗೆ ಎಂದು ಯಾರೂ ಭಾವಿಸುವುದಿಲ್ಲ. ಅವುಗಳನ್ನೆಲ್ಲ ಅವರವರ ಶ್ರದ್ಧಾಕೇಂದ್ರಗಳನ್ನೂ, ದೇಶಗಳನ್ನೂ, ಅವರವರ ನಂಬಿಕೆಯ ಸ್ವರೂಪದ ದೇವರನ್ನೂ ಕಾಣುತ್ತಾರೆ. ಇದರಲ್ಲೇನೂ ತಪ್ಪಿಲ್ಲ. ಹಿಂದೂಗಳು ದೇವಾಲಯವನ್ನೇ ಪರಮಾತ್ಮನ ದೇಹವನ್ನಾಗಿ ನಿರ್ಮಿಸಿ, ಅದರೊಳಗೆ ವಿಭುವಾದ ಭಗವಂತನ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ.

ಈ ಸಗುಣಾರಾಧನೆಯ ಕಾರಣದಿಂದಲೇ ನಮ್ಮ ದೇಶದಲ್ಲಿ ಅದ್ಭುತ ಶಿಲ್ಪಸೌಂದರ್ಯವನ್ನು ಹೊಂದಿರುವ ಮನುಷ್ಯನ ಕಲಾಪ್ರತಿಭೆಯ ಅತ್ಯುತ್ತಮ ಅಭಿವ್ಯಕ್ತಿಯಾಗಿರುವ ದೇವಸ್ಥಾನಗಳು ನಿರ್ಮಾಣಗೊಂಡವು. ಸುಂದರವಾದ ದೇವತಾವಿಗ್ರಹಗಳ ಆವಿಷ್ಕಾರವೂ ಆಯಿತು. ಆದರೆ ಇವುಗಳಲ್ಲಿ ಅನೇಕ ಮಂದಿರಗಳು ಶತ್ರುಗಳ ದಾಳಿಗೆ ತುತ್ತಾಗಿ ಚರಿತ್ರೆಯ ಗರ್ಭದಲ್ಲಿ ಅಡಗಿಹೋದವು.

ಸಗುಣಾರಾಧನೆಯ ವಿಷಯದೊಂದಿಗೆ ದೇವಾಲಯಗಳ ವಿಚಾರಗಳನ್ನೂ ಪ್ರಸ್ತಾಪ ಮಾಡಬೇಕಾಗುತ್ತದೆ. ದೇವಾಲಯಗಳು ನಮ್ಮಲ್ಲಿ ಭಕ್ತಿ, ಆಧ್ಯಾತ್ಮಿಕತೆ, ಏಕತೆ, ಸಮಾಜಸೇವೆ, ಚಿತ್ತಶುದ್ಧಿ ಮುಂತಾದವುಗಳನ್ನು ಉಂಟುಮಾಡುವ ಶ್ರದ್ಧಾಕೇಂದ್ರಗಳು. ಧರ್ಮದ ಅಮೂರ್ತಭಾವಗಳೆಲ್ಲ ಇಲ್ಲಿ ಮೂರ್ತರೂಪವನ್ನು ತಾಳಿವೆ. ಈ ದೇವಾಲಯಗಳಲ್ಲಿ ಸಾರ್ವಜನಿಕವಾಗಿ ಪೂಜಾದಿಗಳ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲಿಗೆ ಭಕ್ತರು ಬಂದು ನೆಮ್ಮದಿಯನ್ನು ಅನುಭವಿಸುತ್ತಾರೆ. ಪರಮಾತ್ಮನೊಂದಿಗೆ ಹೃದಯಸಂವಾದ ನಡೆಸುತ್ತಾರೆ. ಅಲ್ಲಿರುವ ದೈವೀ ವಾತಾವರಣದಿಂದ ಅವರ ಮನಸ್ಸಿನಲ್ಲಿ ಸಾತ್ತ್ವಿಕಭಾವಗಳ ಲಹರಿಗಳು ತುಂಬಿಕೊಂಡು ಪುಳಕಿತರಾಗುತ್ತಾರೆ. ಸ್ವಲ್ಪ ಹೊತ್ತಾದರೂ ರಾಗದ್ವೇಷಾದಿಗಳಿಂದ ಬಿಡುಗಡೆಹೊಂದಿ ಪರಮಾತ್ಮನ ಸಾನ್ನಿಧ್ಯವನ್ನು ಅನುಭವಿಸುತ್ತಾರೆ. ಶಿಲ್ಪ ಸೌಂದರ್ಯದ ಆರಾಧಕರು ದೇವಾಲಯದ ಹಾಗೂ ಅಲ್ಲಿರುವ ಮೂರ್ತಿಗಳ ಸೌಂದರ್ಯವನ್ನು ನೋಡಿ ಆನಂದಾನುಭವ ಹೊಂದಬಹುದು. ಆಸ್ತಿಕರು ಶಿಲ್ಪದ ಅಂತರಂಗವನ್ನು ಹೊಕ್ಕು ಅದರಲ್ಲಿ ದೈವದ ಸಾನ್ನಿಧ್ಯವನ್ನು ಕಾಣುತ್ತಾರೆ. ಅವರು ತಮ್ಮ ಕಷ್ಟಗಳನ್ನು ನಿವೇದಿಸಿಕೊಳ್ಳುತ್ತಾರೆ. ಅವರ ಶ್ರದ್ಧೆಗೆ ತಕ್ಕಂತೆ ಪರಿಹಾರವನ್ನು ಕಾಣುತ್ತಾರೆ. ಭೇದಗಳೆಲ್ಲ ಕರಗಿಹೋಗುವ ಸ್ಥಳ ಅದು. ಅಲ್ಲಿ ಏಕತೆಯನ್ನು ಸಾಧಿಸಬಹುದು. ಎಲ್ಲರೂ ಒಂದೇ ಎಂಬ ಸಮತೆಯ ಅನುಭವ ಅಲ್ಲಿ ಸಿಗುತ್ತದೆ, ತರತಮ ಧ್ಯಾನ ಅಳಿಸಿಹೋಗುತ್ತದೆ, ಆತ್ಮೋನ್ನತಿ ಉಂಟಾಗುತ್ತದೆ.



ಆದರೆ ಚಾರಿತ್ರಿಕ ಕಾರಣಗಳಿಂದ ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆಯ ಪಿಡುಗು ಅರ್ಬುದ ರೋಗದಂತೆ ಆವರಿಸಿಕೊಂಡು ದೇವಾಲಯಕ್ಕೆ ಪ್ರವೇಶ ನಿಷೇಧಿಸುವ ದುಷ್ಟ ಪರಂಪರೆಯು ಹುಟ್ಟಿಕೊಂಡು ಈ ಏಕತೆಗೆ ಭಂಗ ತಂದಿತು. ಈ ದೋಷವನ್ನು


ನಿವಾರಿಸಲು ಅನೇಕ ಸಮಾಜಸುಧಾಕರೂ ಜ್ಞಾನಿಗಳೂ ಆಯಾಯಾ ಕಾಲದಲ್ಲಿ ಸಮಾಜವನ್ನು ತಿದ್ದಿದರಾದರೂ ಈ ಪಿಡುಗು ಗ್ರಾಮಾಂತರ ಪ್ರದೇಶಗಳಲ್ಲಿ ತನ್ನ ಕರಾಳ ಮುಖವನ್ನು ಇಂದಿಗೂ ತೋರಿಸುತ್ತಿದೆ. ಇದನ್ನು ನಿವಾರಿಸಲು ಕಾನೂನು-ಕಟ್ಟಳೆಗಳನ್ನು ಮಾಡಲಾಗಿದೆಯಾದರೂ ಸಮಾಜವು ಇನ್ನೂ ಈ ದೋಷದಿಂದ ಮುಕ್ತವಾಗಿಲ್ಲ. ನಾವು ಏಕಮನಸ್ಸಿನಿಂದ ಈ ಪಿಡುಗನ್ನು ಸಂಪೂರ್ಣವಾಗಿ ತೊಲಗಿಸಲು ಸಂಕಲ್ಪ ಮಾಡಬೇಕು.

ದೇವಾಲಯವು ಅನೇಕ ತತ್ತ್ವಗಳ ಒಂದು ಸಂಕೀರ್ಣ. ಇದು ವಿರಾಟ್‌ಪುರುಷನ ಸಂಕೇತ. ಗರ್ಭಗೃಹವೇ ಆ ಪುರುಷನ ಶಿರಸ್ಸು. ಹೊರಗೋಪುರವೇ ಅವನ ಪಾದ. ಶುಕನಾಸಿಯು ಅವನ ಮೂಗು. ಪ್ರಾಕಾರವೇ ಬಾಹು. ಇದು ಪರಮಾತ್ಮನ ದೃಷ್ಟಿಯಿಂದ ಸಾಂಕೇತಿಕವಾಗಿ ಹೇಳುವ ಅರ್ಥ. ಮನುಷ್ಯನ ಹಿನ್ನೆಲೆಯಿಂದಲೂ ಇದನ್ನು ಅರ್ಥೈಸಬಹುದು. ದೇವಾಲಯವು ಮನುಷ್ಯ ಶರೀರದ ಸಂಕೇತ. ಗರ್ಭಗುಡಿಯು ಅವನ ಹೃದಯ. ಅದರಲ್ಲಿ ಇರುವವನು ಪರಮಾತ್ಮ. ಹೀಗೆ ದೇವಾಲಯವು ಜಡದೊಳಗಿನ ಜೀವವನ್ನು ತೋರಿಸುತ್ತದೆ. ಬ್ರಹ್ಮಾಂಡದೊಳಗಿರುವ ಪರಮಾತ್ಮನನ್ನು ತೋರಿಸುತ್ತದೆ.


ಚಾತುರ್ವರ್ಣ್ಯದ ವ್ಯವಸ್ಥೆಯನ್ನು ನಾನೇ ಸೃಷ್ಟಿಸಿದೆ-ಶ್ರೀಕೃಷ್ಣ.

ಸಾರ್ವಜನಿಕ ದೃಷ್ಟಿಯಿಂದ ದೇವಾಲಯಗಳು ಇರುವಂತೆಯೇ ಪ್ರತಿಯೊಬ್ಬ ಹಿಂದುವಿನ ಮನೆಯಲ್ಲೂ ಪೂಜಾಗೃಹಗಳಿರುತ್ತವೆ. ಅಲ್ಲಿ ಪರಂಪರೆಯಿಂದ ಬಂದ ಹಾಗೂ ಇಷ್ಟದೈವದ ವಿಗ್ರಹಗಳು ಇದ್ದು, ಅವುಗಳನ್ನು ಪರಮಾತ್ಮನೆಂದೇ ಭಾವಿಸಿ, ಪೂಜೆ ಮಾಡಲಾಗುತ್ತದೆ. ಈ ಪೂಜೆಗೂ ಶಾಸ್ತ್ರೋಕ್ತವಾದ ವಿಧಾನವಿದೆ. ಆವಾಹನೆ, ಆಸನ, ಅರ್ಘ್ಯ, ಪಾದ್ಯ, ಅಚಮನ, ಅಭಿಷೇಕ, ಅಲಂಕಾರ, ಮಂತ್ರಾರ್ಚನೆ, ನೈವೇದ್ಯ, ಆರತಿ, ವಿಸರ್ಜನೆ ಮುಂತಾದ ಷೋಡಶೋಪಚಾರ ಪೂಜೆ ನಡೆಯುತ್ತದೆ. ಇಲ್ಲಿಯೂ ಭಕ್ತಿಯೇ ಇವುಗಳ ಮುಖ್ಯ ಶ್ರುತಿ. ಭಕ್ತಿಯಿಂದ ಪೂಜೆಯನ್ನು ಮಾಡಿದಾಗ ಚಿತ್ತಶುದ್ಧಿ ಲಭಿಸುತ್ತದೆ. ಮನೆಯು ಮಂಗಳಕರವಾಗುತ್ತದೆ. ಮನುಷ್ಯನಲ್ಲಿ ಆತ್ಮವಿಶ್ವಾಸ ತುಂಬಿಕೊಳ್ಳುತ್ತದೆ. ಸಾತ್ತ್ವಿಕ ಸಂಸ್ಕಾರಗಳು ಮನಸ್ಸಿನಲ್ಲಿ ಮನೆಮಾಡುತ್ತವೆ. ದೊಡ್ಡವರು ಪೂಜೆ ಮಾಡುವುದನ್ನು ನೋಡಿ ಮಕ್ಕಳೂ ಭಾಗವಹಿಸುತ್ತಾರೆ.

**ಪಾಪಪುಣ್ಯಗಳು:** ಪಾಪಪುಣ್ಯಗಳ ಸಿದ್ಧಾಂತಗಳು ಸನಾತನ ಧರ್ಮದಲ್ಲಿ ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಸಲು ಪ್ರಮುಖವಾದ ಸಾಧನಗಳಾಗಿವೆ. ಯಾವ ಹೊರ ವ್ಯವಸ್ಥೆಯ ಆವಶ್ಯಕತೆಯಿಲ್ಲದ ಮನುಷ್ಯನನ್ನು, ತನ್ಮೂಲಕ ಸಮಾಜವನ್ನು ನಿಯಂತ್ರಣದಲ್ಲಿಟ್ಟು ವ್ಯಕ್ತಿಯ ವಿಕಾಸಕ್ಕೆ ಕಾರಣವಾಗುವ ಈ ತತ್ತ್ವಗಳು ನಮ್ಮ ಸಮಾಜದ ಕಾವಲಿನ ಸಂಸ್ಥೆಗಳಾಗಿದ್ದವು. ಕೆಟ್ಟ ಕೆಲಸದಿಂದ ಪಾಪ, ಒಳ್ಳೆಯ ಕೆಲಸದಿಂದ ಪುಣ್ಯ ಬರುವುದರಿಂದ, ಪಾಪದಿಂದ ದುಃಖವೂ ಪುಣ್ಯದಿಂದ ಸುಖವೂ ಉಂಟಾಗುವುದರಿಂದ, ಜನರು ಪುಣ್ಯ ಕೆಲಸವನ್ನು ಮಾಡುವ ಸಂಕಲ್ಪಮಾಡಿ ಪುಣ್ಯವಂತರಾಗಲು ಪ್ರಯತ್ನಿಸುತ್ತಿದ್ದರು. ಅವರನ್ನು ನಿಯಂತ್ರಿಸಲು ಬೇರೆ ಆರಕ್ಷಕ ವ್ಯವಸ್ಥೆಯ ಆವಶ್ಯಕತೆ ಬಹುತೇಕ ಕಡಮೆಯಾಗಿತ್ತು. ಈ ತತ್ತ್ವಗಳು ಮನುಷ್ಯನ ಹೃದಯದಲ್ಲಿ ಇರುವ ಕಾವಲುಗಾರರಂತೆ, ಒಳಗಿನಿಂದಲೇ ಮನಸ್ಸನ್ನು ನಿಯಂತ್ರಿಸುತ್ತವೆ. ಈಗ ಪಾಪಭೀತಿಯೇ ಇಲ್ಲವಾಗಿರುವುದರಿಂದ ಹೊರನಿಯಂತ್ರಣದ ವ್ಯವಸ್ಥೆಯ ಆವಶ್ಯಕತೆ ಬಂದಿದೆ. ಈ ವ್ಯವಸ್ಥೆಗೂ ಅಪರಾಧಿಗಳಿಗೂ ನಿರಂತರವಾದ ಹೋರಾಟ ನಡೆಯುತ್ತಿರುತ್ತದೆ. ಅಪರಾಧಿಗಳು ಈ ವ್ಯವಸ್ಥೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಡುತ್ತಲೇ ಇರುತ್ತಾರೆ. ಅಪರಾಧ ನಿಯಂತ್ರಣವು ವ್ಯವಸ್ಥೆಯ ದಕ್ಷತೆಯನ್ನು ಅವಲಂಬಿಸುತ್ತದೆ.



ಉನ್ನತ ದರ್ಜೆಯ ಪೋಲೀಸ್ ಅಧಿಕಾರಿಯಾಗಿ (ಡಿ.ಜಿ.ಪಿ) ದುಡಿದು ಅನೇಕ ಪ್ರಶಸ್ತಿಗಳನ್ನು ಪಡೆದು ನಿವೃತ್ತರಾದ ಡಾ.ಪಿ.ಎಸ್. ರಾಮಾನುಜಂ I.P.S ಬಹುಮುಖ ಪ್ರತಿಭಾಶಾಲಿ. ವೃತ್ತಿಯಲ್ಲಿ ಪೋಲೀಸ್ ಅಧಿಕಾರಿಯಾದರೂ ಪ್ರವೃತ್ತಿಯಲ್ಲಿ ಶ್ರೇಷ್ಠ ಸಾಂಸ್ಕೃತಿಕ ಚಿಂತಕರು. ಹಲವು ಪುಸ್ತಕಗಳ, ಕವನ ಸಂಕಲನಗಳ ಕರ್ತೃ ಆಗಿರುವ ಉತ್ತಮ ವಾಗ್ಮಿ ಡಾ. ಪಿ.ಎಸ್. ರಾಮಾನುಜಂ ಸಂಸ್ಕೃತ ಎಂ.ಎ. ಮುಗಿಸಿ ವೈಶೇಷಿಕ ದರ್ಶನದ ಮೇಲೆ ಮಹಾ ಪ್ರಬಂಧ ಬರೆದು ಪಿಹೆಚ್.ಡಿ ಪಡೆದುಕೊಂಡಿದ್ದಾರೆ. ಆರು ಸಂಪುಟಗಳ 'ಕಥಾ ಸರಿತ್ಸಾಗರ'ದ ಸಂಪಾದಕರೂ ಭರತನ ನಾಟ್ಯಶಾಸ್ತ್ರದಂತಹ ಮಹೋನ್ನತ ಕೃತಿಯ ಅನುವಾದಕರೂ ಆಗಿರುವ ಇವರು ಸಂಸ್ಕೃತ ಮಹಾಕವಿ ಬಾಣಭಟ್ಟನ 'ಕಾದಂಬರಿ'ಯನ್ನು ಆಧರಿಸಿ 'ಮಹಾಶ್ವೇತೆ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. 'ಭಾರತೀಯ ಸಾಂಸ್ಕೃತಿಕ ಪರಿಷತ್ತು' ಪ್ರಕಟಿಸಿರುವ ಡಾ. ಪಿ.ಎಸ್. ರಾಮಾನುಜಂ ಸಂಪಾದಿಸಿರುವ 'ಭಾರತೀಯ ಸಂಸ್ಕೃತಿ ದರ್ಶನ' ಎಂಬ ಕೃತಿಯಿಂದ ಅವರೇ ಬರೆದ ಈ ಲೇಖನವನ್ನು ಕೃತಜ್ಞತೆಗಳೊಂದಿಗೆ ಆಯ್ಕೆ ಮಾಡಲಾಗಿದೆ.



ಹರಿ ಹರ ಬ್ರಹ್ಮರು ಸೃಷ್ಟಿ–ಸ್ಥಿತಿ–ಲಯಗಳ ಅಧಿಕಾರಿಗಳು

ಪಾಪಪುಣ್ಯ ತತ್ತ್ವಗಳು ಪರಹಿತದೊಂದಿಗೆ ಸಂಬಂಧಪಟ್ಟುಕೊಂಡಿರುವ ತತ್ತ್ವಗಳು. 'ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ' ಎಂದು ಹೇಳಲಾಗಿದೆ. ಶಾಸ್ತ್ರಗಳು ಹಾಗೂ ಸಜ್ಜನರು ಮಾಡಬೇಕೆಂದು ಹೇಳಿರುವುದನ್ನು ಮಾಡುವುದೇ ಪುಣ್ಯದ ಕೆಲಸ. ಅದರಿಂದ ಪುಣ್ಯವು ಲಭಿಸುತ್ತದೆ. ಮಾಡಬಾರದು ಎಂದಿರುವುದನ್ನು ಮಾಡುವುದು ಪಾಪದ ಕಾರ್ಯ. ಅದರಿಂದ ಪಾಪವುಂಟಾಗುತ್ತದೆ. ಬಹುಜನರಿಗೆ ಹಿತವನ್ನು ಪಾಪದ ಕಾರ್ಯ. ಅದರಿಂದ ಪಾಪವುಂಟಾಗುತ್ತದೆ. ಬಹುಜನರಿಗೆ ಹಿತವನ್ನು ಉಂಟುಮಾಡುವ ಕೆಲಸ ಪುಣ್ಯದ ಕೆಲಸ. ಪರರಿಗೆ ತೊಂದರೆಯುಂಟುಮಾಡುವ ಕೆಲಸವೇ ಪಾಪ. ಇವುಗಳ ಫಲವನ್ನು ಅನುಭವಿಸಬೇಕಾಗುತ್ತದೆ. ಪಾಪಪುಣ್ಯಗಳ ಕಾರ್ಯಗಳು ಬಹಳ ಉತ್ಕಟವಾದಾಗ ಇಲ್ಲೇ ಈ ಜನ್ಮದಲ್ಲೇ ಅದರ ಫಲವನ್ನು ಅನುಭವಿಸಬೇಕಾಗುತ್ತದೆ ಎಂಬ ಶಾಸ್ತ್ರವಾಕ್ಯವೂ ಇದೆ. ಇಲ್ಲಿ ಅನುಭವಿಸದಿದ್ದರೆ ಮುಂದಿನ ಜನ್ಮದಲ್ಲಿ ಅನುಭವಿಸಬೇಕಾಗುತ್ತದೆ. ಒಟ್ಟಿನಲ್ಲಿ ಈ ತತ್ತ್ವಗಳು ಮನಸ್ಸಿನಲ್ಲಿ ನೆಲೆನಿಂತು ನಮ್ಮ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಈಗ ಈ ಪಾಪಪುಣ್ಯಗಳ ಕಲ್ಪನೆ ಬಹುಮಟ್ಟಿಗೆ ಹೋಗಿಬಿಟ್ಟಿರುವುದರಿಂದ ಜಗತ್ತಿನಲ್ಲಿ ಅಪರಾಧ ಪ್ರವೃತ್ತಿಯು ವಿಜೃಂಭಿಸುತ್ತಿದೆ. ಇತರ ಮತಧರ್ಮಗಳ ಬಗ್ಗೆ ಭಾರತೀಯರ ನಿಲುವು ಅಸಾಮಾನ್ಯವಾದದ್ದು. ಎಲ್ಲ ಮತಧರ್ಮಗಳೂ ವೃತ್ತದ ಪರಿಧಿಯ ಮೇಲಿನ ಬಿಂದುಗಳಂತೆ. ವೃತ್ತದ ಕೇಂದ್ರವೇ ಪರಮಾತ್ಮ ಸಾಕ್ಷಾತ್ಕಾರ. ಎಲ್ಲ ತ್ರಿಜ್ಯಗಳೂ ಕೊನೆಗೆ ಕೇಂದ್ರಬಿಂದುವನ್ನೇ ಸೇರುವಂತೆ ಎಲ್ಲ ಮತಧರ್ಮಗಳೂ ಒಬ್ಬನೇ ಪರಮಾತ್ಮನೆಡೆಗೆ ಕರೆದೊಯ್ಯುವ ವಿವಿಧ ಉಪಾಸನಾಮಾರ್ಗಗಳಾಗಬೇಕು. ಹಾಗಾಗಿ ಇವುಗಳಲ್ಲಿ ಮೇಲುಕೀಳೆಂಬ ಭಾವನೆ ಯಾರಿಗೂ ಸಲ್ಲದು ಎಂಬುದೇ ಹಿಂದೂ ಧರ್ಮದ ನಿಲುವು. ಆದ್ದರಿಂದ ಎಲ್ಲರೂ ಅವರವರ ಧರ್ಮವನ್ನು ಆಶ್ರಯಿಸಿ ಜೀವನದ ಗುರಿಯನ್ನು ತಲಪಬೇಕು. ಸ್ವಧರ್ಮವನ್ನು ಪಾಲಿಸಿ ಅದರಂತೆಯೇ ನಡೆಯಬೇಕು.

**ದೇವತೆಗಳು:** ಹಿಂದೂ ಧರ್ಮವು 'ಏಕೋ ದೇವಃ', ಅಂದರೆ, 'ದೇವರು ಒಬ್ಬನೇ' ಎಂಬುದನ್ನು ಒಪ್ಪುತ್ತದೆ. ಆದರೆ ಇದು ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಧರ್ಮ. ಅಂದರೆ ಅನೇಕ ದೇವತೆಗಳನ್ನು ಉಪಾಸನೆಯ ಮೂರ್ತಿಗಳಾಗಿ ಇದು ಒಪ್ಪುತ್ತದೆ. ಸೃಷ್ಟಿಯ ವಿವಿಧ ಮಟ್ಟಗಳಲ್ಲಿ ಅಸ್ತಿತ್ವವನ್ನು ಹೊಂದಿರುವ ಈ ದೇವತಾಮೂರ್ತಿಗಳಲ್ಲಿ ಅಂತರ್ಯಾಮಿಯಾಗಿರುವ ದೇವರು ಒಬ್ಬನೇ. ಇಂದ್ರ ಮೊದಲಾದ ದೇವತೆಗಳಿಗೆ ಸೃಷ್ಟಿಯ ಒಂದು ಹಂತದಲ್ಲಿ ಅಸ್ತಿತ್ವವಿದ್ದು, ಅವು ಪ್ರಕೃತಿಯ ವಿವಿಧ ಅಭಿವ್ಯಕ್ತಿಗಳ ಅಭಿಮಾನಿ ದೇವತೆಗಳು. ಮೇಲ್ಮಟ್ಟದ ವಿಕಾಸವನ್ನು ಹೊಂದಿರುವ ಈ ದೇವತೆಗಳ ಅಸ್ತಿತ್ವವೇ ವಿಭಿನ್ನ ಆಯಾಮವನ್ನು ಹೊಂದಿದ್ದು ಇವೂ ಕೂಡ ಕಾಲದ ನಿಯಂತ್ರಣದಲ್ಲೇ ಬರುತ್ತವೆ.

ಹರಿ, ಹರ, ಬ್ರಹ್ಮರು ಸೃಷ್ಟಿ–ಸ್ಥಿತಿ–ಲಯಗಳ ಅಧಿಕಾರಿಗಳು. ಒಬ್ಬೊಬ್ಬರೂ ಸ್ವತಂತ್ರರಾದ ದೇವರಲ್ಲ. ಸೃಷ್ಟಿ ಮುಂತಾದ ಕ್ರಿಯೆಗಳನ್ನು ಮಾಡುವ ಒಬ್ಬನೇ ಪರಮಾತ್ಮನ ಮೂರು ರೂಪಗಳೇ ಇವು. ಒಬ್ಬನೇ ವ್ಯಕ್ತಿ ಮನೆಯಲ್ಲಿ ಯಜಮಾನನಂತೆ, ಕಛೇರಿಯಲ್ಲಿ ಅಧಿಕಾರಿಯಾಗಿ, ರಸ್ತೆಯಲ್ಲಿ ಪ್ರಯಾಣಿಕನಾಗಿರುವಂತೆಯೇ ಇದು. ಈ ರೂಪಗಳೊಡನೆ ಇರುವ ಶಕ್ತಿಗಳನ್ನು ಸ್ತ್ರೀರೂಪದಲ್ಲಿ ಸರಸ್ವತಿ, ಲಕ್ಷ್ಮೀ, ಪಾರ್ವತಿ ಎಂಬ ರೂಪಗಳಲ್ಲಿ ಉಪಾಸನೆ ಮಾಡಲಾಗುತ್ತದೆ. ಈ ಎಲ್ಲರೂ ಪರಮಾತ್ಮನ ಸ್ವರೂಪಗಳೇ. ಇವರಲ್ಲಿ ಯಾರನ್ನು ಯಾವ ರೂಪದಲ್ಲಿ ಆರಾಧಿಸಿದರೂ ಅದು ವಸ್ತುತಃ ಪರಮಾತ್ಮನ ಆರಾಧನೆಯೇ ಆಗುತ್ತದೆ. ಋಷಿಗಳಿಗೆ ಯಾವ ಯಾವ ರೂಪದಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾಗಿರುತ್ತದೆಯೋ ಆಯಾಯಾ ರೂಪಗಳನ್ನು ಅವರು ನಮಗೆ ಕೊಟ್ಟಿರುವುದರಿಂದ ಆ ರೂಪಗಳ ದೇವತೆಗಳ ಧ್ಯಾನದ ಮೂಲಕ ನಮಗೆ ಲಭಿಸುವುದು ಪರಮಾತ್ಮನ ಸಾಕ್ಷಾತ್ಕಾರವೇ.

ಸನಾತನ ಪುರಾಣ ಸಾಹಿತ್ಯದಲ್ಲಿ, ಆಯಾಯಾ ದೇವತೆಗಳಿಗೆ ಸಂಬಂಧಪಟ್ಟ ಪುರಾಣಗಳಲ್ಲಿ ಅವುಗಳದೇ ವೈಭವೀಕರಣವಿದೆ. ಇವುಗಳಲ್ಲಿ ಕಂಡುಬರುವ ಅನೇಕ ಕಥೆಗಳು ಸಾಂಕೇತಿಕ ರೂಪದಲ್ಲಿ ಅನೇಕ ವೈಜ್ಞಾನಿಕ ಸತ್ಯಗಳನ್ನೂ ಬಾಹ್ಯಾಕಾಶದ ಘಟನೆಗಳನ್ನೂ ಹೇಳುತ್ತವೆ. ಧರ್ಮ–ಅಧರ್ಮಗಳ ಸಂಘರ್ಷವನ್ನು ಇವು ಚಿತ್ರಿಸುತ್ತವೆ. ಒಟ್ಟಿನಲ್ಲಿ ಅವು ಒಂದು ರೀತಿಯಲ್ಲಿ ಸಂಸ್ಕೃತಿಯ ಹಾಗೂ ಕಾಲದ ಚರಿತ್ರೆ. ವ್ಯಕ್ತಿಯ ಚರಿತ್ರೆ ಇಲ್ಲಿ ಮುಖ್ಯವಲ್ಲ. ವಿಶ್ವದ ರಹಸ್ಯಗಳನ್ನೂ, ನಿಗೂಢ ಘಟನೆಗಳನ್ನೂ ಅವು ಕಥೆಗಳ ರೂಪದಲ್ಲಿ ದಾಖಲಿಸುತ್ತವೆ.

**ಯೋಗ:** ನಮ್ಮ ಋಷಿಗಳು ಕಂಡುಕೊಂಡಿರುವ ಸಿದ್ಧಾಂತಗಳು ಕೇವಲ ತರ್ಕವನ್ನು ಆಧರಿಸಿ ಪ್ರತಿಪಾದಿತವಾದ ಸಿದ್ಧಾಂತಗಳಲ್ಲ. ಅವು ಯೋಗಮಾರ್ಗದಿಂದ ಸಮಾಧಿಸ್ಥಿತಿಯಲ್ಲಿ ಕಂಡುಕೊಂಡ ತತ್ತ್ವಗಳು. ಯೋಗವು ಭಾರತವು ಜಗತ್ತಿಗೆ ಕೊಟ್ಟ ಅಮೂಲ್ಯವಾದ ಸಾಧನಾಮಾರ್ಗ. ಈಗ ಈ ಮಾರ್ಗವು ಇಡೀ ಜಗತ್ತಿನಲ್ಲೇ ಪ್ರಸಿದ್ಧವೂ ಜನಪ್ರಿಯವೂ ಆಗಿದೆ. ಭಾರತದ ಯೋಗಿಗಳು ವಿದೇಶಗಳಲ್ಲಿ ಈ ಮಾರ್ಗವನ್ನು ಪ್ರಚಾರ ಮಾಡುತ್ತಿದ್ದು ಅನೇಕ ದೇಶಗಳ ವಿಶ್ವವಿದ್ಯಾನಿಲಯಗಳು ಈ ಶಾಸ್ತ್ರವನ್ನು ಪಠ್ಯವನ್ನಾಗಿ ಮಾಡಿವೆ. ಇದರಲ್ಲಿ ಶಾರೀರಿಕ ಹಾಗೂ ಮಾನಸಿಕವಾದ ಲೌಕಿಕ ಪ್ರಯೋಜನವೂ ಇರುವುದರಿಂದ ಇದು ವಿದೇಶದಲ್ಲಿ, ಆಧ್ಯಾತ್ಮಿಕ ಸಂಸ್ಕಾರವೇ ಇಲ್ಲದಿರುವ ಜನಗಳಲ್ಲಿ ಕೂಡ, ಪ್ರಸಿದ್ಧವಾಗಿದೆ. ಹಿಂದೆ

ಯೋಗಿಗಳು ಸಾಧನೆಯಿಂದ ಅಷ್ಟಸಿದ್ಧಿಗಳನ್ನು ಸಾಧಿಸಿಕೊಂಡು ಪ್ರಕೃತಿಯ ಮೇಲೆ ವಿಜಯ ಸಾಧಿಸಿದ್ದರು. ಅವರದು ಯೋಗಮಾರ್ಗದಿಂದ ಮೋಕ್ಷಸಾಧನೆಯೇ ಗುರಿಯಾಗಿತ್ತು. ಯೋಗ ಎಂಬ ಪದವೇ ಜೀವಾತ್ಮನು ಪರಮಾತ್ಮನೊಡನೆ ಸೇರುವುದನ್ನು ಹೇಳುವುದರಿಂದ ಯೋಗಕ್ಕೆ ಆಧ್ಯಾತ್ಮಿಕವಾಗಿ ಬಹಳ ಮಹತ್ತ್ವವಿದೆ. ಮನಸ್ಸಿನ ನಿಗೂಢ ಶಕ್ತಿಗಳನ್ನು ಅನಾವರಣಗೊಳಿಸುವ ಈ ಸಾಧನಾಮಾರ್ಗ ಭಾರತೀಯ ಋಷಿಗಳು ಜಗತ್ತಿಗೆ ಕೊಟ್ಟ ಅಮೂಲ್ಯ ಕೊಡುಗೆಯಾಗಿದೆ.

ಸನಾತನ ಧರ್ಮದ ಮುಖ್ಯವಾದ ವಿಚಾರಗಳನ್ನು ಕೊನೆಯಲ್ಲಿ ಈ ರೀತಿ ಸಂಕ್ಷೇಪಿಸಿ ಹೇಳಬಹುದು. ಸನಾತನ ಧರ್ಮದ ಯಾವ ದರ್ಶನವೇ ಆಗಲಿ, ಅದು ಜೀವ ಪರಮಾತ್ಮ ಹಾಗೂ ಜಡಗಳ ಬಗ್ಗೆ ಅಂದರೆ ಚೇತನ ಅಚೇತನಗಳ ಬಗ್ಗೆ ಚರ್ಚಿಸಿ ಒಂದು ಸಿದ್ಧಾಂತವನ್ನು ಮಂಡಿಸುತ್ತವೆ. ಪರಮಾತ್ಮನು ಸರ್ವಜ್ಞ, ಸರ್ವಶಕ್ತ ಹಾಗೂ ಸರ್ವವ್ಯಾಪಿ, ಪರಮಾತ್ಮ ಎಂಬುದು ಒಂದು ವಿಶ್ವಶಕ್ತಿ. ಅದೇ ಸತ್ಯ. ಅದೇ ನಿತ್ಯ. ಅವನೇ ದೇವರು. ಅವನು ಸಗುಣ, ನಿರ್ಗುಣ, ಸಾಕಾರ, ನಿರಾಕಾರ. ಅವನು ಏಕ ಹಾಗೂ ಅನೇಕ. ಅವನನ್ನು ಸಾಧಿಸಲು ಕರ್ಮ, ಭಕ್ತಿ ಹಾಗೂ ಜ್ಞಾನ ಯೋಗಗಳೆಂಬ ಮಾರ್ಗಗಳಿವೆ. ಆ ಮಾರ್ಗಗಳಿಂದ ಜ್ಞಾನವನ್ನು ಪಡೆದು, ಜನನ-ಮರಣಗಳಿಂದ ಬಿಡುಗಡೆ ಹೊಂದಿ ಆನಂದಸ್ವರೂಪದ ಮೋಕ್ಷವನ್ನು ಹೊಂದಬೇಕು. ಮನುಷ್ಯನು ಪಾಲಿಸುತ್ತಿರುವ ವಿವಿಧ ಪಂಥಗಳು, ನದಿಗಳೆಲ್ಲ ಸಮುದ್ರವನ್ನು ಸೇರುವಂತೆ ಒಬ್ಬ ದೇವರನ್ನೇ ಸೇರುತ್ತವೆ. ದೇವರ ಹಾಗೂ ಮೂರ್ತಿಯ ಸ್ವರೂಪಗಳಲ್ಲಿ ವ್ಯತ್ಯಾಸವಿದ್ದರೂ ಅಂತಿಮ ರೂಪ ಒಂದೇ. ಯಾವ ಯಾವ ಮಾರ್ಗದಿಂದ ದೇವರನ್ನು ಅರಸಿ ಸಾಧಕರು ಮುನ್ನಡೆದರೂ ಖಂಡಿತವಾಗಿ ದೇವರ ಸಾಕ್ಷಾತ್ಕಾರವಾಗುತ್ತದೆ. ದೇವರಿಲ್ಲ ಎನ್ನುವ ಚಿಂತನೆಗಳು ಕೂಡ ಸನಾತನ ಧರ್ಮದ ಒಳಗೇ ಅಂತರ್ಗತವಾಗಿರುವುದು ಒಂದು ವಿಶೇಷ. ಆದರೆ ಇವೆಲ್ಲ ಚಿಂತನೆಗಳು ಒಂದುಗೂಡಿ ಮಥಿತವಾಗಿ ಸನಾತನ ಧರ್ಮವು ವಿಶ್ವರೂಪದಂತಹ ಸ್ವರೂಪವನ್ನು ಪಡೆದುಕೊಂಡಿದೆ. ಲಕ್ಷಣಗಳೆಲ್ಲವನ್ನೂ ಮೀರಿದ ವಿಶಿಷ್ಟವಾದ ಲಕ್ಷಣಗಳುಳ್ಳದ್ದು ಸನಾತನ ಧರ್ಮ.

ಸನಾತನ ಧರ್ಮದ ಇನ್ನೂ ಕೆಲವು ವಿಶಿಷ್ಟವಾದ ಕಾಣ್ಕೆಗಳೆಂದರೆ, ಜೀವಿಯು ಕರ್ಮದ ಬಂಧನಕ್ಕೊಳಗಾಗುತ್ತಾನೆ. ಅವನು ಸತ್ಕರ್ಮಗಳ ಮೂಲಕ ಸಂಸಾರದಿಂದ ಪಾರಾಗುತ್ತಾನೆ. ಕರ್ಮಬಂಧನದಿಂದ ಅವನು ಜನನ-ಮರಣಗಳ ಚಕ್ರಕ್ಕೆ ಸಿಲುಕುತ್ತಾನೆ. ಅವನ ಸುಖ-ದುಃಖಾನುಭವಗಳಿಗೆಲ್ಲ ಕರ್ಮವೇ ಕಾರಣ ಎಂಬುವು ಕೆಲವು.

ನಾವು ಮರೆಯಲಾಗದ ಒಂದು ವಿಚಾರವೆಂದರೆ ಸನಾತನ ಧರ್ಮಕ್ಕೆ ಅಧ್ಯಾತ್ಮವೇ ಅಡಿಪಾಯ ಎಂಬುದು. ಈ ಸ್ವರೂಪವೇ ಈ ಧರ್ಮದ ಅಂತರ್ನಿರ್ವಹಿತ ಚಿರಂಜೀವಿ ಶಕ್ತಿ. ಇದು ಜ್ಞಾನದ ಮಾರ್ಗವಾದ್ದರಿಂದ ಸತ್ಯಾನ್ವೇಷಣೆಯು ಇದರ ಸ್ವಭಾವ. 'ಸರ್ವೇ ಜನಾಃ ಸುಖಿನೋ ಭವಂತು' ಎಲ್ಲ ಜನಗಳೂ ಸುಖವಾಗಿರಲಿ ಎಂದು ಎಲ್ಲರನ್ನೂ ಒಳಗೊಳ್ಳುವ ಈ ಧರ್ಮ ಅನನ್ಯವಾದದ್ದು.

ಸನಾತನ ಧರ್ಮದ ಸಾಧನಾಮಾರ್ಗಗಳು ಒಂದು ವಿಸ್ತೃತ ಪ್ರಪಂಚ. ಸನಾತನ ಧರ್ಮದಲ್ಲಿ ಅವತಾರ ಎಂಬುದು ಒಂದು ಪ್ರಧಾನವಾದ ತತ್ತ್ವ. ಜಗತ್ತಿನಲ್ಲ ಅನ್ಯಾಯ, ಅಧರ್ಮಗಳು ಹೆಚ್ಚಾಗಿ, ಅಲ್ಲೋಲ ಕಲ್ಲೋಲವಾಗಿ ವಿಶ್ವನಿಯಮಗಳ ಪಲ್ಲಟವಾದಾಗ ಪರಮಾತ್ಮ ಶಕ್ತಿಯು ಅವತರಿಸಿ, ಅಧರ್ಮವನ್ನು ಅಳಿಸಿ ಧರ್ಮವನ್ನು ಉಳಿಸುತ್ತದೆ. ಅವತಾರದ ಗುರಿಯು ಸಾಧಿತವಾದಾಗ ಅವತಾರದ ಸಮಾಪ್ತಿಯಾಗುತ್ತದೆ.



ಸರಸ್ವತಿ, ಲಕ್ಷ್ಮೀ, ಪಾರ್ವತಿ ಈ ಎಲ್ಲರೂ ಪರಮಾತ್ಮನ ಸ್ವರೂಪಗಳೇ.

ಸನಾತನ ಧರ್ಮದಲ್ಲಿ ಅಧ್ಯಾತ್ಮದ ಪ್ರಾಮುಖ್ಯದಿಂದ ಇಹಜೀವನದ ಪ್ರಾಮುಖ್ಯವೇನೂ ಕಡಮೆಯಾಗುವುದಿಲ್ಲ. ಜೀವನವನ್ನು ತುಂಬು ಉತ್ಸಾಹದಿಂದ ನಿರ್ವಹಿಸಬೇಕು ಎಂಬುದು ಅರ್ಥಕಾಮಗಳನ್ನು ಐಹಿಕ ಜೀವನದ ಹಂತಗಳಲ್ಲಿ ಸೇರಿಸಿರುವುದರಿಂದ ತಿಳಿಯುತ್ತದೆ. ಧರ್ಮಸಮ್ಮತವಾಗಿ ಜೀವನವನ್ನು ನಡೆಸಿ ಮನುಷ್ಯನು ತನ್ನ ಕರ್ತವ್ಯವನ್ನು ಮಾಡಬೇಕು. ಅನುಕಂಪ, ಸಹಾಯಪರತೆ ಮುಂತಾದ ಮಾನವೀಯ ಗುಣಗಳಿಂದ ಸಮಾಜ ಜೀವನವು ಸಹ್ಯವಾಗುವಂತೆ

ಮಾಡಬೇಕು. 'ತಸ್ಮಾತ್ ಯುದ್ಧ್ಯಸ್ವ' ಎಂದು ಶ್ರೀಕೃಷ್ಣನು ಹೇಳಿದಂತೆ ಜೀವನವನ್ನು ಧೈರ್ಯದಿಂದ ಎದುರಿಸಿ ಬಾಳಬೇಕು. ಮಾನವರೆಲ್ಲರೂ ಅಮೃತಾತ್ಮರೇ. ಅವರು ಪುರುಷಾರ್ಥಗಳನ್ನು

ಸಾಧಿಸಿ ಅಸತ್ಯದಿಂದ ಸತ್ಯಕ್ಕೆ, ತಮಸ್ಸಿನಿಂದ ಜ್ಯೋತಿಗೆ, ಮೃತ್ಯುವಿನಿಂದ ಅಮೃತತ್ತ್ವಕ್ಕೆ ಏರಬೇಕು.

ಸನಾತನ ಧರ್ಮದ ತತ್ತ್ವ ಸಿದ್ಧಾಂತಗಳು ದೇಶಕಾಲಗಳನ್ನೂ ಮೀರಿದ ಶಕ್ತಿಯನ್ನು ಹೊಂದಿದ್ದರೂ ಅದರ ಆಚರಣೆಗಳಲ್ಲಿ ಅನೇಕ ದೋಷಗಳು ಕಾರಣಾಂತರಗಳಿಂದ ಸೇರಿಕೊಂಡು ಅವನ್ನು ಆಕ್ಷೇಪಕ್ಕೆ ಗುರಿಮಾಡಿವೆ ಎಂಬುದನ್ನೂ ನಾವು ಮರೆಯಬಾರದು. ಇಂತಹ ಒಂದು ದೋಷವೆಂದರೆ ಇದರಲ್ಲಿರುವ ಜಾತಿ ವ್ಯವಸ್ಥೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ', ಚಾತುರ್ವರ್ಣ್ಯದ ವ್ಯವಸ್ಥೆಯನ್ನು ನಾನೇ ಸೃಷ್ಟಿಸಿದೆ ಎಂದು ಹೇಳಿರುವಂತೆ ಈ ವ್ಯವಸ್ಥೆಯ ವರ್ಣದ (ವರಣದ) ಮೇಲೆ ಅಂದರೆ ತಾವು ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಆರಿಸಿಕೊಂಡ ವೃತ್ತಿಯ ಮೇಲೆ ಅವಲಂಬಿತವಾಗಿದ್ದರೂ



ಅದು ಕ್ರಮೇಣ ಜನ್ಮದಿಂದಲೇ ಬರುವ ಜಾತಿಗಳ ವಿಭಾಗಗಳಾಗಿ ಮಾರ್ಪಟ್ಟು ಸಮಾಜವು ಶ್ರೇಣೀಕೃತವಾಯಿತು. ಮೊದಮೊದಲು ವರ್ಣಗಳಿದ್ದರೂ ಪರಸ್ಪರ ದ್ವೇಷವಿಲ್ಲದಿದ್ದ ಕಾಲವು ಹೋಗಿ, ಮೇಲುಕೀಳೆಂಬ ಭಾವನೆಯು ಬೇರೂರಿ, ಇತಿಹಾಸದಲ್ಲಿ ಶತ್ರುಗಳ ಭೇದತಂತ್ರದಿಂದ ಇದು ದ್ವೇಷವಾಗಿ ಪರಿಣಮಿಸುವಂತಾಗಿ ಸಮಾಜವು ಒಡೆದುಹೋಯಿತು. ಅಸ್ಪೃಶ್ಯತೆ ಮುಂತಾದ ಅಮಾನವೀಯ ಪದ್ಧತಿಗಳು ಈ ಬಿರುಕನ್ನು ಇನ್ನೂ ಹೆಚ್ಚು ಮಾಡಿದವು. ಅಸ್ಪೃಶ್ಯತೆಯು ಸಂವಿಧಾನದಿಂದ ಹಾಗೂ ಜನಜಾಗೃತಿಯಿಂದ ಅಪರಾಧವೆಂದು ಪರಿಗಣಿತವಾಗಿ ಎಷ್ಟೋ ಮಟ್ಟಿಗೆ ಸುಧಾರಣೆಗೊಂಡಿದ್ದರೂ, ಗ್ರಾಮಗಳ ಮಟ್ಟದಲ್ಲಿ ಇನ್ನೂ ಉಳಿದುಕೊಂಡಿರುವುದು ಶೋಚನೀಯ. ದಲಿತ ವರ್ಗಗಳಿಗೆ ದೇವಾಲಯಗಳೊಳಗೆ ಇನ್ನೂ ಹಲವಾರು ಕಡೆ ಪ್ರವೇಶ ಕೊಡದಿರುವುದು ಈ ತ್ಯಾಜ್ಯವಾದ ಪರಂಪರೆಯ ಒಂದು ಕರಾಳ ಮುಖ. ಎಲ್ಲರೂ ಪರಮಾತ್ಮನದೇ ಸೃಷ್ಟಿ ಎಂದು ಪ್ರತಿಪಾದಿಸುತ್ತ ಹಿಂದೂ ಸಮಾಜದ ಒಂದು ವರ್ಗವನ್ನು ಪರಮಾತ್ಮನ ಸನ್ನಿಧಿಗೆ ಬರದಂತೆ ನಿಷೇಧಿಸಿರುವುದು ಒಂದು ಮಹಾಪಾಪ.

**(ಮುಂದುವರಿಯುವುದು)**

**ನಂ. ೫೭೩, ೩ನೇ ಮಹಡಿ, ೨೦ನೇ ಮುಖ್ಯರಸ್ತೆ, ೮ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–೫೬೦೦೯೫.**

**42ನೇ ಪುಟದಿಂದ**

ಅದು. ಅದು ನಿಜವೂ ಅಲ್ಲ, ನಿಜವಲ್ಲದ್ದೂ ಅಲ್ಲ; ಅದು ಮೂರನೆಯದೊಂದಾಗಿ ಕಾಣುತ್ತದೆ. ಅದು ಅಲ್ಲಿಲ್ಲ ಎಂದು ನಾವೆಂದರೆ, ಅದು ಕಾಣಿಸಿಕೊಳ್ಳುತ್ತದೆ. ನಾವೇನು ಮಾಡೋಣ? ಅದು ಅಲ್ಲಿದೆ ಎಂದರೆ ಅಗೋಚರವಾಗಿಬಿಡುತ್ತದೆ.

ಅದು ಪರಮಾತ್ಮನಿಗಿಂತ ಭಿನ್ನವಾದುದು ಎನ್ನೋಣವೇ ಅಂದರೆ, ಹಾಗೆ ಹೇಳಲಾರೆವು; ಏಕೆಂದರೆ ಪರಮಾತ್ಮನ ಹೊರತು ಏನೂ ಇಲ್ಲ. ಪರಮಾತ್ಮನು ಮಾಯೆ ಎನ್ನುವುದು ಸರಿಯಲ್ಲ. ಏಕೆಂದರೆ ಜ್ಞಾನೋದಯವಾಗುತ್ತಿದ್ದಂತೆಯೇ ಮಾಯೆ ಕಣ್ಮರೆಯಾಗುತ್ತದೆ. ಬೌದ್ಧರು ಹೇಳುವ ಶೂನ್ಯವೂ ಅದಲ್ಲ. ಅಥವಾ ಅದು ಪಾರಮಾರ್ಥಿಕ ಸತ್ಯವೂ ಅಲ್ಲ. ಆದ್ದರಿಂದಲೇ ಅದನ್ನು ಅನಿರ್ವಚನೀಯ, ಅಂದರೆ ವಿವರಣಾತೀತವಾದದ್ದು ಎಂದಿರುವುದು.

ಹೊಸೆದ ಹುಲ್ಲಿನ ಹಗ್ಗವು ಗೋಚರಿಸಿದ ತತ್‌ಕ್ಷಣವೇ ಹಾವು ಕಣ್ಮರೆಯಾಗುತ್ತದೆ. ಹೊಸೆದ ಹುಲ್ಲಿನ ಹಗ್ಗವು 'ಅಧಿಷ್ಠಾನ'ವಾಗಿದೆ. ಹಾವು 'ಆರೋಪ್ಯ'ವಾಗಿದೆ. ಅಧಿಷ್ಠಾನವು ಸ್ಪಷ್ಟವಾಗಿ ಕಾಣಿಸಿಕೊಂಡ ತತ್‌ಕ್ಷಣ ಆರೋಪ್ಯವು ಅಗೋಚರವಾಗುತ್ತದೆ. ಏನನ್ನೋ ಆಧರಿಸಿಕೊಂಡು ಗೋಚರಿಸಿದ ದೃಶ್ಯವು, ಆ ದೃಶ್ಯದ ಮೂಲ ಆಧಾರವನ್ನು ನಾವು ಕಂಡ ತತ್‌ಕ್ಷಣ ಕಣ್ಮರೆಯಾಗುತ್ತದೆ. ಹೀಗೆ ಕಂಡ ದೃಶ್ಯವು ಪ್ರಾತಿಭಾಸಿಕ ಸತ್ಯ. 'ನಾವು' ಎಂಬುದು ಯಾವಾಗ ಪೂರ್ಣವಾಗಿ ಅಗೋಚರಗೊಳ್ಳುತ್ತದೆ? ಯಾವಾಗ ಸಂಪೂರ್ಣವಾಗಿ ನಾಶಹೊಂದುತ್ತದೆ? ನಮ್ಮ ತೋರ್ಕೆಯು ಯಾವುದನ್ನು ಆಧರಿಸಿದೆಯೋ ಆ ಆಧಾರವನ್ನು ಕಂಡಾಗ 'ನಾವು' ಎಂಬುದು ನಾಶವಾಗುತ್ತದೆ. ಸೂರ್ಯ ಚಂದ್ರರು, ಪ್ರಪಂಚ, ಪಂಚಭೂತಗಳು–ಇವೆಲ್ಲವನ್ನೂ ಕಾಣುವುದರ ಆಧಾರವನ್ನು ಅರಿತಕೂಡಲೆ ಅದು ಪರಮಸತ್ಯ ಎಂಬುದನ್ನು ಮನಗಾಣುತ್ತೇವೆ, ಇವೆಲ್ಲ ನಾಶವಾಗುತ್ತವೆ. ಆಮೇಲೆ ಜಗತ್ತೆಂಬುದು ಒಂದು ಮಾಯೆ. ನಾವೂ ಒಂದು ಮಾಯೆಯೇ, ಆಚಾರ್ಯರು ಹೇಳುವುದು ಹೀಗೆ.

ವ್ಯವಹಾರದಶೆಯಲ್ಲಿ ಜಗತ್ತು ವಾಸ್ತವವಾದುದು. ಆದರೆ ಅದು ಜ್ಞಾನದಶೆಯಲ್ಲಿ ಬದಲಾಗುತ್ತದೆ ಎನ್ನುತ್ತಾರೆ ಆಚಾರ್ಯರು. ಇದನ್ನು ಕೆಲವರು ಅರ್ಥಮಾಡಿಕೊಂಡಿಲ್ಲ; ಆದ್ದರಿಂದ, "ಈ ಜಗತ್ತನ್ನು ಕಣ್ಣಾರೆ ಕಾಣುತ್ತಿದ್ದೇವೆ, ಕಾರ್ಯಕಾರಣ ನಿಯಮಕ್ಕೆ ಎಲ್ಲ ಚಟುವಟಿಕೆಗಳೂ ಒಳಪಟ್ಟಿವೆ. ಅಂಥ ಜಗತ್ತನ್ನು ಮಾಯೆ ಎಂದು ಅವರು ಹೇಗೆತಾನೆ ಕರೆದಾರು?" ಎಂದು ಆಕ್ಷೇಪಣೆ ಎತ್ತುತ್ತಾರೆ. ಆಚಾರ್ಯರು ಜಗತ್ತಿಗೆ ವ್ಯವಹಾರ ಸತ್ಯದ ಸ್ಥಾನ ಕೊಟ್ಟಿದ್ದಾರೆ; ಪೂರ್ಣವಾಗಿ ಅಸತ್ಯವೆಂದು ಅದನ್ನು ತಳ್ಳಿಹಾಕಿಲ್ಲ, ಅಥವಾ ಪೂರ್ಣಸತ್ಯವೆಂದೂ ಸ್ವೀಕರಿಸಿಲ್ಲ; ಅದನ್ನು ಮಿಥ್ಯೆ ಅಥವಾ ಭ್ರಾಂತಿ ಎಂದು ಹೆಸರಿಸಿದ್ದಾರೆ. ಇದನ್ನು ಜನರು ಅರ್ಥಮಾಡಿಕೊಂಡರೆ, ಆಗ ತಿಕ್ಕಾಟವೇ ಇರುವುದಿಲ್ಲ.

●

9ನೇ ಪುಟದಿಂದ

ದೇವೇಭ್ಯಃ....ಸ್ವಾಹಾ), ಅನಂತರ ಪಿತೃಗಳಿಗೆ ('ಸ್ವಧಾ ಪಿತೃಭ್ಯಃ....') ನಮಸ್ಕರಿಸಬೇಕು. ಗುರುಮುಖೇನ ಲಭಿಸಿರುವ ಈ ವೇದವಿದ್ಯೆಯನ್ನು ಮರೆಯದೆ ಮನಸ್ಸಿನಲ್ಲಿ ಧಾರಣೆ ಮಾಡಿಕೊಳ್ಳಲು ಜಪಿಸಬೇಕಾದ 'ಧಾರಣಾಸಿದ್ಧಿ ಮಂತ್ರ'ಗಳು ಮುಂದೆ ಬರುತ್ತವೆ. ಹೀಗೆ ಸಿದ್ಧನಾಗಿರುವ, ಶುದ್ಧಾಂತಃಕರಣನಾದ ಮುಮುಕ್ಷುವಿಗೆ ಕ್ರಮವಾಗಿ **ತತ್ತ್ವೋಪದೇಶವನ್ನು** ಮಾಡಲು ಮಂತ್ರಗಳು ಬರುತ್ತವೆ–'ಈ ಚರಾಚರ ಜಗತ್ತೆಲ್ಲ–ಸಮುದ್ರ, ಪರ್ವತ, ನದಿ, ಸಸ್ಯಗಳು–ರಸರೂಪಿಯಾದ ಆ ಪರಮಾತ್ಮನಿಂದಲೇ ಹುಟ್ಟಿವೆ. ಅವನೇ ಎಲ್ಲರಲ್ಲೂ 'ನಾನು' ಎಂಬ ತಿಳಿವಳಿಕೆಗೆ ಆಧಾರವಾಗಿರುವವನು, ಜೀವಾತ್ಮನಿಗೆ ಆಶ್ರಯವಾಗಿರುವವನು, ಮೋಕ್ಷಸಾಧನವಾದ ಓಂಕಾರ ಸ್ವರೂಪನೂ–'ಅತಃ ಸಮುದ್ರಾ ಗಿರಯಶ್ಚ, ಸರ್ವೇಸ್ಮಾತ್ ಸ್ಯಂದಂತೇ ಸಿಂಧವಃ ಸರ್ವರೂಪಾಃ.....' ಅವನೇ ಎಲ್ಲ ಪದಗಳ ಒಳಹೊಕ್ಕು ಅರ್ಥ ತಾತ್ಪರ್ಯ ರೂಪದಿಂದ ಅವುಗಳನ್ನು ವ್ಯಾಪಿಸಿಕೊಂಡು, ವ್ಯಾಸ–ವಾಲ್ಮೀಕಿ ಮುಂತಾದ ಕವಿಗಳಿಂದ ಹೊರಬಂದಿರುವ ಸಾಹಿತ್ಯರೂಪನಾಗಿ ಲೋಕಾನುಗ್ರಹವನ್ನು ಮಾಡುತ್ತಿದ್ದಾನೆ–'ಪದವೀಃ ಕವೀನಾಂ ಋಷಿರ್ವಿಪ್ರಾಣಾಂ....' ಎಂಥ ಉದಾತ್ತ ಭಾವ–ಉತ್ತುಂಗವಾದ ವರ್ಣನೆ! "ತತ್ತ್ವೋಪದೇಶ"ದ ಕೊನೆಯಲ್ಲಿ, ನಮ್ಮ ಪೂಜಾದಿಗಳಲ್ಲಿ ಪ್ರಚಲಿತವಾಗಿರುವ, ವೈದಿಕರು "ಮಂತ್ರಪುಷ್ಪ"ದ ಕಾಲದಲ್ಲಿ ವಾಚಿಸುವ, ಗಹನವಾದ ಅಂತರಾರ್ಥವುಳ್ಳ ನಾಲ್ಕು ಸುಪ್ರಸಿದ್ಧ ಮಂತ್ರಗಳು ಬರುತ್ತವೆ–'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ತ್ವಮಾನಶುಃ....' । 'ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ....' । 'ದಹ್ರಂ ವಿಪಾಪಂ ಪರಮೇಶ್ಮಭೂತಂ....' । 'ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ....'. ಹೇಗೆ ವಿಷಯ ಭೋಗಗಳ "ತ್ಯಾಗ" ಮತ್ತು "ಯೋಗ"ದಿಂದೊಡಗೂಡಿ (ಯೋಗ–ದೇಹಾಭಿಮಾನದಂಥ ತಪ್ಪು ತಿಳಿವಳಿಕೆ, ಸಂಶಯ, ನಿದ್ರೆ, ವಿಸ್ಮೃತಿಯಂಥ ಚಿತ್ತ ವೃತ್ತಿಗಳನ್ನು ತಡೆಗಟ್ಟುವುದು), ಇಂದ್ರಿಯ ನಿಗ್ರಹ ಸಂಪನ್ನರಾದ "ಸಂನ್ಯಾಸಿ/ಯತಿಗಳಿಗೆ (ಪ್ರಯತ್ನಶೀಲರಾದವರು ಯತಿಗಳು), ವೇದಾಂತ ವಿಚಾರಗಳಿಂದ, "ಮಹಾವಾಕ್ಯ"ಗಳ ಮನನದಿಂದ ಜ್ಞಾನವು ತತ್ತ್ವವನ್ನು ಪ್ರಕಾಶಗೊಳಿಸುತ್ತದೆ ಎಂದು ಇಲ್ಲಿ ನಿರೂಪಿಸಲಾಗಿದೆ.



ಇವರಿಗೆ ಸಂಸಾರನಿವರ್ತಕವಾದ, ಜೀವ–ಬ್ರಹ್ಮರ ಏಕತ್ವದ ಜ್ಞಾನ ಅನುಭವ ಗಮ್ಯವಾಗುತ್ತದೆ–**ಇಂಥ ಪರಮಾನುಭವವೇ ಮೋಕ್ಷ ಪ್ರಾಪ್ತಿ.**

ಇಂಥ ಪರಮ ತಾತ್ಪರ್ಯದ ಸಮನ್ವಯದೊಂದಿಗೆ ಈ ಉಪನಿಷತ್ತಿನ ಸುಮಾರು ಅರ್ಧಭಾಗ ಮುಗಿಯುತ್ತದೆ. ಮುಂದಿನ ಭಾಗದಲ್ಲಿ **ನಾರಾಯಣ ಸೂಕ್ತ, ಶಿವೋಪಾಸನ** ಮಂತ್ರಗಳು, ಆದಿತ್ಯ ಪೃಥ್ವಿ–ಅಗ್ನಿ–ಜಲದೇವತಾ ಪ್ರಾರ್ಥನೆಗಳು, **ತ್ರಿಸುಪರ್ಣ, ಪರತತ್ತ್ವ ನಿರೂಪಣ,** ಆತ್ಮಯಜ್ಞ ಬರುತ್ತವೆ.

**೭೨/೨, ರತ್ನವಿಲಾಸ ರಸ್ತೆ, ಬಸವನಗುಡಿ,**
**ಬೆಂಗಳೂರು–೫೬೦ ೦೦೪.**

5ನೇ ಪುಟದಿಂದ

ಸಂನ್ಯಾಸ ಸ್ವೀಕರಿಸಿ ಮೋಕ್ಷ ಪ್ರಾಪ್ತಿಗಾಗಿ ಆ ದಾರಿಯನ್ನು ಆಯ್ದುಕೊಳ್ಳುತ್ತಾರೆ. ಆಗ ಸಂಪತ್ತನ್ನೂ ಇಬ್ಬರು ಪತ್ನಿಯರಿಗೂ ಹಂಚಲು ಉದ್ಯುಕ್ತರಾಗುತ್ತಾರೆ. ಕಾತ್ಯಾಯಿನಿ ಪಾಲಿಗೆ ಬಂದಿದ್ದ ಪಂಚಾಮೃತ ಎಂದು ತೃಪ್ತಿಗೊಳ್ಳುತ್ತಾಳೆ. ಆದರೆ ಮೈತ್ರೇಯಿಗೆ ಅದು ಬೇಡ. ಅವಳಿಗೆ ಅಮರತ್ತ್ವ ಅಥವಾ ಅಮೃತತ್ತ್ವ ಪಡೆಯುವ ಬಯಕೆ.

ಮೈತ್ರೇಯಿ ತನಗೆ ಅಮೃತತ್ತ್ವ ಕೊಡಿಸಿರೆನ್ನುತ್ತಾಳೆ. ಅಮೃತತ್ತ್ವ ಎಂಬುದು ಐಹಿಕ ಸಂಪತ್ತುಗಳಿಂದಾಗಲೀ ಅಗ್ನಿಹೋತ್ರಾದಿ ಕರ್ಮಾಚರಣೆಗಳಿಂದಾಗಲೀ ದೊರೆಯುವಂತಹುದಲ್ಲ. ಅದಕ್ಕೆ ದಾರಿ ಆತ್ಮಜ್ಞಾನ ಸಾಧನೆ ಎನ್ನುತ್ತಾರೆ ಯಾಜ್ಞವಲ್ಕ್ಯರು. ತನಗೆ ಆತ್ಮಜ್ಞಾನ ಪ್ರಾಪ್ತಿಯ ದಾರಿಯನ್ನು ತೋರಿಸಿ ಎಂದಾಗ ಯಾಜ್ಞವಲ್ಕ್ಯರು ನೀಡುವ ಉತ್ತರ ಸಾರ್ವಕಾಲಿಕವಾದುದು, ಸಾರ್ವದೇಶಿಕವಾದುದು.

'ಆತ್ಮಜ್ಞಾನ ಪ್ರಾಪ್ತಿಗೆ ವೈರಾಗ್ಯ ಮುಖ್ಯ. ಆಪ್ತ ವಸ್ತುಗಳಲ್ಲಿ ವಿರಕ್ತಿ ಹೊಂದುವುದರಿಂದ ವೈರಾಗ್ಯ ಉಂಟಾಗುವುದು. ಒಬ್ಬ ಮನುಷ್ಯನಿಗೆ ಸ್ವಂತಕ್ಕೆ ಪ್ರಯೋಜನವಾಗುವ ವಸ್ತುಗಳು ಪ್ರಿಯವಾಗುತ್ತವೆ. ಕಾರಣವಿಲ್ಲದ ಪ್ರೀತಿ ಎಂಬುದಿಲ್ಲವೇ ಇಲ್ಲ. ಇಲ್ಲಿ ವ್ಯಕ್ತಿಗೆ ತನ್ನ ಲಾಭದ ದೃಷ್ಟಿ ಮುಖ್ಯವಾಗುತ್ತದೆಯೇ ಹೊರತು ತಾನು ಪ್ರೀತಿಸುತ್ತಿದ್ದೇನೆಂದು ಹೇಳುವ ವಸ್ತು ಗೌಣವಾಗುತ್ತದೆ. ಗಂಡನಿಂದ ಹೆಂಡತಿಗೆ ಹಾಗೂ ಹೆಂಡತಿಯಿಂದ ಗಂಡನಿಗೆ ಪ್ರಯೋಜನವಿರುವುದೇ ಅವರ ನಡುವಿನ ಪ್ರೀತಿಗೆ ಕಾರಣ. ಲೌಕಿಕ ಜಗತ್ತಿನಲ್ಲಿ ಪರಸ್ಪರ ಪ್ರಯೋಜನಕ್ಕಾಗಿ ಸಂಬಂಧಗಳು ಇರುತ್ತವೆಯೇ ಹೊರತು ವಿನಾಕಾರಣ ಅಲ್ಲ. ಜಗತ್ತಿನ ಸೃಷ್ಟಿ ಎಲ್ಲವೂ ಆತ್ಮ. ಆತ್ಮ ಎಂದರೆ ಬ್ರಹ್ಮ. ಆತ್ಮಜ್ಞಾನವೆಂದರೆ ಬ್ರಹ್ಮಜ್ಞಾನ. ಆತ್ಮವಿದ್ಯೆ ಎಂದರೆ ಬ್ರಹ್ಮವಿದ್ಯೆ. ಆತ್ಮವನ್ನು ನೋಡಬೇಕು. ಶ್ರವಣ, ಮನನ ಮಾಡಬೇಕು. ನಿಧಿ ಧ್ಯಾಸನ ಮಾಡಬೇಕು. ಇವುಗಳೆಲ್ಲ ಏಕೀಭವಿಸಿದಾಗ ಬ್ರಹ್ಮೈಕ ತತ್ತ್ವವಾದ ಸಮ್ಯಕ್ ದರ್ಶನ ಪ್ರಾಪ್ತವಾಗುತ್ತದೆ.'

ಹೀಗೆ ಶುದ್ಧ ಕನ್ನಡದಲ್ಲಿ ಅಧ್ಯಾತ್ಮದ ಅತ್ಯುನ್ನತ ಅನುಭವವಾದ ಆತ್ಮಜ್ಞಾನವನ್ನು ಮನಮುಟ್ಟುವಂತೆ ವಿವರಿಸುವ ಅನುಭಾವಿ ನಿಜಗುಣರು ಇಡೀ ಭರತ ವರ್ಷದಲ್ಲೇ ಅತ್ಯಂತ ಶ್ರೇಷ್ಠ ಅನುಭಾವಿಗಳ ಸಾಲಿನಲ್ಲಿ ನಿಲ್ಲತಕ್ಕಂತಹವರು. ●



ಕಾರ್ಯಕ್ರಮ ಉದ್ಘಾಟನೆ

# ಚಿತ್ತಶುದ್ಧಿಯಿಂದ ಇಂದ್ರಿಯ ನಿಗ್ರಹ

"ಅಶಕ್ತವಾದ ಮನಸ್ಸಿನಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಸಾಧನೆಗೆ ಇಂದ್ರಿಯ ನಿಗ್ರಹ ಬಹಳ ಮುಖ್ಯ. ಚಿತ್ತಶುದ್ಧಿಯಿಂದ ಮಾತ್ರ ಇಂದ್ರಿಯ ನಿಗ್ರಹವಾಗುತ್ತದೆ. ಚಿತ್ತಶುದ್ಧಿಯಿಂದ ಬದುಕು ಸಾರ್ಥಕವಾಗುತ್ತದೆ" ಎಂದು ಹುಬ್ಬಳ್ಳಿ ಮೂರು ಸಾವಿರ ಮಠದ ಪೀಠಾಧಿಪತಿಗಳಾದ ಶ್ರೀ ಗುರುಸಿದ್ಧರಾಜ ಯೋಗೀಂದ್ರ ಸ್ವಾಮಿಗಳು ಅಭಿಪ್ರಾಯಪಟ್ಟರು.

ಕೈವಾರದ ಶ್ರೀಯೋಗಿನಾರೇಯಣ ಮಠದ ವತಿಯಿಂದ ಬೆಂಗಳೂರಿನ ಜೆ.ಪಿ.ನಗರದಲ್ಲಿರುವ ಆರ್.ವಿ. ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಧರ್ಮ ಚಿಂತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ಭಾರತದ ಸನಾತನ ಪರಂಪರೆಯನ್ನು ಗುರುಶಿಷ್ಯ ಪರಂಪರೆಯೆಂದು ಕರೆಯುತ್ತೇವೆ. ಗುರು ಶಿಷ್ಯನಿಗೆ ತಾಯಿಯಾಗಿ, ತಂದೆಯಾಗಿ ಹಾಗೂ ಗುರುವಾಗಿಯೂ ಇರುತ್ತಿದ್ದರು. ಆಗ ಮಾತ್ರ ಶ್ರೇಷ್ಠವಾದ ಶಿಷ್ಯ ಸಂಕುಲ ಹೊರಬರುತ್ತಿತ್ತು. ಆದರೆ ಇಂದು ಗುರುಗಳು ಗುರುಗಳೇ, ಶಿಷ್ಯರು ಶಿಷ್ಯರೇ. ಅಧ್ಯಯನದ ಸಮಯದಲ್ಲಿ ಗುರುಗಳ ಸಾನ್ನಿಧ್ಯ ಮತ್ತು ಸಾಮೀಪ್ಯ ಬಹಳ ಮುಖ್ಯವಾದುದು. ಆಗ ಮಾತ್ರ ಶಿಷ್ಯ ಪರಿಪೂರ್ಣನಾಗುತ್ತಾನೆ. ಇದಿಲ್ಲದಿದ್ದರೆ ಶಿಷ್ಯ ಗುರುತ್ವಕ್ಕೆ ಏರಲಾರ" ಎಂದರು.

"ಇಂದಿನ ಯುವಜನತೆ ಎಚ್ಚೆತ್ತುಕೊಳ್ಳಬೇಕು. ನಿತ್ಯ ಬದುಕಿನ ಆಲೋಚನೆಗಳಲ್ಲಿ ಶುದ್ಧಿಯನ್ನು ಹೊಂದಬೇಕು. ಕಲ್ಪನಾ ಲೋಕದಲ್ಲಿ ಸಂಚರಿಸಬೇಡಿ. ವಾಸ್ತವತೆಯನ್ನು ಅರ್ಥಮಾಡಿಕೊಳ್ಳಿ. ಮೊಬೈಲ್ ಎಂಬ ಮಾಯಾಪೆಟ್ಟಿಗೆಯಲ್ಲಿ ಬಂಧಿತರಾಗಬೇಡಿ. ವಿಶಾಲವಾದ ಚಿಂತನೆಗಳನ್ನು ಬೆಳೆಸಿಕೊಳ್ಳಿ, ಸಮಾಜಮುಖಿ ಕಾರ್ಯದಲ್ಲಿ ಮಗ್ನರಾಗಿ. ಬದುಕಿನಲ್ಲಿ ದೊಡ್ಡ ಕನಸನ್ನು ಇಟ್ಟುಕೊಳ್ಳಿ. ಕನಸಿನ ಸಕಾರದೆಡೆಗೆ ಧೃಡವಾದ ಹೆಜ್ಜೆಗಳನ್ನಿಡಿ. ಆಧ್ಯಾತ್ಮಿಕವಾದ ಚಿಂತನೆಗಳಿಂದ ಸ್ವಸ್ಥವಾದ ಮನಸ್ಸು ರೂಪಗೊಳ್ಳುತ್ತದೆ. ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ. ನಿಮ್ಮ, ನಿಮ್ಮ ವರ್ತನೆಯು ನಿಮ್ಮ ಗುಣವನ್ನು ತೋರಿಸುತ್ತದೆ. ನಮ್ಮ ಉಳಿವಿಗೆ ಮತ್ತು ಅಳಿವಿಗೆ ನಾವೇ ಹೊಣೆಗಾರರಾಗಿರುತ್ತೇವೆ. ಬದುಕು ನೈತಿಕತೆಯ ನೆಲೆಗಟ್ಟಿನಲ್ಲಿರಬೇಕು. ಪರಸ್ತ್ರೀ, ಪರಧನ ಎಂದರೆ ನೇಣಿಗೆ ಹಾಕುವ ಕಂಬವೆಂದು ತಿಳಿಯಬೇಕೆಂದು ಶ್ರೀಬಸವಣ್ಣನವರು ಹೇಳಿದ್ದಾರೆ. ಪ್ರಾರ್ಥನೆ ಮನಸ್ಸಿನ ಆಹಾರ. ಸಂತರ, ಮಹಾತ್ಮರ, ಅನುಭಾವಿಗಳ ಜೀವನಚರಿತ್ರೆಗಳನ್ನು ಓದಿ. ದುಶ್ಚಟದ ವ್ಯಸನಿಯಾಗದೆ ಹಸನಾಗಿ ಬಾಳಿ" ಎಂದರು.

ಕಾರ್ಯಕ್ರಮಕ್ಕೂ ಮೊದಲು ಹುಬ್ಬಳ್ಳಿ ಶ್ರೀಗಳನ್ನು ತಿರುಮಲಗಿರಿ ಶ್ರೀಲಕ್ಷ್ಮೀ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಅನಂತರ ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ಕಲಶಹೊತ್ತ ಮಹಿಳೆಯರು, ನಾದಸ್ವರ ತಂಡದವರೊಂದಿಗೆ ವೇದಿಕೆಗೆ ಬರಲಾಯಿತು. ವೇದಿಕೆಯಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿ ಕಾರ್ಯಕ್ರಮಗಳು ಪ್ರಾರಂಭವಾಯಿತು. ಮೂರು ಸಾವಿರ ಮಠದ ಶ್ರೀಗಳನ್ನು ಧರ್ಮಾಧಿಕಾರಿಡಾ. ಎಂ.ಆರ್.ಜಯರಾಮ್ ಶಾಲು ಹೊದಿಸಿ, ಫಲತಾಂಬೂಲ ನೀಡಿ ಗೌರವಿಸಿದರು.

ವೈದ್ಯರಂಗದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಆಧಿತಿ ಪ್ರಹ್ಲಾದ್ ಪ್ರಾರ್ಥಿಸಿದರು. ಡಾ. ಪನ್ನಗಶಯನ ನಿರೂಪಿಸಿದರು. ಬಿ. ಪ್ರಹ್ಲಾದ್ ಪ್ರಸ್ತಾವಿಕವಾಗಿ ಮಾತನಾಡಿದರು. ಮಲ್ಲಾರಪತ್ರಿಕೆ ಸಂಪಾದಕರು ಹಾಗೂ ನಿರ್ದೇಶಕರಾದ ಡಾ. ಬಾಬುಕೃಷ್ಣಮೂರ್ತಿ, ಕೈವಾರದ ಸಂಕೀರ್ತನಾ ಯೋಜನೆ ಸಂಚಾಲಕರಾದ ವಾನರಾಶಿ ಬಾಲಕೃಷ್ಣ ಭಾಗವತರ್, ಹರಿಕಥಾ ವಿದ್ವಾನ್ ಎನ್.ಆರ್.ಜ್ಞಾನಮೂರ್ತಿ, ಮುಂತಾದವರು ಉಪಸ್ಥಿತರಿದ್ದರು.

**• ಹುಬ್ಬಳ್ಳಿ ಮೂರು ಸಾವಿರ ಮಠದ ಶ್ರೀಗಳ ಅಭಿಪ್ರಾಯ •••**

# ಧರ್ಮಾಧಿಕಾರಿಗಳ ನುಡಿ



# ಆತ್ಮಬೋಧನೆ ಜೀವಾತ್ಮದ ಚಿಂತನೆ

"ಶ್ರೀ ಯೋಗಿನಾರೇಯಣ ಯತೀಂದ್ರರು ಋಷಿಗಳು, ವರಕವಿಗಳು, ಯೋಗಿಗಳು, ಆಚಾರ್ಯರು. ಕೈವಾರದ ತಾತಯ್ಯನವರೆಂದೇ ಪ್ರಸಿದ್ಧರಾಗಿರುವ ಯೋಗೀಂದ್ರರು ಮಾನವಕೋಟಿಗೆ ಹಲವಾರು ಬೋಧನೆಗಳನ್ನು ಮಾಡಿದ್ದಾರೆ. ಅದರಲ್ಲಿ ಬಹಳ ಮುಖ್ಯವಾದುದು ಆತ್ಮಬೋಧಾಮೃತ. ಗುರುಗಳು ಶಿಷ್ಯನಿಗೆ ಆತ್ಮಬೋಧನೆಯನ್ನು ಮಾಡುತ್ತಿದ್ದಾರೆ. ಒಂದು ಕಡೆ ಶಿಷ್ಯ, ಮತ್ತೊಂದು ಕಡೆ ಗುರು ಮಧ್ಯದಲ್ಲಿ ಅಮೃತವನ್ನು ಇಟ್ಟಿದ್ದಾರೆ. ಇದಕ್ಕೆ ತಾತಯ್ಯನವರು ಆತ್ಮಬೋಧಾಮೃತ ಎಂದಿದ್ದಾರೆ.

ಅಮೃತವನ್ನು ಸ್ವೀಕರಿಸಿ, ಸೇವಿಸಿದವನು ದೇವತ್ವವನ್ನು ಪಡೆಯುತ್ತಾರೆ. ಹುಟ್ಟುಸಾವುಗಳ ಚಕ್ರವನ್ನು ದಾಟಿ ಜ್ಞಾನವಂತನಾಗಿ ಮುಕ್ತನಾದವನು ಮಾತ್ರ ದೈವತ್ವವನ್ನು ಹೊಂದುತ್ತಾನೆ. ಈ ಚಕ್ರವನ್ನು ದಾಟಲು ಬಹಳ ಮುಖ್ಯವಾಗಿ ಬೇಕಾಗಿರುವುದು ಸಾಧನೆ. ಸಾಧನೆ ಇಲ್ಲದಿದ್ದರೆ ಈ ಜ್ಞಾನವನ್ನು ಹೊಂದುವುದು ಸಾಧ್ಯವಿಲ್ಲ."

### ಸಾಧನೆ ಎಂದರೇನು?

"ನಾವೆಲ್ಲರೂ ಸಂಸಾರದ ಸಾಗರದಲ್ಲಿ ಇದ್ದೇವೆ. ಆಸೆಗಳಲ್ಲಿ ಮುಳುಗಿದ್ದೇವೆ. ಇದನ್ನೇ ಋಷಿಮುನಿಗಳು ಅಜ್ಞಾನ ಎಂದಿದ್ದಾರೆ. ನಾನು ಎಂದರೆ ಕೇವಲ ಶರೀರವಷ್ಟೇ ಅಲ್ಲ. ನನ್ನೊಳಗೆ ಒಂದು ಜೀವಾತ್ಮನಿದ್ದಾನೆ. ಈ ಜೀವಾತ್ಮನು ಪ್ರಪಂಚವು ಸೃಷ್ಟಿಯಾದಾಗ ಭೂಮಿಗೆ ಬಂದಿದೆ. ಇಲ್ಲಿಯವರೆಗೂ ಅದೆಷ್ಟೋ ಜೀವಿಗಳಾಗಿ ಜನಿಸಿ–ಮರಣಿಸಿ ಹುಟ್ಟು–ಸಾವಿನ ಚಕ್ರದಲ್ಲಿ ಸಿಲುಕಿದ್ದೇವೆ. 84 ಲಕ್ಷ ಜೀವರಾಶಿಗಳಲ್ಲಿ ಮಾನವ ಜನ್ಮ ಬಹಳ ಶ್ರೇಷ್ಠವಾದುದು. ಈಗ ಈ ಹುಟ್ಟು ಸಾವಿನ ಚಕ್ರದಿಂದ ತಪ್ಪಿಸಿಕೊಳ್ಳುವ ಸಮಯ ಬಂದಿದೆ. ಇದನ್ನೇ ತಾತಯ್ಯನವರು ಆತ್ಮಬೋಧನೆಯಲ್ಲಿ ನಿನ್ನ ಮನಸ್ಸಿಗೆ, ಜೀವಕ್ಕೆ ಉಪದೇಶವನ್ನು ಮಾಡುತ್ತಿದ್ದಾರೆ. ಈ ಉಪದೇಶಕ್ಕೆ ಯಾವುದೇ ಜಾತಿ, ಮತದ ಬೇಧವಿಲ್ಲ. ಆತ್ಮಬೋಧನೆ ಜೀವಾತ್ಮದ ಚಿಂತನೆ. ಹುಟ್ಟು ಸಾವಿನ ಚಕ್ರವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೇ, ಇನ್ನೂ ಎಷ್ಟು ಕಷ್ಟವನ್ನು ಅನುಭವಿಸಬೇಕು ಎಂದು ಜೀವಾತ್ಮನಿಗೆ ಅರಿವು ಬಂದರೆ, ಆಗ ಗುರುವಿನ ಬಳಿಗೆ ಬರಲು ಸಾಧ್ಯವಾಗುತ್ತದೆ. ಈ ಚಿಂತನೆ ಸರ್ವರಲ್ಲಿಯೂ ಮೂಡಬೇಕು ಎಂಬ ಉದ್ದೇಶದಿಂದ "ಧರ್ಮ ಚಿಂತನೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಚಿಂತನೆ ಬಂದಾಗ ಮಾತ್ರ ಗುರುಗಳ ಬೋಧನೆ, ಉಪದೇಶಗಳಿಗೆ ಮಹತ್ತ್ವವಿರುತ್ತದೆ. ಗುರುಗಳ ಉಪದೇಶದಿಂದ ಆತ್ಮಪ್ರಕಾಶವಾಗುತ್ತದೆ. ಈ ಪ್ರಕಾಶವನ್ನು ಹೊಂದಿದ ಆತ್ಮ ಮುಕ್ತವಾಗುತ್ತದೆ. ಜೀವಾತ್ಮನನ್ನು ಪರಮಾತ್ಮನಲ್ಲಿ ಸೇರಿಸಿ ಮುಕ್ತನನ್ನಾಗಿಸುವ ಪ್ರಕ್ರಿಯೆಯೇ ಸಾಧನೆ."

### ತ್ರಿವರ್ಗದ ಚಿಂತನೆ

ಸಾಧನೆಯ ಹಾದಿಯಲ್ಲಿ ಮೊಟ್ಟಮೊದಲನೆಯದಾಗಿ ನಾನು ಎಲ್ಲಿದ್ದೇನೆ? ಎಂಬ ತಿಳಿವಳಿಕೆಯನ್ನು ಮಾಡಿಕೊಳ್ಳಬೇಕು. ಇದನ್ನೇ ಬದ್ಧ ಅಂದರೆ ಬಂಧನ ಎನ್ನುತ್ತಾರೆ. ನಾನು ಈ ಚಕ್ರದಲ್ಲಿ ಎಲ್ಲಿದ್ದೇನೆ ಎಂಬ ಚಿಂತನೆ. ಪರಮಾತ್ಮನು ಮಾನವ ಮತ್ತು ಇತರೆ ಜೀವರಾಶಿಗಳ ಜೀವಾತ್ಮನನ್ನು ಒಂದಾಗಿ ಕಾಣುತ್ತಾನೆ. ಪರಮಾತ್ಮನಲ್ಲಿ ಬೇಧಭಾವವಿಲ್ಲ, ಎಲ್ಲ ಜೀವರಾಶಿಗಳಿಗೂ ಉಪದೇಶ ಒಂದೇ. ನಮಗೆಲ್ಲರಿಗೂ ಒಂದು ತತ್ತ್ವವಿದೆ. ಅದನ್ನು ತ್ರಿವರ್ಗವೆಂದು ಕರೆಯುತ್ತಾರೆ.

ತ್ರಿವರ್ಗದಲ್ಲಿ ಧರ್ಮ, ಅರ್ಥ, ಕಾಮ ಮೂರು ಮಾತ್ರವಿದೆ. ಇದರಲ್ಲಿ ಮೋಕ್ಷವಿಲ್ಲ. ಕಾರಣವೆಂದರೆ ನಾವು ಮೋಕ್ಷವನ್ನು ಕಂಡಿಲ್ಲ. ಪ್ರಾಣಿವರ್ಗಕ್ಕೂ ಮತ್ತು ಮಾನವ ವರ್ಗಕ್ಕೂ ತ್ರಿವರ್ಗವಿದೆ. ಮಾನವನಿಗೆ ಮೋಕ್ಷ ಬೇಡವೆಂದು ಅರ್ಥವಲ್ಲ. ಈ ಮೂರನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡರೆ ಮೋಕ್ಷ ಲಭಿಸುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸಿದರೆ ತುಂಬ ಚೆನ್ನಾಗಿ ಅರ್ಥವಾಗುತ್ತದೆ.

ಒಂದು ಸಿಂಹ ತನ್ನ ಪರಿವಾರದೊಂದಿಗೆ ವಾಸವಾಗಿದೆ. ಆ ಸಿಂಹಕ್ಕೆ ಮತ್ತು ಪರಿವಾರಕ್ಕೆ ಹಸಿವಾಗಿದೆ. ಆಗ ಆ ಸಿಂಹವು ಕಾಡಿನಲ್ಲಿ ಹೋಗಿ ಬೇಟೆಯಾಡಿ ಆಹಾರವನ್ನು ತರುತ್ತದೆ. ಆಗ ತನ್ನ ಪರಿವಾರದೊಂದಿಗೆ ಆಹಾರವನ್ನು ಸೇವಿಸಿ ತೃಪ್ತನಾಗಿ ವಿಶ್ರಾಂತಿಯನ್ನು ಪಡೆಯುತ್ತಿರುತ್ತದೆ. ವಿಶ್ರಾಂತಿ ಪಡೆಯುತ್ತಿರುವ ಸಂದರ್ಭದಲ್ಲಿ ಅದರ ಪಕ್ಕದಲ್ಲಿ ಒಂದು ಜಿಂಕೆ ಅಥವಾ ಯಾವುದಾದರೂ ಪ್ರಾಣಿಯು ಹಾದುಹೋದರೂ ಅದು ಆ ಪ್ರಾಣಿಯನ್ನು ಕೊಲ್ಲುವುದಿಲ್ಲ. ಕಾರಣವೆಂದರೆ ಆಗ ಸಿಂಹಕ್ಕೆ ಹೊಟ್ಟೆ ತುಂಬಿದೆ. ಅದು ಹಸಿದಿರುವಾಗ ಮಾತ್ರ ಬೇಟೆಯಾಡುತ್ತದೆಯೇ ಹೊರತು, ಅದರ ಮತ್ತು ಪರಿವಾರದ ಹೊಟ್ಟೆ ತುಂಬಿರುವಾಗ ಅದು ಬೇಟೆಯಾಡುವುದಿಲ್ಲ. ನಾಳೆ ಆಹಾರ ಸಿಗುತ್ತದೋ ಇಲ್ಲವೋ ಈಗ ಸಿಕ್ಕಿರುವ ಪ್ರಾಣಿಯನ್ನು



ಶ್ರೀಗಳಿಂದ ಪ್ರವಚನ

ಕೊಂದು ನಾಳೆಗೆ ಇಟ್ಟುಕೊಳ್ಳೋಣ ಎಂದು ಆ ಸಿಂಹ ಯೋಚಿಸಬಹುದಾಗಿತ್ತು. ಆದರೆ ಸಿಂಹ ಹಾಗೆ ಮಾಡುವುದಿಲ್ಲ. ಇದು ಅದರ ಸಿದ್ಧಾಂತ. ಇದು ಪ್ರಕೃತಿಯ ಧರ್ಮ ನಿಯಮ. ಈ ರೀತಿಯ ಧರ್ಮವನ್ನು ಯಾವ ಪ್ರಾಣಿಗಳೂ ಆಚರಿಸಿಕೊಂಡು ಬರುತ್ತದೆಯೋ, ಆ ಜೀವಾತ್ಮನು ಮುಂದೆ ಇನ್ನು ಉನ್ನತವಾದ ಜನ್ಮಗಳನ್ನು ಪಡೆಯುತ್ತಾ ಮಾನವ ಜನ್ಮಕ್ಕೂ ಬರುತ್ತದೆ. ಇಲ್ಲಿ ಸಿಂಹವೂ ತನ್ನ ಧರ್ಮವನ್ನು ಪಾಲಿಸುತ್ತಾ ಮುಂದೆ ಶ್ರೇಷ್ಠವಾದ ಜನ್ಮಗಳನ್ನು ಪಡೆಯುತ್ತದೆ."

"ಇನ್ನೂ ಮಾನವ ಧರ್ಮಕ್ಕೆ ಬರೋಣ. ಒಬ್ಬನಿಗೆ ವಿದ್ಯೆಯನ್ನು ಪಡೆಯಬೇಕೆಂಬ ಹಂಬಲ. ಅವನು ಕಷ್ಟಪಟ್ಟು ವಿದ್ಯೆಯನ್ನು ಸಂಪಾದಿಸುತ್ತಾನೆ, ಒಳ್ಳೆಯ ಕೆಲಸಕ್ಕೆ ಸೇರುತ್ತಾನೆ. ಮದುವೆಯಾದ ಮೇಲೆ ಅವನ ಹೆಂಡತಿಯೊಡಗೂಡಿ ಇನ್ನೂ ಹೆಚ್ಚು ಹಣ ಸಂಪಾದಿಸುತ್ತಾನೆ. ಇತರೆ ದೇಶಗಳಿಗೆ ಹೋಗಿ ಹಣವನ್ನು ಸಂಪಾದಿಸುತ್ತಾನೆ. ಅನಂತರ ಸ್ವಂತ ಉದ್ದಿಮೆ ಪ್ರಾರಂಭಿಸುತ್ತಾನೆ. ಅನಂತರ ನನ್ನ ಮಕ್ಕಳು ಇನ್ನೂ ಚೆನ್ನಾಗಿ ಆಗಬೇಕು ಎಂದುಕೊಂಡು ಅವರಿಗೂ ಒಳ್ಳೆಯ ವಿದ್ಯೆಕೊಟ್ಟು, ತಾನು ಸಂಪಾದಿಸಿದ ಹಣದಿಂದ ಐಶಾರಾಮಿ ಜೀವನ ನಡೆಸಿ, ಮಕ್ಕಳಿಗೂ ಕೂಡಿಟ್ಟಿರುತ್ತಾನೆ. ಇಷ್ಟೆಲ್ಲ ಆಗುವುದರೊಳಗೆ ವೃದ್ಧಾಪ್ಯ ಬಂದು ಮರಣ ಕಾಲ ಸಂಭವಿಸಿರುತ್ತದೆ. ಮರಣದ ಅನಂತರ ಆ ಜೀವಾತ್ಮ ಚಿಂತನೆ ಮಾಡುತ್ತದೆ. ಅಲ್ಲಾ, ನನ್ನ ಬದುಕಿನ ಎಲ್ಲ ಸಮಯವನ್ನು ಹಣ ಸಂಪಾದನೆಗಾಗಿಯೇ ವಿನಿಯೋಗಿಸಿದ್ದೇನೆಯೇ ಹೊರತು, ಧರ್ಮದ ಬಗ್ಗೆ ಆಲೋಚನೆಯನ್ನೇ ಮಾಡಲಿಲ್ಲ. ಈ ಸ್ಥಿತಿಯಲ್ಲಿ ತ್ರಿವರ್ಗದ ಚಿಂತನೆ ಮಾಡಿ. ಅರ್ಥ, ಕಾಮಗಳಿಗಷ್ಟೇ ಒಳಪಟ್ಟ ಜೀವವು ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ. ಅದು ಮತ್ತೆ ಹುಟ್ಟು ಸಾವುಗಳ ಚಕ್ರದಲ್ಲಿ ಬೀಳುತ್ತದೆ."

ಈ ಎರಡೂ ಉದಾಹರಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಅಲ್ಲಿ ಸಿಂಹವು ತನ್ನ ಧರ್ಮವನ್ನು ಎತ್ತಿಹಿಡಿಯುತ್ತಾ ಮುಂದಿನ ಹಾದಿ ಸುಗಮ ಮಾಡಿಕೊಂಡು ಸತ್ತ ಅನಂತರ ಉತ್ತಮ ಜನ್ಮವನ್ನು ಪಡೆಯುತ್ತಿದೆ. ಆದರೆ ಇಲ್ಲಿ, ಉತ್ತಮ ಜನ್ಮವೆನಿಸಿಕೊಂಡ ಮಾನವನು ಸ್ವಾರ್ಥ, ದುರಾಸೆಗಳೆಂಬ ಅರ್ಥ, ಕಾಮಗಳಿಗೆ ಕಟ್ಟುಬಿದ್ದು ಅದರಲ್ಲೇ ತಲ್ಲೀನನಾಗಿ ತನ್ನ ಜೀವಾತ್ಮದ ಬಗ್ಗೆ ಚಿಂತಿಸದೆ ಮರಣ ಹೊಂದಿ, ಅನಂತರ ಹಿಂದಿನ ಜನ್ಮಗಳಿಗೆ ವಾಪಸ್ ಆಗುತ್ತಿದ್ದಾನೆ. ಇದು ಈಗಿನ ವಿಪರ್ಯಾಸ. ಇದನ್ನೇ ತಾತಯ್ಯನವರು "ಇದಿಗೋ ಇಪ್ಪುಡು ಸಮಯಮು, ನಿನ್ನು ನೀವೇ ತೆಲಿಯವಯ್ಯಾ" (ಇದಿಗೋ ಈಗ ಸಮಯ, ನಿನ್ನನ್ನು ನೀನು ಅರಿತುಕೊಳ್ಳಯ್ಯಾ) ಎಂದು ಮಗುವಿಗೆ ತಿಳಿಹೇಳಿದಂತೆ ಹೇಳುತ್ತಿದ್ದಾರೆ."

## ಉಪಸ್ಯ – ಉಪಾಸನೆ ಎಂದರೇನು?

"ನಮಗೇನಾದರೂ ಕಷ್ಟ ಬಂತು ಎಂದರೆ ಇದಕ್ಕೆ ಕಾರಣ ಆಸೆಯಾಗಿರುತ್ತದೆ. ಇದನ್ನು ಅರ್ಥಮಾಡಿಕೊಳ್ಳಬೇಕು. ತಾತಯ್ಯನವರು ಹಲವಾರು ರೀತಿಯನ್ನು ಸಾಧನೆಯ ಮಾರ್ಗಗಳನ್ನು ಹೇಳಿದ್ದಾರೆ. ಸಾಧನೆಯಲ್ಲಿ ಸಾಧ್ಯ ಮತ್ತು ಉಪಸ್ಯ ಎಂದಿದೆ. ಉಪಸ್ಯವೆಂದರೆ ಉಪಾಸನೆ. ಉಪಾಸನೆಯ ಬಗ್ಗೆ ಆಚಾರ್ಯರುಗಳು ಚಿಂತನೆಗಳನ್ನು ಮಾಡಿದ್ದಾರೆ. ಭಕ್ತಿಮಾರ್ಗವೇ ಶ್ರೇಷ್ಠವಾದ ಉಪಾಸನೆಯೆಂದು ಶ್ರೀರಾಮಾನುಜಾಚಾರ್ಯರು ಹೇಳಿದ್ದಾರೆ. ಉಪಾಸನಾ ಮಾರ್ಗದಲ್ಲಿ ಬಹಳ ಸುಲಭವಾದುದು ಭಕ್ತಿಮಾರ್ಗ. ಭಕ್ತಿ ಎಂದರೆ ಪ್ರಪತ್ತಿ, ಶರಣಾಗತಿ. ದೃಷ್ಟಿ ಮತ್ತು ಮನಸ್ಸನ್ನು ಕೇಂದ್ರಿಕರಿಸಿ, ಪರಮಾತ್ಮನ ಪಾದದಲ್ಲಿ ಶರಣಾಗಿ ಸದಾಕಾಲ ಸ್ಮರಿಸುವುದೇ ಭಕ್ತಿ. ಈ ರೀತಿಯಾಗಿ ಭಕ್ತಿಯಿಂದ ಸ್ಮರಿಸುವುದರಿಂದ ಅವನ ಎಲ್ಲ ಪೂರ್ವಕರ್ಮಗಳೂ ನಾಶವಾಗುತ್ತದೆ."

"ಇದನ್ನೇ ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "ಅರ್ಜುನ, ನಾನು ನಿನಗೆ ಮೋಕ್ಷಕ್ಕೆ ಸಾಧನವಾಗಿರುವ ಹಲವಾರು ವಿಷಯಗಳನ್ನು ಹೇಳಿದ್ದೇನೆ. ಅದರಲ್ಲಿ ರಾಜಯೋಗ, ಕರ್ಮಯೋಗ ಹೀಗೆ ಮುಂತಾದ ಯೋಗಗಳ ಬಗ್ಗೆ ತಿಳಿಸಿಕೊಟ್ಟಿದ್ದೇನೆ. ಆದರೆ ಇದ್ಯಾವುದನ್ನೂ ನೀನು ಸಾಧಿಸಲಾಗದಿದ್ದರೂ ಪರವಾಗಿಲ್ಲ. ಇನ್ನೊಂದು ಸುಲಭವಾದ ಮಾರ್ಗವನ್ನು ತಿಳಿಸಿಕೊಡುತ್ತೇನೆ. ಅದೇನೆಂದರೆ ನಿನ್ನ ಮನಸ್ಸು ಮತ್ತು ದೃಷ್ಟಿಯನ್ನು ನನ್ನ ಪಾದದಲ್ಲಿ ಕೇಂದ್ರೀಕರಿಸಿ ಶರಣಾಗು. ಇದು ಬಹಳ ಶ್ರೇಷ್ಠವಾದುದು" ಎಂದಿದ್ದಾರೆ. ಇದರಿಂದ ನಮಗೆ ತಿಳಿಯುತ್ತದೆ ಉಪಾಸನಾ ಭಕ್ತಿ ಸಾಧನಾ ಎಷ್ಟು ಮುಖ್ಯವಾದುದೆಂದು."

## ಕಷ್ಟಗಳಿಗೆ ತಿಲಾಂಜಲಿ

"ಸಾಮಾನ್ಯವಾಗಿ ನಾವು ಪರಮಾತ್ಮನಲ್ಲಿ ಶರಣಾಗತಿಯಾದ ಮೇಲೆ ನಮಗೆ ಕಷ್ಟಗಳು ಬರುವುದಿಲ್ಲವೇ ಎಂಬ ಪ್ರಶ್ನೆ ಎಲ್ಲರಿಗೂ ಬರುತ್ತದೆ. ಮಾನವನಾಗಿ ಹುಟ್ಟಿದ ಮೇಲೆ



ಕಷ್ಟಗಳು ಬರದೇ ಇರುವುದಿಲ್ಲ. ಬಂದೇ ಬರುತ್ತದೆ ಆದರೆ ಅವು ಸೂರ್ಯನ ಕಿರಣಗಳು ತಾಕಿದೊಡನೆ ಮಂಜಿನ ಹನಿಗಳು ಯಾವ ರೀತಿಯಾಗಿ ಆವಿಯಾಗುತ್ತದೋ ಆ ರೀತಿಯಾಗಿ ಪರಮಾತ್ಮನಲ್ಲಿ ಶರಣಾಗತಿಯಾದಾಗ ಕಷ್ಟಗಳು ಮಂಜಿನಂತೆ ಮರೆಯಾಗುತ್ತದೆ. ಇದಕ್ಕೆ ಒಂದು ಒಳ್ಳೆಯ ಉದಾಹರಣೆಯೆಂದರೆ ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗ. ಶ್ರೀಕೃಷ್ಣನ ಅನನ್ಯ ಭಕ್ತಳಾಗಿದ್ದ ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಶ್ರೀಕೃಷ್ಣನು ವಸ್ತ್ರವನ್ನು ನೀಡಿ ರಕ್ಷಿಸಲಿಲ್ಲವೇ? ಈ ರೀತಿಯಾಗಿ ನಂಬಿದವರನ್ನು ಎಂದಿಗೂ ಪರಮಾತ್ಮನು ಕೈಬಿಡುವುದಿಲ್ಲ. ರಕ್ಷಿಸಿಯೇ ರಕ್ಷಿಸುತ್ತಾನೆಂಬ ಧೃಡವಾದ ನಂಬಿಕೆ ಬೇಕು. ಪರಮಾತ್ಮನದು ವಿಶಾಲವಾದ ಹೃದಯ."

**ಬೆಣ್ಣೆಯಂತೆ ಸಾಧನೆ**

"ಸಾಧನಾ ಮಾರ್ಗ ಬಹಳ ಸುಲಭವಾದುದು, ಅಷ್ಟೇ ಕಷ್ಟವಾದುದು. ಹಾಲಿನಲ್ಲಿ ಬೆಣ್ಣೆ ಅಡಗಿರುವಂತೆ ಸಾಧನೆ. ಕೇವಲ ಹಾಲಿನಲ್ಲಿ ನೋಡಿದರೆ ಬೆಣ್ಣೆ ಕಾಣಸಿಗುವುದಿಲ್ಲ. ಆದರೆ ಬೆಣ್ಣೆ ಅಡಗಿರುವುದು ಹಾಲಿನಲ್ಲಿ. ಹಾಲನ್ನು ಕಾಯಿಸಿ, ಕೆನೆ ತೆಗೆದು ಕಡೆದಾಗ ಬೆಣ್ಣೆಯು ಕಂಡುಬರುತ್ತದೆ. ಇದೊಂದು ಸಾಧನಾ ಪ್ರಕ್ರಿಯೆ. ಈ ಪ್ರಕ್ರಿಯೆಯನ್ನು ನಿಧಾನವಾಗಿ ನಿರಂತರವಾಗಿ ಮಾಡುತ್ತಾ ಬಂದಾಗ ಮಾತ್ರ ಸಾಧನೆ ಸುಲಭವಾಗುತ್ತದೆ. ಬೆಣ್ಣೆ ತೆಗೆಯುವ ರೀತಿಯಲ್ಲಿ ಸಾಧನೆಯೂ ಇದೆ. ಮನಸ್ಸು, ದೃಷ್ಟಿ ಮತ್ತು ಗಾಳಿಯನ್ನು ಒಂದೆಡೆ ಕೇಂದ್ರೀಕರಿಸುವ ಸಾಧನೆಯನ್ನು ನಿರಂತರವಾಗಿ ಮಾಡಬೇಕು."

"ಮಾನವರು ಆಸೆಗಳಲ್ಲಿಯೇ ಕಾಲಕಳೆದು ಕೊನೆಗೆ ಚಿಂತಿಸಿದರೆ ಫಲವಿಲ್ಲ. ಧರ್ಮವನ್ನು ಬಿಟ್ಟು ಆಸೆಪಟ್ಟರೆ ದುಃಖಕ್ಕೆ ಕಾರಣವಾಗುತ್ತದೆ. ಪರಮಾತ್ಮನ ಆರಾಧನೆಗೆ ಭಕ್ತಿಮಾರ್ಗವೇ ಶ್ರೇಷ್ಠವಾದುದು. ಮಾನಸಿಕವಾಗಿ ಪ್ರತಿನಿತ್ಯವೂ ಮನಸ್ಸು ಮತ್ತು ದೃಷ್ಟಿಯನ್ನು ಒಂದು ಮಾಡಿ, ಗುರುವಿನ ಉಪದೇಶದಂತೆ ಪ್ರಾರ್ಥನೆ ಮಾಡಬೇಕು. ಹಾಲಿನಲ್ಲಿರುವ ಬೆಣ್ಣೆಯನ್ನು ತೆಗೆಯಬೇಕಾದರೆ ಯಾವ ರೀತಿಯ ಪ್ರಕ್ರಿಯೆಯನ್ನು ನಡೆಸುತ್ತಿವೆಯೋ ಹಾಗೆಯೇ ತದೇಕಚಿತ್ತದಿಂದ ಪ್ರತಿನಿತ್ಯವೂ ಮಾನಸಿಕವಾದ ಸಾಧನೆ ಮಾಡಬೇಕು. ಆಗ ಮಾತ್ರ ಹಾಲಿನಲ್ಲಿ ಬೆಣ್ಣೆ ಕಾಣಿಸಿದಂತೆ ನಮ್ಮಲ್ಲಿ ಅಡಗಿರುವ ದಿವ್ಯವಾದ ಪರಂಜ್ಯೋತಿಯು ಕಾಣಿಸುತ್ತದೆ. ಮೂಲಾಧಾರ ಚಕ್ರದಿಂದ ಸಹಸ್ರಾರಕ್ಕೆ ಹೋಗುವ ಮಾರ್ಗವೇ ರಾಜಮಾರ್ಗ. ನಿರಂತರವಾಗಿ ಸಾಧನೆಯಲ್ಲಿ ನಡೆಯುವಾಗ ರಾಜಮಾರ್ಗವು ಕಾಣುತ್ತದೆ. ಭಗವಂತನ ಕುರಿತು ಚಿಂತಿಸುತ್ತಾ ಚಿಂತಿಸುತ್ತಾ ಅಜ್ಞಾನವು ಹೋಗುತ್ತದೆ, ಜ್ಞಾನದ ಬೆಳಕು ಕಾಣುತ್ತದೆ. ನಾದವನ್ನು ಕೇಳುತ್ತಾ ಕೇಳುತ್ತಾ ಮುಕ್ತಿಗೆ ಸೋಪಾನವಾಗುತ್ತದೆ. ಯಾರಾದರೆ ಪ್ರತಿದಿನವೂ ಪರಮಾತ್ಮನನ್ನು ಮನಸ್ಸಿನಲ್ಲಿ ನೆನೆಯುತ್ತಾ ಭಜನೆಯನ್ನು ಮಾಡುತ್ತಾರೋ ಅವರ ಸಮಾನ ಯಾರೂ ಇಲ್ಲ ಎಂದು ಹೇಳುತ್ತಾ ಧರ್ಮಾಧಿಕಾರಿ ಗುರುಗಳ ಮಾನಸ ಪೂಜೆಯನ್ನು ಮಾಡುವ ವಿಧಾನವನ್ನು ಸಭೆಗೆ ಸವಿಸ್ತಾರವಾಗಿ ತಿಳಿಸಿದರು."

**ಶ್ರೀಯೋಗಿನಾರೇಯಣ ಮಠ,**
**ಶ್ರೀಕ್ಷೇತ್ರ ಕೈವಾರ**

## ಈ ತಿಂಗಳ ಧರ್ಮ ಚಿಂತನೆ ಕಾರ್ಯಕ್ರಮ

ರಾಗಿಗುಡ್ಡದ ಶ್ರೀ ಪ್ರಸನ್ನ
ಆಂಜನೇಯಸ್ವಾಮಿ ದೇವಸ್ಥಾನ
9ನೇ ಬ್ಲಾಕ್, ಜಯನಗರ,
ಬೆಂಗಳೂರು- 560 069.

ದಿನಾಂಕ 09 ನವೆಂಬರ್ 2019
ಶನಿವಾರ ಸಂಜೆ 5.30 ಗಂಟೆಗೆ

ಸರ್ವರಿಗೂ ಆದರದ
ಸುಸ್ವಾಗತ


ಭೂನೀಳಾ ಸಮೇತ ವೆಂಕಟರಮಣಸ್ವಾಮಿ ಉತ್ಸವಮೂರ್ತಿ

ಆಲಂಬಗಿರಿ ಕ್ಷೇತ್ರದ ಶ್ರೀ ಕಲ್ಕಿ ಲಕ್ಷ್ಮಿವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ನವರಾತ್ರಿಯ ವಿಜಯದಶಮಿಯಂದು ವಿಶೇಷ ಪೂಜಾ ಕೈಂಕರ್ಯಗಳನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು.

ನವರಾತ್ರಿಯ ಕೊನೆಯ ದಿನವಾದ ವಿಜಯದಶಮಿಯಂದು ಬೆಳಗಿನಿಂದಲೇ ಭಕ್ತರು ದೇವಾಲಯದಲ್ಲಿ ಪೂಜೆಗಾಗಿ ಆಗಮಿಸಿದ್ದರು. ವಿಜಯದಶಮಿಯಂದು ವಿಶೇಷವಾಗಿ ಶಮೀವೃಕ್ಷದ ಪೂಜೆಯನ್ನು ಏರ್ಪಡಿಸಲಾಗಿತ್ತು. ದೇವಾಲಯದಿಂದ ಸುಮಾರು 1 ಕಿ.ಮೀ ದೂರದಲ್ಲಿರುವ ಶಮೀ ವೃಕ್ಷ ಮಂಟಪದ ಹತ್ತಿರ ನೆರವೇರಿಸಲಾಯಿತು.

ಶಮೀ ವೃಕ್ಷ ಮಂಟಪದ ಹತ್ತಿರಕ್ಕೆ ಭೂನೀಳಾ ಸಮೇತ ವೆಂಕಟರಮಣಸ್ವಾಮಿಯ ಉತ್ಸವ ವಿಗ್ರಹಗಳನ್ನು ವಿಶೇಷ ಮಂಟಪದಲ್ಲಿ ಅಲಂಕರಿಸಿ ಕರೆದೊಯ್ಯಲಾಯಿತು. ನೂರಾರು ಭಕ್ತರು ಆಗಮಿಸಿದ್ದರು. ಸಂಕೀರ್ತನಾ ಪಾದಯಾತ್ರೆಯಲ್ಲಿ ದೇವರ ಉತ್ಸವದೊಂದಿಗೆ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಉತ್ಸವದಲ್ಲಿ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಮ್ ಭಾಗವಹಿಸಿ ಸಂಕೀರ್ತನೆಯೊಂದಿಗೆ ನಡೆದು ಬಂದರು.

ಶಮೀ ಮಂಟಪದ ಹತ್ತಿರ ವಿಶೇಷ ಪೂಜಾ ವ್ಯವಸ್ಥೆಯನ್ನು ಮಾಡಲಾಗಿತ್ತು. ಶಮೀ ವೃಕ್ಷಕ್ಕೆ ಹೂಗಳಿಂದ ಅಲಂಕರಿಸಲಾಗಿತ್ತು. ಶಮೀ ವೃಕ್ಷದಲ್ಲಿ ಬಿಲ್ಲುಬಾಣಗಳನ್ನು ಇಟ್ಟು ಪೂಜಿಸಲಾಯಿತು. ಶಾಸ್ತ್ರೋಕ್ತವಾಗಿ ಅರ್ಚಕವೃಂದ ವೇದಘೋಷ ಮಾಡಿದರು. ಡಾ. ಎಂ.ಆರ್. ಜಯರಾಮ್ ದಂಪತಿ ಪೂಜೆ ನೆರವೇರಿಸಿದರು. ಅನಂತರ ಆಲಂಬಗಿರಿ ರಥ ಬೀದಿಯಲ್ಲಿ ಸ್ವಾಮಿಯ ಉತ್ಸವವನ್ನು ಏರ್ಪಡಿಸಲಾಗಿತ್ತು. ಗ್ರಾಮಸ್ಥರು ಮನೆ ಮನೆಗೂ ಪೂಜೆಗೆ ನೀಡಿ ಭಕ್ತಿ ಭಾವವನ್ನು ಮೆರೆದರು. ಅನಂತರ ಉತ್ಸವಮೂರ್ತಿಗಳನ್ನು ದೇವಾಲಯಕ್ಕೆ ಕರೆತಂದು ಅಷ್ಟಾವಧಾನಸೇವೆಯನ್ನು

# ಆಲಂಬಗಿರಿಯಲ್ಲಿ ಗರುಡ ದರ್ಶನದೊಂದಿಗೆ
# ವಿಜಯದಶಮಿ ಜಂಬೂಸವಾರಿ


ಧರ್ಮಾಧಿಕಾರಿ ನೇತೃತ್ವದಲ್ಲಿ ಭಜನೆ



ಧರ್ಮಾಧಿಕಾರಿ ದಂಪತಿಯಿಂದ ಶಮೀ ವೃಕ್ಷ ಪೂಜೆ

ನೆರವೇರಿಸಿ ಮಹಾಮಂಗಳಾರತಿ ಮಾಡಲಾಯಿತು. ಉತ್ಸವದ ವೇಳೆ ಆಗಸದಲ್ಲಿ ಗರುಡ ಪಕ್ಷಿ ಕಾಣಿಸಿತು. ಗರುಡ 'ಪಕ್ಷಿಯು ಪರಮಾತ್ಮನ ಉತ್ಸವ ವಿಗ್ರಹಗಳಿಗೆ ಪ್ರದಕ್ಷಿಣೆ ಹಾಕಿತು. ಭಕ್ತರು ಗೋವಿಂದ ನಾಮಸ್ಮರಣೆಯೊಂದಿಗೆ ಭಕ್ತಿಭಾವವನ್ನು ಮೆರೆದರು.

ನವರಾತ್ರಿಯ ಒಂಬತ್ತು ದಿನಗಳಲ್ಲಿ ಆಲಂಬಗಿರಿಯ ದೇವಾಲಯದಲ್ಲಿ ವಿಶೇಷ ಪೂಜಾ ವ್ಯವಸ್ಥೆ, ಭಜನೆ, ಸಂಕೀರ್ತನೆಯನ್ನು ಏರ್ಪಡಿಸಲಾಗಿತ್ತು. ದೇವಾಲಯದ ಭಜನಾ ಮಂಟಪದಲ್ಲಿ ಭಕ್ತರು



ಭಜನೆಯನ್ನು ಮಾಡಿದರು. ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆಯ ಸಂಚಾಲಕರಾದ ಶ್ರೀ ಬಾಲಕೃಷ್ಣ ಭಾಗವತರ್, ವಿಭಾಕರರೆಡ್ಡಿ, ಆರ್.ಪಿ.ಎಂ. ಸತ್ಯನಾರಾಯಣ್, ಗಣೇಶ್ ಚಂದ್ರಪ್ಪ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು. ಭಕ್ತರಿಗೆ ವಿಜಯದಶಮಿ ಪ್ರಯುಕ್ತ ಸಿಹಿ ಹಂಚಲಾಯಿತು. ಸುತ್ತಮುತ್ತಲಿನ ಗ್ರಾಮಸ್ಥರು ಪೂಜೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.


● ವರದಿ: ಟಿ.ಎಲ್. ಆನಂದ್, ತಳಗವಾರ



ಶಮೀ ವೃಕ್ಷಕ್ಕೆ ಬಿಲ್ಲಿನ ಗುರಿ

# ಯೇಗ್ದಾಗೆಲ್ಲ ಐತೆ

ಕಡೂರು, ಬಾಣಾವರಗಳ ಮಧ್ಯೆ ಮುಖ್ಯರಸ್ತೆಯಿಂದ ಸ್ವಲ್ಪ ದೂರದಲ್ಲಿ ಹೇಮಗಿರಿ ಎಂಬ ಬೆಟ್ಟ. ಬೆಟ್ಟದ ಒಂದು ಬದಿಯಲ್ಲಿ ವಿಷ್ಣು ಸಮುದ್ರ ಎಂಬ ಒಂದು ಕೆರೆ. ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾದುದು. ಆ ಬೆಟ್ಟದ ಮತ್ತೊಂದು ಪಕ್ಕದಲ್ಲಿ ಹೇಮಾವತಿ ಎಂಬ ಒಂದು ಪ್ರಾಚೀನ ನಗರದ ಅವಶೇಷಗಳು. ಸುಂದರ ದೇವಾಲಯಗಳು. ಹಳೇಬೀಡು ಬೇಲೂರು ಮಾದರಿಯ ಶಿಲ್ಪ. ನೋಡಲು ಬಲು ಚಂದ. ಒಂದರಲ್ಲೂ ವಿಗ್ರಹವಿಲ್ಲ. ನಿಧಿಯ ಆಸೆಯಿಂದ ಎಲ್ಲವನ್ನು ಬುಡಮೇಲು ಮಾಡಿದ್ದಾರೆ. ಆದರೂ ಕಟ್ಟಡಗಳ ಕುಸುರಿ ಕೆಲಸ ಮನಮೋಹಕವಾಗಿದೆ. ಹೇಮಗಿರಿಯ ನೆತ್ತಿಯ ಮೇಲೆ ಒಂದು ಗುಹೆ. ಅದರಲ್ಲೊಂದು ಶಿವಲಿಂಗ. ಅದರ ಮುಂದೆ 2ಘಿ2 ಅಡಿ ಅಳತೆಯ ಒಂದು ಸಿಹಿ ನೀರಿನ ಚಿಕ್ಕಹೊಂಡ. ಬೆಟ್ಟಕ್ಕೆ ಹತ್ತಿಹೋಗಲು ಸುಮಾರು ಮುನ್ನೂರು ಮೆಟ್ಟಲುಗಳಿವೆ. ಬೆಟ್ಟದ ತುದಿಯಲ್ಲಿ ನಿಂತು ಸುತ್ತಲೂ ಕಣ್ಣಾಡಿಸಿದರೆ ಎಲ್ಲೆಲ್ಲೂ ಕಣ್ಣಿಗೆ ಹಬ್ಬವೆನಿಸುವ ದೃಶ್ಯ.



ಒಂದು ದಿನ ಸ್ವಾಮಿಗಳ ಜೊತೆಯಲ್ಲಿ ಅಲ್ಲಿಗೆ ಹೋದೆ. ಸುಮಾರು ಎಂಟು ಹತ್ತು ಮೈಲಿ ನಡೆದು ಬೆಟ್ಟದ ಬುಡ ಸೇರಿದೆವು. ಹತ್ತಾರು ಮೆಟ್ಟಲುಗಳನ್ನು ಏರಿದಾಗ ವಿನೋದಕ್ಕಾಗಿ ಹೀಗೆಂದೆ–

"ಇಲ್ಲಿಂದ ಎಲ್ಲಿಯೂ ನಿಲ್ಲದೆ ಒಂದೇ ಸಮನಾಗಿ ಹತ್ತಿ, ಈ ಬೆಟ್ಟದ ನೆತ್ತಿಯ ಮೇಲಿರುವ ಗುಹೆಯೊಳಕ್ಕೆ ಹೋಗಿ, ಅಲ್ಲಿಯ ಗಂಟೆಯನ್ನು ಬಾರಿಸಬೇಕು. ಯಾರು ಗೆಲ್ಲುತ್ತಾರೋ ನೋಡೋಣ."

"ಹೂಂ! ಒಳ್ಳೆ ಪಂದ್ಯ ಕಣೋ (ತಮ್ಮ ಎದೆಯನ್ನು ತೋರಿಸುತ್ತ) ಈ ಗವಿಯೊಳಗೆ ಹೊಕ್ಕು ನೋಡ್‌ಬೇಕು ಅಂದ್ರೆ ನಾಮುಂದು ನೀಮುಂದು ಅಂತ ನುಗ್ಗಬೇಕು" ಎಂದವರೇ ಓಡುತ್ತ ಮೆಟ್ಟಲುಗಳನ್ನು ಏರಿಬಿಟ್ಟರು. ನಾನು ಒಂದು ನೂರು ಮೆಟ್ಟಲುಗಳವರೆಗೂ ಹಾಗೂ ಹೀಗೂ ಸಾಗಿದೆ. ಇನ್ನು ಕಾಲು ಏಳುವುದಿಲ್ಲ ಎಂದಾಗ ಅಲ್ಲೊಂದು ಎತ್ತರವಾದ ಬಂಡೆಯ ನೆರಳಲ್ಲಿ ಕುಳಿತುಬಿಟ್ಟೆ... ಹಾಗೆಯೇ ಮಲಗಿಯೂಬಿಟ್ಟೆ. ಸ್ವಲ್ಪ ಹೊತ್ತಿನಲ್ಲಿ ಗುಹೆಯಿಂದ ಗಂಟೆ ಬಾರಿಸಿದ ಶಬ್ದ ಕೇಳಿಸಿತು. ನಾನಂತು ಏದುಸಿರು ಬಿಡುತ್ತ ಬಾಯಾರಿದ್ದೆ.

ಸ್ವಲ್ಪ ಹೊತ್ತಿನಲ್ಲೇ ಸ್ವಾಮಿಗಳು ನಗುತ್ತಾ ಬಂದರು. ಅವರಲ್ಲಿದ್ದ ಚಿಕ್ಕ ಅಲ್ಯುಮಿನಿಯಂ ಪಾತ್ರೆಯಲ್ಲಿ ತಂದಿದ್ದ ನೀರನ್ನು ಕೊಟ್ಟು–"ಯಾರು ಹೆಚ್ಚು ಸುಸ್ತಾಗೋ ಗಂಟ ಕೆಲಸ ಮಾಡ್ತಾರೋ ಅವರೇ ಗೆದ್ದೋರು. ತಗೋ ನೀರು ಕುಡಿ. ನೀನೇ ಗೆದ್ದೆ"–ಎಂದರು. ನಾನು ನೀರು ಕುಡಿದು ದಣಿವಾರಿಸಿಕೊಂಡೆ. ನನ್ನ ಪಕ್ಕದಲ್ಲಿ ಅವರು ಕುಳಿತರು.

ಸುತ್ತಮುತ್ತಿನ ಪ್ರಕೃತಿ ಸೌಂದರ್ಯವನ್ನು ರಸವತ್ತಾಗಿ ವಿವರಿಸಿದರು. ಇಳಿದು ಬರುವಾಗ ಅಲ್ಲೊಂದು ಜಿಂಕೆಗಳ ಹಿಂಡು, ಅವು ಗಾಬರಿಯಾಗಬಾರದೆಂದು ಸ್ವಾಮಿಗಳು ಹಾಗೇ ಉಲ್ಲಾಸದಿಂದ ನೋಡುತ್ತಾ ನಿಂತುಬಿಟ್ಟರು. ಬೆದರುಗಣ್ಣಿನಿಂದ ನಮ್ಮತ್ತಲೇ ನೋಡುತ್ತಾ ಆ ಜಿಂಕೆಗಳು ಸ್ವಲ್ಪ ಹೊತ್ತಿನಲ್ಲಿ ನಿಧಾನವಾಗಿ ಸಾಗಿದವು.

"ಗಾಬರಿಯಾಗ್ಬೇಡ್ರೋ. ನಾವು ನಿಮ್ಮೋರೇ ಮುಕುಂದೂರು ಬೆಟ್ಟದಾಗೇ (ನಗುತ್ತಾ) ನಿಮ್ಮ ಬಂಧುಬಳಗ ಐದಾರೆ. ನೋಡೋಕೆ ಬಲುಚೆಂದ! ಚಂದ್ರನ ರಥ ಎಳೆಯೋರು ನೀವೇ ಅಂತೆ? ನಿಮ್ಮ ಅಂದ ಚಂದ ನೋಡೀ ಆ ಸುಂದರ ಪುರುಸ ಚಂದ್ರ–ನಿಮ್ಮನ್ನೇ ಇಷ್ಟಪಟ್ಟು ಕರ್‌ಕೊಂಡವ್ನೇ ಅಲ್ವೇ?...ಎಂಗೋ ಜನರನ್ನು ಕಂಡ್ರೆ ದಿಗಿಲು! (ನಕ್ಕು) ನಿಜ, ಇವರನ್ನ ಕಂಡ್ರೆ ಯಾರಿಗಾದ್ರೂ ದಿಗ್ಲೇ"–ಎನ್ನುತ್ತ ಮುಂದೆ ಸಾಗಿದರು. ಅಷ್ಟರಲ್ಲಿ ಅಲ್ಲೊಂದು ಮೊಲ ಛಂಗನೇ ನೆಗೆದು ಕುಪ್ಪಳಿಸಿ ಪೊದೆಯೊಳಕ್ಕೆ ನುಸುಳಿತು.

"ಅರೆರೇ! ಇದು ನೋಡಪ್ಪಾ ಏನ್ ಸೊಗಸು. (ಅದರ ಬೆನ್ನಟ್ಟಿ ಓಡಿದರು) ಅದು ಅಲ್ಲಿಂದ ಮತ್ತೆ

---

**ದಿ. ಬೆಳಗೆರೆ ಕೃಷ್ಣಶಾಸ್ತ್ರಿಗಳು ನಮ್ಮ ನಡುವೆ ಇದ್ದ ಒಂದು ಧೀಮಂತ ಚೇತನ. ಅನೇಕರು ಅವರನ್ನು ಅವಧೂತರೆಂದೇ ನಂಬಿದ್ದರು.**



**ಅವರು ಸನಿಹದಿಂದ ಕಂಡ ಒಬ್ಬ ಅನುಭಾವಿ, ಯೋಗಿ ಮುಕುಂದೂರು ಸ್ವಾಮಿಗಳನ್ನು ಕುರಿತ 'ಯೇಗ್ದಾಗೆಲ್ಲಾ ಐತೆ' ಜನಪ್ರಿಯವೂ ಹೌದು. ಅದನ್ನು ಬೆಂಗಳೂರಿನ ಪ್ರಸಿದ್ಧ ಪ್ರಕಾಶನ ಸಂಸ್ಥೆ 'ಅಭಿನವ' ಪ್ರಕಟಿಸಿದೆ ('ಅಭಿನವ' 4148/ಎ, 3ನೇ ಮುಖ್ಯರಸ್ತೆ, 'ಬಿ' ಬ್ಲಾಕ್, ರಾಜಾಜಿನಗರ 2ನೇ ಸ್ಟೇಜ್, ಬೆಂಗಳೂರು–560 021.) ನಮ್ಮ ಓದುಗರಿಗಾಗಿ ಅವರ ಪುಸ್ತಕದಿಂದ ಒಂದು ಕುತೂಹಲಕಾರಿ ಘಟನೆಯನ್ನು ಆಯ್ದು, ಅಭಿನವ ಪ್ರಕಾಶನಕ್ಕೆ ಕೃತಜ್ಞತೆಯನ್ನು ತಿಳಿಸುತ್ತಾ ಪ್ರಕಟಿಸುತ್ತಿದ್ದೇವೆ.**

ಓಡಿತು. ಇವನ್ನೂ ಕರಕೊಂಡು ಹೋಗ್ರೋ...ಊ...ಈ ಮನಸರ ಕಾಟ ಯಾಕೆ ಅಂತೀಯಾ”?–ಎಂದು ಒಂದಷ್ಟು ದೂರ ನಗುನಗುತ್ತಾ ಓಡಿ ಹಿಂದಿರುಗಿ ಬಂದು–“ಸ್ವಾಮೀ, ಯಾವುದನ್ನೇ ನೋಡು ಅದರದೇ ಅದಕ್ಕೆ ಚಂದ. ಹದ್ದು, ಕಾಗೆ, ಗಿಳಿ, ನವಿಲು, ಯಾವ್ದು ಅನ್ನ ಬ್ಯಾಡ. ಅವನ ಕಸುಬಿನ ಕರಾಮತ್ತೇ ಅಂಗೆ”!–ಮತ್ತಷ್ಟು ದೂರ ಸಾಗಿದಾಗ ಅಲ್ಲೊಂದು ವಿಚಿತ್ರವಾದ ಕೆಂಪು ಮಿಶ್ರಿತ ನೀಲಿ ಬಣ್ಣದ ಹೂವು ಗಾಳಿಗೆ ತಲೆಯಾಡಿಸುತ್ತಾ ನಿಂತಿತ್ತು.

“ಈಗ್ಗಳಪ್ಪ! ಈಕೇ ನೋಡಪ್ಪಾ!... ಏನ್ ಪಸಂದ್ ಐದಾಳೇ ಈಯಮ್ಮ. ಓಡಿಹೋಗಲ್ಲ. ಒಳ್ಳೆ ನಿಧಾನವಂತೆ. ನೋಡು ಹತ್ರಾನೆ ಬಾ ಅಂತ ತಲೆತೂಗಿ ಕರೀತಾ ಅವ್ಳೇ”–ಹತ್ತಿರ ಹೋದೆವು. ಅದೊಂದು ಅಪರೂಪದ ಹೂವು. ಹಲವು ಚಿಕ್ಕಪುಟ್ಟ ಹೂಗಳ ಗೊಂಚಲಿನಂತೆ ಇದ್ದರೂ ಒಂದೇ ಹೂವು. ಪ್ರತಿಯೊಂದು ಹೂವು ಸುತ್ತು ಸುತ್ತಾಗಿ ಕೆಳಮುಖವಾಗಿ, ಸಾಲುಸಾಲಾಗಿ, ಒಟ್ಟಾಗಿ ಹೊಂದಿಕೊಂಡಿದ್ದವು. ಕುಸುಮಗಳ ಪರಾಗದ ನಸುಗಂಪು ಎಲ್ಲವೂ ಸೇರಿ ಅತ್ಯಂತ ಆಕರ್ಷಕವಾಗಿತ್ತು. ಸ್ವಲ್ಪ ಹೊತ್ತು ಅಲ್ಲೇ ನಿಂತು ನೋಡಿದೆವು.

“–ಎಂಥಾ ಸೋಜಿಗ! ಅಲ್ಲಾ! ಏನ್ ಚೆಂದೊಳ್ಳಿ ಚೆಲುವೆ ನೀನು! ಇಲ್ಲಿ ಬಂದು ಒಬ್ಳೇ ಕುಂತು ಬಿಟ್ಟಿದ್ದೀಯಲ್ಲಾ! ಈ ಕಾಡ್ನಾಗಿದ್ರೆ ಯಾರ್ ನೋಡ್ತಾರೆ! ನಿನ್ನ ಅಂದಚಂದ ಎಲ್ಲ ನಿರಾವರ್ತ. ಯಾವುದಾದರು ಊರ ಮುಂದೆ ಇದ್ರೆ ನಾಲ್ಕು ಜನ ನೋಡ್ತ್ಯಾರು. ಮುದ್ದಾಡ್ತ್ಯಾರು, ಕೊಂಡಾಡ್ತ್ಯಾರು. ನಾಲ್ಕು ಜನಕ್ಕೆ ಏಳ್ತ್ಯಾರು. ‘ನಮ್ಮೂರಾಗೆ ಚೆಲುವಕ್ಕ ಐದಾಳೆ, ಬಂದು ನೋಡಿ.’ ಏನ್ ಚಂದ ಇದ್ರೇನು ಬುದ್ಧಿ ಇಲ್ಲ ನಿನಗೆ. ಅಡವಿ ಸೇರಿದ್ದೀಯಾ! (ನಗುತ್ತಾ ನಾಲ್ಕು ಹೆಜ್ಜೆ ಬಂದು ಏನೋ ಕೇಳಿಸಿಕೊಂಡವರಂತೆ ಆ ಹೂವಿನತ್ತ ತಿರುಗಿ) ಆ! ಏನಂದೆಮ್ಮ–(ಏನೋ ಆಲಿಸಿದಂತೆ ನಟಿಸಿ) ಓಹೊಹೋ! ಹೌದು (ಖಿನ್ನ ಧ್ವನಿಯಲ್ಲಿ) ನಿನ್ನ ಮಾತು ಸರಿಕಣಕ್ಕ, ಒಪ್ಲೇ ಬೇಕು. (ನನ್ನ ಕಡೆ ತಿರುಗಿ) ಕೇಳಿದೇನಪ್ಪಾ ಈ ನಮ್ಮವ್ವ ಹೇಳಿದ್ದು!? ‘ನಾನು ಊರಾಗಿದ್ರೆ ಜನ ನನ್ನನ್ನು ಹಿಂಗೇ ಉಳಿಗೊಡ್ತಿದ್ರಾ? ಕಿತ್ತು ಹೊಸಗಿ ಸಾಯಸ್‌ಬಿಡ್ತಾರೆ’ ಅಂತಾಳೆ. ನಿಜ ಅವಳ ಮಾತೇ ಸರಿ. ಮನುಸ್ಯ ತಾನೇ ತಿರನಾಗಿ ಬಾಳೋನು, ಅಂಬಂಗೆ ಕಣ್ಣಿಗೆ ಕಂಡದ್ದನ್ನೆಲ್ಲ ತನ್ನ ಸುಖಕ್ಕೇಂತ ಹಾಳು ಮಾಡ್ತಾನೆ. ಹಾಳು ಮಾಡೋದನ್ನ ಕಲಿತು ತಾನೂ ಹಾಳಾಗ್ತಾನೆ.” ●


ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ **ಆಯ್ದ ಕಥೆಗಳು**

# ಜಗನ್ಮಿತ್ರ

ಓರ್ವ ವೃದ್ಧ ಭಕ್ತ ಒಬ್ಬಂಟಿಗ. ಆತಿಥ್ಯಕ್ಕೆ ಹೆಸರಾದ ವಿಶಾಲ ಮನೆ, ಅವನದು. ಒಂದು ದಿನ ವಿಪರೀತ ಮಳೆ. ರಾತ್ರಿ ಸಮಯ. ಭಕ್ತನು ಬಾಗಿಲು ಹಾಕಿ ಮಲಗಿದ. ಮಧ್ಯ ರಾತ್ರಿ ಯಾರೋ ಬಾಗಿಲು ತಟ್ಟಿದರು. ಭಕ್ತ ಬಾಗಿಲು ತೆಗೆದ. ಹೊರಗೆ ಒಬ್ಬ ಯಾತ್ರಿಕ ಮುದುಕ ನೆನೆನೆದು ನಡಗುತ್ತಿದ್ದ. ಭಕ್ತ ಆತನನ್ನು ಒಳಗೆ ಕರೆದು ಊಟಕ್ಕೆ ಬಡಿಸಿದ. ತಡಮಾಡದೆ ಯಾತ್ರಿಕನು ತಟ್ಟೆಗೆ ಕೈ ಹಾಕಿದ. “ತಡೆ, ದೇವರ ಹೆಸರನ್ನು ತೆಗೆದುಕೋ!” ಎಂದ ಭಕ್ತ. “ಊಟಕ್ಕಾಗಿ ದೇವರನ್ನು ಏಕೆ ನೆನೆಯಬೇಕು?” ಎಂದ ಯಾತ್ರಿಕ. “ಹಾಗಾದರೆ ನಿನಗೆ ಈ ಮನೆಯಲ್ಲಿ ಅನ್ನವಿಲ್ಲ–ಆಶ್ರಯವಿಲ್ಲ” ಎಂದು ಭಕ್ತನು ಯಾತ್ರಿಕನನ್ನು ಹೊರಗೆ ಹಾಕಿದ.

ಅದೇ ದಿನ ರಾತ್ರಿ ಭಗವಂತನು ವೃದ್ಧನಾಗಿ ಭಕ್ತನ ಕನಸಿನಲ್ಲಿ ಕಾಣಿಸಿದ. “ಯಾರು ನೀನು?” ಎಂದು ಭಕ್ತ ಕೇಳಿದ. “ನಾನು ಭಗವಂತ” ಎಂದ ವೃದ್ಧ. “ಅದೇಕೆ ತಂದೆ ನಡಗುತ್ತಿರುವೆಯಲ್ಲ” ಎಂದು ಭಕ್ತ ಭಗವಂತನಿಗೆ ಕೇಳಿದ. “ಹೌದು, ಏನು ಮಾಡಲಿ? ನಿನ್ನೆ ನೀನು ಹೊರಗೆ ಹಾಕಿದ ಮೇಲೆ ರಾತ್ರಿ ಇಡೀ ನಾನು ಮಳೆಯಲ್ಲಿ ನೆನೆದು ಹೋದೆ!” “ಹಾಗಾದರೆ ರಾತ್ರಿ ವೃದ್ಧನ ರೂಪದಲ್ಲಿ ಬಂದವ ನೀನೇ ಏನು?” ಎಂದು ಭಕ್ತ ಕೇಳಿದ. “ಹೌದು ನಾನೇ! ಆ ವೃದ್ಧನಿಗೆ ನಾನು 70 ವರ್ಷ ಅನ್ನ ಕೊಟ್ಟು ಆಶ್ರಯವನ್ನಿತ್ತು ಕಾಪಾಡಿದ್ದೆ. ನೀನು ಒಂದು ದಿನ ಅವನಿಗೆ ಆಶ್ರಯ ಕೊಡಲಿಲ್ಲವೇಕೆ?” ಎಂದು ಭಗವಂತ ನುಡಿದಾಗ ಭಕ್ತನ ಕಣ್ಣು ತೆರೆದಿತ್ತು! ದೇವನು ದಯಾಸಾಗರನು, ಜಗನ್ಮಿತ್ರನು ಎಂಬ ಅರಿವಾಗಿತ್ತು! ●

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ






ಪಾಂಡವರು ಗಂಗಾ ತೀರಕ್ಕೆ ಬಂದರು.
ನಾನು ನದಿಯ ಆಳವನ್ನು ನೋಡಿ ಬರುತ್ತೇನೆ.
ಯಾರೋ ಈ ಕಡೆ ಬರುತ್ತಿರುವುದು ಕಾಣುತ್ತಿದೆ.
ನಾನು ವಿದುರರು ನಿಯುಕ್ತಿಗೊಳಿಸಿರುವ ಒಬ್ಬ ದೋಣಿ ನಡೆಸುವವನು.
ನಿಮಗೆ ನನ್ನ ಬಗ್ಗೆ ನಂಬಿಕೆ ಉಂಟಾಗಲು ವಿದುರರು ಯುಧಿಷ್ಠಿರರಿಗೆ ಹೇಳಿದ ಕೆಲವು ಮಾತುಗಳನ್ನು ಹೇಳಬಲ್ಲೆ.
ವಿದುರರು ನಿಮಗೆ ಅಗ್ನಿಯಿಂದ ರಕ್ಷಿಸಿಕೊಳ್ಳಲು ಹೇಳಿದ್ದರು....
ಮತ್ತು ಪಾರಾಗುವ ಉಪಾಯವನ್ನು ಸೂಚಿಸಿದ್ದರು.
2019 © MALAY FEATURES PB 608, KOTTAYAM -1
ನಾನು ಹೇಳಿದ್ದು ಸರಿಯೋ ಅಲ್ಲವೋ?
ನೀನು ಸರಿಯಾಗಿಯೇ ಹೇಳಿದ್ದೀಯೆ. ನಮಗೆ ನಿನ್ನ ಮೇಲೆ ನಂಬಿಕೆ ಇದೆ.
ಮಹಾಜ್ಞಾನಿಗಳೂ ದೂರದರ್ಶಿಗಳೂ ಆದ ವಿದುರರ ಭವಿಷ್ಯವಾಣಿ ಎಂದೂ ಸುಳ್ಳಾಗುವುದಿಲ್ಲ.
ಒಂದು ದಿನ ದುಷ್ಟ ಕೌರವರು ಮತ್ತು ಕರ್ಣನ ಪತನವಾಗುವುದು ಎಂದು ವಿದುರರಿಗೆ ತಿಳಿದಿದೆ.
ನನ್ನ ಜೊತೆ ಬನ್ನಿ.
2019 © MALAY FEATURES PB 608, KOTTAYAM -1
ಅದು ಪಾದಗಳು ತುಳಿಯುವ ಮೂಲಕ ಚಲಿಸಬಲ್ಲ ದೋಣಿ, ಇದು ವಾಯುವೇಗದಲ್ಲಿ ಪಯಣಿಸುತ್ತದೆ.


(ಮುಂದುವರಿಯುವುದು)


# ಮಕ್ಕಳ ಮಲ್ಲಾರ

# ಮಹಾಭಾರತ–6

ಕಥೆ: ಕುಮಾರ ಮೋಹನ್ ಚಲಮ್
ಕಲೆ: ಅಜಯನ್ ಸಂತೂ



Licensed to post without prepayment-WPP-102 **MALLARA** Monthly, NOVEMBER-2019,
**64** pages and cost Rs. **12/-** RNI. No. KARBIL/2009/30225 Reg. KA/BGW-492/2018-2020
Published and Posted at Bengaluru PSO, Bengaluru-560026 on 30th of every month.



ಬದ್ರಿನಾಥ್ ದೇವಸ್ಥಾನ, ಉತ್ತರಖಾಂಡ್